
ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ದೇಹದಲ್ಲಿ ಅಗತ್ಯಕ್ಕಿಂತ ಹೆಚ್ಚು ಕೊಲೆಸ್ಟ್ರಾಲ್ ಶೇಖರಣೆಯಾದರೆ ತೊಂದರೆ ಎದುರಾಗಬಹುದು



ಆಳ-ಅಗಲ
ಕಾರ್ಪೊರೇಟ್ ಏಕಸ್ವಾಮ್ಯ ಹೆಚ್ಚಿದ ಬಡತನ

ಗಂಗಾ ಸ್ನಾನ ಬಡತನ ನೀಗಿಸುವುದೇ? 11

5 ಸಾವಿರ ಹುದ್ದೆ ಶೀಘ್ರ ಭರ್ತಿ: ಸುಧಾಕರ್ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,366	22,829	₹84,700 (ಬೆಂಗಳೂರು)	₹95,500 (ಬೆಂಗಳೂರು)	86.31

ಮುಡಾ ನಿವೇಶನ ಹಂಚಿಕೆ ಪ್ರಕರಣ: ಜಾರಿ ನಿರ್ದೇಶನಾಲಯದ ಸಮನ್ಸ್‌ಗೆ ಕೋರ್ಟ್ ಮಧ್ಯಂತರ ತಡೆ

ಸಿ.ಎಂ ಪತ್ನಿ, ಬೈರತಿ ಸದ್ಯ ನಿರಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಹಂಚಿಕೆಯಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಲಾದ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಮತ್ತು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ.) ಜಾರಿ ಮಾಡಿದ್ದ ಸಮನ್ಸ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.



ಬೈರತಿ ಸುರೇಶ್

ಪಾರ್ವತಿ ಮತ್ತು ಸುರೇಶ್ ಸಲ್ಲಿಸಿರುವ ಅರ್ಜಿಗಳನ್ನು ಸೋಮವಾರ ತುರ್ತು ವಿಚಾರಣೆಗೆ ತೆಗೆದುಕೊಂಡ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠವು, ಇಬ್ಬರೂ ಅರ್ಜಿದಾರರಿಗೆ ಇ.ಡಿ. ಅಧಿಕಾರಿಗಳು ನೀಡಿರುವ ಸಮನ್ಸ್‌ಗಳಿಗೆ ಫೆಬ್ರುವರಿ 10ರವರೆಗೂ ತಡೆ ನೀಡಿತು.

ಪಾರ್ವತಿ ಅವರಿಗೆ ಜನವರಿ 3ರಂದು ಮೊದಲ ಸಮನ್ಸ್ ಜಾರಿ ಮಾಡಿದ್ದ ಇ.ಡಿ. ಅಧಿಕಾರಿಗಳು, ಜ.9ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದರು. ಆದರೆ, ದಾಖಲೆ ಹೊಂದಿಸಿಕೊಳ್ಳಲು ಎರಡು ವಾರ ಕಾಲಾವಕಾಶ ನೀಡುವಂತೆ ಕೋರಿ ಮುಖ್ಯಮಂತ್ರಿಯವರ ಪತ್ನಿ ತನಿಖಾಧಿಕಾರಿಗಳಿಗೆ ಪತ್ರ ಬರೆದಿದ್ದರು. ಜ.24ರಂದು ಎರಡನೇ ಬಾರಿ ಸಮನ್ಸ್ ಜಾರಿಮಾಡಿದ್ದು, ಮಂಗಳವಾರ (ಜ.28) ಬೆಳಿಗ್ಗೆ 11 ಗಂಟೆಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿತ್ತು.

‘ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ನುಡಿಯಲು ಹಾಗೂ ದಾಖಲೆಗಳನ್ನು ಸಲ್ಲಿಸಲು ಶಾಂತಿನಗರದಲ್ಲಿರುವ ಇ.ಡಿ. ವಲಯ ಕಚೇರಿಗೆ ಖುದ್ದಾಗಿ ಹಾಜರಾಗಬೇಕು’ ಎಂದು ಪ್ರಕರಣದ ತನಿಖೆ ನಡೆಸುತ್ತಿರುವ ಇ.ಡಿ. ಬೆಂಗಳೂರು ವಲಯ ಕಚೇರಿಯ ಸಹಾಯಕ ನಿರ್ದೇಶಕ ವಿ. ಮುರಳಿಕಣ್ಣನ್ ಅವರು ಸಮನ್ಸ್‌ನಲ್ಲಿ ನಿರ್ದೇಶನ ನೀಡಿದ್ದರು.

ಸಚಿವ ಬೈರತಿ ಸುರೇಶ್ ಅವರಿಗೆ ಜ.22ರಂದು ಸಮನ್ಸ್ ಜಾರಿಮಾಡಿದ್ದ ಇ.ಡಿ. ಸಹಾಯಕ ನಿರ್ದೇಶಕರು, ಸೋಮವಾರ (ಜ.27) ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದರು. ಜ.24ರಂದು ಇ.ಡಿ. ಅಧಿಕಾರಿಗಳಿಗೆ ಪತ್ರ ಬರೆದಿದ್ದ ಸುರೇಶ್, ‘ಫೆಬ್ರುವರಿ 6ರಿಂದ 9ರವರೆಗೆ ನನ್ನ ಮಗನ ಮದುವೆ ಇದೆ. ಈ ಕಾರಣದಿಂದ ವಿಚಾರಣೆಗೆ ಹಾಜರಾಗಲು ಫೆಬ್ರುವರಿ 10ರವರೆಗೂ ಕಾಲಾವಕಾಶ ನೀಡಬೇಕು’ ಎಂದು ಮನವಿ ಮಾಡಿದ್ದರು.

ಪಾರ್ವತಿ ಅವರಿಗೆ ಮುಡಾದಿಂದ 14 ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿರುವುದರಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಖಾಸಗಿ ದೂರಿನ ಆಧಾರದಲ್ಲಿ ಲೋಕಾಯುಕ್ತ ಪೊಲೀಸ್ ವಿಭಾಗದ ಮೈಸೂರು ಜಿಲ್ಲಾ ಘಟಕ 2024ರ ಸೆಪ್ಟೆಂಬರ್ 28ರಂದು ಎಫ್ಐಆರ್ ದಾಖಲಿಸಿ, ತನಿಖೆ ಆರಂಭಿಸಿತ್ತು. ಲೋಕಾಯುಕ್ತ ಪೊಲೀಸರ ಎಫ್ಐಆರ್ ಆಧಾರದಲ್ಲಿ ಪಿಎಂಎಲ್ಎ ಅಡಿಯಲ್ಲಿ ಸಿದ್ದರಾಮಯ್ಯ ಮತ್ತು ಇತರರ ವಿರುದ್ಧ ಪ್ರಕರಣ (ಇಸಿಐಆರ್) ದಾಖಲಿಸಿದ್ದ ಇ.ಡಿ. ಅಧಿಕಾರಿಗಳು, ತನಿಖೆ ಕೈಗೊಂಡಿದ್ದರು.


ಅಕ್ಟೋಬರ್‌ನಲ್ಲಿ ಮುಡಾ ಕಚೇರಿ, ಪ್ರಕರಣದಲ್ಲಿ ನೇರ ಸಂಬಂಧಿಸಿರುವ ಕೆಲವು ವ್ಯಕ್ತಿಗಳು ಹಾಗೂ ಕೆಲವು ರಿಯಲ್ ಎಸ್ಟೇಟ್ ಉದ್ಯಮಿಗಳ ಮನೆಗಳ ಮೇಲೆ ದಾಳಿ ಮಾಡಿದ್ದ ಇ.ಡಿ. ಅಧಿಕಾರಿಗಳು, ಶೋಧ ನಡೆಸಿದ್ದರು. ಈ ಪ್ರಕರಣದಲ್ಲಿ ₹300 ಕೋಟಿ ಮೌಲ್ಯದ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಜ.17ರಂದು ಇ.ಡಿ. ಪ್ರಕಟಿಸಿತ್ತು.

ಸಿಬಿಐಗೆ ಮುಡಾ: ಕಾಯ್ದಿರಿಸಿದ ತೀರ್ಪು

‘ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಆರೋಪಕ್ಕೆ ಸಂಬಂಧಿಸಿದ ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದು ಕೋರಿ ದೂರುದಾರರೂ ಆದ ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಸೋಮವಾರ ಪೂರ್ಣಗೊಳಿಸಿ ತೀರ್ಪು ಕಾಯ್ದಿರಿಸಿದೆ.

ಈ ಅರ್ಜಿಯನ್ನು, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ದಿನವಿಡೀ ವಿಚಾರಣೆ ನಡೆಸಿದರು.

ಸ್ನೇಹಮಯಿ ಕೃಷ್ಣ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಮಣಿಂದರ್ ಸಿಂಗ್, ರಾಜ್ಯ ಸರ್ಕಾರದ ಪರ ವಿಶೇಷ ವಕೀಲ ಕಪಿಲ್ ಸಿಬಲ್ ಮತ್ತು ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಸಿ.ಎಂ ಪರ ಅಭಿಷೇಕ್ ಮನು ಸಿಂಘ್ವಿ, ಪಾರ್ವತಿಯವರ ಪರ ರವಿವರ್ಮ ಕುಮಾರ್, ಮಲ್ಲಿಕಾರ್ಜುನ್ ಪರ ಆದಿತ್ಯ ಸೋಂಧಿ, ಆರೋಪಿ ದೇವರಾಜ್ ಪರ ದುಷ್ಯಂತ ದವೆ ಸುದೀರ್ಘ ವಾದ ಮಂಡಿಸಿದರು.





ಸಿದ್ದರಾಮಯ್ಯ ಅವರ ಪತ್ನಿ ಮತ್ತು ಸಚಿವ ಬೈರತಿ ಸುರೇಶ್ ಅವರಿಗೆ ರಾಜಕೀಯ ಪಿತೂರಿಯ ಕಾರಣಕ್ಕೆ ಇ.ಡಿ ನೋಟಿಸ್ ನೀಡಿದೆ. ಒಂದು ಪ್ರಕರಣವನ್ನು ಒಂದೇ ಸಮಯದಲ್ಲಿ ಎರಡು ಸಂಸ್ಥೆಗಳು ತನಿಖೆ ನಡೆಸಲು ಸಾಧ್ಯವಿಲ್ಲ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ



ಮುಡಾ ಹಗರಣದಲ್ಲಿ ‘ಬಿ’ ರಿಪೋರ್ಟ್ ಹಾಕಿಸಿಕೊಂಡು ಪ್ರಕರಣ ಮುಚ್ಚಿ ಹಾಕುವ ಪ್ರಯತ್ನದಲ್ಲಿದ್ದ ಸಿದ್ದರಾಮಯ್ಯ ಅವರಿಗೆ ಹಿನ್ನಡೆಯಾಗಿದೆ. ತನಿಖಾ ಸಂಸ್ಥೆಯ ಕೈಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ನಗರ ವ್ಯಾಪ್ತಿಯ 30 ಲಕ್ಷ ಆಸ್ತಿಗೆ ಶೀಘ್ರ ಬಿ-ಖಾತಾ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಬಿಟ್ಟು ರಾಜ್ಯದ ಇತರ ಸ್ಥಳೀಯ ಸಂಸ್ಥೆಗಳ ನಗರ ಪ್ರದೇಶ ವ್ಯಾಪ್ತಿಯಲ್ಲಿ ಇ-ಖಾತಾ ಹೊಂದಿಲ್ಲದ 30ರಿಂದ 32 ಲಕ್ಷ ಆಸ್ತಿಗಳಿಗೆ ಬಿ- ಖಾತಾ ನೀಡಲು ತೀರ್ಮಾನಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ವಿವಿಧ ಜಿಲ್ಲಾಧಿಕಾರಿಗಳ ಜತೆ ಸೋಮವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಆ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

ಸ್ಥಳೀಯ ಸಂಸ್ಥೆಗಳ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ 55 ಲಕ್ಷ ನಿವೇಶನ/ ಆಸ್ತಿಗಳಿವೆ. ಈ ಪೈಕಿ 22 ಲಕ್ಷ ಆಸ್ತಿಗಳ ಮಾಲೀಕರು ಇ- ಖಾತಾ ಮಾಡಿಸಿದ್ದಾರೆ. ಆದರೆ 30ರಿಂದ 32 ಲಕ್ಷ ಸ್ವತ್ತುಗಳಿಗೆ ಯಾವುದೇ ರೀತಿಯ ಇ-ದಾಖಲೆಗಳು ಇಲ್ಲ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 7ರಂದು ಸಭೆ ನಡೆಸಿ ದಾಖಲೆ ಇಲ್ಲದ ನಿವೇಶನಗಳ ಮಾಲೀಕರಿಗೆ ಇ-ಆಸ್ತಿ ನಮೂದಿಸಿ ಬಿ-ಖಾತಾಗೆ ಸಮಾನಾಂತರ ದಾಖಲೆ ನೀಡಬೇಕು ಎಂದು ಸೂಚನೆ ನೀಡಿದ್ದಾರೆ. ಹೀಗಾಗಿ, ಮುಖ್ಯ ಕಾರ್ಯದರ್ಶಿಯವರ ಸಮ್ಮುಖ ದಲ್ಲಿ ಜಿಲ್ಲಾಧಿಕಾರಿಗಳ ಸಭೆ ನಡೆಸಲಾಗಿದೆ.



ಫೆ. 10ರೊಳಗೆ ಸುತ್ತೋಲೆ ಹೊರಡಿಸಿ, ಬಾಕಿ ಇರುವ ಆಸ್ತಿಗಳಿಗೆ ಗರಿಷ್ಠ ಮೂರು ತಿಂಗಳ ಒಳಗೆ ಅಭಿಯಾನ ಮಾದರಿಯಲ್ಲಿ ಬಿ-ಖಾತಾ (ಒನ್ ಟೈಮ್ ಮಾದರಿ) ಮಾಡಿಕೊಡಬೇಕು ಎಂದು ಸೂಚಿಸಲಾಗಿದೆ ಎಂದರು. ಅನಧಿಕೃತ ನಿವೇಶನಗಳ ಬಗ್ಗೆ ಸುಪ್ರೀಂ ಕೋರ್ಟ್ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ. ಅದನ್ನು ಪಾಲಿಸಲೇಬೇಕಾದ ತುರ್ತು ಎದುರಾಗಿದೆ. ಹೀಗಾಗಿ ಸರ್ಕಾರವೇ ಬಿ-ಖಾತಾ ಮಾಡಿಕೊಡಲಿದೆ ಎಂದರು.

ಸಾಲಗಾರರಿಗೆ ಕಿರುಕುಳ ಮೂರು ವರ್ಷ ಜೈಲು

• ರಾಜೇಶ್ ರೈ ಚಟ್ಲ



ಬೆಂಗಳೂರು: ಸಾಲಗಾರರಿಗೆ ಹಿಂಸೆ, ಕಿರುಕುಳ ನೀಡುವ ಮೈಕ್ರೊ ಫೈನಾನ್ಸ್ ಕಂಪನಿಗಳು ಅಥವಾ ಲೇವಾದೇವಿದಾರರಿಗೆ ಮೂರು ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹1 ಲಕ್ಷ ದಂಡ ವಿಧಿಸಲು ಅವಕಾಶ ಕಲ್ಪಿಸುವ ಕಾಯ್ದೆಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ತಯಾರಿ ನಡೆಸಿದೆ.

ಈ ಉದ್ದೇಶದಿಂದ ‘ಕರ್ನಾಟಕ ಮೈಕ್ರೊ ಫೈನಾನ್ಸ್ ಕಂಪನಿಗಳು (ಹಣ ಲೇವಾದೇವಿ ನಿಯಂತ್ರಣ) ಮಸೂದೆ- 2025’ ಅನ್ನು ಸಿದ್ಧಪಡಿಸಿದೆ. ಇದರ ಕರಡು ಪ್ರತಿ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

10ನೇ ಪುಟ ನೋಡಿ

ಯಾರೆಲ್ಲ ಮಸೂದೆ ವ್ಯಾಪ್ತಿಗೆ?



- ದಿನ, ವಾರ, ತಿಂಗಳು ಮತ್ತು ವರ್ಷದ ಆಧಾರದಲ್ಲಿ ಬಡ್ಡಿಗೆ ಸಾಲ ಕೊಡುವವರು
- ಕರ್ನಾಟಕದಲ್ಲಿ ಕಾರ್ಯನಿರ್ವಹಿಸುವ ಎಲ್ಲ ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿದಾರ ಏಜೆನ್ಸಿಗಳು, ಸಂಸ್ಥೆಗಳು, ವ್ಯಕ್ತಿಗಳು
- ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ನೋಂದಾಯಿತವಾದ ಮತ್ತು ನೋಂದಣಿ ಆಗದಿರುವ ಹಣಕಾಸು ಸಂಸ್ಥೆಗಳು

ಉದಾರಿಗಳಾಗಿ ಕನ್ನಡಕ್ಕೆ ಕುತ್ತು ತರಬೇಡಿ: ಸಿ.ಎಂ

ಬೆಂಗಳೂರು: ‘ಕನ್ನಡಿಗರು ಉದಾರಿಗಳಾಗಿ ಕನ್ನಡಕ್ಕೆ ಕುತ್ತು ತರಬಾರದು. ಅನ್ಯ ಭಾಷಿಕರೊಂದಿಗೆ ಕನ್ನಡದಲ್ಲೇ ಮಾತನಾಡಿ, ಕನ್ನಡ ಕಲಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು. ವಿಧಾನಸೌಧದ ಆವರಣದಲ್ಲಿ ನಾಡದೇವಿ ಭುವನೇಶ್ವರಿಯ 25 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಅನಾವರಣ ಮಾಡಿ ಅವರು ಸೋಮವಾರ ಮಾತನಾಡಿದರು. 6

ತಕರಾರು ಇಲ್ಲದ ವಕ್ಫ್ ಆಸ್ತಿಗಳಿಗೆ ಭಂಗವಿಲ್ಲ

ನವದೆಹಲಿ (ಪಿಟಿಐ): ಈಗಿನ ವಕ್ಫ್ ಆಸ್ತಿಗಳ ವಿಚಾರವಾಗಿ ಯಾವುದೇ ತಕರಾರು ಇಲ್ಲ ಎಂದಾದರೆ, ವಕ್ಫ್ ಆಸ್ತಿಯಲ್ಲಿ ಸರ್ಕಾರದ ಯಾವುದೇ ಕಟ್ಟಡ ಇಲ್ಲವೆಂದಾದರೆ ಅಂತಹ ಆಸ್ತಿಗಳನ್ನು ವಕ್ಫ್ ಆಸ್ತಿಗಳನ್ನಾಗಿಯೇ ಉಳಿಸಿಕೊಳ್ಳಬೇಕು ಎಂದು ವಕ್ಫ್ ಮಸೂದೆ ಕುರಿತು ಪರಿಶೀಲನೆ ನಡೆಸಿರುವ ಸಂಸದೀಯ ಸಮಿತಿಯು ಶಿಫಾರಸು ಮಾಡಲಿದೆ.

ಆದರೆ, ಇಂತಹ ವಕ್ಫ್ ಆಸ್ತಿಗಳನ್ನು ಹೊಸ ಕಾನೂನು ಜಾರಿಗೆ ಬರುವ ಮೊದಲು ನೋಂದಾಯಿಸಬೇಕು ಎಂಬ ಅಂಶವು ಸಮಿತಿಯ ಶಿಫಾರಸಿನಲ್ಲಿ ಇರಲಿದೆ.

ಸಮಿತಿಯು ಒಪ್ಪಿಕೊಂಡಿರುವ ತಿದ್ದುಪಡಿಗಳು ಕೆಲವು ಮುಸ್ಲಿಂ ಸಂಘಟನೆಗಳ ಆಗ್ರಹಕ್ಕೆ ಪೂರಕವಾಗಿ ಇವೆ. ಆದರೆ, ಕೆಲವು ತಿದ್ದುಪಡಿಗಳು ಮಸೂದೆಯ ಟೀಕಾಕಾರರಲ್ಲಿ ಇನ್ನಷ್ಟು ಅಸಮಾಧಾನ ಮೂಡಿಸುವಂತೆ ಇವೆ ಎಂದು ಹೇಳಲಾಗಿದೆ.


11ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಕಮಾಂಡರ್ ಆಗಿ ಕೌಸ್ತುಭ್ ನೇಮಕ



ಬೆಂಗಳೂರು: ವಾಯುಸೇನೆ ಇಕ್ವಿಪ್‌ಮೆಂಟ್ (ಸಲಕರಣೆ) ಡಿಪೊ ನೂತನ ಕಮಾಂಡ್ ಆಗಿಏರ್ ಕಮೊಡೋರ್ ಕೌಸ್ತುಭ್ ಆಪ್ಟೆ ಸೋಮವಾರ ಅಧಿಕಾರ ಸ್ವೀಕರಿಸಿದರು.

ಏರ್ ಕಮೊಡೋರ್ ಮನೋಜ್ ಕುಮಾರ್ ಅಧಿಕಾರ ಹಸ್ತಾಂತರಿಸಿದರು. ಕೌಸ್ತುಭ್ ಆಪ್ಟೆ ಭೌತ ವಿಜ್ಞಾನ ಸ್ನಾತಕೋತ್ತರ ಪದವೀಧರರಾಗಿದ್ದು, ರಾಜ್ಯಶಾಸ್ತ್ರದಲ್ಲಿ ಎಂ.ಫಿಲ್. ಮಾಡಿದ್ದರು. ಐಐಟಿ ಮದ್ರಾಸ್‌ನಲ್ಲಿ ಎಂಬಿಎ, ಸಾರ್ವಜನಿಕ ಸಂಗ್ರಹಣೆ ಯಲ್ಲಿ ಡಿಪ್ಲೊಮಾ, ವಸ್ತು ನಿರ್ವಹಣೆ ವಿಷಯದಲ್ಲಿ ಸ್ನಾತಕೋತ್ತರ ಪದವಿ, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್‌ನಲ್ಲಿ ಡಿಪ್ಲೊಮಾ ಮಾಡಿದ್ದಾರೆ. ಕೌಸ್ತುಭ್ ದೆಹಲಿಯ ನ್ಯಾಷನಲ್ ಡಿಫೆನ್ಸ್ ಕಾಲೇಜು, ಸಿಕಂದರಾಬಾದ್‌ನ ಕಾಲೇಜ್ ಆಫ್ ಏರ್ ವಾರ್‌ಫೇರ್ ಮತ್ತು ಕೊಯಮತ್ತೂರಿನ ಏರ್ ಫೋರ್ಸ್ ಅಡ್ಮಿನಿಸ್ಟ್ರೇಟಿವ್ ಕಾಲೇಜಿನ ಹಳೇ ವಿದ್ಯಾರ್ಥಿ.

ಉದ್ದಿಮೆಗಳಿಗೆ 5 ವರ್ಷದವರೆಗೆ ನವೀಕರಣಕ್ಕೆ ಅವಕಾಶ: ತುಷಾರ್ ಗಿರಿನಾಥ್

ಪರವಾನಗಿ ನವೀಕರಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಉದ್ದಿಮೆ ಪರವಾನಗಿಯನ್ನು ಒಂದು ವರ್ಷದಿಂದ ಐದು ವರ್ಷದವರೆಗೆ ನವೀಕರಣ ಮಾಡಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ತುಷಾರ್ ಗಿರಿನಾಥ್

'ಫೆಬ್ರುವರಿ 1ರಿಂದ 28ರವರೆಗೆ ದಂಡವಿಲ್ಲದೆ ಉದ್ದಿಮೆ ಪರವಾನಗಿ ಶುಲ್ಕವನ್ನು ಆನ್‌ಲೈನ್ ಹಾಗೂ ಬ್ಯಾಂಕ್ ಚಲನ್ ಮೂಲಕ ಕೆನರಾ ಬ್ಯಾಂಕಿನಲ್ಲಿ ದಂಡವಿಲ್ಲದೆ ಪಾವತಿಸಿಕೊಳ್ಳಬೇಕು. ಮಾರ್ಚ್ 1ರಿಂದ 31ರವರೆಗೆ ನವೀಕರಣ ಶುಲ್ಕದ ಶೇ 25ರಷ್ಟು ದಂಡ, ಏಪ್ರಿಲ್ 1ರಿಂದ ಶೇ 100ರಷ್ಟು ದಂಡ ವಿಧಿಸಬೇಕು' ಎಂದು ತಿಳಿಸಿದ್ದಾರೆ.

ವಸತಿ ಪ್ರದೇಶದಲ್ಲಿ 40 ಅಡಿಗಿಂತ ಕಡಿಮೆ ಅಗಲದ ರಸ್ತೆಗಳಲ್ಲಿ 2015ರ ನಂತರ ಪ್ರಾರಂಭ ವಾಗಿರುವ ಉದ್ದಿಮೆ ಪರವಾನಗಿ ಯನ್ನು ಸ್ಥಗಿತಗೊಳಿಸಬೇಕು. 40 ಅಡಿಗಳಿಗಿಂತ ಹೆಚ್ಚು ಅಗಲದ ರಸ್ತೆಗಳಲ್ಲಿ 2015ರ ನಂತರ ಪ್ರಾರಂಭವಾಗಿರುವ ಉದ್ದಿಮೆಗಳಿಗೆ ಮಾತ್ರ ಪರವಾನಗಿ ನವೀಕರಣ ಮಾಡಬೇಕು ಎಂದು ಸೂಚಿಸಿದ್ದಾರೆ.

'ನಕ್ಷೆ ಉಲ್ಲಂಘನೆಯಾಗಿರುವ ಕಟ್ಟಡಗಳಲ್ಲಿ ಪೂರ್ಣ ಅಥವಾ ಭಾಗಶಃವಾಗಿ ಉದ್ದಿಮೆಗಳಿದ್ದರೆ, ವಾಹನ ನಿಲುಗಡೆ ಪ್ರದೇಶದಲ್ಲಿ, ಚಾವಣಿ ಪ್ರದೇಶದಲ್ಲಿ ಬಳಸುತ್ತಿದ್ದರೆ, ಪರವಾನಗಿ ನವೀಕರಣ ಮಾಡುವಂತಿಲ್ಲ' ಎಂದಿದ್ದಾರೆ. ಉದ್ದಿಮೆಗಳು, ಕಲ್ಯಾಣ ಮಂಟಪಗಳು ಹೋಟೆಲ್, ರೆಸ್ಟೋರೆಂಟ್ ತ್ಯಾಜ್ಯ ವಿಲೇವಾರಿ, ಪ್ಲಾಸ್ಟಿಕ್ ನಿಷೇಧ ಪಾಲನೆ ಸೇರಿದಂತೆ ಘನತ್ಯಾಜ್ಯ ವಿಲೇವಾರಿ ನಿಯಮಗಳನ್ನು ಪಾಲಿಸುತ್ತಿರುವ ದಾಖಲೆಗಳನ್ನು ಪರಿಶೀಲಿಸಬೇಕು. ವಲಯ ಆರೋಗ್ಯಾಧಿಕಾರಿ, ಉಪ ಆರೋಗ್ಯಾಧಿಕಾರಿ, ಆರೋಗ್ಯ ವೈದ್ಯಾಧಿಕಾರಿಗಳು ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದಂತೆ ಎಲ್ಲ ಅಂಶಗಳನ್ನು ಪರಿಗಣಿಸಿ, 2025-26ನೇ ಸಾಲಿನ ಪರವಾನಗಿ ನವೀಕರಣ ನೀಡಬೇಕು ಎಂದು ಸೂಚಿಸಿದ್ದಾರೆ.

ಪಾಲಿಕೆಯ ಎಲ್ಲ ಎಂಟು ವಲಯಗಳಲ್ಲಿ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಬೇಕು. ಅನಧಿಕೃತ ಜಾಹೀರಾತು ಅಳವಡಿಸಿರುವವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ತುಷಾರ್ ಗಿರಿನಾಥ್ ಸೂಚಿಸಿದ್ದಾರೆ. ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಸಮೀಕ್ಷೆಯ ಮೂಲಕ 27,655 ಬೀದಿ ಬದಿ ವ್ಯಾಪಾರಿಗಳನ್ನು ಗುರುತಿಸಲಾಗಿದೆ. ಗುರುತಿಸಿರುವ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ನೀಡಿ, ಮಾರಾಟ ಮಾಡಲು ಅವರಿಗೆ ಸ್ಥಳ ನಿಗದಿಪಡಿಸಬೇಕು' ಎಂದರು.

ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಅವಿನಾಶ್ ಮೆನನ್ ರಾಜೇಂದ್ರನ್, ಪ್ರೀತಿ ಗೆಹ್ಲೋಟ್, ವಲಯ ಆಯುಕ್ತರಾದ ಸತೀಶ್, ಅರ್ಚನಾ, ಸ್ನೇಹಲ್, ವಿನೋತ್ ಪ್ರಿಯಾ, ರಮ್ಯಾ, ರಮೇಶ್, ಕರೀಗೌಡ ಇದ್ದರು.

ಬಾಕಿ ಬಿಲ್: ₹750 ಕೋಟಿ ಬಿಡುಗಡೆ

ಬೆಂಗಳೂರು: ರಾಜ್ಯ ಸರ್ಕಾರ 'ವಿಶೇಷ ಮೂಲಸೌಕರ್ಯ ಬಂಡವಾಳ ವೆಚ್ಚ' ಯೋಜನೆಯಡಿ 2024-25ನೇ ಸಾಲಿನ ಮೂರನೇ ಕಂತಿನ ₹750 ಕೋಟಿ ಅನುದಾನವನ್ನು ಬಿಬಿಎಂಪಿಗೆ ನಗರಾಭಿವೃದ್ಧಿ ಇಲಾಖೆ ಜನವರಿ 27ರಂದು ಬಿಡುಗಡೆ ಮಾಡಿದೆ.

2024-25ನೇ ಸಾಲಿನಲ್ಲಿ ನಿಗದಿಪಡಿಸಲಾಗಿರುವ ₹3 ಸಾವಿರ ಕೋಟಿ ಅನುದಾನದಲ್ಲಿ, ಎರಡು ತ್ರೈಮಾಸಿಕದಲ್ಲಿ ತಲಾ ₹750 ಕೋಟಿ ಬಿಡುಗಡೆ ಮಾಡಲಾಗಿತ್ತು. ಮೂರನೇ ಕಂತನ್ನು ಇದೀಗ ಬಿಡುಗಡೆ ಮಾಡಲಾಗಿದೆ.

ವಿಶೇಷ ಮೂಲಸೌಕರ್ಯ ಯೋಜನೆಯಡಿ ಬೃಹತ್ ರಸ್ತೆಗಳು, ಮೇಲ್ಸೇತುವೆ, ಕಾರಿಡಾರ್ ಮುಂತಾದ ಯೋಜನೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಕಾಮಗಾರಿಗಳ ಬಾಬ್ತು ₹2,570 ಕೋಟಿಯಷ್ಟು ಬಿಲ್ ಪಾವತಿ ಬಾಕಿ ಉಳಿದಿದೆ. ಸಕಾಲದಲ್ಲಿ ಬಿಲ್ ಪಾವತಿಸದಿದ್ದಲ್ಲಿ ಕಾಮಗಾರಿಗಳ ಪ್ರಗತಿ ಕುಂಠಿತವಾಗುವ ಸಂಭವವಿರುತ್ತದೆ ಎಂದು ಮುಖ್ಯ ಆಯುಕ್ತರು ತಿಳಿಸಿದ್ದರು. ಹೀಗಾಗಿ, ಈ ಅನುದಾನ ಬಿಡುಗಡೆ ಮಾಡಲಾಗಿದ್ದು, ಜ್ಯೇಷ್ಠತೆ ಆಧಾರದಲ್ಲಿ ತುರ್ತಾಗಿ ಗುತ್ತಿಗೆದಾರರಿಗೆ ಬಿಲ್ ಪಾವತಿಸಬೇಕು. ಪಾವತಿ ವಿವರವನ್ನು ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಬಾಕಿ ಬಿಲ್ ಪಾವತಿಗೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಗಿತ್ತು. ನಮ್ಮ ಮನವಿಗೆ ಸ್ಪಂದಿಸಿರುವ ಅವರು ಸರ್ಕಾರದ ಅನುದಾನದಿಂದ ನಿರ್ವಹಿಸಲಾಗಿರುವ ಕಾಮಗಾರಿಗಳ ಬಿಲ್ ಪಾವತಿಗೆ ಅನುದಾನ ಬಿಡುಗಡೆ ಮಾಡಿಸಿದ್ದಾರೆ. ಇನ್ನುಳಿದ ಬಾಕಿಯನ್ನು ಶೀಘ್ರ ಪಾವತಿಸುವ ಭರವಸೆಯನ್ನೂ ನೀಡಿದ್ದಾರೆ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜೆ.ಎಂ. ನಂದಕುಮಾರ್ ತಿಳಿಸಿದರು.



ಸಂಕ್ಷಿಪ್ತ ಸುದ್ದಿ

ಐಐಎಸ್‌ಸಿ ನಿರ್ದೇಶಕ ಸೇರಿ ಹಲವರ ವಿರುದ್ಧ ಎಫ್‌ಐಆರ್

ಜಾತಿ ನಿಂದನೆ

ಬೆಂಗಳೂರು: ಜಾತಿ ನಿಂದನೆ ಪ್ರಕರಣದ ಆರೋಪದ ಅಡಿ ನಗರದ ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರೂ ಸೇರಿ ಹಲವರ ವಿರುದ್ಧ ಸದಾಶಿವನಗರ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಾಗಿದೆ.

ದೂರುದಾರರಾದ ಸಣ್ಣ ದುರ್ಗಪ್ಪ ಅವರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಂಸ್ಥೆಯ ನಿರ್ದೇಶಕ ಪ್ರೊ. ಗೋವಿಂದ ರಂಗರಾಜನ್ ಹಾಗೂ ಶ್ರೀಧರ್ ವಾರಿಯರ್, ಸೇನಾಪತಿ ಕ್ರಿಸ್ ಗೋಪಾಲಕೃಷ್ಣನ್, ಅನಿಲ್ ಕುಮಾರ್, ದೀಪ್ತಿಕಾ ಚಕ್ರವರ್ತಿ, ನಮ್ರತಾ, ಡಾ.ನಿರ್ಮಲಾ, ಸಂಧ್ಯಾ, ಕೆ.ವಿ.ಎಸ್. ಹರಿ, ದಾಸಪ್ಪ, ಬಿ.ಪಿ.ಬಾಲಚಂದ್ರ, ಬಾಲರಾಮ್ ಪಿ., ಅಂಜಲಿ ಎ. ಕರಂಡೆ, ಹೇಮಲತಾ, ಚಟ್ಟೋಪಾಧ್ಯಾಯ ಕೆ., ಪ್ರದೀಪ್, ಅಭಿಲಾಷ್ ರಾಜು, ಸುಂದರಸ್ವಾಮಿ ಹಾಗೂ ರಾಮಸ್ವಾಮಿ, ವಿಕ್ಟರ್ ಮನೋಹರ್ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

2008ರಿಂದ 2025ರವರೆಗೆ ಇವರೆಲ್ಲರೂ ಜಾತಿ ನಿಂದನೆ ಮಾಡಿದ್ದಾರೆ. ಕೆಲಸದಿಂದ ವಜಾ ಮಾಡಿದ್ದಾರೆ. ಬೆದರಿಕೆ ಹಾಕಿದ್ದಾರೆ. ಬೇರೆ ಕೆಲಸ ಸಿಗದಂತೆ ಮಾಡಿದ್ದಾರೆ ಎಂಬುದಾಗಿ ಆರೋಪಿಸಿ ದುರ್ಗಪ್ಪ ನೀಡಿರುವ ದೂರಿನ ಆಧಾರದಲ್ಲಿ ಪ್ರಕರಣ ದಾಖಲಾಗಿದೆ.



ಮನೆಯಿಂದಲೇ ಮತ ಚಲಾಯಿಸಿದ ಹಮೀದ್ ಅನ್ಸಾರಿ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮಾಜಿ ಉಪ ರಾಷ್ಟ್ರಪತಿ ಹಮೀದ್ ಅನ್ಸಾರಿ ಅವರು ಸೋಮವಾರ ಮನೆಯಿಂದಲೇ ಅಂಚೆ ಮತದಾನದ ಮೂಲಕ ತಮ್ಮ ಹಕ್ಕು ಚಲಾಯಿಸಿದರು.

ಅರ್ಹ ಮತದಾರರ ಮತ ಚಲಾವಣೆಗೆ ಅನುಕೂಲ ಮಾಡಿಕೊಡಲು ಕೇಂದ್ರ ಚುನಾವಣಾ ಆಯೋಗವು ವಿದ್ಯುನ್ಮಾನ ಬಳಸಿ ಮಾಡಬಹುದಾದ ಅಂಚೆ ಮತದಾನ ಪದ್ಧತಿ (ಇಟಿಪಿಬಿಎಸ್) ಸೌಲಭ್ಯ ಕಲ್ಪಿಸಿದೆ. ಇದರ ಅನ್ವಯ, ಮತಗಟ್ಟೆಯಿಂದ ದೂರವಿದ್ದರೂ ಮತದಾನ ಪ್ರಕ್ರಿಯೆಯಲ್ಲಿ ಭಾಗಿಯಾಗುವ ಅವಕಾಶ ಒದಗಿಸಿದೆ.

85 ವರ್ಷ ಮೇಲ್ಪಟ್ಟ ಹಾಗೂ ಅಂಗವಿಕಲ ಮತದಾರರು ಹಕ್ಕು ಚಲಾಯಿಸಲು ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ದೆಹಲಿ ಚುನಾವಣಾ ಆಯೋಗವು ಜ.23ರಂದು 'ಮನೆಯಿಂದಲೇ ಮತದಾನ' ಕಾರ್ಯಕ್ರಮಕ್ಕೆ ಚಾಲನೆ ನೀಡಿತ್ತು. 2024ರ ಲೋಕಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ ಈ ಅವಕಾಶ ಕಲ್ಪಿಸಲಾಗಿತ್ತು. ದೆಹಲಿ ವಿಧಾನಸಭೆಯಲ್ಲಿ 6,399 ಹಿರಿಯ ನಾಗರಿಕರು ಹಾಗೂ 1,050 ಅಂಗವಿಕಲರು ಈ ಸೇವೆ ಪಡೆಯಲು ಮನವಿ ಸಲ್ಲಿಸಿದ್ದಾರೆ.



ಫುಟ್‌ಬಾಲ್: ಎಂಇಜಿ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು ಸೋಮವಾರ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ1-0ಯಿಂದ ಬಿಯುಎಫ್‌ಸಿ ತಂಡದ ವಿರುದ್ಧ ಜಯ ಸಾಧಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಂಇಜಿ ತಂಡದ ಪರ ಲಾಯಿಶ್ರಾಮ್ ಅಮಿತ್ ಸಿಂಗ್ (48ನೇ ನಿ.) ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡ 4-0 ಗೋಲುಗಳಿಂದ ಎಚ್‌ಎಎಲ್ ಎಫ್‌ಸಿ ತಂಡವನ್ನು ಮಣಿಸಿತು. ಕೊಡಗು ತಂಡದ ಲಾಲ್‌ಕ್ರಾವ್ಮಾವಿಯಾ (51ನೇ ನಿ.), ಟಿ. ಜೇಮ್ಸ್ (61ನೇ ನಿ.), ಆದಿತ್ಯ ಪ್ರತಾಪ್ (65ನೇ ನಿ.) ಮತ್ತು ಮುಸಾಮಿಯಾನ್ ಸಯ್ಯದ್ (90+4ನೇ ನಿ.) ಗೋಲುಗಳನ್ನು ಹೊಡೆದರು.

ಫ್ಯಾಂಟಮ್‌ಗೆ ಜಯ: ಸಿ ಡಿವಿಷನ್ ಕ್ಲಬ್‌ನ ದೌಲತ್ ಖಾನ್ ಸ್ಮಾರಕ ಟೂರ್ನಿಯ ಸೆಮಿಫೈನಲ್‌ನಲ್ಲಿ ಬೆಂಗಳೂರು ಫ್ಯಾಂಟಮ್ ಎಫ್‌ಸಿ 6-0 ಗೋಲುಗಳಿಂದ ಹಂಪಿನನಗರ್ ತಂಡದ ವಿರುದ್ಧ ಭರ್ಜರಿ ಗೆಲುವು ಸಾಧಿಸಿತು. ಮತ್ತೊಂದು ಸೆಮಿಫೈನಲ್‌ನಲ್ಲಿ ಎಂಪೈಯರ್ ಎಫ್‌ಸಿ 2-0 ಗೋಲುಗಳಿಂದ ಫ್ರೀಡಮ್ ಎಫ್‌ಸಿ ತಂಡವನ್ನು ಸೋಲಿಸಿತು.

ಮೆಟ್ರೊ ಟಿಕೆಟೇತರ ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ಸಂಸದ ಪಿ.ಸಿ. ಮೋಹನ್ ಸಲಹೆ

ದರ ಏರಿಕೆ: ಮಾಹಿತಿ ಕೇಳಿದ ಕೇಂದ್ರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಮ್ಮ ಮೆಟ್ರೊ ಪರಿಷ್ಕೃತ ಪ್ರಯಾಣ ದರ ನಿಗದಿಯ ಬಗ್ಗೆ ಹೆಚ್ಚಿನ ಮಾಹಿತಿ ನೀಡುವಂತೆ ಕೇಂದ್ರ ಸರ್ಕಾರ ಬಿಎಂಆರ್‌ಸಿಎಲ್‌ಗೆ ಸೂಚಿಸಿದೆ.

'ದರ ನಿಗದಿಯ ಮಾನದಂಡಗಳ ಬಗ್ಗೆ ಹೆಚ್ಚಿನ ಅಧ್ಯಯನಕ್ಕಾಗಿ ವಿವರ ಕೇಳಿದ್ದು, ನಾವು ಸಲ್ಲಿಸಿದ್ದೇವೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೇಂದ್ರದ ಮೇಲೆ ಒತ್ತಡ: 'ಮೆಟ್ರೊದಲ್ಲಿ ಪ್ರತಿದಿನ 8 ಲಕ್ಷದಿಂದ 9 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಸಾರ್ವಜನಿಕ ಸಂಚಾರ ವ್ಯವಸ್ಥೆಗೆ ಜನ ಒಗ್ಗಿಹೋಗಿದ್ದಾರೆ. ಒಮ್ಮೆಲೇ ಪ್ರಯಾಣದರ ಏರಿಕೆ ಮಾಡಿ ಅವರು ಮತ್ತೆ ತಮ್ಮ ದ್ವಿಚಕ್ರ, ನಾಲ್ಕು ಚಕ್ರಗಳ ವಾಹನಗಳಿಗೆ ಮರಳಿದರೆ ವಾಹನದಟ್ಟಣೆ ಸಮಸ್ಯೆ ಇನ್ನಷ್ಟು ಹೆಚ್ಚಾಗುತ್ತದೆ. ಎಷ್ಟು ದರ ಏರಿಕೆ ಮಾಡುವುದು ಎಂದು ಶೇಕಡಾವಾರು ಲೆಕ್ಕಾಚಾರ ಹಾಕುವುದನ್ನೇ ನಿಲ್ಲಿಸಬೇಕು. ಈಗಿರುವ ದರವನ್ನೇ ಮುಂದುವರಿಸಬೇಕು ಎಂದು ಕೇಂದ್ರ ರೈಲ್ವೆ ಸಚಿವಾಲಯದ ಮೇಲೆ ಒತ್ತಡ ಹಾಕಿದ್ದೇನೆ' ಎಂದು ಸಂಸದ ಪಿ.ಸಿ. ಮೋಹನ್ ತಿಳಿಸಿದ್ದಾರೆ.

'ಬಿಎಂಆರ್‌ಸಿಎಲ್ ವೆಚ್ಚಗಳನ್ನು ಕಡಿಮೆ ಮಾಡಲು ಮತ್ತು ಟಿಕೆಟೇತರ ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಟಿಕೆಟ್ ದರವನ್ನು ಶೇ 40ರಿಂದ ಶೇ 45ರಷ್ಟು ಏರಿಕೆ ಮಾಡಲು ದರ ನಿಗದಿ ಸಮಿತಿ ಶಿಫಾರಸು ಮಾಡಿತ್ತು. ಈ ಬಗ್ಗೆ ಬಿಎಂಆರ್‌ಸಿಎಲ್ ಆಡಳಿತ ಮಂಡಳಿಯು ಸಭೆ ನಡೆಸಿ ಚರ್ಚಿಸಿದ್ದರೂ ಅಂತಿಮ ತೀರ್ಮಾನವನ್ನು ಇನ್ನೂ ಪ್ರಕಟಿಸಿಲ್ಲ.

'ದರ ಪರಿಷ್ಕರಣೆ ಬಗ್ಗೆ ಎರಡು ದಿನಗಳಲ್ಲಿ ಮಾಹಿತಿ ನೀಡಲಾಗುವುದು' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರರಾವ್ ತಿಳಿಸಿದ್ದಾರೆ.

ದುಂದುವೆಚ್ಚ ತಪ್ಪಿಸಲು ಪತ್ರ

'ನಗರದ ಅವಶ್ಯಕ ಸೇವೆಯಾಗಿರುವ ನಮ್ಮ ಮೆಟ್ರೊಗೆ ಸಂಬಂಧಿಸಿದಂತೆ ಆಡಳಿತಾತ್ಮಕವಾಗಿ ಸುಧಾರಣೆಗಳನ್ನು ತಂದರೆ ಪ್ರಯಾಣದರ ಹೆಚ್ಚಿಸುವ ಅಗತ್ಯವೇ ಇಲ್ಲ. ಅದಕ್ಕಾಗಿ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದೇವೆ' ಎಂದು ಬಿಎಂಆರ್‌ಸಿಎಲ್ ನೌಕರರ ಯೂನಿಯನ್ ಉಪಾಧ್ಯಕ್ಷ ಸೂರ್ಯನಾರಾಯಣ ಮೂರ್ತಿ ತಿಳಿಸಿದ್ದಾರೆ.

'ಕೆಲವು ಅಧಿಕಾರಿಗಳು ಭತ್ಯೆಯ ಹೆಸರಲ್ಲಿ ಲಕ್ಷಾಂತರ ರೂಪಾಯಿ ಪಡೆದುಕೊಂಡಿರುವ ದಾಖಲೆ ನಮ್ಮಲ್ಲಿದೆ. ಕೋವಿಡ್ ಕಾಲದಲ್ಲಿಯೂ ಮೆಟ್ರೊ ನಿರ್ವಹಣೆ ಎಂದು ಕೋಟ್ಯಂತರ ರೂಪಾಯಿ ವೆಚ್ಚ ತೋರಿಸಲಾಗಿತ್ತು. ಅಗತ್ಯ ಇದ್ದರೆ ಹೊಸಬರಿಗೆ ಉದ್ಯೋಗ ನೀಡಬೇಕು. ಅದನ್ನು ಬಿಟ್ಟು ನಿವೃತ್ತರಾದವರನ್ನು ತಂದು ಕೂರಿಸಿ ದುಬಾರಿ ವೇತನ ನೀಡುತ್ತಾರೆ. ಇಂಥ ಅನೇಕ ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ಸೋರಿಕೆ ಉಳಿಸಿ, ಮೆಟ್ರೊ ಆದಾಯ ಹೆಚ್ಚಿಸಿ'

ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣ ದರವನ್ನು ಹೆಚ್ಚಿಸುವ ಬದಲು ಬಿಎಂಆರ್‌ಸಿಎಲ್‌ನಲ್ಲಿ ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡುವ ಮೂಲಕ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಆಡಳಿತ ಮಂಡಳಿಗೆ ಬಿಎಂಆರ್‌ಸಿಎಲ್ ನೌಕರರ ಯೂನಿಯನ್ ಪತ್ರ ಬರೆದಿದೆ.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದ ಪತ್ರದಲ್ಲಿ ಎಲ್ಲೆಲ್ಲಿ ಸೋರಿಕೆ ಕಡಿಮೆ ಮಾಡಬಹುದು ಎಂದು ವಿವರಿಸಲಾಗಿದೆ. ಅನಗತ್ಯ, ಅನುತ್ಪಾದಕ ವೆಚ್ಚಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ದರ ನಿಗದಿ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ಪತ್ರದಲ್ಲೇನಿದೆ?

- ಮೆಟ್ರೊ ರೈಲು ದುರಸ್ತಿ ಮತ್ತು ನಿರ್ವಹಣೆಗೆ ಎಂದು ಪ್ರತಿ ತಿಂಗಳು ತೋರಿಸುವ ವೆಚ್ಚದಲ್ಲಿ ಶೇ 50ರಷ್ಟು ಉಳಿತಾಯ ಮಾಡಲು ಸಾಧ್ಯವಿದೆ. ಇದೊಂದರಿಂದಲೇ ತಿಂಗಳಿಗೆ ಸುಮಾರು ₹1ಕೋಟಿ ಉಳಿತಾಯ ಮಾಡಬಹುದು
- ಬೇರೆ ಬೇರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ 60 ವರ್ಷ ದಾಟಿರುವ 300ಕ್ಕೂ ಅಧಿಕ ಅಧಿಕಾರಿಗಳು ಗುತ್ತಿಗೆ ಆಧಾರದಲ್ಲಿ ಬಿಎಂಆರ್‌ಸಿಎಲ್‌ನಲ್ಲಿ ವಿವಿಧ ಹುದ್ದೆಗಳಲ್ಲಿದ್ದಾರೆ. ಅವರಿಗೆ ಅಧಿಕ ವೇತನ ನೀಡಲಾಗುತ್ತಿದೆ. ಅವರ ವೇತನದಲ್ಲಿ ಶೇ 50ರಷ್ಟು ಕಡಿತ ಮಾಡಿದರೂ ಅವರಿಗೆ ಆಮೇಲೂ ಅಧಿಕ ವೇತನ ಸಿಗಲಿದೆ. ನಿವೃತ್ತರನ್ನು ನೇಮಿಸಿಕೊಳ್ಳುವುದನ್ನು ನಿಲ್ಲಿಸುವ ಮೂಲಕ ವೆಚ್ಚ ಕಡಿಮೆ ಮಾಡಬಹುದು
- ಸಿಬ್ಬಂದಿ ಕೆಲಸ ಮಾಡುವುದಿಲ್ಲ ಎಂದು ಸಬೂಬು ಹೇಳಿ ವಾರ್ಷಿಕ ನಿರ್ವಹಣೆ ಗುತ್ತಿಗೆ (ಎಎಂಸಿ) ಆಧಾರದಲ್ಲಿ ಹೊರಗಿನವರಿಗೆ ಕೆಲಸ ವಹಿಸಲಾಗುತ್ತಿದೆ. ಇದನ್ನು ಕೈ ಬಿಟ್ಟು ಬಿಎಂಆರ್‌ಸಿಎಲ್ ನೌಕರರಿಂದಲೇ ಮಾಡಿಸಬೇಕು. ಕೆಲವು ಅನಗತ್ಯ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡು ಅಧಿಕ ವೇತನ ನೀಡಲಾಗುತ್ತಿದೆ ಇದನ್ನು ನಿಯಂತ್ರಿಸಬೇಕು
- ಕೆಲವು ಹುದ್ದೆಗಳಿಗೆ ಒಬ್ಬರ ಬದಲು ಇಬ್ಬಿಬ್ಬರನ್ನು ನೇಮಕ ಮಾಡಿಕೊಳ್ಳಲಾಗಿದೆ. ಒಂದು ಹುದ್ದೆಗೆ ಒಬ್ಬರನ್ನೇ ನೇಮಕ ಮಾಡಿಕೊಳ್ಳಬೇಕು. ಕೆಲವು ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ ಇಲ್ಲದ ವರನ್ನೂ ನೇಮಿಸಿ ಕೊಳ್ಳಲಾಗಿದೆ
- ಎಲ್ಲ ಮೆಟ್ರೊ ನಿಲ್ದಾಣಗಳ ಚಾವಣಿಯ ಮೇಲೆ ಸೋಲಾರ್ ಅಳವಡಿಸುವ ಮೂಲಕ ವಿದ್ಯುತ್ ಉತ್ಪಾದನೆ ಮಾಡಬೇಕು. ಆಸ್ತಿ ಅಭಿವೃದ್ಧಿ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಹೆಚ್ಚಿಸಬೇಕು. ಪಾರ್ಕಿಂಗ್ ಪ್ರದೇಶ ಗಳನ್ನು ಹೆಚ್ಚಿಸುವ ಮೂಲಕ ಆದಾಯ ಹೆಚ್ಚಿಸಬೇಕು
- ಕೆಲವು ಟೆಂಡರ್‌ಗಳನ್ನು ಅಧಿಕಾರಿಗಳೇ ಅನಧಿಕೃತವಾಗಿ ಪಡೆಯುತ್ತಿದ್ದಾರೆ. ಬಹಳಷ್ಟು ಸೋರಿಕೆ, ಕಳ್ಳಾಟಗಳು ನಡೆಯುತ್ತಿವೆ

ಮೆಟ್ರೊ ಪ್ರಯಾಣ ದರ ಏರಿಕೆ ವಿರುದ್ಧ ಪ್ರತಿಭಟನೆ



ಮೆಟ್ರೊ ಪ್ರಯಾಣ ದರ ಏರಿಕೆ ವಿರೋಧಿಸಿ ಎಸ್‌ಯುಸಿಐ ಪಕ್ಷದ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ಪ್ರಯಾಣ ದರ ಏರಿಕೆ ವಿರೋಧಿಸಿ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನದಲ್ಲಿ ನಿರ್ಮಾಣವಾಗಿರುವ 'ನಮ್ಮ ಮೆಟ್ರೊ' ಖಾಸಗಿ ಅಥವಾ ಕಾರ್ಪೊರೇಟ್ ಉದ್ದಿಮೆಯಲ್ಲ. ಲಾಭ, ನಷ್ಟದ ಲೆಕ್ಕಾಚಾರ ಮಾಡಿ, ಪ್ರಯಾಣ ದರ ಏರಿಕೆ ಮಾಡಬಾರದು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಎಸ್‌ಯುಸಿಐ ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಎನ್.ರವಿ ಮಾತನಾಡಿ, 'ನಮ್ಮ ಮೆಟ್ರೊ'ಗಾಗಿ ಕೆಲವು ವರ್ಷಗಳಿಂದ ಜನರ ಮೇಲೆ ತೆರಿಗೆ ವಿಧಿಸಲಾಗಿದೆ. ಇದೀಗ, ಪ್ರಯಾಣ ದರ ಏರಿಸುವುದು ಯಾವ ನ್ಯಾಯ' ಎಂದು ಪ್ರಶ್ನಿಸಿದರು.

ಮೆಟ್ರೊ ಪ್ರಯಾಣ ದರ ಹೆಚ್ಚಳದಿಂದ ಸಾಮಾನ್ಯ ಜನರಿಗೆ ತಿಂಗಳಿಗೆ ಸರಾಸರಿ ₹400ರಿಂದ ₹450 ರವರೆಗೆ ಹೆಚ್ಚಿನ ಹೊರೆಯಾಗುತ್ತದೆ. ಈಗಾಗಲೇ ಬಸ್ ದರ ಹಾಗೂ ಅಗತ್ಯ ವಸ್ತುಗಳ ದರ ಏರಿಕೆಯಿಂದ ಜನ ಸಂಕಷ್ಟ ಎದುರಿಸುತ್ತಿದ್ದಾರೆ. ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಿ, ಮೆಟ್ರೊ ಪ್ರಯಾಣ ದರ ಏರಿಕೆ ಮಾಡದಂತೆ ತಡೆಯಬೇಕು' ಎಂದು ಆಗ್ರಹಿಸಿದರು.

'ನಮ್ಮ ಮೆಟ್ರೊ' ಸಾರ್ವಜನಿಕ ಸಾರಿಗೆ. ಲಾಭ ಮತ್ತು ನಷ್ಟದ ಆಧಾರದ ಮೇಲೆ ಅದು ಕಾರ್ಯನಿರ್ವಹಿಸಬಾರದು. ಸಾರ್ವಜನಿಕರಿಗೆ ಗುಣಮಟ್ಟದ ಮತ್ತು ಕೈಗೆಟಕುವ ದರದಲ್ಲಿ ಸೇವೆಯನ್ನು ನೀಡುವುದೇ ನಮ್ಮ ಮೆಟ್ರೊ ಗುರಿಯಾಗಬೇಕು' ಎಂದು ಸಲಹೆ ನೀಡಿದರು.

ಎಸ್‌ಯುಸಿಐ(ಕಮ್ಯುನಿಸ್ಟ್) ಜಿಲ್ಲಾ ಸಮಿತಿ ಸದಸ್ಯ ಜಯಣ್ಣ ಮತ್ತಿತರ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಹಾಜರಿದ್ದರು.

ಲಾಲ್‌ಬಾಗ್: ಅಂತಿಮ ದಿನ 37 ಸಾವಿರಕ್ಕೂ ಹೆಚ್ಚು ಜನರಿಂದ ವೀಕ್ಷಣೆ

ಪುಷ್ಪ ಪ್ರದರ್ಶನಕ್ಕೆ ತೆರೆ: 4.75 ಲಕ್ಷ ಜನ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವ ಅಂಗವಾಗಿ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿದ್ದ 'ಆದಿಕವಿ ಮಹರ್ಷಿ ವಾಲ್ಮೀಕಿ' ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನಕ್ಕೆ ಸೋಮವಾರ ತೆರೆಬಿತ್ತು. 12 ದಿನ ನಡೆದ ಈ ಫಲಪುಷ್ಪ ಪ್ರದರ್ಶನಕ್ಕೆ ಒಟ್ಟು 4.75 ಲಕ್ಷ ಜನ ಭೇಟಿ ನೀಡಿದ್ದು, ₹2.26 ಕೋಟಿ ಪ್ರವೇಶ ಶುಲ್ಕ ಸಂಗ್ರಹವಾಗಿದೆ.

ಗಾಜಿನ ಮನೆಯ ಆವರಣದಲ್ಲಿ ಮಹರ್ಷಿ ವಾಲ್ಮೀಕಿ ಅವರ ಜೀವನ ಗಾಥೆಯನ್ನು ಬಣ್ಣ-ಬಣ್ಣದ ಹೂಗಳಲ್ಲಿ ಅನಾವರಣ ಮಾಡಲಾಗಿತ್ತು. ಜನವರಿ 16ರಿಂದ 27ರವರೆಗೆ ನಡೆದ ಈ ಫಲಪುಷ್ಪ ಪ್ರದರ್ಶನವನ್ನು ಕಣ್ತುಂಬಿ ಕೊಳ್ಳಲು ನಿತ್ಯವೂ ಲಕ್ಷಾಂತರ ಜನ ಭಾಗವಹಿಸಿದ್ದರು.

ಬೃಹತ್ ಹುತ್ತದ ಮಾದರಿ, ರಾಮಾಯಣ ಮಹಾಕಾವ್ಯದಲ್ಲಿ ವನವಾಸದ ಸಂದರ್ಭದಲ್ಲಿ ಪಂಚವಟಿಯಲ್ಲಿ ತಂಗಿದ್ದ ಶ್ರೀರಾಮ, ಸೀತೆ ಹಾಗೂ ಲಕ್ಷ್ಮಣರ 3ಡಿ ಕಲಾಕೃತಿಗಳು, ಹುಲ್ಲಿನ ಗುಡಿಸಲು ಮತ್ತು ಅರಣ್ಯ ಪರಿಸರದ ಮಾದರಿ ನಿರ್ಮಿಸ ಲಾಗಿತ್ತು. ಇದನ್ನು ವೀಕ್ಷಿಸಲು ಲಕ್ಷಾಂತರ ಮಂದಿ ದೇಶ-ವಿದೇಶಗಳಿಂದ ಬಂದಿದ್ದರು.

'ಅಂತಿಮ ದಿನವಾದ ಸೋಮವಾರ 37,890 ಜನ ಫಲಪುಷ್ಪ ಪ್ರದರ್ಶನ ವೀಕ್ಷಿಸಿದರು. ₹7.08 ಲಕ್ಷ ಪ್ರವೇಶ ಶುಲ್ಕ ಸಂಗ್ರಹವಾಗಿದೆ. 12 ದಿನಗಳ ಈ ಫಲಪುಷ್ಪ ಪ್ರದರ್ಶನಕ್ಕೆ 4,75,890 ಜನ ಭೇಟಿ ನೀಡಿದ್ದು, ಪ್ರವೇಶ ಶುಲ್ಕ, ಮಳಿಗೆ ಬಾಡಿಗೆ, ಪ್ರದರ್ಶನ ಪ್ರವೇಶ ಶುಲ್ಕ ಸೇರಿ ಒಟ್ಟು ₹2.26 ಕೋಟಿ ವರಮಾನ ಸಂಗ್ರಹವಾಗಿದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸಸ್ಯಕಾಶಿಯಲ್ಲಿ ಕಸದ ರಾಶಿ

ಲಾಲ್‌ಬಾಗ್‌ನಲ್ಲಿ ಎತ್ತ ನೋಡಿದರೂ ಚೆಲ್ಲಾಪಿಲ್ಲಿಯಾಗಿ ಹರಡಿದ ಕಸ, ತಿಂದು ಬಿಸಾಡಿದ ದೊನ್ನೆಗಳ ರಾಶಿ ಕಂಡುಬರುತ್ತಿದೆ.

ಫಲಪುಷ್ಪ ಪ್ರದರ್ಶನ ಮುಕ್ತಾಯವಾಗಿದ್ದರೂ ವಾಯುವಿಹಾರಿಗಳು ಸಾಗುವ ರಸ್ತೆ, ಪಾದಚಾರಿ ಮಾರ್ಗಗಳು, ಉದ್ಯಾನದ ಹಸಿರು ಹೊದಿಕೆಯ ಮೇಲೆ ಜನರು ಬಿಸಾಡಿಹೋದ ತ್ಯಾಜ್ಯದ ರಾಶಿಬಿದ್ದಿದೆ. ಗಾಜಿನ ಮನೆಯ ಎದುರಿಗಿದ್ದ ತಾತ್ಕಾಲಿಕ ಅಂಗಡಿ ಮಳಿಗೆಗಳನ್ನು ಖಾಲಿ ಮಾಡಲಾಗಿದ್ದು, ಅವುಗಳಲ್ಲಿ ಇದ್ದ ಕಸವನ್ನೆಲ್ಲ ಅಲ್ಲಿಯೇ ಹರಡಿ ಹೋಗಿದ್ದರು.

ಆಹಾರ ಪದಾರ್ಥ ಸೇವಿಸಿದವರು ಕಾಗದದ ಮತ್ತು ಅಡಿಕೆ ತಟ್ಟೆಗಳನ್ನು ಎಸೆದು ಹೋಗಿದ್ದರು.

'ಲಾಲ್‌ಬಾಗ್ ಅನ್ನು ಈ ರೀತಿ ನೋಡಲು ಅತ್ಯಂತ ಬೇಸರವಾಗುತ್ತಿದೆ. ಅದನ್ನು ಹಾಳು ಮಾಡುವ ಪ್ರಯತ್ನವನ್ನು ಯಾರೂ ಮಾಡಬಾರದು. ಇದೊಂದು ಹೇಯ ಕೃತ್ಯ' ಎಂದು ವಾಯುವಿಹಾರಿಗಳು ಬೇಸರ ವ್ಯಕ್ತಪಡಿಸಿದರು.



ಕಸದ ತೊಟ್ಟಿ ಬಾಯ್ತೆರೆದಾಗ ಪ್ರಜಾವಾಣಿ ಚಿತ್ರ

'ಸಂವಾದದ ಬದಲು ವಾದವೇ ವಿಜೃಂಭಿಸುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಾದವನ್ನು ಹುಟ್ಟು ಹಾಕುವುದು ಇಂದಿನ ತುರ್ತು ಅಗತ್ಯ. ದುರಂತವೆಂದರೆ ಸಂವಾದದ ಬದಲು ಕೇವಲ ವಾದವೇ ವಿಜೃಂಭಿಸುತ್ತಿದೆ' ಎಂದು ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ವಿಷಾದ ವ್ಯಕ್ತಪಡಿಸಿದರು.

ರಂಗಮಂಡಲ ಬೆಂಗಳೂರು ಮತ್ತು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ '7ನೇ ಕಾವ್ಯ ಸಂಸ್ಕೃತಿ ಯಾನ' ಸಮ್ಮೇಳನ ಉದ್ದೇಶಿಸಿ ಮಾತನಾಡಿದರು.

ಇಂದು ಸಾಹಿತ್ಯ ಲೋಕ ಆಮಿಷಕ್ಕೆ ಒಳಗಾಗಿ ಸ್ವಾಯತ್ತ ಮನಃಸ್ಥಿತಿಯನ್ನು ಕಳೆದುಕೊಳ್ಳುತ್ತಿದೆ. ಸ್ವಾಯತ್ತತೆಗೆ ಮಾದರಿ ಕುವೆಂಪು. ಅವರು ಎಂದೂ ಆಮಿಷಕ್ಕೆ ಒಳಗಾಗಲಿಲ್ಲ. ಹಾಗಾಗಿಯೇ ಅವರು ಮೇರು ಪ್ರತಿಭೆ ಎಂದು ಬಣ್ಣಿಸಿದರು.

ಕಾವ್ಯ ಸಂಸ್ಕೃತಿ ಯಾನ ಸಮ್ಮೇಳನದ ಸರ್ವಾಧ್ಯಕ್ಷ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕುಂದರಾಜು ಅವರೊಂದಿಗೆ ಪತ್ರಕರ್ತ ಜಿ.ಎನ್. ಮೋಹನ್ ಅವರು ಸಂವಾದ ನಡೆಸಿದರು.

'ಕೋಮುವಿಷವನ್ನು ಹರಡುವ ಸಂಚಿನ ವಿರುದ್ಧ ಸಾಹಿತ್ಯ ಸಾಂಸ್ಕೃತಿಕ ಲೋಕ ಎಚ್ಚೆತ್ತುಕೊಳ್ಳದಿದ್ದರೆ ಭವಿಷ್ಯದ ಭಾರತವನ್ನು ಕಲ್ಪಿಸಲೂ ಸಾಧ್ಯವಿಲ್ಲ' ಎಂದು ಆತಂಕ ವ್ಯಕ್ತಪಡಿಸಿದರು.

ಕಾರ್ಮಿಕ ಇಲಾಖೆ ಜಂಟಿ ಕಾರ್ಯದರ್ಶಿ ಸಂಗಮೇಶ ಉಪಾಸೆ, ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಮಾತನಾಡಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ಲ, ಕಲಾವಿದ ಎಂ.ಎಸ್.ಮೂರ್ತಿ ಕಾವ್ಯ ಸಂಸ್ಕೃತಿ ಯಾನ ಕುರಿತು ಮಾತನಾಡಿದರು.

ಕಾರ್ಯಕ್ರಮದ ಪ್ರಧಾನ ಸಂಚಾಲಕ ಡಿ.ಬಿ. ಮಲ್ಲಿಕಾರ್ಜುನ ಸ್ವಾಮಿ ಮಹಾಮನೆ, ಕಾವ್ಯ ಸಂಸ್ಕೃತಿ ಯಾನ ಸಂಚಾಲಕ ಎಚ್.ಎಸ್. ಸುಧೀಂದ್ರ ಕುಮಾರ್, ಬಿಬಿಎಂಪಿ ಮಾಜಿ ಸದಸ್ಯ ವಿ.ವಿ.ಸತ್ಯನಾರಾಯಣ, ಯಶವಂತಪುರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾದ ಎ. ಎನ್. ಶಿವಸ್ವಾಮಿ, ಬಿ.ಎಸ್.ಪಾರಿಜಾತ, ರಂಗಕರ್ಮಿ ಗುಂಡಣ್ಣ, ಟಿ.ಎಸ್. ವಿವೇಕಾನಂದ, ಬೈರಮಂಗಲ ರಾಮೇಗೌಡ, ರಂಗಸ್ವಾಮಿ, ಶಿವಲಿಂಗ ಪ್ರಸಾದ್, ಭಾರತಿ ಉಪಸ್ಥಿತರಿದ್ದರು.



ಕಾವ್ಯ ಸಂಸ್ಕೃತಿ ಯಾನದಲ್ಲಿ ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಅವರು 'ಕಾವ್ಯ ದೀವಟಿ'ಗೆಯನ್ನು ಮುನ್ನಡೆಸಿದರು

'ಆಸ್ಕರಿ' ಛಾಯಾಗ್ರಹಣ ಸ್ಪರ್ಧೆಗೆ ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯದಲ್ಲಿ ಯುವ ಛಾಯಾಗ್ರಾಹಕರನ್ನು ಪ್ರೋತ್ಸಾಹಿಸುವುದಕ್ಕಾಗಿ ಸ್ಥಾಪಿಸಿರುವ 'ಆಸ್ಕರಿ ಪ್ರಶಸ್ತಿ'ಗಾಗಿ ಆಸಕ್ತ ಛಾಯಾಗ್ರಾಹಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

35 ವರ್ಷದೊಳಗಿನ ಛಾಯಾಗ್ರಾಹಕರು ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜ.31 ಕೊನೆ ದಿನ. ಆಸಕ್ತರು ಲಿಂಕ್ https://www.askaryphotoawards.com ಮೂಲಕ ನೋಂದಣಿ ಮಾಡಿ ಕೊಳ್ಳಬಹುದು. ಇದರಲ್ಲಿರುವ ಅರ್ಜಿ ಫಾರಂ ಭರ್ತಿ ಮಾಡಿ. ನೀವು ತೆಗೆದಿರುವ ಯಾವುದಾದರೂ ಒಂದು ವಿಭಾಗದ 4 ಉತ್ತಮ ಫೋಟೊಗಳನ್ನು ಅಪ್‌ಲೋಡ್ ಮಾಡಬೇಕು. ಹೆಚ್ಚಿನ ವಿವರಗಳಿಗಾಗಿ ಆಸ್ಕರಿ ತಂಡದ ಸಂಚಾಲಕ ವಿಕಾಸ್ ಶಾಸ್ತ್ರಿ (9945244055) ಅವರನ್ನು ಸಂಪರ್ಕಿಸಬಹುದು.

ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ರಕ್ತದಾನ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಯಂ ಪ್ರೇರಿತ ರಕ್ತ ದಾನವನ್ನು ಉತ್ತೇಜಿಸುವುದು ಮತ್ತು ರಕ್ತದ ಬೇಡಿಕೆ ಪೂರೈಸುವಲ್ಲಿ ಸ್ಥಳೀಯ ರಕ್ತ ನಿಧಿಗಳನ್ನು ಬೆಂಬಲಿಸುವುದು ನಮ್ಮ ಗುರಿಯಾಗಿದೆ' ಎಂದು ಕಿಸ್ತು ಜಯಂತಿ ಕಾಲೇಜು ಪ್ರಾಚಾರ್ಯ ಫಾದರ್ ಅಗಸ್ಟೀನ್ ಜಾರ್ಜ್ ತಿಳಿಸಿದರು.

ನಗರದ ಕೆ.ನಾರಾಯಣಪುರದಲ್ಲಿರುವ ಕ್ರಿಸ್ತು ಜಯಂತಿ ಕಾಲೇಜಿನ 'ಜಯಂತಿಯನ್ ವಿಸ್ತರಣಾ ಸೇವೆ ಮತ್ತು ಲಯನ್ಸ್ ಬ್ಲಡ್ ಸೆಂಟರ್, ಸೇಂಟ್ ಜಾನ್ಸ್ ಆಸ್ಪತ್ರೆ, ಟಿಟಿಕೆ ಬ್ಲಡ್ ಸೆಂಟರ್, ಸೇಂಟ್ ಫಿಲೋಮಿನಾ ಆಸ್ಪತ್ರೆ, ಕಿದ್ವಾಯಿ ಆಸ್ಪತ್ರೆ, ಸಂಜಯ್ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಟ್ರಾಮಾ ಆ್ಯಂಡ್ ಆರ್ಥೋಪೆಡಿಕ್ಸ್ ಮತ್ತು ನಿಮ್ಹಾನ್ಸ್ ಆಸ್ಪತ್ರೆ ಸಹಯೋಗದಲ್ಲಿ ಆಯೋಜಿಸಿದ್ದ ರಕ್ತ ದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ರಕ್ತದಾನ ಶಿಬಿರದಲ್ಲಿ 'ಜಯಂತಿಯನ್ ವಿಸ್ತರಣಾ ಸೇವೆ' (ಜೆಸ್) ಕೇಂದ್ರದ ನಿರ್ದೇಶಕ ಫಾ.ಜೈಸ್ವಿ ಥಾಮಸ್ ಅಧ್ಯಾಪಕ ಸಂಯೋಜಕ ಪ್ರೊ.ಮಂಜುನಾಥ್ ಎಸ್., ಎನ್‌ಸಿಸಿ ಸಂಯೋಜಕ ಕ್ಯಾ. ಸರ್ವೇಶ್ ಬಿ.ಎಸ್, ಎನ್‌ಎಸ್‌ಎಸ್ ಸಂಯೋಜಕ ಶ್ರೀಧರ್ ಪಿ.ಡಿ., ವೈಆರ್‌ಸಿ ಸಂಯೋಜಕ ಪ್ರೊ.ಧನಪಾಲ್, ಕೆಸಿಡಿಸಿ ಸಂಯೋಜಕ ಡಾ.ಅಬ್ದುಲ್ ರಝಾಕ್, ಯುಬಿಎ ಸಂಯೋಜಕ ಪ್ರೊ.ಚಂದ್ರಶೇಖರ್ ಎನ್., ಮತ್ತು ಸಿಎಸ್‌ಎ ಸಂಯೋಜಕ ಪ್ರೊ.ಶಶಿಕುಮಾರ್ ಎಂ. ಉಪಸ್ಥಿತರಿದ್ದರು.



ಶಿಬಿರದಲ್ಲಿ ವಿದ್ಯಾರ್ಥಿಗಳು ರಕ್ತದಾನ ಮಾಡಿದರು

ಕೆಎಸ್‌ಎನ್ ಜನ್ಮ ದಿನಾಚರಣೆ



ಕೆ.ಎಸ್. ನರಸಿಂಹಸ್ವಾಮಿ ಅವರ ಜನ್ಮ ದಿನದ ಪ್ರಯುಕ್ತ ಅವರ ಕವನಗಳ ಗಾಯನ ನಡೆಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ಜನ್ಮದಿನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ವತಿಯಿಂದ ಅಚರಿಸಲಾಯಿತು.

ಶಾಸಕ ರವಿ ಸುಬ್ರಹ್ಮಣ್ಯ ಅವರು ಕೆ.ಎಸ್.ನ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ರಂಗ ನಿರ್ದೇಶಕ ಬಿ.ವಿ. ರಾಜಾರಾಂ ಅವರ ನೇತೃತ್ವದಲ್ಲಿ 'ಮೈಸೂರು ಮಲ್ಲಿಗೆ' ನಾಟಕ ಪ್ರದರ್ಶನ ನಡೆಯಿತು.

ಕಲಾವಿದ ಪಿ. ಶಿವಶಂಕರ್ 'ಹೆಂಡತಿಯೊಬ್ಬಳು ಮನೆಯೊಳಗಿದ್ದರೆ' ಗೀತೆ ಹಾಡಿದರು. ಸುಮಾ, ಜಯಲಕ್ಷ್ಮಿ ಜಿತೇಂದ್ರ ತಂಡದಿಂದ ಕೆ.ಎಸ್. ನರಸಿಂಹಸ್ವಾಮಿ ಅವರ ಹಾಡುಗಳಿಗೆ ನೃತ್ಯ ಮಾಡಿದರು.

ಪಿ.ಎನ್. ಜಯರಾಂ, ರೂಪಾ ಮುರಳಿ, ಇಂದಿರಾ ಮತ್ತು ತಂಡದವರ ಸುಗಮ ಸಂಗೀತ, ಅಭಿಷೇಕ್ ರಾಮ ಪ್ರಸಾದ್ ತಂಡದಿಂದ ವಾದ್ಯ ವೈಭವ ನಡೆಯಿತು. ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ, ಸದಸ್ಯರಾದ ಮೇಖಲಾ ವೆಂಕಟೇಶ್, ಎಂ.ಎನ್. ಸುಬ್ರಹ್ಮಣ್ಯ, ಸನತ್ ಭಾಗವಹಿಸಿದ್ದರು.

ಕಬ್ಬಿಣದ ಪೈಪ್ ಲಾರಿ ಪಲ್ಟಿ: ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲಮಂಗಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಬೂದಿಹಾಳ್ ಗೇಟ್ ಬಳಿ ಕಬ್ಬಿಣದ ಪೈಪ್‌ಗಳನ್ನು ತುಂಬಿದ್ದ ಲಾರಿ ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ ಕೆಲಕಾಲ ಸಂಚಾರ ಅಸ್ತವ್ಯಸ್ತಗೊಂಡಿತು.

ತುಮಕೂರಿನಿಂದ ಬೆಂಗಳೂರಿಗೆ ಬರುತ್ತಿದ್ದ ಲಾರಿ ಬೆಳಗಿನ ಜಾವ 3 ಗಂಟೆ ಸುಮಾರಿಗೆ ಚಾಲಕನ ನಿಯಂತ್ರಣ ತಪ್ಪಿ ಬೂದಿಹಾಳ್ ಗೇಟ್ ಬಳಿ ಪಲ್ಟಿಯಾಗಿದೆ. ಪರಿಣಾಮ ರಸ್ತೆಯಲ್ಲಿ ಪೈಪ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಹಾಗಾಗಿ ಈ ಮಾರ್ಗದಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಸಂಚಾರ ದಟ್ಟಣೆ ಉಂಟಾಯಿತು.

ನೆಲಮಂಗಲ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಕ್ರೇನ್ ಮೂಲಕ ಲಾರಿಯನ್ನು ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಲಾರಿ ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಚಾಲಕನ ಅತಿಯಾದ ವೇಗ ಮತ್ತು ನಿರ್ಲಕ್ಷ್ಯದಿಂದ ಘಟನೆ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಚಾರ್ಜಿಂಗ್‌ಗೆ ಹಾಕಿದ್ದ ಬ್ಯಾಟರಿ ಸ್ಫೋಟದಿಂದ ಅನಾಹುತ: ಪಾರಾದ ನಾಲ್ವರು ಸಿಬ್ಬಂದಿ

ಬೆಂಕಿ ಅವಘಡ: ಇ.ವಿ ಸ್ಕೂಟರ್‌ಗಳು ಭಸ್ಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ಒಕಿನೋವಾ ಎಲೆಕ್ಟ್ರಿಕ್ ಸ್ಕೂಟರ್‌ಗಳಿದ್ದ(ಇ.ವಿ) ಶೋರೂಂನಲ್ಲಿ ಸೋಮವಾರ ಮಧ್ಯಾಹ್ನ ಬೆಂಕಿ ಅವಘಡ ಸಂಭವಿಸಿದ್ದು, 19 ಸ್ಕೂಟರ್‌ಗಳು ಭಸ್ಮವಾಗಿವೆ.

ಅವಘಡದಲ್ಲಿ 16 ಇ.ವಿ ಸ್ಕೂಟರ್‌ಗಳಿಗೆ ಭಾಗಶಃ ಹಾನಿಯಾಗಿದೆ. 39 ಸ್ಕೂಟರ್‌ಗಳು ಸುರಕ್ಷಿತವಾಗಿವೆ. ದಾಖಲೆಗಳು, ಬ್ಯಾಟರಿಗಳು ಹಾಗೂ ಪೀಠೋಪಕರಣ ಭಸ್ಮವಾಗಿವೆ.

ಶೋರೂಂ ಮುಂಭಾಗದಲ್ಲಿ ಚಾರ್ಜಿಂಗ್ ಪಾಯಿಂಟ್ ಅಳವಡಿಸಲಾಗಿತ್ತು. ಅಲ್ಲಿ ಕಾಣಿಸಿಕೊಂಡ ಬೆಂಕಿಯು ಕ್ಷಣಾರ್ಧದಲ್ಲಿ ಶೋರೂಂ ಆವರಿಸಿತ್ತು. ಇದರಿಂದ ಶೋರೂಂ ಹೊತ್ತಿ ಉರಿದಿದೆ. ದಟ್ಟ ಹೊಗೆಯೂ ಆವರಿಸಿತ್ತು.



ಬೆಂಗಳೂರಿನ ರಾಜ್‌ಕುಮಾರ್ ರಸ್ತೆಯಲ್ಲಿರುವ ಒಕಿನೋವಾ ಎಲೆಕ್ಟ್ರಿಕ್ ಸ್ಕೂಟರ್‌ಗಳಿದ್ದ (ಇ.ವಿ) ಶೋರೂಂನಲ್ಲಿ ಸೋಮವಾರ ಮಧ್ಯಾಹ್ನ ಬೆಂಕಿ ಅವಘಡ ಸಂಭವಿಸಿದ್ದು ಸ್ಕೂಟರ್‌ಗಳು ಸಂಪೂರ್ಣ ಭಸ್ಮವಾಗಿವೆ ಪ್ರಜಾವಾಣಿ ಚಿತ್ರ

ಪಾರಾದ ಸಿಬ್ಬಂದಿ: ಶೋರೂಂನಲ್ಲಿ ಹತ್ತಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದರು. ಮಧ್ಯಾಹ್ನ ಕೆಲವರು ಊಟಕ್ಕೆ ತೆರಳಿದ್ದರು. ನಾಲ್ವರು ತಳಮಹಡಿಯಲ್ಲಿ ಕೆಲಸ ಮಾಡುತ್ತಿದ್ದರು. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆಯೇ ನಾಲ್ವರೂ ಹೊರಬಂದು ಪಾರಾಗಿದ್ದಾರೆ.

'ಶೋರೂಂ ಎದುರಿಗಿದ್ದ ಜಾರ್ಜಿಂಗ್ ಪಾಯಿಂಟ್‌ನಲ್ಲಿ ಬ್ಯಾಟರಿ ಜಾರ್ಜಿಂಗ್‌ಗೆ ಹಾಕಲಾಗಿತ್ತು. ಅಲ್ಲಿ ಬ್ಯಾಟರಿಯೊಂದು ಸ್ಫೋಟಗೊಂಡು ಬೆಂಕಿ ಅವಘಡ ಸಂಭವಿಸಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಅವಘಡಕ್ಕೆ ನಿಖರ ಕಾರಣ ಪತ್ತೆಹಚ್ಚಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಕಳೆದ ವಾರ ಶೋಂಗೆ ಆರ್‌ಟಿಒ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ತಪಾಸಣೆ ವೇಳೆ ಲೋಪದೋಷಗಳು ಕಂಡುಬಂದಿದ್ದವು. 250 ವಾಟ್ ಸಾಮರ್ಥ್ಯದ ಬ್ಯಾಟರಿ ಬಳಕೆಯ 25 ಕಿ.ಮೀ. ವೇಗದ ವಾಹನಗಳಿಗೆ ಮಾತ್ರ ಪರವಾನಗಿ ಪಡೆಯಲಾಗಿತ್ತು. ಆದರೆ, ಶೋರೂಂನಲ್ಲಿ ನಿಗದಿಗಿಂತ ಹೆಚ್ಚು ಸಾಮರ್ಥ್ಯದ ಬ್ಯಾಟರಿ ಬಳಕೆಯ ಇವಿ ಸ್ಕೂಟರ್‌ಗಳಿದ್ದುದು ಕಂಡುಬಂದಿದೆ. ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಶೋರೂಂಗೆ ಬೆಂಕಿ ಬಿದ್ದ ಮಾಹಿತಿ ಮಧ್ಯಾಹ್ನ 2 ಗಂಟೆಗೆ ಗೊತ್ತಾಯಿತು. ಸ್ಥಳಕ್ಕೆ ಅಗ್ನಿಶಾಮಕದ ದಳದ ಎರಡು ವಾಹನಗಳನ್ನು ಕಳುಹಿಸಲಾಯಿತು. ನಿರಂತರ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಸಿಬ್ಬಂದಿ ಯಶಸ್ವಿ ಆಗಿದ್ದಾರೆ. ಒಟ್ಟು 74 ಸ್ಕೂಟರ್‌ಗಳಿದ್ದವು' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

ಎರಡನೇ ಅವಘಡ: ಕಳೆದ ವರ್ಷ ನವೆಂಬರ್ 19ರಂದು ರಾಜ್‌ಕುಮಾರ್ ರಸ್ತೆಯಲ್ಲಿರುವ ಮೈ ಇವಿ ಬೈಕ್ ಶೋರೂಂನಲ್ಲಿ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಅನಾಹುತ ಸಂಭವಿಸಿತ್ತು. ಅಲ್ಲಿನ ಸಿಬ್ಬಂದಿ ಪ್ರಿಯಾ ಎಂಬುವವರು ದುರ್ಘಟನೆಯಲ್ಲಿ ಸಜೀವ ದಹನವಾಗಿದ್ದರು. ಎರಡು ತಿಂಗಳ ಅಂತರದಲ್ಲಿ ಅದೇ ರಸ್ತೆಯಲ್ಲಿ ಮತ್ತೊಂದು ಅಗ್ನಿ ಅವಘಡ ಸಂಭವಿಸಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಸಹಕಾರ ಮಹಾಮಂಡಲದ ಪ್ರಕರಣ: ಸಿಐಡಿಯಿಂದ ತನಿಖೆ ಚುರುಕು

₹19.34 ಕೋಟಿ ವಂಚನೆ : ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು, ಬೆಂಗಳೂರು ನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಬಿಡಿಸಿಸಿ) ಮತ್ತು ರಾಜ್ಯ ಅಪೆಕ್ಸ್ ಸಹಕಾರಿ ಬ್ಯಾಂಕ್‌ನಲ್ಲಿ ಇರಿಸಿದ್ದ ನಿಗದಿತ ಠೇವಣಿ (ಎಫ್‌ಡಿ) ಖಾತೆಗಳಿಂದ ₹19.34 ಕೋಟಿಯನ್ನು ಕೆಲವು ವ್ಯಕ್ತಿಗಳ ಖಾತೆಗಳಿಗೆ ಅಕ್ರಮವಾಗಿ ವರ್ಗಾಯಿಸಿ ವಂಚಿಸಿದ್ದ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ. ಹೆಚ್ಚಿನ ವಿಚಾರಣೆಗೆ ಬಂಧಿತರನ್ನು ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಮಹಾಮಂಡಳದ ಅಧ್ಯಕ್ಷ ರಾಜು ವಿ. ಅವರು ಅಕ್ಟೋಬರ್‌ನಲ್ಲಿ ದೂರು ಸಲ್ಲಿಸಿದ್ದರು. ದೂರು ಆಧರಿಸಿ, ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಸಂಸ್ಥೆಯ ಹಿಂದಿನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಆಶಾಲತಾ ಪಿ., ಅವರ ಪತಿ ಸೋಮಶೇಖರ್, ವಿಜಯ್ ಕಿರಣ್, ಜೆ. ಮಂಜುನಾಥ್, ಸುಜಯ್, ಬಿಡಿಸಿಸಿ ಮತ್ತು ಅಪೆಕ್ಸ್ ಬ್ಯಾಂಕ್ ಶಾಖೆಗಳ ವ್ಯವಸ್ಥಾಪಕರು ಹಾಗೂ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಲೆಕ್ಕಪರಿಶೋಧಕರ ವಿರುದ್ಧ ಪ್ರಕರಣ ದಾಖಲಾಗಿತ್ತು. ನಂದಿನಿ ಲೇಔಟ್ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿದ್ದರು. ನಂತರ, ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿತ್ತು.

ಪ್ರಕರಣದ ಮೊದಲ ಆರೋಪಿ ಆಶಾಲತಾ ಅವರ ಸಹೋದರನ ಪುತ್ರ ಜೆ.ಮಂಜುನಾಥ್, ಆತನ ಸ್ನೇಹಿತರಾದ ವಿಜಯ್‌ಕಿರಣ್ ಮತ್ತು ಸುಜಯ್ ಅವರನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ. ಜೆ.ಮಂಜುನಾಥ್, ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕ. ವಿಜಯ್‌ಕಿರಣ್, ಸಾಫ್ಟ್‌ವೇರ್ ಎಂಜಿನಿಯರ್ ಎಂದು ತನಿಖಾಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ಪ್ರಥಮ ದರ್ಜೆ ಸಹಾಯಕಿ ಕಂ ಅಕೌಂಟೆಂಟ್ ಹುದ್ದೆಗೆ ನೇಮಕಗೊಂಡಿದ್ದ ಆಶಾಲತಾ 2017ರಿಂದ 2023ರವರೆಗೂ ಮಹಾಮಂಡಳದ ಪ್ರಭಾರ ಸಿಇಒ ಆಗಿದ್ದರು. ಈ ಅವಧಿಯಲ್ಲಿ ಸಂಸ್ಥೆಯು ಬಿಡಿಸಿಸಿ ಮತ್ತು ಅಪೆಕ್ಸ್ ಬ್ಯಾಂಕ್ ಶಾಖೆಗಳಲ್ಲಿ ನಿಗದಿತ ಠೇವಣಿಯಲ್ಲಿ ಇರಿಸಿದ್ದ ಮೊತ್ತವನ್ನು ತನ್ನ ಪತಿ ಮತ್ತು ಇತರರ ಖಾತೆಗಳಿಗೆ ವರ್ಗಾವಣೆ ಮಾಡಿ ವಂಚಿಸಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಜಂಟಿ ಖಾತೆಯಾಗಿದ್ದರೂ ಅಧ್ಯಕ್ಷರ ಸಹಿ ಇಲ್ಲದೆ ಆಶಾಲತಾ ಅವರೊಬ್ಬರೇ ನಕಲಿ ಸಹಿ ಮಾಡಿ, ಪತಿ ಹಾಗೂ ಇತರೆ ಆರೋಪಿಗಳ ಖಾತೆಗೆ ಮಹಾಮಂಡಳದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ್ದರು. ನಿಶ್ಚಿತ ಠೇವಣಿ ಇರಿಸಿದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಲೆಕ್ಕಪರಿಶೋಧಕರಿಗೂ ಸಲ್ಲಿಸಿದ್ದರು. ಲೆಕ್ಕಪರಿಶೋಧಕರು ಈ ನಕಲಿ ದಾಖಲೆಗಳನ್ನು ಪರಿಶೀಲಿಸದೆ ವರದಿ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಮಂಜುನಾಥ್, ವಿಜಯ್‌ಕಿರಣ್ ಮತ್ತು ಸುಜಯ್ ತಮ್ಮ ಖಾತೆಗೆ ಜಮೆಯಾಗಿದ್ದ ಹಣವನ್ನು ಡ್ರಾ ಮಾಡಿ ಆಶಾಲತಾಗೆ ಮರಳಿಸಿದ್ದರು. ಆರೋಪಿಗಳು ಪ್ರತಿ ಹಣಕಾಸು ವ್ಯವಹಾರಕ್ಕೆ ₹15 ಸಾವಿರ ಕಮಿಷನ್ ಪಡೆದುಕೊಳ್ಳುತ್ತಿದ್ದರು. ಅ.9ರಂದು ರಾಜ್ಯದ ಪ್ರಮುಖ ಸಹಕಾರ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಸಭೆ ನಡೆದಿತ್ತು. ಆಗ ವಂಚನೆ ಪ್ರಕರಣ ಬಯಲಾಗಿತ್ತು. ನಂತರ ತನಿಖೆಗೆ ನಡೆಸಲು ಪೊಲೀಸರಿಗೆ ದೂರು ನೀಡಲಾಗಿತ್ತು' ಎಂದು ಮೂಲಗಳು ಹೇಳಿವೆ.

ದಂಪತಿ ವಿದೇಶಕ್ಕೆ ಪರಾರಿ

ಪಿ.ಆಶಾಲತಾ ಹಾಗೂ ಅವರ ಪತಿ ಎನ್.ಸೋಮಶೇಖರ್ ವಿದೇಶಕ್ಕೆ ಪರಾರಿ ಆಗಿದ್ದಾರೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಆಶಾಲತಾ ದಂಪತಿ ಬ್ಯಾಂಕಾಕ್‌ಗೆ ಪರಾರಿ ಆಗಿರುವ ಮಾಹಿತಿ ಸಿಕ್ಕಿದೆ. ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ. ದಂಪತಿ ವಿಚಾರಣೆಗೆ ಬಂದಿಲ್ಲ. ಹೀಗಾಗಿ, ಅವರ ಪತ್ತೆಗೆ ಇಂಟರ್‌ಪೋಲ್ ಮೂಲಕ ಬ್ಲೂ ಕಾರ್ನರ್ ನೋಟಿಸ್ ಹೊರಡಿಸಲು ನಿರ್ಧರಿಸಲಾಗಿದೆ' ಎಂದು ತನಿಖಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸಿಸಿಬಿ ಪೊಲೀಸರ ಕಾರ್ಯಾಚರಣೆ: ಮೂವರ ಬಂಧನ

ಜನಪ್ರತಿನಿಧಿ ಹೆಸರು ಬಳಸಿಕೊಂಡು ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಪ್ರತಿನಿಧಿಗಳು ಹಾಗೂ ಉದ್ಯಮಿಗಳಿಗೆ ವಂಚಿಸಿದ್ದ ಆರೋಪದಡಿ ಮಹಿಳೆಯೂ ಸೇರಿದಂತೆ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ನಗರದ ಬಡಾವಣೆಯೊಂದರ ನಿವಾಸಿ ರೇಖಾ(38), ಆಕೆಯ ಪತಿ ಮಂಜುನಾಥ್(40) ಮತ್ತು ಅವರ ಸ್ನೇಹಿತ ಚೇತನ್(35) ಬಂಧಿತರು.

ಆರೋಪಿಗಳು ಇತ್ತೀಚೆಗೆ ಉದ್ಯಮಿ ನಿಸಾರ್ ಅಹಮದ್ ಎಂಬವರಿಗೆ ₹6 ಕೋಟಿ ವಂಚಿಸಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ರಾಜ್ಯದ ವಿವಿಧ ಠಾಣೆಗಳಲ್ಲಿ 80ಕ್ಕೂ ಹೆಚ್ಚು ವಂಚನೆ ಪ್ರಕರಣಗಳು ದಾಖಲಾಗಿದ್ದವು.

ಶಾಸಕರು, ಉದ್ಯಮಿಗಳು ಹಾಗೂ ಶಾದಿಡಾಟ್‌ಕಾಮ್ ಹೆಸರಿನಲ್ಲಿ ಇತರೆ ಆರೋಪಿಗಳ ಜತೆಗೆ ಸೇರಿಕೊಂಡು ರೇಖಾ ವಂಚನೆ ನಡೆಸುತ್ತಿದ್ದಳು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ. ಸಾಲ ಕೊಡುವ ನೆಪದಲ್ಲಿ ಆರೋಪಿಗಳು ವಂಚನೆ ನಡೆಸುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

'ಆರೋಪಿಗಳ ಪೈಕಿ ರೇಖಾ, ಖಾಸಗಿ ಬ್ಯಾಂಕ್ ಹಾಗೂ ಫೈನಾನ್ಸ್ ಸಂಪರ್ಕ ಹೊಂದಿದ್ದು, ಸಾಲ ಕೊಡಿಸುವ ಕೆಲಸ ಮಾಡುತ್ತಿದ್ದಳು. ಉದ್ಯಮಿ ನಿಸಾರ್ ಅಹಮದ್ ಸಾಲ ಪಡೆಯಲು ಈಕೆಯ ಸಂಪರ್ಕ ಮಾಡಿದ್ದರು. ಬಳಿಕ ನಿಸಾರ್‌ಗೆ 2009ರಲ್ಲಿ ನಡೆದಿದ್ದ ಕಾರ್ಲ್‌ಟನ್ ಟವರ್ ಬೆಂಕಿ ದುರಂತದಲ್ಲಿ ನಾನೇ ಪ್ರತ್ಯಕ್ಷ ಸಾಕ್ಷಿಯಾಗಿದ್ದೇನೆ. ಆದರೆ, ಸಾಕ್ಷಿ ಹೇಳದಂತೆ ಮಾಲೀಕ ಹಣ ಕೊಟ್ಟಿದ್ದಾರೆ. ಅವರು ಖಾತೆಯೊಂದಕ್ಕೆ ₹25 ಕೋಟಿ ವರ್ಗಾವಣೆ ಮಾಡಿದ್ದಾರೆ. ಆ ಹಣ ಬಿಡಿಸಿಕೊಳ್ಳಲು ತೆರಿಗೆ ಪಾವತಿಸಬೇಕಿದ್ದು, ಹಣ ಬೇಕಿದೆ. ₹1 ಕೋಟಿಗೆ ₹5 ಕೋಟಿ ವಾಪಸ್ ನೀಡಲಾಗುವುದು ಎಂದು ಆಮಿಷವೊಡ್ಡಿದ್ದಳು. ಆರೋಪಿ ಮಾತು ನಂಬಿದ್ದ ನಿಸಾರ್, ಆಕೆಯ ಖಾತೆಗೆ ₹5.75 ಕೋಟಿ ವರ್ಗಾವಣೆ ಮಾಡಿದ್ದರು. ಹಣ ವಾಪಸ್ ಕೇಳಿದಾಗ ಬೆದರಿಕೆ ಹಾಕಿದ್ದಳು' ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಫೈನಾನ್ಸ್ ಮೂಲಕ ಸಾಲ ಕೊಡಿಸುವ ಕೆಲಸ ಮಾಡುತ್ತಿದ್ದ ಆರೋಪಿ
- ಮಾಜಿ ಶಾಸಕರೊಬ್ಬರ ಹೆಸರು ಹೇಳಿ ವಂಚನೆ
- ಸರ್ಕಾರಿ ಕೆಲಸ ಮಾಡಿಸಿಕೊಡುವುದಾಗಿ ಹಣ ಪಡೆದು ಮೋಸ

'ಜನಪ್ರತಿನಿಧಿಗಳ ಹೆಸರಿನಲ್ಲೂ ರೇಖಾ ವಂಚನೆ ಮಾಡುತ್ತಿದ್ದಳು ಎಂಬುದು ಗೊತ್ತಾಗಿದೆ. ಉತ್ತರ ಕರ್ನಾಟಕ ಮೂಲದ ಮಾಜಿ ಶಾಸಕರೊಬ್ಬರ ಹೆಸರಿನಲ್ಲೂ ಆಕೆ ವಂಚಿಸಿದ್ದಾಳೆ. ಅದೇ ರೀತಿ ಹಾಲಿ ಶಾಸಕರು, ಸಚಿವರ ಜತೆ ಪರಿಚಯಸ್ಥಳಂತೆ ಫೋಟೊ ತೆಗೆಸಿಕೊಂಡು, ಬಳಿಕ ಕೆಲ ಉದ್ಯಮಿಗಳಿಗೆ ತೋರಿಸಿ, ಆ ಶಾಸಕರು, ಸಚಿವರು ಆಪ್ತರೆಂದು ನಂಬಿಸಿ ಸರ್ಕಾರಿ ಕೆಲಸ ಮಾಡಿಸಿಕೊಡುವುದಾಗಿ ಹಣ ಸುಲಿಗೆ ಮಾಡುತ್ತಿದ್ದಳು. ಸದ್ಯ ₹100 ಕೋಟಿ ವಂಚನೆ ನಡೆಸಿರುವುದು ಗೊತ್ತಾಗಿದೆ. ತನಿಖೆ ಮುಂದುವರೆದಿದೆ' ಎಂದು ಮೂಲಗಳು ತಿಳಿಸಿವೆ.

ಹೆಜ್ಜೇನು ದಾಳಿ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಹುಲಸೂರ: ತಾಲ್ಲೂಕಿನ ಗಡಿಗೌಡಗಾಂವ ಗ್ರಾಮದಲ್ಲಿ ಸೋಮವಾರ ತಮ್ಮ ಜಮೀನಿನಲ್ಲಿ ಗದ್ದೆ ಕೆಲಸ ಮಾಡಲು ಹೋಗಿದ್ದ ಯುವರಾಜ ಬಿರಾದಾರ (42) ಹೆಜ್ಜೇನು ದಾಳಿಯಲ್ಲಿ ಮೃತಪಟ್ಟಿದ್ದಾರೆ.

ಯುವರಾಜ ಬಿರಾದಾರ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಹೆಜ್ಜೇನು ನೊಣಗಳು ಏಕಾಏಕಿ ದಾಳಿ ಮಾಡಿದ್ದು, ಅವುಗಳನ್ನು ಓಡಿಸಲು ಬೆಂಕಿ ಹಚ್ಚಿದ್ದಾರೆ. ಹೆಜ್ಜೇನು ದಾಳಿಯಿಂದ ತಪ್ಪಿಸಿಕೊಳ್ಳಲು ಹೋಗಿ ಬೆಂಕಿಯಲ್ಲಿ ಬಿದ್ದು ಗಾಯಗೊಂಡಿದ್ದು, ಕೂಡಲೇ ಬಸವಕಲ್ಯಾಣ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯರು ತಪಾಸಣೆ ನಡೆಸಿ ಯುವರಾಜ ಮೃತಪಟ್ಟಿದ್ದಾರೆ ಎಂದು ಕುಟುಂಬದವರಿಗೆ ತಿಳಿಸಿದರು.

ಬೆಸ್ಕಾಂ: ಶಿವಶಂಕರ್ ಅಧಿಕಾರ ಸ್ವೀಕಾರ



ಬೆಸ್ಕಾಂ ಎಂ.ಡಿಯಾಗಿ ಶಿವಶಂಕರ ಅವರು ಸೋಮವಾರ ಅಧಿಕಾರ ಸ್ವೀಕರಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ(ಬೆಸ್ಕಾಂ) ವ್ಯವಸ್ಥಾಪಕ ನಿರ್ದೇಶಕರಾಗಿ ಐಎಎಸ್ ಅಧಿಕಾರಿ ಎನ್. ಶಿವಶಂಕರ ಅವರು ಸೋಮವಾರ ಅಧಿಕಾರ ಸ್ವೀಕರಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಯಾಗಿದ್ದ ಶಿವಶಂಕರ ಅವರನ್ನು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಿ ಸರ್ಕಾರ ಇತ್ತೀಚೆಗೆ ಆದೇಶ ಹೊರಡಿಸಿತ್ತು.

ಡ್ರಗ್ಸ್ ಮಾರಾಟ: ವಿದ್ಯಾರ್ಥಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಅಪರಾಧ ವಿಭಾಗ (ಸಿಸಿಬಿ) ಮತ್ತು ಬ್ಯಾಡರಹಳ್ಳಿ ಠಾಣೆ ಪೊಲೀಸರು ಜಂಟಿಯಾಗಿ ಮನೆ ಮೇಲೆ ದಾಳಿ ನಡೆಸಿ, ಮಾದಕ ವಸ್ತು ಮಾರಾಟದ ಆರೋಪದ ಮೇಲೆ ವಿದ್ಯಾರ್ಥಿಯೊಬ್ಬನನ್ನು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಅನಂತಪುರ ನಿವಾಸಿ ಅರುಣ್ ಎಂ. ಜಾಕೋಬ್ (27) ಎಂಬ ವಿದ್ಯಾರ್ಥಿಯನ್ನು ಬಂಧಿಸಿ, ₹10 ಲಕ್ಷ ಮೌಲ್ಯದ ಎಂಡಿಎಂಎ ಕ್ರಿಸ್ಟಲ್ಸ್, ಎಂಡಿಎಂಎ ಮಾತ್ರೆಗಳು, ಹೈಡ್ರೋ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಪ್ರಮುಖ ಆರೋಪಿ ಅರುಣ್ ಸ್ನೇಹಿತ, ಡ್ರಗ್ಸ್ ಪೆಡ್ಲರ್ ಪ್ರತ್ಯೂಷ್ ನಾಪತ್ತೆಯಾಗಿದ್ದು, ಆತನ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ .

'ಲಿಂಗಧೀರನಹಳ್ಳಿಯ ಡಿ ಗ್ರೂಪ್ ಲೇಔಟ್‌ನಲ್ಲಿ ವಾಸವಾಗಿರುವ ಅರುಣ್ ಹಾಗೂ ಪ್ರತ್ಯೂಷ್ ನಗರದ ಕಾಲೇಜೊಂದರಲ್ಲಿ ಬಿಬಿಎ ಓದುತ್ತಿದ್ದರು. ಕೋವಿಡ್ ವೇಳೆ ತವರಿಗೆ ಹಿಂತಿರುಗಿದ್ದ ಅರುಣ್, 2022ರಲ್ಲಿ ನಗರಕ್ಕೆ ವಾಪಸ್ ಬಂದಿದ್ದ. ಆಗಾಗ್ಗೆ ಸ್ನೇಹಿತ ಪ್ರತ್ಯೂಷ್‌ನನ್ನು ಭೇಟಿ ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ನಗರದ ಕಾಲೇಜೊಂದರಲ್ಲಿ 2023ರಲ್ಲಿ ಎಂಬಿಎ ಕೋರ್ಸ್‌ಗೆ ಸೇರಿದ ಅರುಣ್‌ಗೆ ಮಾದಕ ವಸ್ತುಗಳನ್ನು ಮಾರಾಟ ಮಾಡುವುದರಿಂದ ಹೆಚ್ಚು ಹಣ ಗಳಿಸಬಹುದು ಎಂದು ಪ್ರತ್ಯೂಷ್ ಆಮಿಷವೊಡ್ಡಿದ. ಕಾಲೇಜು ವಿದ್ಯಾರ್ಥಿಗಳು, ಐ.ಟಿ.ಉದ್ಯೋಗಿಗಳು, ಉದ್ಯಮಿಗಳಿಗೆ ಅರುಣ್ ಮೂಲಕ ಡ್ರಗ್ಸ್ ತಲುಪಿಸುತ್ತಿದ್ದ. ಗ್ರಾಹಕರು ಡಿಜಿಟಲ್ ಆ್ಯಪ್ ಮೂಲಕ ಹಣ ಪಾವತಿ ಮಾಡುತ್ತಿದ್ದರು' ಎಂದು ಹೇಳಿದ್ದಾರೆ.

'ಅರುಣ್ ಮನೆ ಮೇಲೆ ದಾಳಿ ನಡೆಸಿದ ವೇಳೆ 52 ಗ್ರಾಂ ಎಂಡಿಎಂಎ ಮಾತ್ರೆ , 98 ಗ್ರಾಂ ಹೈಡ್ರೋ ಗಾಂಜಾ, ತೂಕದ ಯಂತ್ರ ಮತ್ತು ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ. ಗ್ರಾಹಕರ ಹೆಸರು, ಮೊಬೈಲ್ ನಂಬರ್‌ಗಳನ್ನು ವ್ಯಾಟ್ಸ್‌ಆ್ಯಪ್‌ನಲ್ಲಿ ಪ್ರತ್ಯೂಷ್ ಕಳುಹಿಸುತ್ತಿದ್ದ. ಅವರಿಗೆ ಡ್ರಗ್ಸ್ ತಲುಪಿಸುವುದಷ್ಟೇ ನನ್ನ ಕೆಲಸ. ಬಂದ ಹಣದಲ್ಲಿ ಕಮಿಷನ್ ನೀಡುತ್ತಿದ್ದ ಎಂದು ಅರುಣ್ ವಿಚಾರಣೆ ವೇಳೆ ತಿಳಿಸಿದ್ದಾನೆ' ಎಂದು ಪೊಲೀಸರು ಹೇಳಿದರು.

ಆರೋಪಿ ವಿರುದ್ಧ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

₹7 ಕೋಟಿ ಠೇವಣಿ ವಂಚನೆ ಆರೋಪ

ಮೂವರ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯೊಬ್ಬರಿಗೆ ₹7 ಕೋಟಿ ವಂಚನೆ ಮಾಡಿದ ಆರೋಪದ ಮೇಲೆ ಸಹಾಯಕ ಲೆಕ್ಕಾಧಿಕಾರಿ ಶ್ರೀಕಾಂತ್, ಬಿಟಿಎನ್ ಎಕ್ಸ್‌ಚೆಂಜ್247.ಕಾಂ ಹಾಗೂ ಎಕ್ಸಿಲಿಕಾ ಸಾಫ್ಟ್‌ವೇರ್ ಸಲ್ಯೂಷನ್ಸ್ ಕಂಪನಿಗಳ ವಿರುದ್ಧ ಅಶೋಕನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶಾಂತಿನಗರದ ಅರ್ನೆಸ್ಟ್ ಆ್ಯಂಡ್ ಯಂಗ್ ಎಲ್‌ಎಲ್‌ಪಿ ಕಂಪನಿಯ ಪಾಲುದಾರರಾದ ಶೌರಿ ರಾಜನ್ ಅವರ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ನಮ್ಮ ಕಂಪನಿಯು ಕಾಡುಬೀಸನಹಳ್ಳಿಯಲ್ಲಿರುವ ಸ್ವಿಗ್ಗಿ ಲಿಮಿಟೆಡ್ ಕಂಪನಿಗೆ ಲೆಕ್ಕಪತ್ರ ನಿರ್ವಹಣೆ ಸೇವೆ ಒದಗಿಸುತ್ತಿದೆ. ನಮ್ಮ ತಂಡದ ಸಹಾಯಕ ಲೆಕ್ಕಾಧಿಕಾರಿ ಶ್ರೀಕಾಂತ್ ಅವರನ್ನು ಸ್ವಿಗ್ಗಿ ಕಂಪನಿಯ ಕಚೇರಿಯ ವಿದ್ಯುತ್ ಬಿಲ್ ಕಟ್ಟಲು ನೇಮಕ ಮಾಡಿಕೊಳ್ಳಲಾಗಿದೆ. ಇವರು ಪ್ರತಿ ತಿಂಗಳು ಸ್ವಿಗ್ಗಿ ಎಚ್‌ಡಿಎಫ್‌ಸಿ ಕ್ರೆಡಿಟ್ ಕಾರ್ಡ್‌ನಲ್ಲಿ ₹1 ಕೋಟಿಯಿಂದ ₹2 ಕೋಟಿ ಪಾವತಿ ಮಾಡಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಶ್ರೀಕಾಂತ್ ಅವರು ಜೂನ್‌ನಿಂದ ಡಿಸೆಂಬರ್ ತಿಂಗಳ ಅವಧಿಯಲ್ಲಿ ಒಟ್ಟು ₹6,86,51,160 ಅನ್ನು ಬಿಟಿಎನ್ ಎಕ್ಸ್‌ಚೆಂಜ್247.ಕಾಂ ಕಂಪನಿಗೆ ಹಾಕಿರುವುದು ಸ್ವಿಗ್ಗಿ ಕಂಪನಿಯ ಲೆಕ್ಕಪರಿಶೋಧನಾ ವೇಳೆ ಗೊತ್ತಾಗಿದೆ. ಈ ಬಗ್ಗೆ ಶ್ರೀಕಾಂತ್ ಅವರನ್ನು ವಿಚಾರಿಸಿದಾಗ, ಬಿಟಿಎನ್ ಕಂಪನಿಯು ಈ ಹಣವನ್ನು ಬೆಟ್ಟಿಂಗ್ ಆ್ಯಪ್‌ನಲ್ಲಿ ಠೇವಣಿ ಮಾಡಿದೆ ಎಂದು ಹೇಳಿದ್ದಾರೆ. ನಮ್ಮ ಕಂಪನಿಗೆ ನಂಬಿಕೆ ದ್ರೋಹ ಮಾಡಿ, ₹7 ಕೋಟಿ ವಂಚನೆ ಮಾಡಿರುವ ಶ್ರೀಕಾಂತ್ ಹಾಗೂ ಇತರರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ಮನೆಗೆ ನುಗ್ಗಿ ಚಿನ್ನಾಭರಣ, ನಗದು ದೋಚಿದ ಪ್ರಕರಣ

ರಾಜಸ್ಥಾನದ ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆ ನುಗ್ಗಿ ಪಿಸ್ತೂಲ್ ತೋರಿಸಿ ತಾಯಿ, ಮಗನನ್ನು ಬೆದರಿಸಿ ಮಾಂಗಲ್ಯ ಸರ, ನಗದು ದೋಚಿ ಪರಾರಿಯಾಗಿದ್ದ ಘಟನೆಗೆ ಸಂಬಂಧಿಸಿದಂತೆ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಸೇರಿದಂತೆ ಮೂವರನ್ನು ಸಿಟಿ ಮಾರುಕಟ್ಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಬಿಯಾವರ್ ಜಿಲ್ಲೆಯ ಅಜಯ್ ರಾವ್ (24), ಸುನಿಲ್ ಸಿಂಗ್ (18) ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಬಂಧಿಸಿ, ₹ 26 ಗ್ರಾಂ ತೂಕದ ಚಿನ್ನದ ಗುಂಡು, ಮಾಂಗಲ್ಯ ಸರ, ಕಿವಿಯೋಲೆ, ₹11,950 ನಗದು, ಕೃತ್ಯಕ್ಕೆ ಬಳಸಿದ್ದ ಪಿಸ್ತೂಲ್ ಹಾಗೂ ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ.



ಅಜಯ್ ರಾವ್



ಸುನಿಲ್ ಸಿಂಗ್

ಕೃತ್ಯದಲ್ಲಿ ಭಾಗಿಯಾಗಿರುವ ಇನ್ನೂ ಮೂವರು ಆರೋಪಿಗಳು ನಾಪತ್ತೆಯಾಗಿದ್ದು, ಪತ್ತೆಗೆ ಶೋಧ ಕಾರ್ಯ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಜನವರಿ 24ರಂದು ಚಿಕ್ಕಪೇಟೆಯ ಆರ್.ಟಿ.ಸ್ಟ್ರೀಟ್‌ನಲ್ಲಿರುವ ನಾಗರಾಜ್ ಶಿಂಧೆ ಅವರ ಮನೆಗೆ ನುಗ್ಗಿದ್ದ ಆರೋಪಿಗಳು, ಚಾಕು, ಪಿಸ್ತೂಲ್ ತೋರಿಸಿ ಬೆದರಿಸಿದ್ದರು. ನಾಗರಾಜ್ ಅವರ ತಾಯಿಯ ಕೈ ಕಾಲುಗಳನ್ನು ಕಟ್ಟಿ, ಚಿನ್ನಾಭರಣ ಹಾಗೂ ₹30 ಸಾವಿರ ನಗದು ದೋಚಿಕೊಂಡು ಪರಾರಿಯಾಗಿದ್ದರು.

'ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡ ಪೊಲೀಸರು, ಸಿ.ಸಿ.ಟಿ.ವಿ. ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಗಳಿಂದ ಲಭಿಸಿದ ಸುಳಿವು ಹಾಗೂ ಬಾತ್ಮೀದಾರರ ಮಾಹಿತಿ ಆಧರಿಸಿ ಬೆಳಗಾವಿಯಲ್ಲಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದರು. ಆರೋಪಿಗಳಿಂದ ಚಿನ್ನಾಭರಣ ಹಾಗೂ ನಗದು ವಶಪಡಿಸಿಕೊಂಡಿದ್ದಾರೆ. ಪಿಸ್ತೂಲ್‌ನಲ್ಲಿ ಸಜೀವ ಗುಂಡುಗಳು ಪತ್ತೆಯಾಗಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.


'ರಾಜಸ್ಥಾನದ ಚಿನ್ನ, ಬೆಳ್ಳಿ ಅಂಗಡಿಗಳಲ್ಲಿ ಕೆಲಸ ಮಾಡುತ್ತಿದ್ದ ಆರೋಪಿಗಳು, ಒಮ್ಮೆ ನಗರಕ್ಕೆ ಬಂದು ಹೋಗಿದ್ದರು. ದರೋಡೆಗೆ ನಾಗರಾಜ್ ಅವರ ಮನೆಯನ್ನೇ ಏಕೆ ಆಯ್ಕೆ ಮಾಡಿಕೊಂಡರು ಎಂಬುದು ಗೊತ್ತಾಗಬೇಕಿದೆ. ದರೋಡೆ ಕೃತ್ಯದಲ್ಲಿ ಆರು ಜನರು ಭಾಗಿಯಾಗಿದರು. ಮೂವರನ್ನು ಬೆಳಗಾವಿ ರೈಲು ನಿಲ್ದಾಣದಲ್ಲಿ ಬಂಧಿಸಲಾಗಿದೆ. ಉಳಿದವರು ನಾಪತ್ತೆಯಾಗಿದ್ದಾರೆ' ಎಂದು ಪೊಲೀಸರು ತಿಳಿಸಿದರು.





ನಗರದಲ್ಲಿ 800ಕ್ಕೂ ಅಧಿಕ ಪ್ರತಿಮೆ–ಪುತ್ಥಳಿಗಳ ನಿರ್ಮಾಣ • ಉದ್ಯಾನ–ವೃತ್ತಗಳ ಮೆರುಗು ಹೆಚ್ಚಳ

ಸಿಲಿಕಾನ್ ಸಿಟಿಗೆ ಪ್ರತಿಮೆಗಳ ಬೆಳಕು



ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಆಕರ್ಷಣೆಯ ಕೇಂದ್ರಬಿಂದುವಾಗಿದೆ
ಪ್ರಜಾವಾಣಿ ಚಿತ್ರಗಳು: ಎಂ.ಎಸ್‌.ಮಂಜುನಾಥ್

• ವರುಣ ಹೆಗಡೆ

ಬೆಂಗಳೂರು: ದೇಶ–ನಾಡು ಕಂಡ ಮಹಾಪುರುಷರು ಕಾಲಾನಂತರವೂ ನಗರಕ್ಕೆ ಜೀವಕಳೆ ತುಂಬುತ್ತಿದ್ದಾರೆ. ಅವರನ್ನೇ ಹೋಲುವ ಬೃಹದಾಕಾರದ ಪ್ರತಿಮೆಗಳು ರಾಜಧಾನಿಯ ಬಗೆಗೆ ಬೆರಗು ಹುಟ್ಟಿಸಿದರೆ, ಉದ್ಯಾನ–ವೃತ್ತಗಳಲ್ಲಿರುವ ಪುತ್ಥಳಿಗಳು ಮೆರುಗು ನೀಡುತ್ತಿವೆ.

ಅಧಿಕಾರಕ್ಕೇರಿದ ಎಲ್ಲ ಪಕ್ಷಗಳೂ ಪ್ರತಿಮೆಗಳ ನಿರ್ಮಾಣಕ್ಕೆ ಆದ್ಯತೆ ನೀಡುತ್ತಾ ಬಂದಿವೆ. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ಪ್ರತಿಮೆಗಳ ಪಟ್ಟಿ ಬೆಳೆಯುತ್ತಲೇ ಇದೆ. ಆಡಳಿತ ಕೇಂದ್ರವಾದ ವಿಧಾನಸೌಧದ ಆವರಣದಲ್ಲಿಯೇ ಹಲವು ಪ್ರತಿಮೆಗಳಿಗೆ ನೆಲೆ ಒದಗಿಸಲಾಗಿದೆ. ಇದರಿಂದಾಗಿ ವಿಧಾನಸೌಧಕ್ಕೆ ಭೇಟಿ ನೀಡಿದವರಿಗೆ ಗಾಂಧೀಜಿ, ನೆಹರೂ, ಅಂಬೇಡ್ಕರ್, ಬಸವಣ್ಣ, ಕೆಂಗಲ್ ಹನುಮಂತಯ್ಯ, ಕೆಂಪೇಗೌಡ ಸೇರಿ ಹಲವರ ಪ್ರತಿಮೆಗಳ ದರ್ಶನವಾಗಲಿದೆ. ಈಗ ಹೊಸದಾಗಿ 25 ಅಡಿ ಎತ್ತರದ ಕನ್ನಡಾಂಬೆ ಭುವನೇಶ್ವರಿಯ ಕಂಚಿನ ಪ್ರತಿಮೆಯೂ ಈ ಪಟ್ಟಿಗೆ ಸೇರಿದೆ.

ಇಲ್ಲಿನ ಪ್ರತಿಮೆಗಳ ಬಗ್ಗೆಯೇ 'ಇಂಡಿಯನ್ ಫೌಂಡೇಷನ್ ಫಾರ್ ದಿ ಆರ್ಟ್ಸ್' ಸಂಸ್ಥೆಯು ಸಂಶೋಧನೆ ನಡೆಸಿದೆ. 14 ತಿಂಗಳು ನಡೆಸಿದ ಈ ಸಂಶೋಧನೆಯಲ್ಲಿ 800 ಪ್ರತಿಮೆ–ಪುತ್ಥಳಿಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಅರ್ಧದಷ್ಟು ಪ್ರತಿಮೆ–ಪುತ್ಥಳಿಗಳು ಕಳೆದ 10 ವರ್ಷಗಳಲ್ಲಿಯೇ ತಲೆಯೆತ್ತಿವೆ. ಕೆಂಪೇಗೌಡ ಹಾಗೂ ರಾಜ್‌ಕುಮಾರ್ ಅವರ ಪ್ರತಿಮೆ–ಪುತ್ಥಳಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಬೃಹತ್ ಪ್ರತಿಮೆಗಳನ್ನು ಸರ್ಕಾರ ನಿರ್ಮಿಸಿದರೆ, ಸಣ್ಣ ಪ್ರತಿಮೆಗಳು ಹಾಗೂ ಪುತ್ಥಳಿಗಳು ವಿವಿಧ ಸಂಘ–ಸಂಸ್ಥೆಗಳ ನೆರವಿನಿಂದ ತಲೆಯೆತ್ತಿವೆ. ಸಾರ್ವಜನಿಕ ಕಟ್ಟಡಗಳ ಮುಂಭಾಗ, ಉದ್ಯಾನಗಳು ಹಾಗೂ ವೃತ್ತಗಳಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಮೆಗಳು ಕಾಣಸಿಗುತ್ತವೆ.

ಬೃಹತ್ ಪ್ರತಿಮೆ: ಈ ಹಿಂದೆ ಭುವನೇಶ್ವರಿ ಪ್ರತಿಮೆಯ ಸ್ಥಳದ ಬಗ್ಗೆ ಗೊಂದಲಗಳು ಉಂಟಾಗಿದ್ದವು. ಕನ್ನಡ ಭವನದ ಆವರಣ ಅಥವಾ ಕಲಾಗ್ರಾಮದಲ್ಲಿ ನಿರ್ಮಿಸುವ ಬಗ್ಗೆಯೂ ಚರ್ಚೆಗಳು ನಡೆದಿದ್ದವು. ಶಕ್ತಿಸೌಧದ ಪಶ್ಚಿಮ ದ್ವಾರದಲ್ಲಿ ಈಗ ನಿರ್ಮಿಸಲಾಗಿರುವ 25 ಅಡಿ ಎತ್ತರದ ಭುವನೇಶ್ವರಿ ಕಂಚಿನ ಪ್ರತಿಮೆಗೆ ನಿತ್ಯವೂ ಅರ್ಚನೆ ನಡೆಯಲಿದೆ. ನೆಲ ಮಟ್ಟದಿಂದ ಪ್ರತಿಮೆಯು 43.6 ಅಡಿ ಎತ್ತರವಿದೆ. ಪ್ರತಿಮೆಯ ಸುತ್ತಲೂ ಉದ್ಯಾನ, ಆವರಣದ ಸುತ್ತಲೂ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಲಾಗಿದೆ. ನಾಡದೇವಿಯ ಪ್ರತಿಮೆ ವೀಕ್ಷಣೆಗೆ ಸಾರ್ವಜನಿಕರಿಗೆ ಮುಕ್ತ ಅವಕಾಶವನ್ನೂ ಕಲ್ಪಿಸಲಾಗಿದೆ.

ಹನ್ನೆರಡನೇ ಶತಮಾನದ ಸಾಮಾಜಿಕ ಹರಿಕಾರ ಬಸವಣ್ಣ ಮತ್ತು ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಭವ್ಯವಾದ ಅಶ್ವಾರೂಢ ಭಂಗಿಯ ಪ್ರತಿಮೆಗಳು ವಿಧಾನಸೌಧದ ಮುಂಭಾಗ 2023ರಲ್ಲಿ ಅನಾವರಣಗೊಂಡಿದ್ದವು. ಅಲ್ಲಿ ನಿರ್ಮಾಣವಾದ ಪ್ರತಿಮೆಗಳ ಪಟ್ಟಿಗೆ ಈಗ ಭುವನೇಶ್ವರಿ ಪ್ರತಿಮೆ ಸೇರ್ಪಡೆಯಾಗಿದೆ.

'ದಕ್ಷಿಣ ಭಾರತದ ನಗರಗಳಲ್ಲಿ ಪ್ರತಿಮೆಗಳು ಅಧಿಕ ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಪ್ರತಿಮೆಗಳು ವಿವಿಧ ಸಮುದಾಯಗಳ ಧ್ವನಿಯೂ ಆಗಿವೆ. ಕನ್ನಡದ ಬಗ್ಗೆ ಜಾಗೃತಿ ಮೂಡಿಸಲು ರಾಜ್‌ಕುಮಾರ್ ಅವರ ಪುತ್ಥಳಿಗಳನ್ನು ವಿವಿಧೆಡೆ ನಿರ್ಮಿಸಲಾಗುತ್ತಿದೆ. ಜಿಂಕೆ ಪಾರ್ಕ್ ಸೇರಿ ವಿವಿಧೆಡೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪುತ್ಥಳಿಗಳಿವೆ. ರಾಜಕೀಯ ಉದ್ದೇಶದಿಂದಲೂ ಪ್ರತಿಮೆಗಳನ್ನು ನಿರ್ಮಿಸಲಾಗುತ್ತಿದೆ' ಎನ್ನುತ್ತಾರೆ ಪ್ರತಿಮೆಗಳ ಕುರಿತ ಸಂಶೋಧಕರೂ ಆಗಿರುವ ದೃಶ್ಯ ಕಲಾವಿದ ರವಿಕುಮಾರ್ ಕಾಶಿ.

108 ಅಡಿ ಎತ್ತರದ ಪ್ರತಿಮೆ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 108 ಅಡಿ ಎತ್ತರದ ಕೆಂಪೇಗೌಡರ ಕಂಚಿನ ಪ್ರತಿಮೆ ನಿರ್ಮಿಸಲಾಗಿದೆ. ಇದನ್ನು 2022ರಲ್ಲಿ ಅನಾವರಣ ಮಾಡಲಾಗಿದ್ದು, 'ಪ್ರಗತಿ ಪ್ರತಿಮೆ' ಎಂದು ನಾಮಕರಣ ಮಾಡಲಾಗಿದೆ. ಇದು ಬೆಂಗಳೂರಿನಲ್ಲಿರುವ ಅತಿ ಎತ್ತರದ ಪ್ರತಿಮೆಯಾಗಿದೆ. ₹64 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಈ ಪ್ರತಿಮೆಯು, 218 ಟನ್ ತೂಕವಿದೆ. ಪ್ರತಿಮೆಯ ಖಡ್ಗವೇ 4 ಟನ್ ತೂಕವಿದೆ. ರಾಮ್ ವಿ. ಸುತಾರ ಅವರು ಈ ಪ್ರತಿಮೆಯನ್ನು ನಿರ್ಮಿಸಿದ್ದಾರೆ. 90 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು 18 ಅಡಿ ಎತ್ತರದ ಕಾಂಕ್ರೀಟ್ ಪೀಠದ ಮೇಲೆ ಸ್ಥಾಪಿಸಲಾಗಿದೆ. ಪ್ರತಿಮೆಗೆ 98 ಟನ್ ಕಂಚು ಮತ್ತು ಪೀಠಕ್ಕೆ 120 ಟನ್ ಉಕ್ಕು ಬಳಸಲಾಗಿದೆ. ಪ್ರತಿಮೆಯ ಸುತ್ತ 23 ಎಕರೆ ಪ್ರದೇಶದಲ್ಲಿ ಕೆಂಪೇಗೌಡ ಥೀಮ್ ಪಾರ್ಕ್‌ಗೆ ಅವಕಾಶ ಕಲ್ಪಿಸಲಾಗಿದೆ.



ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿರ್ಮಿಸಲಾಗಿರುವ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆ

ರಾಜ್‌ಕುಮಾರ್, ಅಂಬೇಡ್ಕರ್ ಅಧಿಕ

ನಗರದಲ್ಲಿ ರಾಜ್‌ಕುಮಾರ್ ಅವರ ಪ್ರತಿಮೆ, ಪುತ್ಥಳಿಗಳು 100ಕ್ಕೂ ಅಧಿಕ ಇವೆ. ಅಂಬೇಡ್ಕರ್ ಅವರದ್ದು 60ಕ್ಕಿಂತ ಅಧಿಕವಿವೆ. ಗಾಂಧೀಜಿ, ಕೆಂಪೇಗೌಡ, ವಿವೇಕಾನಂದ, ಬಸವಣ್ಣ, ಸಂಗೊಳ್ಳಿ ರಾಯಣ್ಣ, ವಿಷ್ಣುವರ್ಧನ್, ಶಂಕರ್‌ನಾಗ್, ಪುನೀತ್ ರಾಜ್‌ಕುಮಾರ್ ಅವರ ಪ್ರತಿಮೆ ಮತ್ತು ಪುತ್ಥಳಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ತಮಿಳಿನ ಪ್ರಸಿದ್ಧ ಕವಿ ಮತ್ತು ತತ್ವಜ್ಞಾನಿ ತಿರುವಳ್ಳುವರ್ ಅವರ ಪ್ರತಿಮೆಯೂ ಇಲ್ಲಿನ ಹಲಸೂರಿನಲ್ಲಿದೆ. ಕನ್ನಡ ಪರ ಸಂಘಟನೆಗಳ ವಿರೋಧದ ಕಾರಣದಿಂದಾಗಿ ಇದರ ಅನಾವರಣ ವಿಳಂಬವಾಗಿತ್ತು.



ವಿಧಾನಸೌಧದ ಆವರಣದಲ್ಲಿರುವ ಬಿ.ಆರ್‌.ಅಂಬೇಡ್ಕರ್ ಪ್ರತಿಮೆ



ವಿಧಾನಸೌಧದ ಆವರಣದಲ್ಲಿರುವ ಬಸವೇಶ್ವರ, ಕೆಂಪೇಗೌಡ ಪ್ರತಿಮೆ

ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ

ಇತ್ತೀಚಿನ ವರ್ಷಗಳಲ್ಲಿ ವಿವಿಧ ಸಮುದಾಯಗಳ ಓಲೈಕೆಗೆ, ಸಂಘ–ಸಂಸ್ಥೆಗಳ ಒತ್ತಾಯಕ್ಕೆ ಮಣಿದು ಪ್ರತಿಮೆಗಳನ್ನು ನಿರ್ಮಿಸಲಾಗುತ್ತಿದೆ. ಇನ್ನೊಂದೆಡೆ ಮಹಾನ್ ವ್ಯಕ್ತಿಗಳಿಗೆ ಗೌರವ ಸಮರ್ಪಣೆಯ ಉದ್ದೇಶವೂ ಇದೆ. ಪ್ರತಿಮೆಗಳ ಸುತ್ತಮುತ್ತ ಥೀಮ್ ಪಾರ್ಕ್ ನಿರ್ಮಾಣದಂತಹ ಕ್ರಮದಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತಿದೆ. ಜಾಗತಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರತಿಮೆ ಇರುವ ಸ್ಥಳವು ಗುರುತಿಸಲ್ಪಡುತ್ತಿದೆ. ಮಹಾನ್ ವ್ಯಕ್ತಿಗಳ ಸಾಧನೆಗಳ ಬಗ್ಗೆ ಮಾಹಿತಿ ಪಸರಿಸುವಿಕೆಯೂ ಸಾಧ್ಯವಾಗುತ್ತಿದೆ. ಇನ್ನೊಂದೆಡೆ ಶಿಲ್ಪಿಗಳು ಸೇರಿ ಹಲವರಿಗೆ ಉದ್ಯೋಗಾವಕಾಶಕ್ಕೂ ನೆರವಾಗಲಿದೆ. ಇಲ್ಲಿನ ಕಲೆ ಮತ್ತು ಸಂಸ್ಕೃತಿಯನ್ನೂ ಪ್ರತಿಮೆ–ಪುತ್ಥಳಿಗಳು ಬಿಂಬಿಸಲಿವೆ.



ದೇವರಾಜ ಅರಸು ವೃತ್ತದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ

ಮಹಿಳೆಯರ ಪ್ರತಿಮೆ ವಿರಳ

'ಇಂಡಿಯನ್ ಫೌಂಡೇಷನ್ ಫಾರ್ ದಿ ಆರ್ಟ್ಸ್' ಸಂಸ್ಥೆಯ ಅಧ್ಯಯನದ ಪ್ರಕಾರ ನಗರದಲ್ಲಿರುವ 800 ಪ್ರತಿಮೆ, ಪುತ್ಥಳಿಗಳಲ್ಲಿ 13 ಪ್ರತಿಮೆಗಳು ಮಾತ್ರ ಮಹಿಳೆಯರದ್ದಾಗಿವೆ. ಕಾವೇರಿ, ಕಿತ್ತೂರು ರಾಣಿ ಚನ್ನಮ್ಮ, ರಾಣಿ ಅಬ್ಬಕ್ಕ, ಅಕ್ಕಮಹಾದೇವಿ, ಪಾರ್ವತಮ್ಮ ರಾಜ್‌ಕುಮಾರ್, ಕೆಂಪೇಗೌಡ ಅವರ ಸೊಸೆ ಲಕ್ಷ್ಮೀದೇವಿ, ಇಂದಿರಾಗಾಂಧಿ ಅವರ ಪ್ರತಿಮೆಯನ್ನು ವಿವಿಧೆಡೆ ಗುರುತಿಸಲಾಗಿದೆ.



ಬಿಬಿಎಂಪಿ ಆವರಣದಲ್ಲಿರುವ ಲಕ್ಷ್ಮೀದೇವಿ ಪ್ರತಿಮೆ



ರವೀಂದ್ರ ಕಲಾಕ್ಷೇತ್ರ ಆವರಣದಲ್ಲಿರುವ ಕಿತ್ತೂರು ರಾಣಿ ಚನ್ನಮ್ಮ ಪ್ರತಿಮೆ

ಚಿತ್ರಾವಳಿ



ಎಚ್‌ಎಸ್‌ಆರ್ ಬಡಾವಣೆಯಲ್ಲಿ ಎಚ್‌ಎಸ್‌ಆರ್ ಸಿಟಿಜನ್ ಫೋರಂನ ಯೂತ್ ಕನೆಕ್ಟ್ ವಿಂಗ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಗಾಳಿಪಟ ತಯಾರಿಸಿ ಹಾರಿಸಿ ಖುಷಿಪಟ್ಟರು. ಸುಸ್ಥಿರ ಜೀವನಕ್ಕಾಗಿ ಪ್ರತಿಜ್ಞೆ ಮಾಡಿದರು



ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗುರು ಗಾನಲಹರಿ ಸಂಗೀತ ಅಕಾಡೆಮಿ ಆಯೋಜಿಸಿದ್ದ ಪಂಡಿತ್ ಪುಟ್ಟರಾಜ ಗವಾಯಿಗಳ ಪುಣ್ಯಸ್ಮರಣೆ, 15ನೇ ಸಂಗೀತೋತ್ಸವದಲ್ಲಿ ಹಿಂದೂಸ್ತಾನಿ ಗಾಯಕ ಪಂಡಿತ್ ವಿರೂಪಾಕ್ಷಯ್ಯ ವಂದಲಿ ಮತ್ತು ತಬಲಾ ವಾದಕ ಪಂಡಿತ್ ರಾಮಚಂದ್ರ ಕಲ್ಲಹಿಪ್ಪರಗಿ ಅವರಿಗೆ 'ಪುಟ್ಟಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು. ತಬಲಾ ವಾದಕ ಪಂಡಿತ್ ಸತೀಶ್ ಹಂಪಿಹೊಳಿ, ಮಕ್ಕಳ ಹೃದ್ರೋಗ ತಜ್ಞೆ ವಿಜಯಲಕ್ಷ್ಮಿ ಬಾಳೇಕುಂದ್ರಿ, ಪಂಡಿತ್ ಶಿವಾನಂದ ಹೇರೂರ್ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಮನು ಬಳಿಗಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ



ಬ್ಯಾಟರಾಯನಪುರ ಕ್ಷೇತ್ರದ ನವರತ್ನ ಅಗ್ರಹಾರ ಗ್ರಾಮದಲ್ಲಿ ಆಯೋಜಿಸಿದ್ದ 'ನವರತ್ನ ಪ್ರೀಮಿಯರ್ ಲೀಗ್' (ಎನ್‌.ಪಿ.ಎಲ್) 3ನೇ ಆವೃತ್ತಿಯ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಗಳಿಸಿದ 'ನವರತ್ನ ಕಿಂಗ್ ಫೈಟರ್ಸ್' ತಂಡದ ಆಟಗಾರರಿಗೆ ಕಾಂಗ್ರೆಸ್ ಮುಖಂಡ ಎನ್‌.ಕೆ.ಮಹೇಶ್‌ಕುಮಾರ್ ಬಹುಮಾನ ವಿತರಿಸಿದರು



ಬ್ಯಾಟರಾಯನಪುರ ಕ್ಷೇತ್ರದ ಮಾನ್ಯತಾ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಮರುಡಾಂಬರೀಕರಣ ಕಾಮಗಾರಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಚಾಲನೆ ನೀಡಿದರು

ನಬಾರ್ಡ್ ನೀತಿ, ಮೈಕ್ರೊ ಫೈನಾನ್ಸ್ ಹಾವಳಿ ಖಂಡಿಸಿ ಪ್ರತಿಭಟನೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರಿಗೆ ನೀಡುವ ಸಾಲದ ಪ್ರಮಾಣ ಕಡಿತ ಮಾಡಿರುವ ನಬಾರ್ಡ್ ನೀತಿ ಖಂಡಿಸಿ ಹಾಗೂ ಮೈಕ್ರೊ ಫೈನಾನ್ಸ್ ಹಾವಳಿ ತಡೆಗಟ್ಟುವಂತೆ ಆಗ್ರಹಿಸಿ ಜನವರಿ 29ರಂದು ನಗರದ ನೃಪತುಂಗ ರಸ್ತೆಯಲ್ಲಿರುವ ರಿಸರ್ವ್ ಬ್ಯಾಂಕ್ ಪ್ರಾದೇಶಿಕ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, 'ಕೃಷಿ ಕ್ಷೇತ್ರವನ್ನು ಸದೃಢಗೊಳಿಸುವ ಉದ್ದೇಶದಿಂದ ಆರ್ಥಿಕ ನೆರವು ನೀಡಲು ನಬಾರ್ಡ್ ಸ್ಥಾಪನೆ ಮಾಡಲಾಗಿದೆ. ಆದರೆ, ಕೃಷಿಗೆ ನೀಡುತ್ತಿದ್ದ ಅಲ್ಪಾವಧಿ ಸಾಲದ ಮೊತ್ತವನ್ನು ಕಡಿತಗೊಳಿಸಲಾಗಿದೆ' ಎಂದು ದೂರಿದರು.

'ರಾಜ್ಯದಲ್ಲಿ ಮೈಕ್ರೊ ಫೈನಾನ್ಸ್ ಸಂಸ್ಥೆಗಳು ನಡೆಸುತ್ತಿರುವ ದೌರ್ಜನ್ಯಕ್ಕೆ ಕಡಿವಾಣ ಹಾಕುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದರು.

ಸಂಘದ ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ, ಪ್ರಧಾನ ಕಾರ್ಯದರ್ಶಿ ಎನ್‌.ಡಿ. ವಸಂತಕುಮಾರ್, ಕಾರ್ಯದರ್ಶಿಗಳಾದ ಗೋಪಾಲ್ ಪಾಪೇಗೌಡ, ಅರುಣಕುಮಾರ್ ಸುದ್ದಿಗೋಷ್ಠಿಯಲ್ಲಿದ್ದರು.

ನೇರಂಕಿ ಪಾರ್ಶ್ವನಾಥಗೆ ರತ್ನಾಕರವರ್ಣಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಂಪ, ರನ್ನ, ಕುಮಾರವ್ಯಾಸರು ಬರೆದದ್ದು ಪುಸ್ತಕ ಭಾಷೆ. ಆದರೆ, ರತ್ನಾಕರವರ್ಣಿ ತುಳು ಮತ್ತು ಕನ್ನಡ ಮಿಶ್ರಿತ ಹಾಗೂ ಮಾತನಾಡುವ ಕನ್ನಡದಲ್ಲಿ ಹತ್ತು ಸಾವಿರ ಪದ್ಯಗಳನ್ನು ರಚಿಸಿದ' ಎಂದು ಸಾಹಿತಿ ಹಂಪ ನಾಗರಾಜಯ್ಯ ಹೇಳಿದರು.

ದಕ್ಷಿಣ ಕನ್ನಡ ಜೈನ ಮೈತ್ರಿಕೂಟ ನಗರದಲ್ಲಿ ಆಯೋಜಿಸಿದ್ದ 38ನೇ ವಾರ್ಷಿಕೋತ್ಸವ ಮತ್ತು ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

'ಮಹಾನ್ ಕವಿಯ ಓಲೆಗರಿ ನನಗೆ ದೊರೆತು ಸುಮಾರು 380 ಹಾಡುಗಳನ್ನು ಸಂಪಾದಿಸಿದೆ. ಕನ್ನಡ ಸಾಹಿತ್ಯದಲ್ಲಿ ಅನೇಕ ಕವಿಗಳು ಸಮುದ್ರವನ್ನು ನೋಡದೆ ಅದನ್ನು ವರ್ಣಿಸಿದ್ದಾರೆ. ಆದರೆ, ಸಮುದ್ರವನ್ನು ಕಂಡು, ಮುಟ್ಟಿ, ಅದರ ಅಂತರಾಳ ಅರಿತು ವರ್ಣಿಸಿದ ಒಬ್ಬನೇ ಕವಿ ಎಂದರೆ ಅದು ರತ್ನಾಕರ ವರ್ಣಿ' ಎಂದು ಹೇಳಿದರು.

ಜೈನ ಬಸದಿಗಳ ದಾಖಲೀಕರಣ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಧಾರ್ಮಿಕ ಪ್ರಚಾರ ಮಾಡುತ್ತಿರುವ ನೇರಂಕಿ ಪಾರ್ಶ್ವನಾಥ ಅವರ ಸಮಾಜಮುಖಿ ಸಾಧನೆ ಮೆಚ್ಚಿ ದಕ್ಷಿಣ ಕನ್ನಡ ಜೈನ ಮೈತ್ರಿಕೂಟ ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ ನೀಡಿ ಗೌರವಿಸಿತು.

ದಕ್ಷಿಣ ಕನ್ನಡ ಜೈನ ಮೈತ್ರಿಕೂಟದ ಸ್ಥಾಪಕ ಅಧ್ಯಕ್ಷ ಡಿ.ಸುರೇಂದ್ರ ಕುಮಾರ್, ಸ್ಥಾಪಕ ಕಾರ್ಯಾಧ್ಯಕ್ಷ ಕೆ.ಬಿ.ಯುವರಾಜ್ ಬಲ್ಲಾಳ್, ಕಾರ್ಯಕಾರಿ ಸಮಿತಿ ಅಧ್ಯಕ್ಷೆ ಅನಿತಾ ಸುರೇಂದ್ರ ಕುಮಾರ್ ಹಾಜರಿದ್ದರು.



ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೇರಂಕಿ ಪಾರ್ಶ್ವನಾಥ ಅವರಿಗೆ ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

'ಸಾರ್ವಜನಿಕ ಹಿತದೃಷ್ಟಿಗೆ ನಮ್ಮ ಆಸ್ತಿಯೇ ಬೇಕಾ?'

ಪ್ರಜಾವಾಣಿ ವಾರ್ತೆ

ಸುತ್ತೂರು (ಮೈಸೂರು ಜಿಲ್ಲೆ): 'ಬೆಂಗಳೂರು ಅರಮನೆ ಆಸ್ತಿ ಕುರಿತು ರಾಜ್ಯ ಸರ್ಕಾರ ಜನರ ದಿಕ್ಕು ತಪ್ಪಿಸುತ್ತಿದ್ದು, ಕಾನೂನಾತ್ಮಕ ಹೋರಾಟ ಮುಂದುವರಿಸುತ್ತೇವೆ' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಇಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿ, 'ರಾಜ್ಯ ಸರ್ಕಾರದಿಂದ ನಮಗೆ ಪರಿಹಾರ ಕೊಡುವ ಅಗತ್ಯವಿಲ್ಲ. ಟಿಡಿಆರ್ (ಅಭಿವೃದ್ಧಿ ಹಕ್ಕು ವರ್ಗಾವಣೆ) ಪ್ರಮಾಣಪತ್ರ ಕೊಟ್ಟರೆ ಸಾಕು. ಆದರೆ, ಕೊಡುತ್ತಿಲ್ಲ' ಎಂದು ದೂರಿದರು.



ಯದುವೀರ್ ಒಡೆಯರ್

'ಸರ್ಕಾರ ಅವರ ಕೈಯಲ್ಲಿರುವುದರಿಂದ ಹೀಗೆ ವರ್ತಿಸುತ್ತಿದ್ದಾರೆ. ಸಾರ್ವಜನಿಕ ಹಿತದೃಷ್ಟಿಗೆ ನಮ್ಮ ಆಸ್ತಿನೇ ಬೇಕಾ?' ಎಂದು ಕೇಳಿದರು.

'ಸಾರ್ವಜನಿಕರ ಜಾಗ ಬಳಸಿದರೆ ಸರ್ಕಾರದಿಂದ ಪರಿಹಾರ ಕೊಡುತ್ತಾರೆ. ಹಿಂದೆ, ಸದಾಶಿವನಗರ ಕೂಡ ಬೆಂಗಳೂರು ಅರಮನೆಗೆ ಸೇರಿತ್ತು. ನಾವು ಆಗಲೇ ಸಾಮಾಜಿಕ ನ್ಯಾಯದಲ್ಲಿ ಬಹಳಷ್ಟು ಜಮೀನು ಕೊಟ್ಟಿದ್ದೇವೆ. ಸಾಮಾನ್ಯರಿಗಿರುವ ಕಾನೂನೇ ನಮಗೂ ಇದೆ. ಟಿಡಿಆರ್ ಬದಲು ನಗದು ಪರಿಹಾರ ಹೇಳಬಹುದಿತ್ತು. ಆದರೆ, ನಮ್ಮ ಸರ್ಕಾರದ ಖಜಾನೆಗೆ ಧಕ್ಕೆಯಾಗುತ್ತದೆ ಎಂಬ ಕಾರಣದಿಂದ ಟಿಡಿಆರ್‌ಗೆ ಒಪ್ಪಿಕೊಂಡಿದ್ದೇವೆ. ಈ ವಿಷಯದಲ್ಲಿ ಹೆಚ್ಚು ಚರ್ಚಿಸುವ ಅವಶ್ಯಕತೆ ಇಲ್ಲ. ಸುಪ್ರೀಂ ಕೋರ್ಟ್ ಆದೇಶವೂ ಇದೆ' ಎಂದರು.

ಮೈಕ್ರೊ ಫೈನಾನ್ಸ್‌ಗಳ ಕಿರುಕುಳದ ಪ್ರತಿಕ್ರಿಯಿಸಿ, 'ಇದು ಬಹಳ ಗಂಭೀರ ಪ್ರಕರಣ. ಹಣಕಾಸು ಸಂಸ್ಥೆಗಳು ಸ್ನೇಹಮಯಿಯಾಗಿ ಕೆಲಸ ಮಾಡಬೇಕು. ಕಿರುಕುಳ ಕೊಡಬಾರದು. ಈಗ ಆಗುತ್ತಿರುವುದು ನಿಜವಾಗಿಯೂ ಖಂಡನೀಯ' ಎಂದು ಹೇಳಿದರು.



'ವಿಜ್ಞಾನದೆಡೆಗೆ ನಮ್ಮ ನಡಿಗೆ' ಉದ್ಘಾಟನೆ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಲಾಯಿತು. (ಎಡದಿಂದ) ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕದ ಗೌರವ ಕಾರ್ಯದರ್ಶಿ ವಿ ವೆಂಕಟಶಿವಾರೆಡ್ಡಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಅಧ್ಯಕ್ಷ ಡಾ.ಸಿ.ಆರ್‌.ಚಂದ್ರಶೇಖರ್, ಸಾಹಿತಿ ಬರಗೂರು ರಾಮಚಂದ್ರಪ್ಪ, ರಾಜ್ಯಸಭೆ ಮಾಜಿ ಸದಸ್ಯ ಎಲ್‌.ಹನುಮಂತಯ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ತ್ಯಾಜ್ಯ ವಿದ್ಯುತ್ ಸ್ಥಾವರದಲ್ಲಿ ಅವಘಡ: ಮೃತರ ಸಂಖ್ಯೆ 5ಕ್ಕೆ ಏರಿಕೆ

ಬಿಸಿ ಬೂದಿ: ಕಡೆಯ ಗಾಯಾಳು ಸಾವು

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಇಲ್ಲಿನ ಕೈಗಾರಿಕಾ ಪ್ರದೇಶದ ಬಿಲ್ಲಕೆಂಪನಹಳ್ಳಿಯ ತ್ಯಾಜ್ಯ ವಿದ್ಯುತ್ ಸ್ಥಾವರದಲ್ಲಿ ಬಿಸಿ ಬೂದಿ ಸಿಡಿದು ಸಂಭವಿಸಿದ್ದ ಅವಘಡದ ಗಾಯಾಳುಗಳ ಪೈಕಿ ಜೀವಂತವಾಗಿ ಉಳಿದಿದ್ದ ಏಕೈಕ ಕಾರ್ಮಿಕ ಸಹ ಇತ್ತೀಚೆಗೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಇದರೊಂದಿಗೆ ಘಟನೆಯಲ್ಲಿ ಸತ್ತವರ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ.

ಗಾಯಗೊಂಡು ಸಾವು – ಬದುಕಿನ ನಡುವೆ ಆಸ್ಪತ್ರೆಯಲ್ಲಿ ಹೋರಾಡುತ್ತಿದ್ದ ಬಿಹಾರ ದರ್ಭಂಗ ಜಿಲ್ಲೆಯ ಸಂಟೂನ ಸದಾಯ್ (30) ಅಸುನೀಗಿದವರು. ಸದಾಯ್ ಅವರು ಬಿಡದಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ದೂರುದಾರರೂ ಆಗಿದ್ದರು.

ಇದೇ ಜ.4ರಂದು ಬಿಸಿ ಬೂದಿ ಸಿಡಿದು ಒಟ್ಟು ಐವರು ಕಾರ್ಮಿಕರು ಗಾಯಗೊಂಡಿದ್ದರು. ಆ ಪೈಕಿ ನಾಲ್ವರು ತೀವ್ರ ಸುಟ್ಟ ಗಾಯಗಳಿಂದ ಒಬ್ಬೊಬ್ಬರಾಗಿ ಆಸ್ಪತ್ರೆಯಲ್ಲಿ ಒಂದೇ ವಾರದ ಅಂತರದಲ್ಲಿ ಕೊನೆಯುಸಿರೆಳೆದಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಸದಾಯ್ ಸೇರಿದಂತೆ ಅಮಲೇಶ್, ಲಖನ್, ತರುಣ್ ಕುಮಾರ್ ಹಾಗೂ ಉಮೇಶ್‌ಕುಮಾರ್ ಸಿಂಗ್ ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.



ಸಂಟೂನ ಸದಾಯ್

ಕೈ ಮತ್ತು ಕಾಲುಗಳು ಹೆಚ್ಚು ಸುಟ್ಟಿದ್ದ ಸದಾಯ್ ಅವರಿಗೆ ಚಿಕಿತ್ಸೆ ಮುಂದುವರಿದಿತ್ತು. ಇತ್ತೀಚೆಗೆ ಜೆ.ಪಿ. ನಗರದಲ್ಲಿರುವ ಕ್ಷೇಮ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಅವರನ್ನು ಸ್ಥಳಾಂತರಿಸಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ನೀಡಲಾಗುತ್ತಿತ್ತು. ಜ.16ರಂದು ಅವರ ಆರೋಗ್ಯದಲ್ಲಿ ಏಕಾಏಕಿ ಏರುಪೇರಾಗಿ ಮೃತಪಟ್ಟರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮರಣೋತ್ತರ ಪರೀಕ್ಷೆ ನಡೆಸಿ, ಸದಾಯ್ ಕುಟುಂಬದವರಿಗೆ ಶವ ಹಸ್ತಾಂತರಿಸಲಾಯಿತು. ಏರ್ ಆಂಬುಲೆನ್ಸ್ ಮೂಲಕ ಕುಟುಂಬದವರು ಶವವನ್ನು ಸ್ವಗ್ರಾಮಕ್ಕೆ ತೆಗೆದುಕೊಂಡು ಹೋದರು ಎಂದು ಮೂಲಗಳು ಹೇಳಿವೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಡದಿ ಪೊಲೀಸರು ಸ್ಥಾವರದ ವ್ಯವಸ್ಥಾಪಕ ಐಎಸ್‌ಜಿಇಸಿ ಕಂಪನಿಯ ಸುಧೀರ್ ಪಾಠಕ್ ಎಂಬುವವರನ್ನು ಜ. 7ರಂದೇ ಬಂಧಿಸಿ ಜೈಲಿಗೆ ಕಳಿಸಿದ್ದಾರೆ.

ತನಿಖೆಗೆ ಹೈಕೋರ್ಟ್ ತಡೆ

ಪ್ರಕರಣಕ್ಕೆ ತಡೆ ನೀಡುವಂತೆ ಕೋರಿ ಕೆಪಿಸಿ ಗ್ಯಾಸ್ ಪವರ್ ಕಾರ್ಪೊರೇಷನ್ ಲಿಮಿಟೆಡ್‌ನ ಮುಖ್ಯ ಎಂಜಿನಿಯರ್ ಸೂರ್ಯಕಾಂತ್ ಕಬಾಡೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿರುವ ಹೈಕೋರ್ಟ್, ಮಧ್ಯಂತರ ತಡೆ ನೀಡಿ ಆದೇಶಿಸಿದೆ.

ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್‌.ಆರ್‌.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿದ್ದು, ಪ್ರಕರಣದ ದೂರುದಾರರೂ ಆದ ಪ್ರತಿವಾದಿ ಸಂಟೂನ ಸದಾಯ್ ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದ ಎಫ್‌ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗಳಿಗೆ ಮಧ್ಯಂತರ ತಡೆ ನೀಡಿ ವಿಚಾರಣೆ ಮುಂದೂಡಲಾಗಿದೆ. ಪ್ರಕರಣದ ತನಿಖೆಗೆ ಹೈಕೋರ್ಟ್ ಇದೇ 15ರಂದು ಮಧ್ಯಂತರ ತಡೆ ಆದೇಶ ನೀಡಿದೆಯಾದರೂ, ಈ ಆದೇಶ ಹೊರಬಿದ್ದ ಮರುದಿನವೇ ಸದಾಯ್ ಮೃತಪಟ್ಟಿರುವುದು ಗಮನಾರ್ಹ.

ವಿಜ್ಞಾನ ಚಲನಶೀಲತೆಯ ಸಂಕೇತ: ಬರಗೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೌಢ್ಯ ಜಡತ್ವದ ಸಂಕೇತವಾದರೆ, ವಿಜ್ಞಾನ ಚಲನಶೀಲತೆಯ ಸಂಕೇತವಾಗಿದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.


ಎಚ್. ನರಸಿಂಹಯ್ಯ ಅವರ ಜನ್ಮ ಶತಮಾನೋತ್ಸದ ಅಂಗವಾಗಿ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಸೋಮವಾರ ಆಯೋಜಿಸಿದ್ದ ಬೆಂಗಳೂರಿನಿಂದ ಎಚ್‌.ಎನ್‌. ಅವರ ಹುಟ್ಟೂರಾದ ಗೌರಿಬಿದನೂರು ತಾಲ್ಲೂಕಿನ ಹೊಸೂರಿನವರೆಗೆ 'ವಿಜ್ಞಾನದೆಡೆಗೆ ನಮ್ಮ ನಡಿಗೆ' ಪಾದಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಜನರಲ್ಲಿ ವೈಜ್ಞಾನಿಕ ಚಿಂತನೆ ಬರಬೇಕಾದರೆ ನಮ್ಮಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆಯ ಜೊತೆಗೆ ಲಿಂಗ ತಾರತಮ್ಯವನ್ನು ಹೋಗಲಾಡಿಸಬೇಕು. ಇದು ಆಳದಲ್ಲಿ ನಡೆಯುವ ಬೌದ್ಧಿಕ ಕ್ರಾಂತಿ. ದೈಹಿಕವಾಗಿ, ಮಾನಸಿಕವಾಗಿ ಹಿಂಸೆಯನ್ನು ಪ್ರಚೋದಿಸುವುದು, ಅಮಾನವೀಯ ಆಚರಣೆಗೆ ಅವಕಾಶ ನೀಡುವುದೇ ಮೌಢ್ಯ. ವೈಜ್ಞಾನಿಕ ಮನೋಧರ್ಮ ದೈಹಿಕವಾಗಿ, ಮಾನಸಿಕವಾಗಿ ನಮ್ಮನ್ನು ಬೆಳೆಸುತ್ತದೆ' ಎಂದು ಹೇಳಿದರು.

ಪಾದಯಾತ್ರೆ ಸಂಚರಿಸುವ ಮಾರ್ಗ: ಬಸವನಗುಡಿಯ ನ್ಯಾಷನಲ್ ಕಾಲೇಜಿನಿಂದ ಆರಂಭವಾಗಿರುವ ಪಾದಯಾತ್ರೆಯು, ಬ್ಯಾಟರಾಯನಪುರ (ಜ. 28), ಯಲಹಂಕ, ಸಿಂಗನಾಯಕನಹಳ್ಳಿ (ಜ. 29), ದೊಡ್ಡಬಳ್ಳಾಪುರ, ಮಾಕಳಿ, ಗುಂಜೂರು (ಜ. 30) ಕಲ್ಲನಾಯ್ಕನಹಳ್ಳಿ, ಅಲ್ಕಾಪುರ, ಗೌರಿಬಿದನೂರು ಮಾರ್ಗವಾಗಿ ಸಾಗಿ ಜ. 31ರಂದು ಹೊಸೂರಿನಲ್ಲಿ ಸಮಾರೋಪಗೊಳ್ಳಲಿದೆ.

ವಿದ್ವಾಂಸ ಜಿ. ರಾಮಕೃಷ್ಣ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸಂಚಾಲಕ ಮಾವಳ್ಳಿ ಶಂಕರ್, ಲೇಖಕಿ ಎನ್‌. ಗಾಯತ್ರಿ ಉಪಸ್ಥಿತರಿದ್ದರು.

ಕ್ಷೇಮ ಕುಶಲ



ಕೊಲೆಸ್ಟ್ರಾಲ್: ಸತ್ಯ ಮಿಥ್ಯೆಗಳ ಸಂಘರ್ಷ

ಡಾ. ಕಿರಣ್ ವಿ. ಎಸ್.

ಕೊಲೆಸ್ಟ್ರಾಲ್ ಎನ್ನುವ ಪದ ಕೇಳಿದ ಕೂಡಲೇ ಕೆಲವರಿಗೆ ಆತಂಕ; ಹಲವರಿಗೆ ಗಾಬರಿ; ಒಟ್ಟಿನಲ್ಲಿ ಎಲ್ಲರಿಗೂ ಕುತೂಹಲ.

ಜೀವರಸಾಯನವಿಜ್ಞಾನವನ್ನು ಅಧ್ಯಯನ ಮಾಡುವವರು 'ಶರೀರದ ಹಲವಾರು ಪ್ರಮುಖ ರಾಸಾಯನಿಕಗಳ, ಹಾರ್ಮೋನ್‌ಗಳ ಉತ್ಪತ್ತಿಗೆ ಕೊಲೆಸ್ಟ್ರಾಲ್ ಮುಖ್ಯ ಕಚ್ಚಾವಸ್ತು' ಎನ್ನುತ್ತಾರೆ. ಆದರೆ ವೈದ್ಯರು ರಕ್ತದಲ್ಲಿನ ಕೊಲೆಸ್ಟ್ರಾಲ್ ಮಟ್ಟವನ್ನು ಪತ್ತೆ ಮಾಡಿ, ಔಷಧವನ್ನು ನೀಡಿ, ಅದನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವಂತೆ ಸಲಹೆ ಮಾಡುತ್ತಾರೆ; ಕೊಲೆಸ್ಟ್ರಾಲ್ ಮಟ್ಟ ಹೆಚ್ಚಾದರೆ ಆಗುವ ಹಲವಾರು ಸಮಸ್ಯೆಗಳ ಬಗ್ಗೆ ವಿವರಿಸುತ್ತಾರೆ. 'ಕೊಲೆಸ್ಟ್ರಾಲ್ ಎನ್ನುವುದು ಶತ್ರುವೆಂದು ಭಾವಿಸಲಾದ ಗೆಳೆಯನೋ ಅಥವಾ ಮಿತ್ರನ ವೇಷದ ವೈರಿಯೋ' ಎನ್ನುವ ಪ್ರಶ್ನೆ ಬಹಳ ಜನರ ಮನಸ್ಸಿನಲ್ಲಿದೆ. ವೈದ್ಯಕೀಯ ಅಧ್ಯಯನದ ಆಸಕ್ತಿಕರ ವಿಷಯಗಳಲ್ಲಿ ಕೊಲೆಸ್ಟ್ರಾಲ್ ಒಂದು. ಕೊಲೆಸ್ಟ್ರಾಲ್ ಅಧ್ಯಯನಕ್ಕೆ ಇದುವರೆಗೆ ಲಭಿಸಿರುವ ನೊಬೆಲ್ ಬಹುಮಾನಗಳು ಹತ್ತಕ್ಕಿಂತ ಹೆಚ್ಚು.

ಕೊಲೆಸ್ಟ್ರಾಲ್ ಎಂದರೇನು? ನಮ್ಮ ಆಯುರ್ವೇದದಲ್ಲಿ ವಾತ, ಪಿತ್ತ, ಕಫ ಎಂಬ ಮೂರು ದೋಷಗಳಿವೆ. ಇದೇ ರೀತಿಯಲ್ಲಿ ಗ್ರೀಕ್ ವೈದ್ಯರೂ ಶರೀರದಲ್ಲಿ ನಾಲ್ಕು ರೀತಿಯ 'ಹ್ಯೂಮರ್' ಇರುತ್ತವೆ ಎಂದು ನಂಬಿದ್ದರು. ಆ ನಾಲ್ಕರಲ್ಲಿ 'ಖೋಲ್' ಎಂದರೆ ಪಿತ್ತ; 'ಸ್ಟೀರೊಸ್' ಎಂದರೆ ಗಟ್ಟಿಯಾದ ಎಂದರ್ಥ. ಪಿತ್ತಕೋಶದ ಕಲ್ಲುಗಳಲ್ಲಿ ದೊರೆಯುವ ಜಿಡ್ಡಿನಂತಹ ಅಂಶವನ್ನು ಗ್ರೀಕರು 'ಗಟ್ಟಿಯಾದ ಪಿತ್ತ' ಅಥವಾ 'ಕೊಲೆಸ್ಟ್ರಾಲ್' ಎಂದು ಕರೆದಿದ್ದರು.

ಕೊಲೆಸ್ಟ್ರಾಲ್ ಎಂಬುದು ಶರೀರದ ಅನೇಕ ಆವಶ್ಯಕತೆಗಳಿಗೆ ಅಗತ್ಯವಾಗಿ ಬೇಕಾದ ಒಂದು ಕೊಬ್ಬಿನ ಅಣು. ಇದು ಸಾಮಾನ್ಯವಾಗಿ ನಮ್ಮ ಯಕೃತ್‌ನಲ್ಲಿ ಉತ್ಪತ್ತಿ ಆಗುತ್ತಲೇ ಇರುತ್ತದೆ. ದಪ್ಪಗಾತ್ರದ ಅಣು ಆಗಿರುವುದರಿಂದ ಕೊಲೆಸ್ಟ್ರಾಲ್ ತಾನೇ ತಾನಾಗಿ ರಕ್ತದಲ್ಲಿ ಮುಕ್ತವಾಗಿ ಓಡಾಡಲು ಕಷ್ಟ. ಹಾಗಾಗಿ ಇದನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಒಯ್ಯಲು 'ಲೈಪೋ-ಪ್ರೋಟೀನ್' ಎಂಬ ವಾಹಕಗಳು ಇರುತ್ತವೆ. ಸಾಂದ್ರತೆಯ ಆಧಾರದ ಮೇಲೆ 'ಕಡಿಮೆ ಸಾಂದ್ರತೆಯ ಲೈಪೋ-ಪ್ರೋಟೀನ್ (LDL) ಮತ್ತು ಹೆಚ್ಚು ಸಾಂದ್ರತೆಯ ಲೈಪೋ-ಪ್ರೋಟೀನ್ (HDL)' ಎಂಬ ಎರಡು ಪ್ರಮುಖ ಕೊಲೆಸ್ಟ್ರಾಲ್ ವಾಹಕಗಳಿವೆ. ರಕ್ತದಲ್ಲಿ ಲೈಪೋ-ಪ್ರೋಟೀನ್‌ಗಳ ಪ್ರಮಾಣವನ್ನು ಅಳೆದರೆ ಅದು ಕೊಲೆಸ್ಟ್ರಾಲ್‌ನ ಪರೋಕ್ಷ ಅಳತೆ ಆಗುತ್ತದೆ. ರಕ್ತದಲ್ಲಿ ಕೊಲೆಸ್ಟ್ರಾಲ್ ಪ್ರಮಾಣವನ್ನು ಅಳೆಯುವಾಗ ಸಂಬಂಧಿಸಿದ ಲೈಪೋ-ಪ್ರೋಟೀನ್'ಗಳ ಮಟ್ಟವನ್ನೂ ಅಳೆಯಲಾಗುತ್ತದೆ. 'LDL' ಮಾದರಿಯ ಕೊಲೆಸ್ಟ್ರಾಲ್ ವಾಹಕ ಅಧಿಕವಾಗಿ ಇರುವಂತಹವರಲ್ಲಿ ಹೃದಯಾಘಾತಗಳಂತಹ ಸಮಸ್ಯೆ ಹೆಚ್ಚಾಗಿ ಕಾಣುತ್ತದೆ. ಅಂತೆಯೇ, ' HDL' ವಾಹಕ ಅಧಿಕವಾಗಿ ಇರುವವರಲ್ಲಿ ಹೃದಯಾಘಾತ ಕಡಿಮೆ ಎಂದು ಅಧ್ಯಯನಗಳು ತಿಳಿಸಿವೆ.

ಶರೀರದ ಪ್ರತಿಯೊಂದು ಪ್ರಮುಖ ಕಾರ್ಯಗಳಿಗೂ ರಕ್ತದ ಅಗತ್ಯವಿದೆ. ದೇಹದ ಅಂಗಗಳ ಕೆಲಸಕ್ಕೆ ಬೇಕಾದ ಆಕ್ಸಿಜನ್, ಪೋಷಕಾಂಶಗಳನ್ನು ಒದಗಿಸಿ, ಅವುಗಳ ತ್ಯಾಜ್ಯವನ್ನು ನಿವಾರಿಸುವುದು ರಕ್ತವೇ. ಯಾವುದೇ ಅಂಗಕ್ಕೆ ರಕ್ತ ಹರಿಯುವುದು ಟೊಳ್ಳಾದ ರಕ್ತನಾಳಗಳ ಮೂಲಕ. ಇಡೀ ಶರೀರಕ್ಕೆ ರಕ್ತವನ್ನು ಸರಬರಾಜು ಮಾಡುವ ಹೃದಯವೂ ತನ್ನ ವೈಯಕ್ತಿಕ ಅಗತ್ಯಗಳಿಗೆ ಬೇಕಾದ ರಕ್ತವನ್ನು ಪಡೆದುಕೊಳ್ಳುವುದು ಇಂತಹ ರಕ್ತನಾಳಗಳ ಮೂಲಕವೇ. ಹೃದಯಕ್ಕೆ ರಕ್ತವನ್ನು ಪೂರೈಸುವ ಮೂರು ಪ್ರಮುಖ ನಾಳಗಳನ್ನು 'ಕರೊನರಿ ರಕ್ತನಾಳಗಳು' ಎನ್ನುತ್ತಾರೆ. ಇವುಗಳ ಒಳಗೋಡೆಗಳಲ್ಲಿ ಕೆಲವೊಮ್ಮೆ ರಾಳದಂತಹ ವಸ್ತುಗಳು ಜಮೆಯಾಗಿ, ರಕ್ತನಾಳಗಳ ಆಂತರಿಕ ವ್ಯಾಸವನ್ನು ಕಿರಿದಾಗಿಸುತ್ತವೆ. ಇದರಿಂದ ರಕ್ತನಾಳಗಳ ಒಳಗೆ ರಕ್ತದ ಹರಿಯುವಿಕೆಗೆ ಅಡ್ಡಿಯಾಗುತ್ತದೆ. ಇಂತಹ ಯಾವುದೇ ರಕ್ತನಾಳದಲ್ಲಿನ ಸಂಚಾರ ಸಂಪೂರ್ಣ ನಿಂತುಹೋದರೆ, ಅದು ಸರಬರಾಜು ಮಾಡುತ್ತಿದ್ದ ಭಾಗದಲ್ಲಿ ರಕ್ತ ಪೂರೈಕೆ ಆಗದೆ ಹೃದಯಾಘಾತವಾಗುತ್ತದೆ. ರಕ್ತನಾಳದ ಆಂತರಿಕ ವ್ಯಾಸ ಎಷ್ಟು ಕಡಿಮೆಯಾಗದೆ ಎಂದು ಅರಿಯಲು 'ಆ್ಯಂಜಿಯಗ್ರಾಮ್' ಎನ್ನುವ ಪರೀಕ್ಷೆ ಬೇಕಾಗುತ್ತದೆ.

ರಕ್ತನಾಳಗಳ ಆಂತರಿಕ ವ್ಯಾಸವನ್ನು ಕಿರಿದಾಗಿಸುವ ರಾಳದಲ್ಲಿ ಪ್ರಮುಖವಾಗಿ ಕಾಣುವುದು ಕೊಲೆಸ್ಟ್ರಾಲ್ ಅಂಶ. ನಾವು ಸೇವಿಸುವ ಆಹಾರದಲ್ಲಿ ಕೊಲೆಸ್ಟ್ರಾಲ್ ಪ್ರಮಾಣ ಹೆಚ್ಚಾಗಿದ್ದರೆ, ರಕ್ತದಲ್ಲಿನ ಕೊಲೆಸ್ಟ್ರಾಲ್ ಮಟ್ಟ ಕೂಡ ಏರುತ್ತದೆ ಎಂದು ಸಂಶೋಧಕರು ಪತ್ತೆ ಮಾಡಿದ್ದಾರೆ. ಅಂದರೆ, ನಮ್ಮ ದೇಹದ ಅಗತ್ಯಗಳಿಗೆ ಬೇಕಾಗುವಷ್ಟು ಪ್ರಮಾಣದ ಕೊಲೆಸ್ಟ್ರಾಲ್ ಅನ್ನು ನಮ್ಮ ಶರೀರವೇ ಉತ್ಪತ್ತಿ ಮಾಡುತ್ತದೆ. ಇದಕ್ಕೆ ಬೇಕಾಗುವ ಕಚ್ಚಾವಸ್ತುಗಳು ನಮ್ಮ ಸಹಜ ಆಹಾರದ ಮೂಲಕ ಒದಗುತ್ತವೆ. ಇದರ ಮೇಲೆ ನಾವು ಆಹಾರದಲ್ಲಿ ಒಂದು ಮಟ್ಟದವರೆಗೆ ಕೊಲೆಸ್ಟ್ರಾಲ್ ಅನ್ನು ಸೇವಿಸಿದರೂ ಶರೀರ ಅದನ್ನು ನಿಭಾಯಿಸುತ್ತದೆ. ಆದರೆ, ಒಂದು ನಿಯಮಿತ ಮಟ್ಟಕ್ಕಿಂತ ಹೆಚ್ಚಿನ ಕೊಲೆಸ್ಟ್ರಾಲ್ ಸೇವನೆಯಾದರೆ ಅದು ಅಪಾಯಕಾರಿ ಆಗಬಲ್ಲದು. ಈ ಸುರಕ್ಷಿತ ಸೇವನೆಯ ಮಟ್ಟ ಪ್ರತಿಯೊಬ್ಬರಲ್ಲೂ ವಿಭಿನ್ನ. ಕೆಲವರ ಶರೀರ ಬಹಳ ಹೆಚ್ಚಿನ ಮಟ್ಟದ ಕೊಲೆಸ್ಟ್ರಾಲ್ ಸೇವನೆ ನಿಭಾಯಿಸಬಲ್ಲದಾದರೆ, ಇನ್ನು ಕೆಲವರಲ್ಲಿ ಅಲ್ಪಸ್ವಲ್ಪ ಕೊಲೆಸ್ಟ್ರಾಲ್ ಸೇವನೆ ಕೂಡ ಸರಿಯಾಗಿ ನಿರ್ವಹಣೆಯಾಗದೆ ಸಮಸ್ಯೆ ಆಗಬಹುದು. ಇಲ್ಲಿ ಎಲ್ಲರಿಗೂ ಅನ್ವಯಿಸುವ ಏಕಸೂತ್ರ ಇಲ್ಲ. ಅವರವರ ಜೆನೆಟಿಕ್ ರಚನೆಯ ಮೇಲೆ, ಕೊಲೆಸ್ಟ್ರಾಲ್ ನಿರ್ವಹಣೆಯಲ್ಲಿ ಅಗತ್ಯವಿರುವ ಕಿಣ್ವಗಳ ಉತ್ಪಾದನೆಯ ಮೇಲೆ ಇವೆಲ್ಲವೂ ನಿರ್ಧಾರವಾಗುತ್ತವೆ. ಯಾರೋ ಒಬ್ಬರು ವರ್ಷಗಳ ಕಾಲ ಯದ್ವಾತದ್ವಾ ಜಿಡ್ಡಿನ ಅಂಶವನ್ನು ತಿಂದೂ ಆರೋಗ್ಯವಾಗಿದ್ದಾರೆ ಎನ್ನುವ ಉದಾಹರಣೆ ಹಿಡಿದು ಎಲ್ಲರೂ ಅದನ್ನೇ ಮಾಡಲು ಹೋಗಬಾರದು. ಯಕೃತ್‌ನಲ್ಲಿ ಕೊಲೆಸ್ಟ್ರಾಲ್ ಉತ್ಪತ್ತಿಯನ್ನು ನಿಯಂತ್ರಿಸಬಲ್ಲ ಔಷಧಗಳನ್ನು ಹೃದಯಾಘಾತ ಸಂಬಂಧಿ ಕಾಯಿಲೆ ಇರುವವರಲ್ಲಿ ಬಳಸಲಾಗುತ್ತದೆ. ಇದರ ಬಗ್ಗೆ ವಿವಾದಗಳು ಇವೆಯಾದರೂ, ಹೃದಯಾಘಾತದ ಅಪಾಯ ಹೆಚ್ಚಾಗಿ ಇರುವವರಲ್ಲಿ ಇವುಗಳ ಬಳಕೆಯನ್ನು ಅನುಮೋದಿಸಲಾಗಿದೆ. ಕೊಲೆಸ್ಟ್ರಾಲ್ ಎಂಬ ಎರಡಲುಗಿನ ಕತ್ತಿ ನಮ್ಮ ಯುಗದ ಅತ್ಯಂತ ಕುತೂಹಲಕಾರಿ ಜಿಜ್ಞಾಸೆಗಳಲ್ಲಿ ಒಂದು. ❖





ಮಹಿಳೆಯರಲ್ಲಿ ಮೂಲವ್ಯಾಧಿ

ಡಾ. ಗೀತಾ ಭಟ್ ಪಿ.

ನಿರ್ಮಲಾಳಿಗೆ ಮೊದಲ ಬಾಣಂತನದಲ್ಲಿ ಕಾಡಿದ ಮೂಲವ್ಯಾಧಿಯ ಉಪಟಳ ಬಹುತೇಕ ಮರೆತೇ ಹೋಗಿತ್ತು. ಮೊದಲ ಮಗುವಿಗೆ ಏಳು ವರ್ಷದ ಅನಂತರ ಆಕೆ ಎರಡನೆ ಸಲ ಗರ್ಭವತಿಯಾದಳು. ಆ ಬಾರಿ ನಾಲ್ಕನೆಯ ತಿಂಗಳಿಗೆ ಮೊಳಕೆಗಳು ಹುಟ್ಟಿಕೊಂಡವು. ಪ್ರಸವಪೂರ್ವ ಮತ್ತು ಪ್ರಸವೋತ್ತರ ಅವಧಿಯಲ್ಲಿ ಆಕೆಯನ್ನು ಎಡೆಬಿಡದೆ ಕಾಡಿತ್ತು, ಮೂಲವ್ಯಾಧಿ. ಹಾ, ಮರೆತೆ; ಆಕೆ ಉದ್ಯೋಗಸ್ಥೆ. ಸದಾ ಕಾಲ ತೊಡೆಯ ಮೇಲಿನ ಕಂಪ್ಯೂಟರ್ ದುಡಿಮೆ. ಮಲಮೂತ್ರದ ವೇಗದ ಕರೆಗೆ ಓಗೊಡಲೂ ಸಮಯವಿಲ್ಲದ ಪಾಳಿಯ ದುಡಿಮೆ.

ಬಹುತೇಕ ದುಡಿಯುವ ಮಹಿಳೆಯರು ಮಾಸಿಕಸ್ರಾವದ ಎಂಟು ಹತ್ತು ದಿನದಿಂದ ವಿಚಿತ್ರ ದೈಹಿಕ ಏರಿಳಿತಕ್ಕೆ ಒಳಗಾಗುವ ಹೊಸ ಸಮಸ್ಯೆ ಸುಳಿಗೆ ಸಿಲುಕುವರು. ಇದಕ್ಕೆ 'ಪ್ರಿ ಮೆನುಸ್ಟ್ರಿಯಲ್ ಸಿಂಡ್ರೋಂ' ಎಂಬ ಹೆಸರು. ಮುಟ್ಟಾದ ಬಳಿಕ ಕೊಂಚ ನಿರಾಳ. ಅನಂತರ ಮುಂದಿನ ತಿಂಗಳಿಗೆ ಮತ್ತದೇ ಉಪಟಳ. ಮುಟ್ಟು ತೀರುವಳಿಯ ಕಾಲದ ಬವಣೆಗಳ ಸರಮಾಲೆಯಲ್ಲಿ ಮೂಲವ್ಯಾಧಿಯೂ ಸೇರಿಕೊಂಡಿದೆ. ಬಾರದ ಮಲಕ್ಕೆ ತಿಣುಕುವುದೂ ಸಮಂಜಸವಲ್ಲ ಎಂಬ ಎಚ್ಚರಿಕೆಯ ಮಾತನ್ನು ನೆನಪಿಡಿ.

ಗುದಭಾಗದಲ್ಲಿ ಸಹಸ್ರಾರು ಕೂದಲಿಗಿಂತ ಸಪೂರವಾಗಿರುವ ರಕ್ತನಾಳಗಳ ಜಾಲವಿದೆ. ಅಲ್ಲಿ ರಕ್ತಚಲನೆಯ ಉಬ್ಬರವಿಳಿತದ ದೆಸೆಯಿಂದ ಅಲ್ಲಿ ಮೊಳಕೆಗಳೇಳುವ ಸಂದರ್ಭ. ಗರ್ಭಿಣಿಯರಿಗೂ ಇದು ಸಹಜ. ಗರ್ಭಸ್ಥಶಿಶುವಿನ ಭಾರದ ದೆಸೆಯಿಂದ ಕೆಳ ಉದರ ಭಾಗದಲ್ಲಿ ಒತ್ತಡ ಹೆಚ್ಚುತ್ತದೆ. ಮೊದಲೇ ಕುಳಿತು ಮಾಡುವ ಪಾಳಿಯ ದುಡಿಮೆ. ಕಾಫಿ, ಚಹಾದಂತಹ ಉತ್ತೇಜಕ ಪಾನೀಯಗಳ ನಿರಂತರ ಸೇವನೆ; ಊಟ, ಉಪಚಾರದಲ್ಲಿ ಮಸಾಲೆ, ಖಾರ, ಬೇಗನೆ ಪಚನವಾಗದ ಗುರುಭೋಜನದಿಂದ – ಕೋಳಿಮಾಂಸ, ಜಿಡ್ಡು, ಕಡಿಮೆ ನೀರು ಸೇವಿಸುವುದು, ಹೆಚ್ಚು ಮೊಸರು ಸೇವನೆಯಿಂದ – ಸರಾಗ ಮಲಪ್ರವೃತ್ತಿಗೆ ಸಂಚಕಾರ. ಗುದಭಾಗದ ಮಾಂಸ ಮತ್ತು ಕೊಬ್ಬಿನ ಶೇಖರಣೆಯ ನಡುವಣ ಸೂಕ್ಷ್ಮ ರಕ್ತನಲಿಕೆಗಳು ಕುಟಿಲವಾಗುತ್ತವೆ, ವಕ್ರವಾಗುತ್ತವೆ. ರಕ್ತಸಂಚಾರದಲ್ಲಿ ಏರುಪೇರು. ಗಂಟುಗಳು ಒಡಮೂಡುತ್ತವೆ. ಕ್ರಮೇಣ ನಾನಾ ಬಗೆಯ ಮೊಳಕೆಯೊಡೆಯುತ್ತವೆ.

ನೆನಪಿಡಿ; ಕ್ಷಣಕ್ಷಣವೂ ಈ ಭಾಗದಲ್ಲಿ ಅಧೋಗಮನವಾಗುವ ವಾಯುವೋ ಮಲವೋ ಸಂಚರಿಸಲೇಬೇಕಲ್ಲ. ಅಂತಹ ಸಂಚಾರಕ್ಕೆ ಅಡ್ಡಿಯಾದೊಡನೇ ದೇಹದ ಸಕಲ ಕಾರ್ಯಗಳಲ್ಲಿ ವ್ಯತ್ಯಯ. ಏಕೆಂದರೆ ಆಹಾರವೆಂಬ ಪೋಷಕವಸ್ತು ಸಾಗುವ ಅತಿ ಉದ್ದನೆಯ ಹೆದ್ದಾರಿಯ ಮೊದಲ ಬಾಗಿಲು ಬಾಯಿ. ಕೊನೆಯ ಹೆಬ್ಬಾಗಿಲು ಗುದ. ಆಯುರ್ವೇದಗ್ರಂಥಗಳೆನ್ನುವಂತೆ ಗುದಭಾಗವು ಮರ್ಮ ಅಥವಾ ಅತಿ ಸೂಕ್ಷ್ಮ ಅವಯವ. ಇಲ್ಲಿ ಸಂವೇದನಶೀಲ ನರಾಗ್ರಗಳ ಜಾಲ ಅತಿ ಹೆಚ್ಚು. ಹಾಗೆಯೇ ರಕ್ತಪರಿಚಲನೆಯ ಸಿರಾಗ್ರಗಳೂ ಅತ್ಯಧಿಕ. ಹಾಗಾಗಿಯೇ ಸುಶ್ರುತರು ಪದೇ ಪದೇ ಈ ಭಾಗದಲ್ಲಿ ಶಸ್ತ್ರಕ್ರಿಯೆ ಸಲ್ಲದು ಎಂಬ ಎಚ್ಚರಿಕೆ ಮಾತನ್ನು ಬರೆದಿರಿಸಿದ್ದಾರೆ.

ಅತಿ ನೋವು, ಮಲಪ್ರವೃತ್ತಿಯಲ್ಲಿ ಅಡಚಣೆ ಮತ್ತು ಮಾರ್ಗ ತಡೆಯುವ ಮೊಳಕೆಗೆ ಘನ ಮಲ ತಡೆದು ಛಿಲ್ಲನೆ ಚಿಮ್ಮುವ ರಕ್ತದ ಮುಖ್ಯ ಲಕ್ಷಣ ಮೂಲವ್ಯಾಧಿಯ ಹೆಗ್ಗುರುತು. ದಿನವೂ ಇಂತಹದೇ ಪ್ರಕ್ರಿಯೆ ನಡೆದರೆ ನೆಮ್ಮದಿಗೇಡು. ಹಾಗಾಗಿಯೇ ದೇಹದೊಳಗಿನ ವೈರಿ ಎಂಬ ಹಣೆಪಟ್ಟಿ. ಬಹುತೇಕವಾಗಿ ಇದು ವಂಶಪಾರಂಪರಿಕ. ಹಾಗಾಗಿ ನಿಮ್ಮ ಹೆತ್ತವರ ಬಳಿ ನಿಸ್ಸಂಕೋಚವಾಗಿ ಈ ಬಗೆಯ ರೋಗದ ಇತಿಹಾಸವನ್ನು ಕೇಳಿ ತಿಳಿಯಿರಿ. ಆಗ ರೋಗತಡೆಯ ಮಾರ್ಗೋಪಾಯದ ನಡೆ ಸಾಧ್ಯ.

ಕಿಶೋರಿಯರು ಎಳವೆಯಲ್ಲಿ ರೂಢಿಸಿಕೊಳ್ಳಬಹುದಾದ ಕ್ರಮವರಿತ ವ್ಯಾಯಾಮದಿಂದ ದೇಹದ ತೂಕ ತಡೆಗೆ ಒತ್ತು ನೀಡಲು ಸಾಧ್ಯ. ಯೋಗ, ಪ್ರಾಣಾಯಾಮದಿಂದ ಲಾಭವಿದೆ. ಬಾಯಿ ಚಪಲದಿಂದ ದೂವಿರುವ ಮತ್ತು ಕುರುಕಲು ತಿಂಡಿ ಹಾಗೂ ಜಂಕ್ ಫುಡ್‌ಗಳ ಗೊಡವೆ ಬೇಡ. ಮಾಸಿಕ ಸ್ರಾವದ ಸಂದರ್ಭದ ಎಚ್ಚರಿಕೆಯ ಆಹಾರ ಮತ್ತು ಸರಿಯಾದ ವಿಶ್ರಾಂತಿಗಳು ಕ್ಷೇಮ. ಅಪಾನವಾಯು ಎಂಬ ವಾತದ ಒಂದು ಬಗೆಯದು. ಅದರ ಪಾತ್ರವು ಈ ಮೂಲವ್ಯಾಧಿ ಉಂಟಾಗುವಲ್ಲಿ ಅತಿ ಹೆಚ್ಚು. ಹಾಗಾಗಿ ವಾತದ ಉಲ್ಬಣತೆಗೆ ಅವಕಾಶ ಬೇಡವೇ ಬೇಡ.

ಆರಂಭದಲ್ಲಿ ಎದೆಯುರಿ, ಹುಳಿತೇಗು, ಪಚನಕ್ರಿಯೆಯಲ್ಲಿ ವ್ಯತ್ಯಯ ಕಂಡುಬರಬಹುದು. ನಿತ್ಯ ಮಲಬದ್ಧತೆಯಂತಹ ಗ್ಯಾಸ್ಟ್ರಿಕ್ ಪರಿಭಾಷೆಯ ಲಕ್ಷಣಗಳು ಮೂಲವ್ಯಾಧಿಯ ಮುನ್ಸೂಚನೆಗಳು. ನೆನಪಿಡಿ. ಮುಂದೊಂದು ದಿನ ಏಕಾಏಕಿ ಗುದಭಾಗದಲ್ಲಿ ನೆತ್ತರು ಒಸರುವ ಲಕ್ಷಣ ಕಂಡೀತು. ಆಗಲೇ ಎಚ್ಚರದ ನಡೆಯಿಂದ ರೋಗವನ್ನು ತಡೆಯಲಾದೀತು. ಬೆಂಡೆಕಾಯಿ, ಈರುಳ್ಳಿ, ಮಜ್ಜಿಗೆ, ಬಸಳೆ ಸೇರಿದಂತೆ ಬಹುತೇಕ ಸೊಪ್ಪಿನ ಆಹಾರಸೇವನೆಯಿಂದ ಹೆಚ್ಚಿನ ಲಾಭವಿದೆ. ತಡೆ ಮತ್ತು ಚಿಕಿತ್ಸೆಯ ಮೊದಲ ಹೆಜ್ಜೆಗಳಿವು. ಉದ್ದು, ಬಟಾಣಿ, ತೊಗರಿ, ಇತರ ದ್ವಿದಳ ಬೇಳೆಗಿರಲಿ ಕಡಿವಾಣ; ಹೆಸರನ್ನು ಸೇವಿಸಿದರೆ ದೋಷವಿಲ್ಲ. ಸಂಹಿತೆಗಳು ಉದ್ದಗಲಕ್ಕೆ ಮಜ್ಜಿಗೆಯ ಗುಣಗಾನ ಮಾಡಿದ್ದು ಗಮನಾರ್ಹ. ಗುದಭಾಗದ ಮೊಳಕೆಗಳನ್ನು ತಡೆಯಬೇಕೆ? ನಿರಂತರ ಮಜ್ಜಿಗೆಯನ್ನು ಬಳಸಿರಿ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ


ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

20) ಚಿತ್ರದಲ್ಲಿ AB‖PQ ಮತ್ತು AC‖PR ಆಗುವಂತೆ A, B ಮತ್ತು C ಗಳು ಕ್ರಮವಾಗಿ OP, OQ ಮತ್ತು ORಗಳ ಚಿತ್ರ 2.20ಮೇಲಿನ ಬಿಂದುಗಳು. ಆದರೆ BC‖QR ಎಂದು ತೋರಿಸಿ



ಪರಿಹಾರ:- ΔOPQ ದಲ್ಲಿ, AB ‖ PQ (ದತ್ತ)

ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$$\frac{QA}{AP}=\frac{OB}{BQ}\ldots\ldots\ldots\ldots(1)$$

ΔOPRದಲ್ಲಿ, AC ‖ PR

ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$$\therefore\ \frac{QA}{AP}=\frac{OC}{CR}\ldots\ldots\ldots\ldots(2)$$

ಸಮೀಕರಣ 1 ಮತ್ತು 2 ರಿಂದ,

$$\frac{OB}{BQ}=\frac{OC}{CR}$$

ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

ΔOQR ದಲ್ಲಿ, BC ‖ QR.

21) ಬಿರುಗಾಳಿಗೆ ಸಿಕ್ಕಿ ಒಂದು ಮರವು ಮುರಿದು ನೆಲಕ್ಕೆ ತಾಗಿದಾಗ ನೆಲದೊಂದಿಗೆ 30^0 ಕೋನವನ್ನು ಉಂಟು ಮಾಡಿದೆ. ಮತ್ತು ಮರದ ತುದಿಯು ಮರದ ಬುಡದಿಂದ 8 ಮೀ. ದೂರದಲ್ಲಿ ನೆಲಕ್ಕೆ ತಾಗಿದೆ. ಹಾಗಾದರೆ ಮುರಿದು ಬೀಳುವ ಮುನ್ನ ಮರದ ಎತ್ತರ ಎಷ್ಟಿತ್ತು ಎಂಬುದನ್ನು ಕಂಡುಹಿಡಿಯಿರಿ.

ಪರಿಹಾರ:-

ಚಿತ್ರದಲ್ಲಿ ACಯನ್ನು ಬಿರುಗಾಳಿಗೆ ಸಿಕ್ಕಿ ಒಂದು ಮರವು ಮುರಿದು ನೆಲಕ್ಕೆ ತಾಗಿದಾಗ ಕೊಂಬೆ ಎಂದು ಭಾವಿಸೋಣ. ಕೋನ C= 30°

BC = 8 m

ಮುರಿದು ಬೀಳುವ ಮುನ್ನ ಮರದ ಎತ್ತರ = AB+AC

ಲಂಬಕೋನ ತ್ರಿಭುಜ ΔABCದಲ್ಲಿ,

(Using Cosine and tangent angles)

cos 30° = BC/AC

ನಮಗೆ ಗೊತ್ತಿರುವಂತೆ cos 30° = √3/2

√3/2 = 8/AC

AC = 16/√3 …………(1)

ಇದೇ ರೀತಿ

tan 30° = AB/BC

1/√3 = AB/8

AB = 8/√3 …………(2)

ಮುರಿದು ಬೀಳುವ ಮುನ್ನ ಮರದ ಎತ್ತರ = AB + AC

= 16/√3 + 8/√3

= 24/√3

= 8√3 m.

22) ಕೆಳಗಿನ ಪ್ರತಿ ಸಂಖ್ಯೆಯ ಅದರ ಅವಿಭಾಜ್ಯ ಅಪವರ್ತನಗಳನ್ನು ಕಂಡುಹಿಡಿಯಿರಿ

(1) 140 (2)156 (3)3825 (4)5005

ಉತ್ತರ:- (1) 140 =

2|140
2|70
5|35
7|7
1

$=2^2 \times 5 \times 7$

2) 156 =

2|156
2|78
3|39
13|13
1

$= 2^2 \times 3 \times 13$

3) 3825 =

5|3825
5|765
3|153
3|51
17|12
1

$= 3 \times 3 \times 5 \times 5 \times 17$

$= 3^2 \times 5^2 \times 17$


4) 5005 =

5|5005
7|1001
11|143
13|13
1

$= 5 \times 7 \times 11 \times 13$

23) ಒಂದು ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ, ವೃತ್ತದ ಕೇಂದ್ರದಲ್ಲಿ ಚತುರ್ಭುಜದ ಅಭಿಮುಖ ಬಾಹುಗಳಿಂದ ಉಂಟಾದ ಕೋನಗಳು ಪರಿಪೂರಕಗಳಾಗಿರುತ್ತದೆ ಎಂದು ಸಾಧಿಸಿ.

ಪರಿಹಾರ:-



O ವೃತ್ತ ಕೇಂದ್ರವಿರುವ ವೃತ್ತಕ್ಕೆ ABCD ಚಕ್ರೀಯ ಚತುರ್ಭುಜವಾಗಿದ್ದು ಅದೂ P, Q, R, ಮತ್ತು S ಬಿಂದುಗಳಲ್ಲಿ ವೃತ್ತವನ್ನು ಸ್ಪರ್ಶಿಸಿದೆ.

OAP ಮತ್ತು OAS ತ್ರಿಭುಜದಲ್ಲಿ

AP = AS (A ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳಾಗಿವೆ)

OA = OA (It is the common side)

OP = OS (ವೃತ್ತದ ತ್ರಿಜ್ಯಗಳಾಗಿವೆ)

ಹೀಗಾಗಿ △OAP ≅ △OAS

∠POA = ∠AOS

ಇಲ್ಲಿ ∠1 = ∠8

ಅದೇ ರೀತಿ ∠4 = ∠5

∠2 = ∠3

∠6 = ∠7

ಮೇಲಿನ ಕೋನಗಳನ್ನು ಕೂಡಿಸಿದಾಗ

∠1+∠2+∠3 +∠4 +∠5+∠6+∠7+∠8 = 360°

ಈಗ ಪುನರ್ ಜೋಡಿಸಿದಾಗ

(∠1+∠8)+(∠2+∠3)+(∠4+∠5)+(∠6+∠7) = 360°

2∠1+2∠2+2∠5+2∠6 = 360°

(∠1+∠2)+(∠5+∠6) = 180°

∠AOB+∠COD = 180°

ಇದೇ ರೀತಿ ∠BOC+∠DOA = 180°

ಆದ್ದರಿಂದ ಒಂದು ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ, ವೃತ್ತದ ಕೇಂದ್ರದಲ್ಲಿ ಚತುರ್ಭುಜದ ಅಭಿಮುಖ ಬಾಹುಗಳಿಂದ ಉಂಟಾದ ಕೋನಗಳು ಪರಿಪೂರಕಗಳಾಗಿರುತ್ತದೆ

II PUC CHEMISTRY

REVISION : MODEL QUESTIONS

23) Fill in the blanks by choosing the appropriate word from those given in the brackets: (glycogen, starch, catalyst, cobalt, methanol, HNO_2)

1. Storage polysaccharide present in animals is ________

Ans:- **glycogen,b**

2. Vitamin B12 is a coordination compound of ________ metal

Ans:- **cobalt**

3. Primary aliphatic amines convert into aliphatic alcohols on reacting with ________ solution.

Ans:- **HNO_2**

4. The chemical name of wood spirit is ________


Ans:- **methanol,**

5. Change in standard Gibbs free energy (ΔG^0) of a reaction is does not altered by the addition of ___.

Ans:- **catalyst**

24. Using Valence Bond theory. Account for the geometry and magnetic property of $[Ni(CN)_4]^{2-}$

Ans:-




magnetic property of $[Ni(CN)_4]^{2-}$ is diamagnetic.

25. Give the IUPAC name of $[Ti(H_2O)_6]^{3+}$. Draw cis and trans isomers of $[Pt(NH_3)_2Cl_2]$.

Ans:-The IUPAC name is hexaaquatitanium(III)ion.

The cis and trans isomers of $[Pt(NH_3)_2Cl_2]$ is



cis-isomer (pale yellow) trans-isomer (dark yellow)

26. a] On dissolving 2.34g of solute in 40g of benzene, the boiling point of solution was higher than that of benzene by 0.81K.Kb value for benzene is 2.53Kg mol^{-1}. Calculate the molar mass of the solute.

b] State Henry's law. Write its mathematical form.

Ans:-

a]

$$\Delta T_b = \frac{1000 \times w_2 \times k_b}{M_2 \times w_1}$$

$$M_2 = \frac{100 \times w_2 \times k_b}{M_2\, \Delta T_b \times w_1} = \frac{1000 \times 2.34 \times 2.53}{0.81 \times 40}$$

$M_2 = 182.72 g\ mol^{-1}$

b] The solubility of a gas in a liquid is directly proportional to the pressure of the gas at constant temperature.

The mathematical form is $p = K_H x$.


27. a] Draw labelled diagram of Standard Hydrogen Electrode (SHE). Write its half cell reaction and E^0 value.

b] Calculate $\Delta_r G^0$ for the following reaction:

$$Fe^{+2}_{(aq)} + Ag^{+}_{(aq)} \rightarrow Fe^{+3}_{(aq)} + Ag(S).$$

(Give: $E^0_{cell} = +0.03V$, $F = 96500C$).

Ans:- a]



The SHE is represented as $Pt(s)/H_2$ (g, 1 bar)/ H^+ (aq.1M) and E^0 value is zero.

b) $\Delta rG^0 = -nfE^0 \Rightarrow \Delta rG^0$


$= -1 \times 96500 \times 0.03 \Rightarrow \Delta rG^0 = 2899J$

28. a) i] Write the equations for the steps in SN1 mechanism of the conversion of tertiary butyl bromide in to tertiary butyl alcohol.


ii] Haloarenes are less reactive towards nucleophilic substitution reactions than Haloalkanes. Give a reason.

b) Complete the following equation:

i) $C_2H_5OH + SOCl_2 \rightarrow$




Ans:-



ii) Haloarenes are resonance stabilized with carbon halogen double bond.

b] i) $C_2H_5OH + SOCl_2 \rightarrow C_2H_5Cl + SO_2 + HCl$



(Contd.......)

ಕೋಟೆಕಾರು ಸಹಕಾರಿ ಸಂಘದ ದರೋಡೆ ಪ್ರಕರಣ: ಆರೋಪಿಗಳಿಂದ 18.31 ಕೆ.ಜಿ. ಚಿನ್ನ, ₹3.80 ಲಕ್ಷ ನಗದು ವಶ

ದರೋಡೆಗೆ ಆರು ತಿಂಗಳು ಮೊದಲೇ ಸಂಚು

ಪ್ರಜಾವಾಣಿ ವಾರ್ತೆ

ಮಂಗಳೂರು: ಉಳ್ಳಾಲ ತಾಲ್ಲೂಕಿನ ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಕೆ.ಸಿ.ರೋಡ್ ಶಾಖೆಯಲ್ಲಿ ಜನವರಿ 17ರಂದು ನಡೆದಿದ್ದ ದರೋಡೆ ಪ್ರಕರಣಕ್ಕೆ ಆರೋಪಿಗಳು ಆರು ತಿಂಗಳು ಮೊದಲೇ ಸಂಚು ರೂಪಿಸಿದ್ದು ತನಿಖೆಯಲ್ಲಿ ಗೊತ್ತಾಗಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದ ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್, 'ಪ್ರಕರಣ ಸಂಬಂಧ ತಮಿಳುನಾಡಿನ ಪದ್ಮನೇರಿಯ ಅಮ್ಮನ್ ಕೋವಿಲ್‌ನ ಮುರುಗಂಡಿ ಥೇವರ್ (36), ಮುಂಬೈನ ಡೊಂಬಿವಲಿ ಪಶ್ಚಿಮದ ಗೋಪಿನಾಥ್ ಚೌಕ್‌ನ ಯೋಸುವಾ ರಾಜೇಂದ್ರನ್ (35), ಮುಂಬೈ ಚೆಂಬೂರು ತಿಲಕನಗರದ ಕಣ್ಣನ್ ಮಣಿ (36), ಮುರುಗಂಡಿಗೆ ಆಶ್ರಯ ನೀಡಿದ್ದ ಆತನ ತಂದೆ ಎಂ.ಷಣ್ಮುಗಸುಂದರಂ ಸೇರಿ ನಾಲ್ವರನ್ನು ಬಂಧಿಸಿದ್ದೇವೆ. ದರೋಡೆ ಆರೋಪಿಗಳಿಂದ ಒಟ್ಟು 18.314 ಕೆ.ಜಿ. ಚಿನ್ನ ಹಾಗೂ ₹3.80 ಲಕ್ಷ ನಗದು ವಶಪಡಿಸಿ ಕೊಂಡಿದ್ದೇವೆ' ಎಂದರು.



ಮಂಗಳೂರು ಬಳಿಯ ಕೆ.ಸಿ.ರೋಡ್ ದರೋಡೆ ಪ್ರಕರಣದಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಪರಿಶೀಲಿಸಿದರು. ಎಸಿಪಿಗಳಾದ ಮನೋಜ್ ನಾಯ್ಕ್, ಧನ್ಯಾ ನಾಯಕ್ ಮತ್ತಿತರರು ಜೊತೆಯಲ್ಲಿದ್ದರು

ಸಹಕಾರಿ ಸಂಘದ ಕೆ.ಸಿ.ರೋಡ್ ಶಾಖೆಯಿಂದ ಒಟ್ಟು 18.674 ಕೆ.ಜಿ. ಚಿನ್ನಾಭರಣಗಳು ಹಾಗೂ ₹11.67 ಲಕ್ಷ ನಗದು ದರೋಡೆಯಾಗಿತ್ತು ಎಂದು ಅವರು ವಿವರಿಸಿದರು.

'ಮುರುಗಂಡಿ, ಯೋಸುವ ರಾಜೇಂದ್ರನ್, ಮಣಿ ಕಣ್ಣನ್ ಮುಂಬೈನ ತಲೋಜಾ ಜೈಲಿನಲ್ಲಿ 2016ರಲ್ಲಿ ಒಟ್ಟಿಗಿದ್ದರು. ಕೆ.ಸಿ.ರೋಡ್ ಸಹಕಾರ ಸಂಘದಲ್ಲಿ ಭಾರಿ ಪ್ರಮಾಣದಲ್ಲಿ ಚಿನ್ನಾಭರಣಗಳಿರುವ ಬಗ್ಗೆ ಹಾಗೂ ಅಲ್ಲಿ ಭದ್ರತಾ ಲೋಪ ಇರುವ ಬಗ್ಗೆ ಶಶಿ ಥೇವರ್ ಎಂಬಾತ ಅವರ ತಂಡಕ್ಕೆ ಮಾಹಿತಿ ನೀಡಿದ್ದ. ಮುರುಗಂಡಿ, ಯೋಸುವಾ ರಾಜೇಂದ್ರನ್, ಮಣಿ ಕಣ್ಣನ್, ಶಶಿ ಥೇವರ್ ಹಾಗೂ ಉತ್ತರ ಭಾರತದ ಇತರ ಮೂವರನ್ನು ಒಳಗೊಂಡ ತಂಡವು ಕೆ.ಸಿ. ರೋಡ್ ಸಹಕಾರ ಸಂಘದ ಮಾಹಿತಿ ಕಲೆಹಾಕಿ ದರೋಡೆಗೆ ಆರು ತಿಂಗಳು ಮೊದಲೇ ಸಂಚು ರೂಪಿಸಿತ್ತು' ಎಂದು ಕಮಿಷನರ್ ತಿಳಿಸಿದರು.

ಇನ್ನೂ ನಾಲ್ವರ ಬಂಧನ ಬಾಕಿ

'ದರೋಡೆ ಪ್ರಕರಣ ಸಂಬಂಧ ಶಶಿ ಥೇವರ್ ಸೇರಿ ಇನ್ನೂ ನಾಲ್ವರ ಬಂಧನ ಆಗಬೇಕಿದೆ. ಸ್ಥಳೀಯ ವ್ಯಕ್ತಿಗಳು ಈ ಕೃತ್ಯಕ್ಕೆ ನೆರವಾಗಿರುವ ಸಾಧ್ಯತೆ ಇದೆ. ದರೋಡೆ ತಂಡಕ್ಕೆ ಸಂಘದ ಬಗ್ಗೆ ಮಾಹಿತಿ ನೀಡಿದ್ದ ಶಶಿ ಥೇವರ್ ಈಗಲೂ ತಲೆಮರೆಸಿಕೊಂಡಿದ್ದಾನೆ. ಆತನಿಗೆ ಕೆ.ಸಿ.ರೋಡ್ ಸಂಘದ ಬಗ್ಗೆ ಯಾರು ಮಾಹಿತಿ ನೀಡಿದ್ದರು ಎಂಬುದು ಆತನ ಬಂಧನದ ಬಳಿಕವಷ್ಟೇ ಗೊತ್ತಾಗಲಿದೆ' ಎಂದು ಕಮಿಷನರ್ ತಿಳಿಸಿದರು.

ಕೆ.ಸಿ.ರೋಡ್‌ಗೆ 3 ಸಲ ಬಂದಿದ್ದರು: 'ಮುರುಗಂಡಿ 2024ರ ಆಗಸ್ಟ್‌ನಲ್ಲಿ ಕೆ.ಸಿ.ರೋಡ್‌ಗೆ ಬಂದು ಸಂಘದ ಪರಿಸರವನ್ನು ನೋಡಿ ಹೋಗಿದ್ದ. ನಂತರ ಅಕ್ಟೋಬರ್‌ನಲ್ಲಿ ತಂಡದ ಕೆಲವರು ಮತ್ತೊಮ್ಮೆ ಬಂದು ಪರಿಶೀಲಿಸಿದ್ದರು. ಆ ಬಳಿಕ ನವೆಂಬರ್ 27ರಂದು ಯೋಸುವಾ ರಾಜೇಂದ್ರನ್ ಮತ್ತು ಮುರುಗಂಡಿ ಮತ್ತೆ ಕೆ.ಸಿ.ರೋಡ್‌ಗೆ ಬಂದು ದರೋಡೆಗೆ ಸಂಚು ರೂಪಿಸಿದ್ದರು. ಶುಕ್ರವಾರ ಮಧ್ಯಾಹ್ನ ಸ್ಥಳದಲ್ಲಿ ಜನ ಓಡಾಟ ಕಡಿಮೆ ಇರುವುದರಿಂದ ಕೃತ್ಯಕ್ಕೆ ಆ ದಿನವನ್ನೇ ಆಯ್ಕೆ ಮಾಡಿದ್ದರು' ಎಂದು ತಿಳಿಸಿದರು.

'ಜ.16ರಂದು ಮುಂಬೈನ ತಿಲಕ ನಗರದಿಂದ ಮುರುಗಂಡಿ, ಮೂವರು ಸಹಚರರ ಜೊತೆ ಫಿಯೆಟ್ ಕಾರಿನಲ್ಲಿ ಹೊರಟಿದ್ದ. ಕಣ್ಣನ್ ಮಣಿ ಮತ್ತು ಇನ್ನಿಬ್ಬರು ರೈಲಿನಲ್ಲಿ ಬಂದಿದ್ದರು. ಕೃತ್ಯ ನಡೆಸಿದ ಬಳಿಕ ಮುರುಗಂಡಿ, ಯೋಸುವಾ ರಾಜೇಂದ್ರನ್ ಫಿಯೆಟ್ ಕಾರಿನಲ್ಲಿ ಕೇರಳ ಮೂಲಕ ತಮಿಳು ನಾಡಿಗೆ ಪರಾರಿ ಆಗಿದ್ದರು. ಮೂವರು ಆರೋಪಿಗಳು ರಿಕ್ಷಾದಲ್ಲಿ, ಒಬ್ಬ ಬಸ್‌ನಲ್ಲಿ ಮಂಗಳೂರು ಸೆಂಟ್ರಲ್ ರೈಲು ನಿಲ್ದಾಣಕ್ಕೆ ತೆರಳಿ ಅಲ್ಲಿಂದ ಮುಂಬೈಗೆ ರೈಲಿನಲ್ಲಿ ಪರಾರಿಯಾಗಿದ್ದ' ಎಂದು ತಿಳಿಸಿದರು.

'ಸುರತ್ಕಲ್‌ನ ಪೆಟ್ರೋಲ್ ಬಂಕ್ ಒಂದರ ಸಿ.ಸಿ.ಟಿ.ವಿ. ಕ್ಯಾಮೆರಾ ಪರಿಶೀಲಿಸಿದಾಗ, ಕೃತ್ಯಕ್ಕೆ ಬಳಸಿದ ಕಾರು ಮುಂಬೈ ನೋಂದಣಿ ಹೊಂದಿರುವುದು ತಿಳಿಯಿತು. ಪೊಲೀಸರು ಮುಂಬೈಗೆ ತೆರಳಿದ್ದರು. ಆದರೆ ಆರೋಪಿಗಳು ಮುಂಬೈನಿಂದ ತಮಿಳುನಾಡಿಗೆ ಪರಾರಿ ಆಗಿದ್ದರು. ಪೊಲೀಸರು ತಮಿಳುನಾಡಿಗೆ ತೆರಳಿ ಮೊದಲು ಆರೋಪಿ ಮಣಿಕಣ್ಣನನ್ನು ತಿರುನಲ್ವೇಲಿಯಲ್ಲಿ ಬಂಧಿಸಿದ್ದರು. ಆರೋಪಿಗಳಾದ ಮುರುಗಂಡಿ ಥೇವರ್ ಮತ್ತು ಯೋಸುವಾ ರಾಜೇಂದ್ರನನ್ನು ಅಂಬಾಸಮುದ್ರದಲ್ಲಿ ಬಂಧಿಸಿ ಅವರಿಂದ ಫಿಯೆಟ್ ಕಾರು, 2.029 ಕೆ.ಜಿ. ಚಿನ್ನಾಭರಣ, ₹3.80 ಲಕ್ಷ ನಗದು 2 ಪಿಸ್ತೂಲ್, 3 ಸಜೀವ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಮುರುಗಂಡಿಯ ತಂದೆ ಎಂ.ಷಣ್ಮುಗಸುಂದರಂ ನನ್ನು ಬಂಧಿಸಿ ವಿಚಾರಣೆಗೊಳಪಡಿಸಲಾಗಿತ್ತು. ಆತ ನೀಡಿದ ಮಾಹಿತಿಯಂತೆ ಆತನ ಮನೆಯಲ್ಲಿ ಬಚ್ಚಿಟ್ಟಿದ್ದ 16.285 ಕೆ.ಜಿ. ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

'ರಾಜ್ಯದಲ್ಲಿ ಭಾರಿ ಪ್ರಮಾಣದಲ್ಲಿ ಚಿನ್ನವನ್ನು ಮರಳಿ ವಶ ಪಡಿಸಿಕೊಂಡ ಎರಡನೇ ಅತಿದೊಡ್ಡ ಪ್ರಕರಣ ಇದು. ಸುಮಾರು 1,600 ಗ್ರಾಹಕರ ಚಿನ್ನವನ್ನು ಮರಳಿ ವಶಪಡಿಸಿಕೊಳ್ಳಲು ಶಕ್ತಿಮೀರಿ ಪ್ರಯತ್ನಿಸಿದ ಎಲ್ಲ ಪೊಲೀಸರಿಗೂ ಅಭಿನಂದನೆ' ಎಂದರು.

ಡಿಸಿಪಿಗಳಾದ ಸಿದ್ಧಾರ್ಥ ಗೋಯಲ್, ಕೆ. ರವಿಶಂಕರ್, ಎಸಿಪಿಗಳಾದ ಧನ್ಯಾ ನಾಯಕ್, ಮನೋಜ್ ನಾಯ್ಕ್ ಸುದ್ದಿಗೋಷ್ಠಿಯಲ್ಲಿ ಇದ್ದರು.

ಅಕ್ಷರಗೆ 'ನವಿಲುಗರಿ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದ ಸಾಧಕರನ್ನು ಗುರುತಿಸಿ 'ನವಿಲುಗರಿ' ಪ್ರಶಸ್ತಿ ನೀಡಲು ತೀರ್ಮಾನಿಸಲಾಗಿದ್ದು, 2025ನೇ ಸಾಲಿನ ಪ್ರಶಸ್ತಿಯನ್ನು ರಂಗಕರ್ಮಿ ಹೆಗ್ಗೋಡಿನ ಕೆ.ವಿ. ಅಕ್ಷರ ಅವರಿಗೆ ನೀಡಲಾಗುವುದು ಎಂದು ಇಲ್ಲಿನ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಎಚ್.ಆರ್. ಶಂಕರನಾರಾಯಣ ಶಾಸ್ತ್ರಿ ತಿಳಿಸಿದರು.



ಕೆ.ವಿ. ಅಕ್ಷರ

ಪ್ರಶಸ್ತಿಯು ₹15,000 ನಗದು ಹಾಗೂ ಫಲಕ ಹೊಂದಿದೆ. ಫೆಬ್ರುವರಿ 8ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

SBI ಭಾರತೀಯ ಸ್ಟೇಟ್ ಬ್ಯಾಂಕ್

ಪ್ರಾದೇಶಿಕ ವ್ಯಾಪಾರ ಕಛೇರಿ–1, ಆಡಳಿತ ಕಛೇರಿ–2,ಬೆಂಗಳೂರು ಉತ್ತರ, ಎನ್‌ಡಬ್ಲ್ಯೂ 1, 4 ನೇ ಮಹಡಿ, ಮೈಸೂರು ಬ್ಯಾಂಕ್ ವೃತ್ತ, ಕೆ ಜಿ ರಸ್ತೆ, ಬೆಂಗಳೂರು 560 009

ಕಛೇರಿಗಾಗಿ ಸ್ಥಳಾವಕಾಶ ಬಾಡಿಗೆಗೆ ಬೇಕಾಗಿದೆ

ಭಾರತೀಯ ಸ್ಟೇಟ್ ಬ್ಯಾಂಕ್ ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, **ವಲಯ–1 ಆಡಳಿತ ಕಛೇರಿ–2 ಬೆಂಗಳೂರು ಉತ್ತರ,** ಸುಮಾರು **232 ಚದರ ಮೀಟರ್ (2500 ಚದರ ಅಡಿ +/– 25%)** ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಗಳಿಗೆ ಕಟ್ಟಡದ ಮಾಲೀಕರು/ಪವರ್ ಆಫ್ ಅಟಾರ್ನಿ ಹೊಂದಿರುವವರಿಂದ ಮುಖ್ಯ ರಸ್ತೆಯ ನೆಲ ಮಹಡಿಯಲ್ಲಿರುವ, ಉತ್ತಮ ವಾತಾವರಣ ಹೊಂದಿರುವ, 1 ಕಿಮೀ ವ್ಯಾಪ್ತಿಯಲ್ಲಿನ ಅಸ್ತಿತ್ವದಲ್ಲಿರುವ **ಎಸ್‌ಬಿಐ ಹುಣಸಮಾರನಹಳ್ಳಿ ಶಾಖೆಗೆ** ಅರ್ಜಿಗಳನ್ನು ಆಹ್ವಾನಿಸಿರುತ್ತಾರೆ.

ತಾಂತ್ರಿಕ ಹರಾಜು ಹಾಗೂ ಸಲ್ಲಿಸಬೇಕಾದ ಅರ್ಜಿ ನಮೂನೆ, ವಿವರವಾದ ಮಾನದಂಡಗಳು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಎಸ್‌ಬಿಐ ವೆಬ್ ಸೈಟ್ **www.sbi.co.in** ನಿಂದ **SBI in the News/Procurement News** ಅಡಿಯಲ್ಲಿ **27.01.2025** ರಿಂದ **10.02.2025** ರವರೆಗೆ ಅರ್ಜಿ ಡೌನ್ ಲೋಡ್ ಮಾಡಬಹುದು. ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ: 10.02.2025 ಮಧ್ಯಾಹ್ನ 3.00** ಗಂಟೆಯವರೆಗೆ. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸಹಿ/– ಪ್ರಾದೇಶಿಕ ವ್ಯವಸ್ಥಾಪಕರು,
ವಲಯ–1 ಆಡಳಿತ ಕಛೇರಿ–2 ಬೆಂಗಳೂರು ಉತ್ತರ

ಕರ್ನಾಟಕ ಸರ್ಕಾರ

ಪುರಸಭೆ ಕಾರ್ಯಾಲಯ ಲಕ್ಷ್ಮೇಶ್ವರ

ತಾ: ಲಕ್ಷ್ಮೇಶ್ವರ ಜಿ: ಗದಗ
e-mail: itstaff_ulb_laxmeshwar@yahoo.co.in Phone:08487-272916
Website:www.lakmishwaratown.mrc.gov.in Fax no:08487-272916

ಕಂ/ಪುಸಲ/ತಾಂ.ವಿ/ಘ.ತ್ಯಾವಿ/ಇ–ಟೆಂಡರ್/ವಹಿ/2024–25 ದಿ:23-01-2025

ಅಲ್ಪಾವಧಿ ಟೆಂಡರ ಪ್ರಕಟಣೆ
(ಇ–ಪ್ರೋಕ್ಯೂರಮೆಂಟ್ ಮೂಲಕ)

ಲಕ್ಷ್ಮೇಶ್ವರ ಪುರಸಭೆ ವ್ಯಾಪ್ತಿಯಲ್ಲಿ ಬರುವ ಘನತ್ಯಾಜ್ಯ ವಸ್ತು ವಿಲೇವಾರಿ ಜಮೀನನಲ್ಲಿ RDF, UNSKILLED LABOURS ಕಾಮಗಾರಿ ಎಸ್ ಬಿ ಎಮ್ 2.0 ಅನುದಾನದಲ್ಲಿ ಒಟ್ಟು 2 ಕಾಮಗಾರಿ ಅಂದಾಜು ಮೊತ್ತ ರೂ 51.52 ಲಕ್ಷಗಳಿಗೆ ಕೆ.ಟಿ.ಟಿ.ಪಿ ಕಾಯ್ದೆ ಅಧಿನಿಯಮ 2000 ರನ್ವಯ ಈ ಕೆಳಗಿನಂತೆ ಇಂಡಂಟ್‌ಗಳಲ್ಲಿ ಇ ಟೆಂಡರಗಳನ್ನು ಆಹ್ವಾನಿಸಿದ್ದು ಅರ್ಹ ಬಿಡ್‌ದಾರರು ಟೆಂಡರನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ https:/kppp.karnataka.gov.in ಠೇವಣಿ (ಇಎಂಡಿ) ಮತ್ತು ಟೆಂಡರ ಫೀಯನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದಂತೆ ಪಾವತಿಸಿ ಭಾಗವಹಿಸಬಹುದಾಗಿದೆ. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **05 – 02 –2025 ರ ಸಂಜೆ 4.00** ಗಂಟೆಯವರೆಗೆ ಟೆಂಡರ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರಗೆ ಸಂಬಂಧಿಸಿದ ಯಾವುದೆ ಬದಲಾವಣೆಗಳು ಅಥವಾ ತಿದ್ದುಪಡಿಗಳನ್ನು E-portal ನಲ್ಲಿ ಪ್ರಕಟಿಸಲಾಗುವುದು.

ಅ.ನಂ	ಕಾಮಗಾರಿಯ ಇಂಡಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	DMA/2024-25/SE3759/CALL-3	25.56
2	DMA/2024-25/SE3761/CALL-3	25.96

(ಸಹಿ/–ಶ್ರೀಮಹೇಶ ಎಸ್ ಹಡಪದ) ಮುಖ್ಯಾಧಿಕಾರಿಗಳು ಪುರಸಭೆ ಲಕ್ಷ್ಮೇಶ್ವರ
ಸಹಿ/–(ಶ್ರೀಮತಿ ಯಲ್ಲವ್ವ ಗಂ ದುರಗಣ್ಣವರ) ಅಧ್ಯಕ್ಷರು ಪುರಸಭೆ ಲಕ್ಷ್ಮೇಶ್ವರ

ವಾ.ಸಾ.ಇ/ಗದಗ/561/ದೇಶಪಾಂಡೆಪಬ್ಲಿಸಿಟಿ/2024–25

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ
ದೂ : 08232–225046,
ಇ–ಮೇಲ್ : vcdnmndya@gmail.com

ಟೆಂಡರ್ ಪ್ರಕಟಣೆ ಸಂಖ್ಯೆ :10/2024–25, ದಿ:24.01.2025
ದ್ವಿ–ಲಕೋಟೆ ಪದ್ಧತಿ

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ:10/2024–25 ದಿನಾಂಕ:–24.01.2025 ರಲ್ಲಿ ಒಟ್ಟು 21 ಕಾಮಗಾರಿಗಳಿಗೆ (ಕನಿಷ್ಠ ಮೊತ್ತ 150.00 ಲಕ್ಷ ರೂಪಾಯಿಗಳು ಮತ್ತು ಗರಿಷ್ಠ ಮೊತ್ತ ರೂ 499.00 ಲಕ್ಷ ರೂಪಾಯಿ)ಗಳಿಗೆ ಅರ್ಹ ಕೆಪಿಡಬ್ಲ್ಯೂಡಿ 3ನೇ ದರ್ಜೆ, 2ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಕ್ವಾರೀಸ್/ ಕ್ಲಾರಿಫಿಕೇಷನ್‌ಗಾಗಿ as per e-portal ಇ.ಎಂ.ಡಿ ಮೊತ್ತವನ್ನು e-payment ಮೂಲಕ ಸಂದಾಯ ಮಾಡುವುದು. ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ as per e-portal ಟೆಂಡರ್‌ಗಳನ್ನು ತೆರೆಯುವ ದಿನಾಂಕ as per e-portal ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ:08232–225046 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ವಿ.ಸಿ.ವಿಭಾಗ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/590/2024–25

ನೋಂದಣಿ ಮತ್ತು ಮುದ್ರಾಂಕ ಇಲಾಖೆ
ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಛೇರಿ
ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು – 560009
https://igr.karnataka.gov.in

ಸಂಖ್ಯೆ: ಸಿಬ್ಬಂದಿ–2–176/2015–16/23799 ದಿನಾಂಕ: 22–01–2025

ಪತ್ರಿಕಾ ಪ್ರಕಟಣೆ

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಖಾಲಿ ಇರುವ **ಗ್ರೂಪ್–ಡಿ (ಜವಾನರ) ಬ್ಯಾಕ್ ಲಾಗ್** ಹುದ್ದೆಯ ನೇರ ನೇಮಕಾತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಈ ಹುದ್ದೆಗೆ ಪರಿಶಿಷ್ಟ ಪಂಗಡಕ್ಕೆ ಸೇರಿದ ಮಾಜಿ ಸೈನಿಕ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿಯ ನಮೂನೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ **(https://igr.karnataka.gov.in)**. ಅರ್ಜಿಯ ನಮೂನೆಯ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿತ ವಿಳಾಸಕ್ಕೆ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ: 28.02.2025 ರ 5.30 ಒಳಗಾಗಿ ಅಂಚೆಯ ಮೂಲಕ ಸಲ್ಲಿಸಬೇಕಾಗುತ್ತದೆ.

ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು.

ವಯೋಮಿತಿ: ಅಭ್ಯರ್ಥಿಯು ಹುಟ್ಟಿದ ದಿನಾಂಕದಿಂದ 18 ವರ್ಷಗಳನ್ನು ಪೂರೈಸಿರಬೇಕು ಹಾಗೂ 40 ವರ್ಷಗಳನ್ನು ಮೀರಿರಬಾರದು.

ಅರ್ಜಿ ಸಲ್ಲಿಸಬೇಕಾದ ಅಂಚೆ ವಿಳಾಸ:
ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು,
ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು – 560009

ಸಹಿ/– ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/4600/ಆಕಾರ್/2024–25

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.
ದೂರವಾಣಿ: 080–26422238/45, ಇ–ಮೇಲ್: mdktbs.tender@gmail.com
ವೆಬ್‌ಸೈಟ್: https://www.textbooks.karnataka.gov.in

ಸಂಖ್ಯೆ: A6/KTBS/ADM/TBTR/04/2023/E-21490 ದಿನಾಂಕ: 27.01.2025

ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

Tender Notification No.: **KTBS/2024-25/IND0011**

2024–25ನೇ ಸಾಲಿಗೆ ಕರ್ನಾಟಕ ರಾಜ್ಯದಲ್ಲಿರುವ ಯು.ಕೆ.ಜಿ. ಶಾಲೆಗಳಿಗೆ ಯು.ಕೆ.ಜಿ. ಪಠ್ಯಕ್ರಮ ಆಧಾರಿತ ಕಲಿಕೋಪರಣಗಳ ಅಂದಾಜು **664 ಸೆಟ್‌ಗಳನ್ನು** ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 10.02.2025ರಂದು ಸಂಜೆ 5.30 ರವರೆಗೂ** ಸಲ್ಲಿಸಬಹುದಾಗಿರುತ್ತದೆ.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ:
https://kppp.karnataka.gov.in
ಸಹಾಯವಾಣಿ: 080–46010000 / 080–22631200
ಇಲಾಖೆಯ ವೆಬ್‌ಸೈಟ್: **http://www.textbooks.karnataka.gov.in**

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು–03

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕಅಭಿಯಂತರರು,ಕನೀನಿನಿ ಮಬದಕಾನಿ
ವಿಭಾಗ ನಂ:4,ನವಲಗುಂದ ಇವರಕಛೇರಿ
Phone No:08380-229248 Fax No:08380-229017 E.mail:knnl.mrbcc4@gmail.com.

ಸಂಖ್ಯೆ:ಕನೀನಿನಿ:ಮಬದ–4:ಪಿ.ಬಿ:ಎಇ/2024–25/1133 ದಿನಾಂಕ:–24/01/2025

ಟೆಂಡರ್ ಮುಂದುಡಿಕೆ ಪ್ರಕಟಣೆ–2
(ಇ–ಪ್ರೆಕ್ಯೂರಮೆಂಟರ್ ಮುಖಾಂತರಮಾತ್ರ)

ಉಲ್ಲೇಖ: 1) ಕನೀನಿನಿ:ಮಬದ–4:ಪಿ.ಬಿ:ಎಇ/2024–25/951 ದಿನಾಂಕ:–09/12/2024
2) ಕನೀನಿನಿ:ಮಬದ–4:ಪಿ.ಬಿ:ಎಇ/2024–25/1034 ದಿನಾಂಕ:–31/12/2024

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ, ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ಮಬದಕಾನಿ ವಿಭಾಗ ನಂ:4, ನವಲಗುಂದ ಇವರ ಕಛೇರಿಯಡಿ **(WI NO:-KNNL/2024-25/FP /WORK_INDENT2450)** ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಉಲ್ಲೇಖ (1) ಮತ್ತು (2) ರನ್ವಯ ಆಹ್ವಾನಿಸಲಾಗಿತ್ತು.
ಆದರೆ ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ಈ ಕೆಳಗಿನಂತೆ ಮಾರ್ಪಾಡು ಮಾಡಲಾಗಿದೆ.

Sl No	Calendar of Events	Revised date
1	ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ	31.01.2025
2	ವಿಚಾರಣೆಗೆಕೊನೆಯ ದಿನಾಂಕ	18.02.2025 up to 4.00PM
3	ಪ್ರೀ ಬಿಡ್ ಸಭೆಯ ದಿನಾಂಕ	20.02.2025 at 11.00 AM
4	ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ	02.03.2025 at 4.00 PM
5	ಟೆಂಡರನ್ನು ತೆರೆಯುವ ದಿನಾಂಕ (ತಾಂತ್ರಿಕ, cover-I)	04.03.2025 at 11.30 AM

ಉಳಿದ ಟೆಂಡರ್ ಪ್ರಕಟಣೆಯಲ್ಲಿ ಯಾವುದೆ ಬದಲಾವಣೆ ಇರುವುದಿಲ್ಲಾ ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದರೆ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್/ಪತ್ರಿಕೆಯಲ್ಲಿ ಪ್ರಚುರಗೊಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿದೂರವಾಣಿ ಸಂ. 9663137692 ಕ್ಕೆ ಸಂಪರ್ಕಿಸುವುದು.

ಸಹಿ/–ಕಾರ್ಯನಿರ್ವಾಹಕಇಂಜಿನೀಯರರು,
ಕನೀನಿನಿ,ಮಬದಕಾನಿ ವಿಭಾಗ ನಂ:4,ನವಲಗುಂದ

ವಾ.ಸಾ.ಇ/ಧಾರವಾಡ/896/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ,
ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ–2:ಟೆಂಡರ್–25:2024–25 ದಿನಾಂಕ: 27.01.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ: ಕೆಪಿಪಿಪಿ ಪೋರ್ಟಲ್ ಮೂಲಕ– ದ್ವಿ ಲಕೋಟೆ ಪದ್ಧತಿ:– ಲೆಕ್ಕ ಶೀರ್ಷಿಕೆ: 4059–80–051–0–29–386 ಇಲಾಖಾ ಕಟ್ಟಡಗಳ ನಿರ್ಮಾಣ:–
(1) ಚಳ್ಳಕೆರೆ ತಾಲ್ಲೂಕು ಗೊರ್ಲಕಟ್ಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹೆಚ್ಚುವರಿ 04 ಬೋಧನಾ ಕೊಠಡಿಗಳ ನಿರ್ಮಾಣ (ವ.ಇಂ. 15326)
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–72.00
ಕಾಮಗಾರಿ ಟೆಂಡರ್ ದಿನಾಂಕಗಳು:– ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 03–02–2025 ಸಮಯ 17–30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 04–02–2025 ಸಮಯ 16–00 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 05–02–2025 ಸಮಯ 16–15 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 07–02–2025 ಸಮಯ 11–00
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/520/2024-25
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಬೆಳಗಾವಿ ಮಹಾನಗರ ಪಾಲಿಕೆ
ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005,
ಸುಭಾಷನಗರ, ಬೆಳಗಾವಿ. ದೂರವಾಣಿ : 0831–2405304,
Email : itstaff_ulb_belgaum@yahoo.com, Website : www.belgaumcity.mrc.gov.in

ಸಂಖ್ಯೆ : ಮ.ನ.ಪಾ.ಬೆ./ಲೋ.ಶಾ./ಕಾ.ಅ./ಡಿಎಂ/ಟಿಎನ್‌ಡಿ/ಇಪ್ರೋ–19/2024–25
ದಿನಾಂಕ : 27–01–2025

ಮರು ಟೆಂಡರ್ ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999 – 2000 ಪ್ರಕಾರ ಆ್ಯಕ್ಟ 2000 ನಿಯಮದಂತೆ **2024–25 ನೇ ಸಾಲಿನ ಮಹಾನಗರ ಪಾಲಿಕೆಯ ನಿಧಿಯಡಿ ಅಭಿವೃದ್ಧಿ ಕಾಮಗಾರಿಗಳು ಹಾಗೂ ಪಾಲಿಕೆ ಉದ್ಯಾನವನ ನಿರ್ವಹಣೆಗಾಗಿ ಮಾನವ ಶಕ್ತಿ ಹಾಗೂ ಪಾಲಿಕೆಯ ಕಚೇರಿಯಲ್ಲಿ ಕಾವಲುಗಾರರು ಪೂರೈಸುವ ಕಾಮಗಾರಿಗಳ ಹೀಗೆ ಒಟ್ಟು 23 ಕಾಮಗಾರಿಗಳ ಮರು ಟೆಂಡರ್‌ನ್ನು** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ : 06–02–2025 ರ ಸಂಜೆ 5.00 ಘಂಟೆವರೆಗೆ, 2) ಟೆಂಡರಿನ ಮೊದಲನೆ ಸಭೆಯ (Pre-Bid Meeting) ದಿನಾಂಕ: 07–02–2025 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ, 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 12–02–2025 ರ ಅಪರಾಹ್ನ 4.00 ಘಂಟೆವರೆಗೆ, 4) ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 14–02–2025 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ, 5) ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 17–02–2025 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ **ವೆಬ್‌ಸೈಟ್ : (https://www.kppp.karnataka.gov.in)** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/1534/ಮಣಿಪಾಲ್/2024–25

ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರು
ಬೆಳಗುಂಬ ರಸ್ತೆ, ತುಮಕೂರು–572103.
ಫ್ಯಾಕ್ಸ್ : 0816–2255761 ದೂರವಾಣಿ : 2272280
email: tudatmk2009@yahoo.co.in Website: tuda.co.in,
ಸಂಖ್ಯೆ:ಟಿಯುಡಿಎ/ತಾಂತ್ರಿಕ–ಎಇಇ/ಟೆಂಡರ್–01/2024–25
ದಿನಾಂಕ: 22.01.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಹಾಗೂ KW-1, KW-2, KW-3, ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್ ರೀತ್ಯಾ ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (ವೆಬ್ ವಿಳಾಸ : https//kppp. karnataka .gov.in) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ನಿಗಧಿಪಡಿಸಿದ ದಿನಾಂಕ ಹಾಗೂ ಸಮಯದೊಳಗೆ ಸಲ್ಲಿಸುವುದು.

ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ 23–01–2025 ರಿಂದ ದಿ. 07–02–2025 ವೇಳೆ 17–00 ಗಂಟೆಯವರೆಗೆ. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿ. 07–02–2025 ವೇಳೆ 17–00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ಸಮಯ ಮತ್ತು ದಿ. 10–02–2025 ವೇಳೆ 17–00 ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯ ನಂತರ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.

DIPR/TUM/580/KSMCA/2024-25

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಜಂಟಿ ನಿರ್ದೇಶಕರ ಕಛೇರಿ, ಮೈಸೂರು ಜಿಲ್ಲೆ, ಮೈಸೂರು
ಡಾ॥ ಬಾಬು ಜಗಜೀವನರಾಂ ಭವನದ ಕಟ್ಟಡ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ಪಡುವಾರಹಳ್ಳಿ ಪೂರ್ವ ಬಡಾವಣೆ, ಮೈಸೂರು – 12
Ph: 0821-2344661 Email: dswomysore9@gmail.com
ಸಂಖ್ಯೆ:ಜಂ.ನಿ:ತಸ:ಸಿಆರ್:50:2024–25 ದಿನಾಂಕ: 20.01.2025

ಇ–ಪ್ರಕ್ಯೂರ್‌ಮೆಂಟ್ ಟೆಂಡರ್

2025–26 ಮತ್ತು 2026–27ನೇ ಸಾಲಿಗೆ ಹುಣಸೂರು/ಹೆಚ್.ಡಿ.ಕೋಟೆ/ಕೆ.ಆರ್.ನಗರ/ಮೈಸೂರು/ನಂಜನಗೂಡು/ಪಿರಿಯಾಪಟ್ಟಣ ಮತ್ತು ಟಿ.ನರಸೀಪುರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ನಿಲಯ/ವಸತಿ ಶಾಲೆಗಳಿಗೆ ಆಹಾರ ಪದಾರ್ಥಗಳು, ವಿವಿಧ ತರಕಾರಿ ಮತ್ತು ಇತರೆ ಸಾಮಗ್ರಿಗಳ (ಗ್ರೂಪ್–ಎ, ಗ್ರೂಪ್–ಬಿ, ಗ್ರೂಪ್–ಸಿ, ಗ್ರೂಪ್–ಡಿ, ಗ್ರೂಪ್–ಇ, ಗ್ರೂಪ್–ಎಫ್, ಗ್ರೂಪ್–ಜಿ, ಗ್ರೂಪ್–ಹೆಚ್ ಮತ್ತು ಗ್ರೂಪ್–ಐ) ಪೂರೈಕೆಗಾಗಿ E-Procurement ಮೂಲಕ ಎರಡು ವರ್ಷಗಳ ಅವಧಿಗೆ ಟೆಂಡರ್ ಆಹ್ವಾನಿಸಲಾಗಿದೆ. Interested eligible Registered in e-procurement portal bidders can download the bid documents with visiting the website.
1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ: ಸಂ: ಜಂನಿ/ಸಕಇ/ತಸ/ಆಹಾರ ಸಾಮಗ್ರಿ ಟೆಂಡರ್/ಸಿ.ಆರ್.01/2025–26, ದಿನಾಂಕ: 20.01.2025 2) ಟೆಂಡರ್ ಬಿಡ್ ಮೊತ್ತ ರೂ.23.81 ಕೋಟಿ (ರೂ.ಇಪ್ಪತ್ತ ಮೂರು ಕೋಟಿ ಎಂಬತ್ತೊಂದು ಲಕ್ಷ ಮಾತ್ರ) ಗ್ರೂಪ್ A, B, C, D, E, F, G, H & I, ಸಾಮಾಗ್ರಿಗಳಿಗೆ ನಿಗಧಿಪಡಿಸಿದ ಮೊತ್ತ, ಇ.ಎಂ.ಡಿ. ಮೊತ್ತ ರೂ.23.81 ಲಕ್ಷ (ರೂ.ಇಪ್ಪತ್ತ ಮೂರು ಲಕ್ಷದ ಎಂಬತ್ತೊಂದು ಸಾವಿರ ಮಾತ್ರ). 3) ಇ–ಪೋರ್ಟಲ್ ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಬಹುದಾದ ದಿನಾಂಕ: 21.01.2025 ರಿಂದ 17.02.2025 4) ಪ್ರೀ–ಬಿಡ್ ಸಮಿತಿ ಸಭೆ ದಿನಾಂಕ ಮತ್ತು ಸಮಯ: 03.02.2025 ಅಪರಾಹ್ನ 3.30 ಗಂಟೆ. 5) ಇ–ಪೋರ್ಟಲ್ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ: 17.02.2025 ರಂದು ಸಂಜೆ 5.30 ಗಂಟೆಯವರೆಗೆ. 6) ಇ–ಪೋರ್ಟಲ್‌ನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ: 20.02.2025 ರಂದು ಬೆಳಿಗ್ಗೆ 11.00 ಗಂಟೆಗೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ) (ಬದಲಾವಣೆಗೆ ಒಳಪಟ್ಟಿರುತ್ತದೆ). 7) ಇ–ಪೋರ್ಟಲ್‌ನ ಟೆಂಡರ್ ಆರ್ಥಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ: ತಾಂತ್ರಿಕ ಲಕೋಟೆಯ ಪರಿಶೀಲನೆ ನಂತರ ತಿಳಿಸಲಾಗುವುದು.

ಸಹಿ/– ಜಂಟಿ ನಿರ್ದೇಶಕರು

DIPR/DDMYS/1169/KSMCA/787/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಬೆಂಗಳೂರು ದಕ್ಷಿಣ ವಿಭಾಗ,
ಅಮೃತನಗರ, ಕೋಣನಕುಂಟೆ ಮುಖ್ಯ ರಸ್ತೆ, ಸೌಧಾಮಿನಿ ಲೇಔಟ್, ಬೆಂಗಳೂರು–62
ಸಂಖ್ಯೆ: ಬೃಬೆಂಮಪಾ/ಕಾಪಾಅ/ಬೆಂದವಿ/ಟೆಂಡರ್/10/2024–25 ದಿನಾಂಕ:27.01.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

ದ್ವಿಲಕೋಟೆ ಟೆಂಡರ್ (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ 4)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಬೆಂಗಳೂರು ದಕ್ಷಿಣ ವಿಭಾಗ) ಬೃ.ಬೆಂ.ಮ.ಪಾ ಬೆಂಗಳೂರು, ಇವರು, ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಕೆ.ಪಿ.ಡಬ್ಲ್ಯೂ.ಡಿ /ಸಿ.ಪಿ.ಡಬ್ಲ್ಯೂ.ಡಿ/ಬೆಂಜಮಂ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು/ವರ್ಗೀಕರಣ
1	ಅಂಜನಾಪುರ ಉಪ ವಿಭಾಗದ ವಾರ್ಡ್ ಸಂಖ್ಯೆ–206, 207, 208 ಮತ್ತು 209ರ ಪಿಲ್ಲಗಾನಹಳ್ಳಿ, ಆರ್‌ಬಿಐ ಬಡಾವಣೆ, ನವೋದಯ ನಗರ, ಎನ್‌ಆರ್ ನಗರ, ಹರಿನಗರ ಮುಖ್ಯರಸ್ತೆಯಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಸಾಮಾನ್ಯರಿಗೆ) **ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.300.00 ಲಕ್ಷಗಳು, ಇಎಂಡಿ ಮೊತ್ತ: ₹.4,50,000/–**
2	ಉತ್ತರಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ–202, 203, 204 ಮತ್ತು 205ರ ರಾಮಾಂಜನೇಯ ನಗರ, ಚಿಕ್ಕಕಲ್ಲಸಂದ್ರ, ಜೆಹೆಚ್‌ಸಿಎಸ್ ಗುಬ್ಬಲಾಳ, ತುರಹಳ್ಳಿ, ಕುವೆಂಪುನಗರ, ರಾಜ್ಯೋತ್ಸವನಗರ ಮತ್ತು ಯಲಚೇನಹಳ್ಳಿಯಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು ಮತ್ತು ಉತ್ತರಹಳ್ಳಿಯ ಸ್ಮಶಾನ ಅಭಿವೃದ್ಧಿ ಮಾಡುವುದು. (ಸಾಮಾನ್ಯರಿಗೆ) **ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.400.00 ಲಕ್ಷಗಳು ಇಎಂಡಿ ಮೊತ್ತ: ₹.6,00,000/–**
3	ಬೇಗೂರು ಉಪ ವಿಭಾಗದ ವಾರ್ಡ್ ಸಂಖ್ಯೆ–210, 211 ಮತ್ತು 212ರ ಲಕ್ಷ್ಮಿ ಬಡಾವಣೆ, ಮುನೇಶ್ವರ ಬಡಾವಣೆ ಮತ್ತು ಸುಭಾಶ್ ಚಂದ್ರ ಬೋಸ್ ಬಡಾವಣೆ, ರಾಯಲ್ ಕೌಂಟಿ ಮುಖ್ಯರಸ್ತೆ ಹಾಗೂ ವೆಂಕಟೇಶ್ವರ ಬಡಾವಣೆ –ಯಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಸಾಮಾನ್ಯರಿಗೆ) **ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.300.00 ಲಕ್ಷಗಳು ಇಎಂಡಿ ಮೊತ್ತ: ₹.4,50,000/–**
4	ವಾರ್ಡ್ ಸಂಖ್ಯೆ–225 ಕೂಡ್ಲುವಿನ ಟ್ರಾಪಿಕಲ್ ಪ್ಯಾರಡೈಸ್ ಬಡಾವಣೆ, ಮಾರುತಿ ಬಡಾವಣೆ, ಪ್ರಭು ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಸಾಮಾನ್ಯರಿಗೆ) **ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.500.00 ಲಕ್ಷಗಳು, ಇಎಂಡಿ ಮೊತ್ತ: ₹.7,50,000/–**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ **10.02.2025**ರ ಸಂಜೆ **4:00** ಗಂಟೆಯುವರೆಗೆ. (2) ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **10.02.2025**ರ ಸಂಜೆ **4:00** ಗಂಟೆಯುವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **12.02.2025**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಬೆಂಗಳೂರು ದಕ್ಷಿಣ ವಿಭಾಗ

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ
ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಮಂತ್ರಾಲಯ, ಭಾರತ ಸರ್ಕಾರ
ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್
ವಿಜಿನಾಪುರ, ಎಫ್‌ಸಿಐ ಗೋಡೌನ್ ಹತ್ತಿರ, ದೂರವಾಣಿನಗರ, ಬೆಂಗಳೂರು–560 016.
E-mail: kvicbang@gmail.com

ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ "ಖಾದಿ ಪ್ರಾಕೃತಿಕ್ ಪೇಂಟ್ (KPP)" "ತರಬೇತಿ ಮತ್ತು ತಯಾರಿಕೆ" ಗಾಗಿ ಆಸಕ್ತ ಸಂಸ್ಥೆಗಳು / ಪಾಲುದಾರರು / ಮಾಲೀಕರಿಂದ ವಿವರವಾದ ಆಸಕ್ತಿಯ ಅಭಿವ್ಯಕ್ತಿ (EOI) ಗಾಗಿ ಆಹ್ವಾನ

ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್ (MDTC) ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಇಲಾಖಾ ತರಬೇತಿ ಕೇಂದ್ರವಾಗಿದ್ದು, ಭಾರತ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ (MSME) ಅಂಗಸಂಸ್ಥೆಯಾಗಿದೆ. ನಿರುದ್ಯೋಗಿ ಯುವಕರು, ಗೃಹಿಣಿಯರು, ಎನ್‌ಜಿಓಗಳು, ಸ್ವಸಹಾಯ ಸಂಘಗಳು ಇತ್ಯಾದಿಗಳಿಗೆ ತರಬೇತಿಯ ಅಗತ್ಯಗಳನ್ನು ಪೂರೈಸುವುದು ಈ ಸಂಸ್ಥೆಯ ಉದ್ದೇಶವಾಗಿದೆ.

ಖಾದಿ ಪ್ರಾಕೃತಿಕ್ ಪೇಂಟ್ (KPP) ಹಸುವಿನ ಸಗಣಿ ಬಳಸಿ ಮಾಡಿದ ಪರಿಸರ ಸ್ನೇಹಿ ಬಣ್ಣವಾಗಿದೆ. ಈ ಬಣ್ಣವನ್ನು ಜೈಪುರದ ಕುಮಾರಪ್ಪ ನ್ಯಾಷನಲ್ ಹ್ಯಾಂಡ್‌ಮೇಡ್ ಪೇಪರ್ ಇನ್‌ಸ್ಟಿಟ್ಯೂಟ್ (KNHPI) ಅಭಿವೃದ್ಧಿಪಡಿಸಿದೆ. ಈ ಸಂಸ್ಥೆಯು KVIC ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ ಮತ್ತು ಆಸಕ್ತ ಘಟಕಗಳಿಗೆ ಖಾದಿ ಪ್ರಾಕೃತಿಕ್ ಪೇಂಟ್‌ನ ತಂತ್ರಜ್ಞಾನದ ವರ್ಗಾವಣೆಯನ್ನು ಒದಗಿಸುತ್ತದೆ.

ಈ ತರಬೇತಿ ಕೇಂದ್ರವು ತರಬೇತಿ ಮತ್ತು ಉತ್ಪಾದನಾ ಉದ್ದೇಶಕ್ಕಾಗಿ ಖಾದಿ ಪ್ರಾಕೃತಿಕ ಪೇಂಟ್‌ಗಾಗಿ ಘಟಕವನ್ನು ಸ್ಥಾಪಿಸಿ, ಕಾರ್ಯಗತಗೊಳಿಸಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದ (PPP) ಮೂಲಕ ಉತ್ಪಾದನಾ ಮತ್ತು ತರಬೇತಿ ಉದ್ದೇಶಕ್ಕಾಗಿ ಘಟಕವನ್ನು ಬಳಸಿಕೊಳ್ಳಲು, ಈ ತರಬೇತಿ ಕೇಂದ್ರವು ಆದಾಯ ಹಂಚಿಕೆಯಲ್ಲಿ "ಖಾದಿ ಪ್ರಾಕೃತಿಕ್ ಪೇಂಟ್" ನ "ತರಬೇತಿ ಮತ್ತು ತಯಾರಿಕೆ" ಗಾಗಿ ಆಸಕ್ತ ಸಂಸ್ಥೆಗಳು / ಪಾಲುದಾರರು / ಮಾಲೀಕರಿಂದ ವಿವರವಾದ ಆಸಕ್ತಿಯ ಅಭಿವ್ಯಕ್ತಿಯನ್ನು (EOI) ಆಹ್ವಾನಿಸುತ್ತದೆ. ಈ ಉಪಕ್ರಮವು ಸುಸ್ಥಿರ ಮತ್ತು ದಕ್ಷ ಕಾರ್ಯಾಚರಣೆಗಳನ್ನು ಖಾತ್ರಿಪಡಿಸುವ ಸಂದರ್ಭದಲ್ಲಿ ಖಾದಿ ಪ್ರಾಕೃತಿಕ್ ಪೇಂಟ್‌ನ ಉತ್ಪಾದನೆ ಮತ್ತು ಮಾರಾಟವನ್ನು ಹೆಚ್ಚಿಸಲು ಖಾಸಗಿ ಪರಿಣತಿ ಮತ್ತು ಹೂಡಿಕೆಯ ಹತೋಟಿಯ ಗುರಿಯನ್ನು ಹೊಂದಿದೆ.

ಆಸಕ್ತ ಸಂಸ್ಥೆಗಳು / ಪಾಲುದಾರರು / ಮಾಲೀಕರು 3 ವರ್ಷಗಳ ಆರ್ಥಿಕ ಸ್ಥಿರತೆಯೊಂದಿಗೆ KNHPI, ಜೈಪುರದಿಂದ ToT (ತಂತ್ರಜ್ಞಾನ ವರ್ಗಾವಣೆ) ಒಪ್ಪಂದವನ್ನು ಹೊಂದಿರುವ KPP ಯಲ್ಲಿ ಅಗತ್ಯ ಪರಿಣತಿಯನ್ನು ಹೊಂದಿರುವ ಸಂಬಂಧಿತ ಕಾಯಿದೆಗಳ ಅಡಿಯಲ್ಲಿ ನೋಂದಾಯಿತ ಘಟಕವಾಗಿರಬೇಕು.

ಆಸಕ್ತ ಸಂಸ್ಥೆಗಳು ತಮ್ಮ EOI ಗಾಗಿ ಪೂರ್ಣಗೊಂಡ ಅರ್ಜಿ ನಮೂನೆಯೊಂದಿಗೆ ಸಂಸ್ಥೆಯ ರಚನೆ, ಅನುಭವ, ಹಣಕಾಸು ವಿವರಗಳು ಮತ್ತು ಕಾರ್ಯಾಚರಣೆಯ ಯೋಜನೆ ಸೇರಿದಂತೆ ತಮ್ಮ ವಿವರವಾದ ಪ್ರಸ್ತಾವನೆಗಳನ್ನು ಸಲ್ಲಿಸಬೇಕು. EOI ಸಲ್ಲಿಸುವ ಕೊನೆಯ ದಿನಾಂಕ **14.02.2025 (ಮಧ್ಯರಾತ್ರಿಯವರೆಗೆ).**

ಅರ್ಜಿ ನಮೂನೆಯನ್ನು ಈ ತರಬೇತಿ ಕೇಂದ್ರದಿಂದ ಮೇಲಿನ ವಿಳಾಸದಲ್ಲಿ ಅಥವಾ ಇಮೇಲ್ kvicbang@gmail.com ಮೂಲಕ ಪಡೆಯಬಹುದು. ಯಾವುದೇ ಹಂತದಲ್ಲಿ ಪೂರ್ವ ಸೂಚನೆ ಇಲ್ಲದೆಯೇ EOI ಪ್ರಕ್ರಿಯೆಯನ್ನು ಮಾರ್ಪಡಿಸುವ, ರದ್ದುಗೊಳಿಸುವ ಅಥವಾ ವಿಸ್ತರಿಸುವ ಹಕ್ಕನ್ನು KVIC ಹೊಂದಿದೆ. ಹೆಚ್ಚಿನ ಮಾಹಿತಿಗಾಗಿ **www.kvic.gov.in** ವೆಬ್‌ಸೈಟ್‌ಗೆ ಭೇಟಿ ನೀಡಿ ಅಥವಾ ದೂರವಾಣಿ: **080–25650285, 9449354126, 8299377420** ಯನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು / ಪ್ರಾಂಶುಪಾಲರು

ಪೊಲೀಸ್ ಇಲಾಖೆ
ಪೊಲೀಸ್ ಮಹಾನಿರ್ದೇಶಕರು ರವರ ಕಛೇರಿ ಪೊಲೀಸ್ ಗಣಕ ವಿಭಾಗ,
7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು–560001, ಇ–ಮೇಲ್ :dgppcw@ksp.gov.in ದೂರವಾಣಿ : 22353871

ಸಂಖ್ಯೆ: 49/ಸಂಗ್ರಹ/ಡಿಜಿಪಿ/ಪಿಸಿಡಬ್ಲ್ಯೂ/2024–25 ದಿನಾಂಕ : 24.01.2025

ಇ–ಟೆಂಡರ್ ಪ್ರಕಟಣೆ

ಪೊಲೀಸ್ ಗಣಕ ವಿಭಾಗದ ವತಿಯಿಂದ ಪೊಲೀಸ್ ಇಲಾಖೆಯ ಎಲ್ಲಾ ಘಟಕ/ಕಛೇರಿಗಳು ಹಾಗೂ ಪೊಲೀಸ್ ಠಾಣೆಗಳಲ್ಲಿ **m-Passport application** ಬಳಕೆಯಾಗುತ್ತಿರುವ ಸಂಬಂಧ **Tablets** ಗಳಿಗೆ **4G Internet** ಸಂಪರ್ಕಗಳ ಸೇವೆಯನ್ನು 01 ವರ್ಷದ ಅವಧಿಗೆ ಪಡೆಯುವ ಸಂಬಂಧ ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ ಇ–ಟೆಂಡರ್ ಪ್ರಕ್ರಿಯೆ ಮೂಲಕ ಅರ್ಜಿಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ ಸಂ	ಟೆಂಡರ್ ಸಂಖ್ಯೆ	ಟೆಂಡರ್ ಸಂಕ್ಷಿಪ್ತ ವಿವರ	ಸಂಖ್ಯೆ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	KSP/2024-25/IND0269	4G Internet Connections	832	12/02/2025 by 17:30 hrs

ಈ ನಿಟ್ಟಿನಲ್ಲಿ ಕುಶಲತೆ ಪಡೆದಿರುವ ಸಂಸ್ಥೆಗಳು ವಿವರವಾದ ಷರತ್ತು ಮತ್ತು ನಿಬಂಧನೆ ಹಾಗೂ ತಾಂತ್ರಿಕ ವಿವರ ಒಳಗೊಂಡಿರುವ ಟೆಂಡರ್ ದಾಖಲಾತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಮೇಲ್ಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸಲು ಇಚ್ಛಿಸುವವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು. ಇ–ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಇ–ಆಡಳಿತ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಎಲ್ಲಾ ಸರಬರಾಜುದಾರರರು ದೂರವಾಣಿ ಸಂಖ್ಯೆ 91–8046010000 + 91–8068948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ವ್ಯವಸ್ಥೆಯಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಹೆಲ್ಪ್‌ಲೈನ್ 91–8046010000 +91–8068948777ಗಳನ್ನು ಸಂಪರ್ಕಿಸತಕ್ಕದ್ದು. ದಿನಾಂಕ : 28.01.2025 ರಿಂದ ದಾಖಲಾತಿಯು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.
1) ವಿವರಗಳು : ಟೆಂಡರ್ ಫಾರಂ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : (28/01/2025 ರಿಂದ 12/02/2025 ರ 17:30 ಗಂಟೆಯುವರೆಗೆ) (2) ಇಎಂಡಿ ಮೊತ್ತ : ರೂ. 45,000/–(ನಲವತ್ತೈದು ಸಾವಿರ ಮಾತ್ರ) ಗಳನ್ನು ಈ ಕೆಳಕಂಡ ವಿಧಾನಗಳ ಮೂಲಕ ಪಾವತಿ ಮಾಡಬಹುದು. (ಎ) ಕ್ರೆಡಿಟ್ ಕಾರ್ಡ್, (ಬಿ) ಡೆಬಿಟ್ ಕಾರ್ಡ್, (ಸಿ) ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್, (ಡಿ) ಪಾವತಿ ವಿವರ ಬಿಡ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವಂತೆ (ಇ–ಪಾವತಿ ವಿವರ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ) (3) ಪ್ರೀ ಬಿಡ್ ಸಭೆ : 03–02–2025 ರ 11.30 ಗಂಟೆಗೆ (4) ತಾಂತ್ರಿಕ ಬಿಡ್ : 14–02–2025 ರ 11.30 ಗಂಟೆಗೆ (5) ವಾಣಿಜ್ಯ ಬಿಡ್ : 20–02–2025 ರ ಬೆಳಿಗ್ಗೆ 11.30 ಗಂಟೆಗೆ.

ಸಹಿ/–
ಪೊಲೀಸ್ ಮಹಾ ನಿರ್ದೇಶಕರು,
ಪೊಲೀಸ್ ಗಣಕ ವಿಭಾಗ, ಬೆಂಗಳೂರು

DIPR/CP/4607/Zen/2024-25

ನಾಡದೇವಿ ಭುವನೇಶ್ವರಿಯ 25 ಅಡಿ ಎತ್ತರದ ಕಂಚಿನ ಪ್ರತಿಮೆ ಅನಾವರಣ; ಕನ್ನಡಿಗರಿಗೆ ಸಿ.ಎಂ ಸಿದ್ದರಾಮಯ್ಯ ಕರೆ

‘ಉದಾರಿಗಳಾಗಿ, ಕನ್ನಡಕ್ಕೆ ಕುತ್ತು ತರಬೇಡಿ’

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 25 ಅಡಿ ಎತ್ತರದ ನಾಡದೇವಿ ಭುವನೇಶ್ವರಿ ಕಂಚಿನ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಸಭೆ ಸಭಾಧ್ಯಕ್ಷ ಯು.ಟಿ ಖಾದರ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್, ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ/ ರಂಜು ಪಿ

ಬೆಂಗಳೂರು: ‘ಕನ್ನಡಿಗರು ಉದಾರಿಗಳಾಗಿ ಕನ್ನಡಕ್ಕೆ ಕುತ್ತು ತರಬಾರದು. ಅನ್ಯ ಭಾಷಿಕರೊಂದಿಗೆ ಕನ್ನಡದಲ್ಲೇ ಮಾತನಾಡಿ, ಕನ್ನಡ ಕಲಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ವಿಧಾನಸೌಧದ ಆವರಣದಲ್ಲಿ ನಾಡದೇವಿ ಭುವನೇಶ್ವರಿಯ 25 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಅನಾವರಣ ಮಾಡಿ ಅವರು ಸೋಮವಾರ ಮಾತನಾಡಿದರು.

‘ಅನ್ಯರ ಭಾಷೆ ಗೊತ್ತಿಲ್ಲದಿದ್ದರೂ ಅವರ ಭಾಷೆಯಲ್ಲಿ ಅರ್ಧಂಬರ್ಧ ಮಾತನಾಡುವುದು ಬೇಡ. ಅವರ ಭಾಷೆಯಲ್ಲೇ ಮಾತನಾಡುತ್ತಿರುವುದರಿಂದ ಅನ್ಯ ಭಾಷಿಕರು ಕನ್ನಡ ಕಲಿಯದೆ ಇಲ್ಲಿ ವಾಸ ಮಾಡಬಹುದಾದಂತಹ ವಾತಾವರಣ ನಿರ್ಮಾಣವಾಗಿದೆ. ಇತರೆ ರಾಜ್ಯಗಳಲ್ಲಿ ಇಂತಹ ಪರಿಸ್ಥಿತಿ ಇಲ್ಲ. ಎಲ್ಲರೊಂದಿಗೂ ಕನ್ನಡದಲ್ಲೇ ಮಾತನಾಡಿ, ಕನ್ನಡದ ವಾತಾವರಣವನ್ನು ರಾಜ್ಯದೆಲ್ಲೆಡೆ ನಿರ್ಮಿಸಬೇಕು’ ಎಂದು ಹೇಳಿದರು.

‘ನಾವು ಎಲ್ಲ ಭಾಷೆಗಳನ್ನೂ ಪ್ರೀತಿಸಬೇಕು. ಆದರೆ ಕನ್ನಡಕ್ಕೆ ಪ್ರಾಮುಖ್ಯ ನೀಡಬೇಕು. ಇಂದಿನ ಪೋಷಕರು ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಸುತ್ತಾರೆ. ನಮ್ಮಲ್ಲಿರುವ ಹಲವರಿಗೆ ಕನ್ನಡ ಮಾತನಾಡಲು ಬರುತ್ತದೆಯೇ ಹೊರತು, ಓದಲು, ಬರೆಯಲು ಬರುವುದಿಲ್ಲ. ನಮ್ಮ ಮಾತೃಭಾಷೆ, ನಮ್ಮ ಸಂಸ್ಕೃತಿಯನ್ನು ಮಕ್ಕಳಿಗೆ ತಿಳಿಸಬೇಕು, ಅನ್ಯ ರಾಜ್ಯದವರು, ಭಾಷಿಕರು ಅರಿಯುವಂತೆಯೂ ಮಾಡಬೇಕು’ ಎಂದರು.

‘ಕರ್ನಾಟಕ ಸುವರ್ಣೋತ್ಸವ’ವನ್ನು ಒಂದು ವರ್ಷ ಆಚರಿಸಲಾಯಿತು. ಕನ್ನಡ ಭಾಷೆ, ಸಂಸ್ಕೃತಿ ವಿಚಾರದಲ್ಲಿ ಇದು ನಮ್ಮ ಸರ್ಕಾರದ ಬದ್ಧತೆಯಾಗಿತ್ತು. ನಾಡದೇವಿ ಭುವನೇಶ್ವರಿ ಪ್ರತಿಮೆಯನ್ನೂ ಇದೇ ಸಂದರ್ಭದಲ್ಲಿ ಅನಾವರಣಗೊಳಿಸಲು ನಿರ್ಧರಿಸಲಾಯಿತು. ನಿರ್ಮಾಣ ಕಾರ್ಯ ವಿಳಂಬವಾಗಿದ್ದರಿಂದ ಈಗ ಅನಾವರಣ ಮಾಡಿದ್ದೇವೆ. ಗೊಂಬೆಮನೆಯ ಶಿಲ್ಪಿ ಶ್ರೀಧರಮೂರ್ತಿ ಅವರು ನಾಡದೇವಿಯ ಪ್ರತಿಮೆಯನ್ನು ಸುಂದರವಾಗಿ ಕೆತ್ತಿದ್ದಾರೆ’ ಎಂದು ಶ್ಲಾಘಿಸಿದರು.

‘ಕನ್ನಡ ಭಾಷೆ, ಸಂಸ್ಕೃತಿ, ಕಲೆಯ ಮೇಲೆ ರಾಜ್ಯದ ಪ್ರತಿಯೊಬ್ಬರೂ ಅಭಿಮಾನ ಬೆಳೆಸಿಕೊಳ್ಳಬೇಕು. ‘ಹೆಸರಾಯಿತು ಕರ್ನಾಟಕ-ಉಸಿರಾಗಲಿ ಕನ್ನಡ’ ಎನ್ನುವುದು ನಮ್ಮ ನಿಮ್ಮೆಲ್ಲರ ಅಭಿಮಾನವಾಗವಾಗಬೇಕು. ಆಗ ಮಾತ್ರ ಕನ್ನಡ ಸಾರ್ವಭೌಮ ಭಾಷೆಯಾಗುತ್ತದೆ’ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್, ಸಚಿವರಾದ ರಾಮಲಿಂಗಾರೆಡ್ಡಿ, ಬೈರತಿ ಸುರೇಶ್ ಭಾಗವಹಿಸಿದ್ದರು.

‘ಹೋರಾಟಗಾರರ ಪ್ರಕರಣ ವಾಪಸ್’

‘ಕನ್ನಡಪರ ಹೋರಾಟಗಾರರ ಮೇಲಿರುವ ಎಲ್ಲ ಪ್ರಕರಣಗಳನ್ನೂ ವಾಪಸ್ ಪಡೆಯಲಾಗುತ್ತದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

‘ಗೃಹ ಸಚಿವ ಪರಮೇಶ್ವರ ಅವರ ನೇತೃತ್ವದಲ್ಲಿರುವ ಉಪ ಸಮಿತಿಗೆ ಅರ್ಜಿ ಸಲ್ಲಿಸಿದರೆ, ಪ್ರಕರಣಗಳನ್ನು ವಾಪಸ್ ಪಡೆಯಲು ಸಚಿವ ಸಂಪುಟದಲ್ಲಿ ನಿರ್ಣಯಿಸಲಾಗುತ್ತದೆ’ ಎಂದರು.

ರಾಜ್ಯೋತ್ಸವ ಕಡ್ಡಾಯ: ಡಿಸಿಎಂ

‘ಮುಂದಿನ ವರ್ಷದಿಂದ ಸರ್ಕಾರಿ, ಖಾಸಗಿ ಸೇರಿದಂತೆ ಎಲ್ಲ ಶಾಲೆ, ಸಂಸ್ಥೆಗಳಲ್ಲಿ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಆಯೋಜಿಸುವುದನ್ನು ಕಡ್ಡಾಯಗೊಳಿಸಲಾಗುತ್ತದೆ. ಈ ಬಗ್ಗೆ ಸರ್ಕಾರದಿಂದ ಆದೇಶ ಹೊರಡಿಸಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಕನ್ನಡ ಧ್ವಜಾರೋಹಣ, ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳುವುದು ಕಡ್ಡಾಯ. ಅವರಿಗೆ ಅಗತ್ಯವಾದ ಕನ್ನಡ ಧ್ವಜವನ್ನು ಸರ್ಕಾರದ ವತಿಯಿಂದಲೇ ಒದಗಿಸಲಾಗುತ್ತದೆ’ ಎಂದರು.

‘ಬೆಂಗಳೂರಿನಲ್ಲಿ 107 ಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಎಲ್ಲರಿಗೂ ನಮ್ಮ ಭಾಷೆ, ಸಂಸ್ಕೃತಿಯ ಅರಿವು ಮೂಡಿಸಬೇಕಿದೆ. ಪೋಷಕರು ಮಕ್ಕಳಿಗೆ ಎರಡನೇ ಭಾಷೆಯಾಗಿಯಾದರೂ ಕನ್ನಡವನ್ನು ಕಲಿಸಲೇ ಬೇಕು’ ಎಂದು ಹೇಳಿದರು.

ಸುದ್ದಿ 2 ನಿಮಿಷ

‘ಪ್ರತ್ಯೇಕ ಸಂವಿಧಾನ: ದೇಶದ್ರೋಹದ ಕೃತ್ಯ’

ಬೆಂಗಳೂರು: ರಾಮರಾಜ್ಯ, ಮನುಸ್ಮೃತಿ, ಧರ್ಮಶಾಸ್ತ್ರ ಹಾಗೂ ಚಾಣಕ್ಯನ ಪುಸ್ತಕಗಳನ್ನು ಆಧರಿಸಿದ ಸಂವಿಧಾನವನ್ನು ಅನಾವರಣ ಮಾಡುವುದಾಗಿ ಹೇಳಿರುವ ಉತ್ತರ ಪ್ರದೇಶದ ಶಾಂಭವಿ ಮಠದ ಸ್ವಾಮಿ ಆನಂದ್ ಸ್ವರೂಪ್ ಮಹಾರಾಜ್ ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಬೇಕು ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಒತ್ತಾಯಿಸಿದ್ದಾರೆ.

ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಫೆ. 3ರಂದು 501 ಪುಟಗಳ ಸಂವಿಧಾನ ಬಿಡುಗಡೆ ಮಾಡುವುದಾಗಿ ಸ್ವಾಮೀಜಿ ನೀಡಿರುವ ಹೇಳಿಕೆಯನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇಂತಹ ಹೇಳಿಕೆಯನ್ನು ಬಹುತೇಕ ಮಾಧ್ಯಮಗಳು ವರದಿ ಮಾಡಿವೆ. ಆದರೆ, ದೇಶದ್ರೋಹದ ಕೃತ್ಯ ಎನ್ನುವುದನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡಿಲ್ಲ ಎಂದು ದೂರಿದ್ದಾರೆ.

ದೇಶದಲ್ಲಿ ಎಲ್ಲರ ಹಿತ ಕಾಯುವ ಸಂವಿಧಾನದ ಮಹತ್ವ ಅರಿಯದೆ ಇತ್ತೀಚೆಗಷ್ಟೇ ಅಪಸ್ವರ ಎತ್ತಿದ್ದ ಉಡುಪಿಯ ಪೇಜಾವರ ಶ್ರೀಗಳ ನಂತರ ಮತ್ತೊಬ್ಬರು ವಿಷ ಕಾರಿದ್ದಾರೆ. ಇಂತಹ ಅಪಸ್ವರ ಸಂವಿಧಾನ ಜಾರಿಯಾದ ದಿನದಿಂದಲೂ ಇದೆ. ಹೆಣ್ಣು ಮಕ್ಕಳ ಸಮಾನ ಹಕ್ಕುಗಳನ್ನು ತಿರಸ್ಕರಿಸುವ, ಶೋಷಿತರ ನೆರಳನ್ನೂ ಕಂಡರೆ ಅಸಹ್ಯ ಪಡುವ ಮನುಸ್ಮೃತಿ ಮತ್ತು ಮೌಢ್ಯ ಪ್ರತಿಪಾದಿಸುವ ಧಾರ್ಮಿಕ ಗ್ರಂಥಗಳನ್ನು ಆಧರಿಸಿ ರಚಿಸಿರುವ ಸಂವಿಧಾನವನ್ನು, ಅಂಬೇಡ್ಕರ್ ಅವರು ಮನುಸ್ಮೃತಿ ಸುಟ್ಟ ರೀತಿಯಲ್ಲೇ ದೇಶದ ಜನರು ಸುಟ್ಟುಹಾಕಬೇಕು ಎಂದಿದ್ದಾರೆ.



ಮಂಗಳೂರು, ಉಡುಪಿ: 4 ಶಾಲೆಗಳಿಗೆ ಬಾಂಬ್ ಬೆದರಿಕೆ

ಮಂಗಳೂರು/ಉಡುಪಿ: ಮಂಗಳೂರಿನ ಮೂರು ಹಾಗೂ ಉಡುಪಿಯ ಒಂದು ಶಾಲೆಯಲ್ಲಿ ಬಾಂಬ್ ಇಡಲಾಗಿದೆ ಎಂಬ ಕುರಿತು ಇ-ಮೇಲ್ ಮೂಲಕ ಬೆದರಿಕೆ ಒಡ್ಡಲಾಗಿದೆ. ಈ ಶಾಲೆಗಳನ್ನು ಕೂಲಂಕಷವಾಗಿ ತಪಾಸಣೆಗೆ ಒಳಪಡಿಸಿದಾಗ ಯಾವುದೇ ಬಾಂಬ್‌ಗಳು ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಗಳೂರಿನ ಮಣಿಪಾಲ್ ಸ್ಕೂಲ್, ನೀರುಮಾರ್ಗದ ಪ್ರೆಸಿಡೆನ್ಸಿ ಸ್ಕೂಲ್ ಮತ್ತು ಪಿ.ಯು. ಕಾಲೇಜು ಮತ್ತು ಕೇಂಬ್ರಿಜ್ ಸ್ಕೂಲ್, ಉಡುಪಿಯ ಶಾರದಾ ವಸತಿ ಶಾಲೆಗೆ ಬೆದರಿಕೆಯ ಇ-ಮೇಲ್ ಬಂದಿವೆ.

ಶಾಲೆಗಳ ಪ್ರಾಂಗಣದಲ್ಲಿ ಕಚ್ಚಾ ಬಾಂಬ್(ಐಇಡಿ) ಇಡಲಾಗಿದೆ ಎಂದು ಇ-ಮೇಲ್ ಮೂಲಕ ಬೆದರಿಕೆ ಒಡ್ಡಲಾಗಿತ್ತು. ವಿಧ್ವಂಸಕ ಕೃತ್ಯ ತಡೆ ತಂಡ ಹಾಗೂ ಬಾಂಬ್ ನಿಷ್ಕ್ರಿಯ ದಳಗಳನ್ನು ಕಳುಹಿಸಿ ತಪಾಸಣೆಗೆ ಒಳಪಡಿಸಲಾಗಿದೆ. ವಿಧ್ವಂಸಕ ಕೃತ್ಯಕ್ಕೆ ಕಾರಣವಾಗುವ ಯಾವುದೇ ಸಾಮಗ್ರಿಗಳು ಕಂಡು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

‘ಇ-ಮೇಲ್ ಮೂಲಕ ಬೆದರಿಕೆ ಒಡ್ಡಿದ ಕುರಿತು ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿದ್ದೇವೆ. ಇ- ಮೇಲ್‌ಗಳ ಮೂಲವನ್ನು ಹಾಗೂ ಇದನ್ನು ಕಳುಹಿಸಿದವರ ಪತ್ತೆಗಾಗಿ ತನಿಖೆ ನಡೆಸಲಾಗುತ್ತಿದೆ’ ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದರು.

‘ಶ್ರೀರಾಮುಲು ಕರೆ ತಂದರೆ ನನ್ನನ್ನು ತುಳಿದಂತೆ ಆಗದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ನಾಯಕ ಶ್ರೀರಾಮುಲು ಅವರನ್ನು ಕಾಂಗ್ರೆಸ್‌ಗೆ ಕರೆತಂದರೆ ನನ್ನನ್ನು ತುಳಿದಂತೆ ಆಗುವುದಿಲ್ಲ. ಅದೆಲ್ಲ ಊಹಾಪೋಹ. ಶ್ರೀರಾಮುಲು ಅವರ ರಾಜಕೀಯ ಕಾರ್ಯಕ್ಷೇತ್ರ ಬಳ್ಳಾರಿ. ನನ್ನದು ಬೆಳಗಾವಿ. ಹೀಗಾಗಿ ನಮಗೂ ಅವರಿಗೂ ಏನು ಸಂಬಂಧ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರಶ್ನಿಸಿದರು.

‘ಸತೀಶ ಜಾರಕಿಹೊಳಿ ಅವರನ್ನು ಮಣಿಸಲು ಶ್ರೀರಾಮುಲು ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಳ್ಳಲಾಗುತ್ತಿದೆ’ ಎಂಬ ಜನಾರ್ದನ ರೆಡ್ಡಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ಅವರನ್ನು ಪಕ್ಷಕ್ಕೆ ಯಾರು ಕರೆತರುತ್ತಿದ್ದಾರೊ ಅವರನ್ನೇ ಈ ಬಗ್ಗೆ ಕೇಳಬೇಕು. ಅಷ್ಟಕ್ಕೂ ಶ್ರೀರಾಮುಲು ಅವರೇ ಕಾಂಗ್ರೆಸ್ ಪಕ್ಷ ಸೇರುವುದಿಲ್ಲ ಎಂದು ಹೇಳಿದ್ದಾರೆ’ ಎಂದರು.

‘ಶ್ರೀರಾಮುಲು ಅವರನ್ನು ಕಾಂಗ್ರೆಸ್ ಸೇರ್ಪಡೆ ಮಾಡಲು ಪ್ರಯತ್ನ ನಡೆದಿದೆ’ ಎಂಬ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ‘ಚುನಾವಣೆಗೂ ಮೊದಲು ಈ ಪ್ರಯತ್ನ ಆಗಿರಬಹುದು. ಆದರೆ, ಈಗ ಅಂತಹ ಪ್ರಯತ್ನ ಇಲ್ಲ. ಅವರು ಕಾಂಗ್ರೆಸ್‌ಗೆ ಬರುವುದಾದರೆ ಸ್ವಾಗತಿಸುತ್ತೇನೆ’ ಎಂದರು.



ಸತೀಶ ಜಾರಕಿಹೊಳಿ

ನೋಟಿಸ್‌ಗೆ ಮಹತ್ವ ಕೊಡ ಬೇಕಿಲ್ಲ: ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಮತ್ತು ಸಚಿವ ಬೈರತಿ ಸುರೇಶ್‌ಗೆ ನೋಟಿಸ್ ಕೊಟ್ಟಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಸತೀಶ, ‘ಇ.ಡಿಯಲ್ಲಿ ಈ ಬಗ್ಗೆ ತನಿಖೆ ನಡೆಯುತ್ತಿದೆ. ನೋಟಿಸ್ ಹೊಸತಲ್ಲ’ ಎಂದರು.

‘ಈ ಪ್ರಕರಣ ರಾಜಕೀಯವಾಗಿಯೂ ಇದೆ. ಹಾಗೆಂದು, ಎಲ್ಲ ಸಂದರ್ಭಗಳಲ್ಲಿಯೂ ರಾಜಕೀಯ ಎಂದು ಹೇಳಲು ಆಗುವುದಿಲ್ಲ. ನೋಟಿಸ್‌ಗೆ ಉತ್ತರ ನೀಡುವ ಜವಾಬ್ದಾರಿ ಎಲ್ಲರ ಮೇಲಿದೆ’ ಎಂದರು.

5 ಸಾವಿರ ಹುದ್ದೆ ಶೀಘ್ರ ಭರ್ತಿ: ಸುಧಾಕರ್

ಪ್ರಜಾವಾಣಿ ವಾರ್ತೆ



ಕಾಲೇಜು ಶಿಕ್ಷಣ ಇಲಾಖೆ ಹೊಸದಾಗಿ ನೇಮಕಗೊಂಡ ಸಹಾಯಕ ಪ್ರಾಧ್ಯಾಪಕರಿಗೆ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿದರು — ಪ್ರಜಾವಾಣಿ ಚಿತ್ರ

ಬೆಂಗಳೂರು: ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರೂ ಸೇರಿದಂತೆ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಐದು ಸಾವಿರ ಹುದ್ದೆಗಳ ಭರ್ತಿಗೆ ಅನುಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಕಾಲೇಜು ಶಿಕ್ಷಣ ಇಲಾಖೆಗೆ ನೂತನವಾಗಿ ನೇಮಕವಾದ ಸಹಾಯಕ ಪ್ರಾಧ್ಯಾಪಕರಿಗೆ ಸೋಮವಾರ ಹಮ್ಮಿಕೊಂಡಿದ್ದ ‘ಹೊಸ ಹಾದಿ’ ವೃತ್ತಿ ಮಾರ್ಗದರ್ಶನ ಕಾರ್ಯಾಗಾರದಲ್ಲಿ ಮಾತನಾಡಿದರು.

2021ರಲ್ಲಿ ಆರಂಭವಾದ 1,242 ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆಗೆ ಹಲವು ವಿಘ್ನಗಳು ಎದುರಾಗಿದ್ದವು. ವಿಶೇಷ ವರ್ಗಾವಣೆ, ಕಲ್ಯಾಣ ಕರ್ನಾಟಕ ಮೀಸಲಾತಿ ಹಂಚಿಕೆ, ನ್ಯಾಯಾಲಯದ ಪ್ರಕರಣ ಸೇರಿದಂತೆ ಎಲ್ಲ ಸಮಸ್ಯೆಗಳನ್ನೂ ಇತ್ಯರ್ಥಪಡಿಸಿಕೊಂಡು ನೇಮಕಾತಿ ಆದೇಶ ನೀಡಲಾಗಿದೆ. ಉನ್ನತ ಶಿಕ್ಷಣದಲ್ಲಿ ಕೌಶಲ ಕಲಿಕೆಗೆ ಆದ್ಯತೆ ನೀಡಲಾಗಿದ್ದು, ಹಲವು ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ. ಹೊಸದಾಗಿ ನೇಮಕವಾದವರು ಗುಣಮಟ್ಟದ ಬೋಧನೆಯತ್ತ ಗಮನ ಹರಿಸಬೇಕು ಎಂದರು.

ಕಾರ್ಯಾಗಾರ ಉದ್ಘಾಟಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಮಾಜದ ಬಹುಮುಖ್ಯ ಆಧಾರ ಸ್ತಂಭಗಳಲ್ಲಿ ಶಿಕ್ಷಕ ಸಮುದಾಯವೂ ಒಂದು. ಭವಿಷ್ಯದ ಉತ್ತಮ ನಾಗರಿಕರನ್ನು ರೂಪಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಸರ್ಕಾರ ಲಂಚ ಪಡೆಯದೆ, ಶಿಫಾರಸು ಇಲ್ಲದೆ ಎಲ್ಲರಿಗೂ ನೇಮಕಾತಿ ಆದೇಶ ನೀಡಿದೆ. ಅಂತಹ ದಾರಿಯಲ್ಲಿ ಅಧ್ಯಾಪಕರು ನಡೆದು, ಸಮಾಜಕ್ಕೆ ಆಸ್ತಿಯಾಗುವಂತಹ ವಿದ್ಯಾರ್ಥಿಗಳನ್ನು ರೂಪಿಸಬೇಕು ಎಂದು ಸಲಹೆ ನೀಡಿದರು.

ಇದು ಸಾಮಾಜಿಕ ಜಾಲತಾಣಗಳ ಯುಗ. ಶಿಕ್ಷಕ ತಪ್ಪು ಹೇಳಿದರೆ ಕ್ಷಣಾರ್ಧದಲ್ಲಿ ಗುರುತಿಸಲಾಗುತ್ತದೆ. ಹಾಗಾಗಿ, ಸಾಕಷ್ಟು ಸಿದ್ಧತೆ ಇರಬೇಕು. ಪಠ್ಯ ಹೊರತಾದ ವಿಷಯಗಳ ಕಲಿಕೆಗೂ ಆದ್ಯತೆ ನೀಡಬೇಕು ಎಂದರು.

ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಶ್ರೀಕರ್, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತೆ ಎನ್. ಮಂಜುಶ್ರೀ, ಆಡಳಿತಾಧಿಕಾರಿ ಶೋಭಾ ಉಪಸ್ಥಿತರಿದ್ದರು.

ಲಕ್ಷ್ಮಿದೇವಮ್ಮ ಚೆನ್ನಮ್ಮಗೆ ‘ಸಬಲಾ’ ಪುರಸ್ಕಾರ

ಪ್ರಜಾವಾಣಿ ವಾರ್ತೆ

ವಿಜಯಪುರ: ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸುತ್ತಿರುವ ವಿಜಯಪುರದ ‘ಸಬಲಾ’ ಸಂಸ್ಥೆ ಕೊಡುವ ಪುರಸ್ಕಾರಕ್ಕೆ ರಾಯಚೂರು ಜಿಲ್ಲೆಯ ಪೋಟ್ನಾಳ ಗ್ರಾಮದ ಚೆನ್ನಮ್ಮ ಮುದ್ದೇನಗುಡಿ ಮತ್ತು ಚಿಕ್ಕಮಗಳೂರು ಜಿಲ್ಲೆ ಮುಗಳಿ ಗ್ರಾಮದ ಜಾನಪದ ಕಲಾವಿದೆ ಎಸ್. ಸಿ.ಲಕ್ಷ್ಮಿದೇವಮ್ಮ ಆಯ್ಕೆಯಾಗಿದ್ದಾರೆ.



ಚೆನ್ನಮ್ಮ ಮುದ್ದೇನಗುಡಿ



ಎಸ್. ಸಿ.ಲಕ್ಷ್ಮಿದೇವಮ್ಮ

‘ಪ್ರಶಸ್ತಿಯು ₹ 25 ಸಾವಿರ ನಗದು, ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಬುಧವಾರ (ಜನವರಿ 29) ವಿಜಯಪುರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ಸಂಸ್ಥೆಯ ಅಧ್ಯಕ್ಷೆ ಮಲ್ಲಮ್ಮ ಎಸ್.ಯಾಳವಾರ ತಿಳಿಸಿದ್ದಾರೆ.

ವಿಜಯ ವಿಠಲ ಗೋಪುರದ ಬಿರುಕು ಅಧ್ಯಯನಕ್ಕೆ 3ಡಿ ಸರ್ವೇ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿಯ ವಿಜಯ ವಿಠಲ ದೇವಸ್ಥಾನದ ಮುಂಭಾಗದ ಗೋಪುರದಲ್ಲಿ ಕಾಣಿಸಿರುವ ಬಿರುಕಿನ ಅಧ್ಯಯನಕ್ಕೆ ಸೋಮವಾರ ಡ್ರೋನ್ ಕ್ಯಾಮೆರಾ ಮೂಲಕ ಮೂರು ಆಯಾಮದ ಸಮೀಕ್ಷೆ ಕಾರ್ಯ ನಡೆಯಿತು. ಅದಕ್ಕಾಗಿ ಗೋಪುರದ ಸುತ್ತಮುತ್ತ ತೆರಳದಂತೆ ಪ್ರವಾಸಿಗರಿಗೆ ನಿರ್ಬಂಧ ಹೇರಲಾಯಿತು.

‘ಗೋಪುರದಲ್ಲಿ ಈ ಮೊದಲಿನಿಂದಲೂ ಬಿರುಕು ಇದೆ, ಅದನ್ನು ಮುಚ್ಚುವ ನಿಟ್ಟಿನಲ್ಲಿ ಡ್ರೋನ್ ಕ್ಯಾಮೆರಾ ಮೂಲಕ 3ಡಿ ಸಮೀಕ್ಷೆ ನಡೆಸುವ ಕಾರ್ಯ ಸೋಮವಾರ ನಡೆದಿದೆ’ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಅಧೀಕ್ಷಕ ನಿಹಿಲ್ ದಾಸ್ ತಿಳಿಸಿದ್ದಾರೆ.

ಇಟ್ಟಿಗೆಯಿಂದ ಕೂಡಿದ ಗೋಪುರದ ಮೇಲ್ಭಾಗದಲ್ಲಿ ಗಾರೆ ಹಾಕಿ ಬಿರುಕು ಮುಚ್ಚಬೇಕಿದ್ದು, ಅದಕ್ಕೆ ಪೂರ್ವಭಾವಿಯಾಗಿ ಈ ಡ್ರೋನ್ ಸಮೀಕ್ಷೆ ನಡೆಸಲಾಗಿದೆ. ಎಎಸ್‌ಐ ಇದೇ ಮೊದಲ ಬಾರಿಗೆ ಈ ತಂತ್ರಜ್ಞಾನ ಬಳಸಿದೆ. ಕಳೆದ ವರ್ಷ ಪಾನ್ ಸುಪಾರಿ ಬಜಾರ್‌ನಲ್ಲೂ ಇಂತಹದೇ ಸಮೀಕ್ಷೆ ನಡೆಸಲಾಗಿತ್ತು, ಇದು ಅದಕ್ಕಿಂತಲೂ ಸುಧಾರಿತ ತಂತ್ರಜ್ಞಾನವಾಗಿದೆ ಎಂದು ಅವರು ಹೇಳಿದ್ದಾರೆ.



ಹಂಪಿಯ ವಿಜಯ ವಿಠಲ ದೇವಸ್ಥಾನದ ಪೂರ್ವದಿಕ್ಕಿನ ಗೋಪುರದ ಬಾಗಿಲು ಬಂದ್ ಮಾಡಿರುವುದು ಮತ್ತು ಸರ್ವೆ ಕಾರ್ಯಕ್ಕೆ ಸಿದ್ಧತೆ ನಡೆದಿದೆ —ಪ್ರಜಾವಾಣಿ ಚಿತ್ರ

ಸಮೀಕ್ಷೆ ಕಾರ್ಯಕ್ಕೆ ಅಡ್ಡಿ ಆಗದಿರಲಿ ಎಂಬ ಕಾರಣಕ್ಕೆ ಈ ನಿರ್ಬಂಧ ವಿಧಿಸಲಾಗಿತ್ತು. ಮಂಗಳವಾರ ಮಧ್ಯಾಹ್ನದ ನಂತರ ಪ್ರವೇಶ ನಿರ್ಬಂಧ ತೆರವಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ತನಿಖೆಯ ತುರ್ತೇನಿದೆ: ನ್ಯಾಯಪೀಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇ ಡಿ ತನಿಖೆಯಿಂದ ಹೈಕೋರ್ಟ್ ಕಾಯ್ದಿರಿಸಿರುವ ಪ್ರಕರಣಕ್ಕೆ ಹಾನಿಯಾಗಬಾರದು. ಲೋಕಾಯುಕ್ತ ಪೊಲೀಸರು ಅಂತಿಮ ವರದಿ ಸಲ್ಲಿಸುವಂತಿಲ್ಲ ಎಂದು ಈ ಮೊದಲು ನಾನೇ ಆದೇಶಿಸಿದ್ದೇನೆ. ಹೀಗಿರುವಾಗ, ತನಿಖೆ ನಡೆಸಲು ಇ.ಡಿಗೆ ಅವಕಾಶ ನೀಡುವುದಾದರೂ ಹೇಗೆ? ಅಷ್ಟಕ್ಕೂ ಅರ್ಜಿದಾರರ ವಿರುದ್ಧ ಈಗಲೇ ತನಿಖೆ ನಡೆಸಬೇಕಾದ ತುರ್ತು ಅಗತ್ಯವೇನಿದೆ...?’

‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಹಗರಣದ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿದ್ದ ಸಮನ್ಸ್‌ಗಳನ್ನು ಪ್ರಶ್ನಿಸಿ, ಈ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಬಿ.ಎಂ. ಪಾರ್ವತಿ (ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ) ಮತ್ತು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಸೋಮವಾರ ವಿಚಾರಣೆ ನಡೆಸಿದರು.

ವಿಚಾರಣೆ ಮಧ್ಯದಲ್ಲಿ ಈ ರೀತಿ ಪ್ರಶ್ನಿಸಿದ ನ್ಯಾಯಪೀಠ, ‘ಅರ್ಜಿದಾರರು ವಿಚಾರಣೆಗೆ ಹಾಜರಾಗದಿದ್ದರೆ ನಾಳೆಯೇ ನೀವು ಅವರನ್ನು ಬಂಧಿಸಬಹುದಲ್ಲವೇ’ ಎಂದು ಇ.ಡಿ ಪರ ವಕೀಲರನ್ನು ಪ್ರಶ್ನಿಸಿ ಸಮನ್ಸ್‌ಗಳಿಗೆ ಮಧ್ಯಂತರ ತಡೆ ನೀಡಿತು.



ಇದಕ್ಕೂ ಮುನ್ನ ಪಾರ್ವತಿ ಪರ ಪದಾಂಕಿತ ಹಿರಿಯ ವಕೀಲರಾದ ಸಂದೇಶ್ ಜೆ.ಚೌಟ ಹಾಗೂ ವಿಕ್ರಂ ಹುಯಿಲಗೋಳ ಅವರು, ‘14 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ ಎಂಬ ಆರೋಪದ ಈ ಪ್ರಕರಣದಲ್ಲಿ ಅರ್ಜಿದಾರರು ಯಾವುದೇ ಆರ್ಥಿಕ ಲಾಭ ಪಡೆಯದಿದ್ದರೂ ತನಿಖೆ ನಡೆಸಲಾಗುತ್ತಿದ್ದು, ಇದಕ್ಕೆ ತಡೆ ನೀಡಬೇಕು’ ಎಂದು ಮನವಿ ಮಾಡಿದರು.

ಬೈರತಿ ಸುರೇಶ್ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್, ‘ಸುರೇಶ್, ಆರೋಪಿ ಅಲ್ಲದಿದ್ದರೂ ಇ.ಡಿ ಸಮನ್ಸ್ ಜಾರಿಗೊಳಿಸಿದೆ. ಆದರೆ, ಇದೇ ಮಾದರಿಯ ಮತ್ತೊಂದು ಕೇಸಿನಲ್ಲಿ ಮುಡಾ ಮಾಜಿ ಆಯುಕ್ತ ಡಿ.ಬಿ. ನಟೇಶ್‌ಗೆ ಇ.ಡಿ ನೀಡಿದ್ದ ಸಮನ್ಸ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ. ಮುಂದಿನ ವಿಚಾರಣೆವರೆಗೂ ಇ.ಡಿ ವಿಚಾರಣೆಯಿಂದ ರಕ್ಷಣೆ ಒದಗಿಸಬೇಕು’ ಎಂದು ಕೋರಿದರು.ಇ.ಡಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ‘ನಟೇಶ್ ಪ್ರಕರಣದಲ್ಲಿ ಹೈಕೋರ್ಟ್ ಆದೇಶ ನೀಡಿರಲಿಲ್ಲ. ಇಂದಷ್ಟೇ ನಟೇಶ್ ಅರ್ಜಿ ಪುರಸ್ಕರಿಸಲಾಗಿದೆ. ಅದರ ವಿವರ ತಿಳಿದಿರಲಿಲ್ಲ. ಅಷ್ಟಕ್ಕೂ, ಅರ್ಜಿದಾರರ ಪರ ಯಾವುದೇ ಮಧ್ಯಂತರ ಆದೇಶ ನೀಡಬಾರದು’ ಎಂದು ಬಿನ್ನವಿಸಿದರು.

ಅಂತಿಮವಾಗಿ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಕೋರಲಾದ ಅರ್ಜಿಯ ಬಗ್ಗೆ ಇದೇ ನ್ಯಾಯಪೀಠ ತನ್ನ ತೀರ್ಪು ಕಾಯ್ದಿರಿಸಿದೆ. ಲೋಕಾಯುಕ್ತ ಪೊಲೀಸರ ತನಿಖಾ ವರದಿ ಸಲ್ಲಿಕೆಯನ್ನೂ ಮುಂದೂಡಲಾಗಿದೆ. ಅಂತೆಯೇ, ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ಅಂತಿಮ ವರದಿ ಸಲ್ಲಿಸುವ ಪ್ರಕ್ರಿಯೆಯನ್ನೂ ಮುಂದೂಡಲಾಗಿದೆ. ಹಾಗಾಗಿ, ಇ.ಡಿ ನೋಟಿಸ್‌ಗಳಿಗೆ ತಡೆ ನೀಡಲಾಗುತ್ತಿದೆ’ ಎಂದು ತಿಳಿಸಿ ವಿಚಾರಣೆಯನ್ನು ಫೆಬ್ರುವರಿ 10ಕ್ಕೆ ಮುಂದೂಡಿತು.

ನಟೇಶ್ ಅರ್ಜಿ ಪುರಸ್ಕೃತ: ‘ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಹಗರಣದ ಆರೋಪಕ್ಕೆ ಸಂಬಂಧಿಸಿದಂತೆ ಇ.ಡಿ ನನ್ನ ಮನೆಯಲ್ಲಿ ನಡೆಸಿರುವ ಶೋಧ ಕಾರ್ಯ ಹಾಗೂ ಇದಕ್ಕೆ ಸಂಬಂಧಿಸಿದಂತೆ ದಾಖಲು ಮಾಡಿಕೊಂಡಿರುವ ನನ್ನ ಹೇಳಿಕೆ ಕಾನೂನು ಬಾಹಿರ ಎಂದು ಆದೇಶಿಸಬೇಕು’ ಎಂದು ಕೋರಿ ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಪುರಸ್ಕರಿಸಿದೆ.

ಶಿವರಾಜ್‌ಕುಮಾರ್ ಆರೋಗ್ಯ ವಿಚಾರಿಸಿದ ಮುಖ್ಯಮಂತ್ರಿ



ಶಿವರಾಜ್‌ಕುಮಾರ್ ದಂಪತಿ ಭೇಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದಲ್ಲಿ ಮೂತ್ರಕೋಶ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಒಳಗಾಗಿ ಬೆಂಗಳೂರಿಗೆ ಮರಳಿರುವ ನಟ ಶಿವರಾಜ್‌ಕುಮಾರ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಚಿತ್ರರಂಗದ ಗಣ್ಯರು ಸೋಮವಾರ(ಜ.27) ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಕಳೆದ ಡಿ.24ರಂದು ಮಯಾಮಿ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಶಿವರಾಜ್‌ಕುಮಾರ್ ಸದ್ಯ ಕ್ಯಾನ್ಸರ್‌ನಿಂದ ಸಂಪೂರ್ಣ ಗುಣಮುಖರಾಗಿದ್ದಾರೆ. ನಾಗವಾರದಲ್ಲಿರುವ ಶಿವರಾಜ್‌ಕುಮಾರ್ ಅವರ ನಿವಾಸಕ್ಕೆ ತೆರಳಿ ಸಿದ್ದರಾಮಯ್ಯ ಮಾತುಕತೆ ನಡೆಸಿದರು. ಭೇಟಿ ಬಳಿಕ ಮಾತನಾಡಿದ ಮುಖ್ಯಮಂತ್ರಿ, ‘ಶಿವರಾಜ್‌ಕುಮಾರ್ ಅವರ ಶಸ್ತ್ರಚಿಕಿತ್ಸೆಯ ಮರುದಿನವೇ ಅವರಿಗೆ ಕರೆ ಮಾಡಿ ಆರೋಗ್ಯ ವಿಚಾರಿಸಿದಾಗ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು ತೊಂದರೆ ಇಲ್ಲ ಎಂದು ತಿಳಿಸಿದ್ದರು. ಮುಂದಿನ ತಿಂಗಳಿನಿಂದ ಚಿತ್ರೀಕರಣಕ್ಕೆ ತೆರಳುವುದಾಗಿ ಅವರು ತಿಳಿಸಿದ್ದಾರೆ’ ಎಂದರು.

ಚಂದನವನದ ಗಣ್ಯರ ಭೇಟಿ: ನಟಿ ಜಯಮಾಲಾ, ನಿರ್ದೇಶಕ ಯೋಗರಾಜ ಭಟ್ ನಟರಾದ ಡಾಲಿ ಧನಂಜಯ, ಶ್ರೀನಿ, ನಿರ್ಮಾಪಕರಾದ ಸಾ.ರಾ. ಗೋವಿಂದು, ಆರ್.ಚಂದ್ರು, ಎನ್. ಎಂ.ಸುರೇಶ್ ಶಿವರಾಜ್‌ಕುಮಾರ್ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ‘ಎರಡು ಮೂರು ವಾರಗಳಲ್ಲಿ ಶಿವರಾಜ್ ಕುಮಾರ್ ಅವರು ಶೂಟಿಂಗ್‌ಗೆ ಮರಳಬಹುದು ಎಂದು ಗೀತಾ ಶಿವರಾಜ್‌ಕುಮಾರ್ ಅವರು ಬಹಳ ಖುಷಿಯಲ್ಲಿ ಹೇಳಿದರು. ಈ ವಿಷಯದಲ್ಲಿ ಅದ್ಭುತವಾದ ಉದಾಹರಣೆ ಹಾಗೂ ಸ್ಫೂರ್ತಿ ಅವರು. ಕ್ಯಾನ್ಸರ್ ಇರುವುದು ಗೊತ್ತಿದ್ದರೂ ಶಿವಣ್ಣ ಕುಗ್ಗಲಿಲ್ಲ. ಖುಷಿಯಾಗಿ, ಮತ್ತಷ್ಟು ಸದೃಢವಾಗಿ ಮರಳಿದ್ದಾರೆ’ ಎಂದರು ಧನಂಜಯ.

ಕರ್ನಾಟಕ ಸಂಘ: ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನ

ಶಿವಮೊಗ್ಗ,: ಇಲ್ಲಿನ ಕರ್ನಾಟಕ ಸಂಘದಿಂದ 2024ರ ಸಾಲಿನ ಪುಸ್ತಕ ಬಹುಮಾನಕ್ಕೆ ಕೃತಿಗಳನ್ನು ಆಹ್ವಾನಿಸಲಾಗಿದೆ.

ಕಾದಂಬರಿ, ಅನುವಾದ, ಮಹಿಳಾ ಸಾಹಿತ್ಯ, ಮುಸ್ಲಿಂ ಬರಹಗಾರರ ಸಾಹಿತ್ಯ, ಕವನ ಸಂಕಲನ ಸೇರಿದಂತೆ ಒಟ್ಟು 12 ವಿಭಾಗಗಳಲ್ಲಿ ಪುಸ್ತಕ ಬಹುಮಾನಕ್ಕೆ ಕೃತಿಗಳನ್ನು ಕಳುಹಿಸಬಹುದು.

ಬಹುಮಾನಕ್ಕೆ ಕಳುಹಿಸುವ ಕೃತಿಗಳು ಮರುಮುದ್ರಣ ಆಗಿರಬಾರದು. ಹಸ್ತಪ್ರತಿ ಅಥವಾ ಸಂಪಾದಿತ ಕೃತಿಗಳಿಗೆ ಅವಕಾಶ ಇಲ್ಲ. ಈ ಹಿಂದೆ ಬಹುಮಾನ ಪಡೆದವರು ಅದೇ ವಿಭಾಗದಲ್ಲಿ ಸ್ಪರ್ಧಿಸುವಂತಿಲ್ಲ. ಬಹುಮಾನಕ್ಕೆ ಒಟ್ಟು 4 ಪುಸ್ತಕಗಳನ್ನು ಕಳುಹಿಸಬೇಕು. ಕೃತಿ ಕಳುಹಿಸಲು ಮಾರ್ಚ್ 25 ಕಡೆಯ ದಿನ. ಪುಸ್ತಕಗಳನ್ನು ಕಾರ್ಯದರ್ಶಿ, ಕರ್ನಾಟಕ ಸಂಘ, ಬಿ.ಎಚ್. ರಸ್ತೆ, ಶಿವಮೊಗ್ಗ ಇಲ್ಲಿಗೆ ಕೊರಿಯರ್ ಅಥವಾ ಅಂಚೆ ಮೂಲಕ ಇಲ್ಲವೇ ಖುದ್ದಾಗಿ ಸಲ್ಲಿಸಬೇಕು. ಆಯ್ಕೆಯಾದ ಕೃತಿಗಳಿಗೆ ₹ 10,000 ನಗದು ನೀಡಲಾಗುವುದು. ಮಾಹಿತಿಗೆ 9980159696 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಾಗುಣಿತ, ಅನುವಾದದಲ್ಲಿ ದೋಷ, ಲೇಖನ ಚಿಹ್ನೆಗಳನ್ನು ಸರಿಯಾಗಿ ಬಳಸದ ಆರೋಪ

ಆರ್‌ಸಿಯು: ಪ್ರಶ್ನೆಪತ್ರಿಕೆಗಳಲ್ಲೇ ಹಲವು ದೋಷ

• ಇಮಾಮ್ ಹುಸೇನ್ ಗೂಡುನವರ

ಬೆಳಗಾವಿ: ಇಲ್ಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ (ಆರ್‌ಸಿಯು) ವ್ಯಾಪ್ತಿಯಲ್ಲಿ ನಡೆಯುತ್ತಿರುವ ಪದವಿ ಪ್ರಥಮ ಮತ್ತು ಐದನೇ ಸೆಮಿಸ್ಟರ್‌ನ ಎರಡು ವಿಷಯಗಳ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ಹಲವು ದೋಷ ಕಂಡು ಬಂದಿವೆ. ‘ಯಾರದ್ದೋ ತಪ್ಪಿಗೆ ನಮಗೆ ಸಿಗಬೇಕಿದ್ದ ಅಂಕ ಕಡಿತಗೊಂಡರೆ ಹೇಗೆ’ ಎಂದು ವಿದ್ಯಾರ್ಥಿಗಳು ಪ್ರಶ್ನಿಸಿದ್ದಾರೆ.

ಆರ್‌ಸಿಯು ವ್ಯಾಪ್ತಿಯಲ್ಲಿ ಬೆಳಗಾವಿ, ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ 2024ರ ಡಿ.30ರಿಂದ ಆರಂಭಗೊಂಡ ಪದವಿ ಪರೀಕ್ಷೆ ಈ ವರ್ಷ ಫೆ.14ರವರೆಗೂ ನಡೆಯಲಿವೆ. 1.40 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಾರೆ.

ಸಾಲು ಸಾಲು ತಪ್ಪುಗಳು: ‘ಬಿ.ಎ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ನಡೆದ ‘ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ-1’ ವಿಷಯದ 80 ಅಂಕಗಳ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಬಿರಿವೆ(ಬೀರಿವೆ), ವೀರಶೈಯುಗ (ವೀರಶೈವ ಯುಗ), ಪಾದಗಳೇಷ್ಟು (ಪಾದಗಳೆಷ್ಟು) ಎಂಬ ಕಾಗುಣಿತ ದೋಷಗಳಿವೆ. ಹಲ್ಮಿಡಿ ಶಾಸನ ‘ಶೋಧಿಸಿದವರು’ ಯಾರೆಂಬ ಬದಲಿಗೆ, ‘ಪರಿಶೀಲಿಸಿದವರು’ ಯಾರು, ‘ಕರ್ನಾಟಕ ಕವಿಚರಿತೆ’ ಬದಲಿಗೆ, ‘ಕರ್ನಾಟಕ ಕವಿಚರಿತ್ರೆ’ ಕೃತಿಯ ಕರ್ತೃ ಯಾರು, ‘ಗಾಥಾಸಪ್ತಶತಿ’ ಬದಲಿಗೆ, ‘ಗಾಂಧಾಸಪ್ತಸತಿ’ ಕೃತಿಯ ಕರ್ತೃ ಯಾರೆಂದು ತಪ್ಪಾಗಿ ಕೇಳಲಾಗಿದೆ. ಧಾನ್ಯ ಕುಟ್ಟುವಾಗ ಹೇಳುವ ‘ಮಂತ್ರ’ ಯಾವುದು ಕೇಳಿದ್ದಾರೆ. ಆದರೆ, ಅದು ಮಂತ್ರವೋ ಅಥವಾ ಪದ್ಯವೋ ಎಂಬ ಗೊಂದಲವಿದೆ’ ಎಂದು ಆರೋಪಿಸಲಾಗಿದೆ.

‘ಕನ್ನಡ ಸಾಹಿತ್ಯ ಚರಿತ್ರೆ ಬೆಳೆದು ಬಂದ ಬಗೆ ಹೇಗೆ ವಿವರಿಸಿರಿ. ಸಾಹಿತ್ಯ ಚರಿತ್ರೆ ಬೆಳೆದು ಬಂದ ಬಗೆ ಹೇಗೆ ವಿವೇಚಿಸಿರಿ ಎಂದು ಒಂದೇ ಮಾದರಿಯ ಪ್ರಶ್ನೆಗಳನ್ನು ಎರಡು ಬಾರಿ ಕೇಳಲಾಗಿದೆ. ‘ಪದ್ಯಂ ಗದ್ಯಂ ಹೃದ್ಯಂ ಎಂದು ಹೇಳಿದ ಕವಿ, ಪ್ರಮುಖ ಚಂಪೂ ಕವಿಗಳು, ಪೊನ್ನನ ಕೃತಿಗಳು, ‘ವಡ್ಡಾರಾಧನೆ’ಯಲ್ಲಿ ಎಷ್ಟು ಕಥೆಗಳು ಇವೆ, ಬಾದಾಮಿ ಶಾಸನಕ್ಕೆ ಮತ್ತೊಂದು ಹೆಸರು... ಎಂದು ಪ್ರಶ್ನಾರ್ಥಕ ಚಿಹ್ನೆಯನ್ನೇ ಬಳಸದ ಹಲವು ಪ್ರಶ್ನೆಗಳಿವೆ. ಇಡೀ ಪ್ರಶ್ನೆಪತ್ರಿಕೆಯಲ್ಲಿ ಲೇಖನ ಚಿಹ್ನೆಗಳನ್ನು ಸರಿಯಾಗಿ ಬಳಸಿಲ್ಲ’ ಎಂದು ದೂರಲಾಗಿದೆ.

‘ಬಿ.ಎ ಐದನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ನಡೆದ ‘ಎಂಪ್ಲಾಯಿಬಿಲಿಟಿ ಸ್ಕಿಲ್ಸ್’ ವಿಷಯದ 50 ಅಂಕಗಳ ಪರೀಕ್ಷೆಯ ಪ್ರಶ್ನೆಗಳಲ್ಲಿ ‘Mirror images’ ಪದವನ್ನು ‘ಅಳತೆ ಮತ್ತು ಪ್ರತಿಬಿಂಬಗಳು’ ಎಂದು, ‘Oral Presentation’ಗೆ ಪದವನ್ನು ‘ಮಾತೃಕ ಪ್ರಸ್ತುತಿಕರಣ’ ಎಂದು ತಪ್ಪಾಗಿ ಅನುವಾದಿಸಲಾಗಿದೆ’ ಎಂದು ಆಪಾದಿಸಲಾಗಿದೆ.

‘ನೋಟಿಸ್ ಕೊಟ್ಟಿದ್ದೇವೆ’

‘ಪದವಿಯ ಎರಡು ವಿಷಯಗಳ ಪ್ರಶ್ನೆಪತ್ರಿಕೆಗಳಲ್ಲಿ ಹಲವು ದೋಷಗಳಿರುವುದು ಗೊತ್ತಾಗಿದೆ. ಈ ಬಗ್ಗೆ ಸ್ಪಷ್ಟನೆ ಕೋರಿ, ಪರೀಕ್ಷಕ ಮಂಡಳಿ ಮುಖ್ಯಸ್ಥರು ಮತ್ತು ಪ್ರಶ್ನೆಪತ್ರಿಕೆ ಸಿದ್ಧಪಡಿಸಿದವರಿಗೆ ನೋಟಿಸ್ ಕೊಟ್ಟಿದ್ದೇವೆ’ ಎಂದು ಆರ್‌ಸಿಯು ಮೌಲ್ಯಮಾಪನ ಕುಲಸಚಿವ ಪ್ರೊ.ರವೀಂದ್ರನಾಥ ಕದಂ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರಶ್ನೆಪತ್ರಿಕೆ ಸಿದ್ಧಪಡಿಸುವಾಗ ತಪ್ಪಾಗಿದೆಯೇ ಅಥವಾ ಮುದ್ರಣದ ವೇಳೆ ದೋಷ ಆಗಿದೆಯೇ ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ಒಂದು ವೇಳೆ ಪ್ರಶ್ನೆಪತ್ರಿಕೆ ಸಿದ್ಧಪಡಿಸುವಾಗಲೇ ಲೋಪವಾಗಿದ್ದು ದೃಢಪಟ್ಟರೆ, ಆಯಾ ಪ್ರಶ್ನೆಗಳಿಗೆ ವಿದ್ಯಾರ್ಥಿಗಳಿಗೆ ಕೃಪಾಂಕ ಕೊಡುತ್ತೇವೆ’ ಎಂದು ಹೇಳಿದರು.

ಕಟ್ಟೆಮಾಡು ದೇಗುಲದ ಅರ್ಚಕನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ವಸ್ತ್ರಸಂಹಿತೆ ಕಾರಣದಿಂದ ವಿವಾದಕ್ಕೆ ಒಳಗಾಗಿದ್ದ ತಾಲ್ಲೂಕಿನ ಕಟ್ಟೆಮಾಡು ಮಹಾಮೃತ್ಯುಂಜಯ ದೇಗುಲದ ಅರ್ಚಕ ವಿಘ್ನೇಶ್ ಭಟ್ ಮೇಲೆ ಇಬ್ಬರು ಹಲ್ಲೆ ನಡೆಸಿದ್ದು, ಅರ್ಚಕರನ್ನು ಇಲ್ಲಿನ ಕೊಡಗು ವೈದ್ಯಕೀಯ ವಿಜ್ಞಾನಗಳ ಕಾಲೇಜಿನ ಬೋಧನಾ ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಮನೆಯ ಸಮೀಪ ಬಂದು ನನ್ನ ಮೇಲೆ ಹಲ್ಲೆ ನಡೆಸಿದರು. ಚಾಕು ಹಾಕಲು ಬಂದಾಗ ಅಮ್ಮ ತಡೆದರು’ ಎಂದು ವಿಘ್ನೇಶ್ ಭಟ್ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಆಸ್ಪತ್ರೆಯ ಮುಂಭಾಗ ಹೆಚ್ಚಿನ ಸಂಖ್ಯೆಯಲ್ಲಿ ಜನ ಜಮಾಯಿಸಿ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು. ಮುಂಜಾಗ್ರತಾ ಕ್ರಮವಾಗಿ ಆಸ್ಪತ್ರೆಯ ಮುಂದೆ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ.

ಡಿ. 27ರಂದು ನಡೆದ ವಾರ್ಷಿಕೋತ್ಸವದ ವೇಳೆ ಕೊಡವರ ಸಾಂಪ್ರದಾಯಿಕ ದಿರಿಸನ್ನು ಧರಿಸಿದ ಪುರುಷರಿಗೆ ಕೆಲವರು ಅಡ್ಡಿಪಡಿಸಿದರು ಎಂಬ ಕಾರಣಕ್ಕೆ ಗಲಾಟೆ ಶುರುವಾಗಿತ್ತು. ನಂತರ, ವಿವಾದದ ಸ್ವರೂಪ ಪಡೆದುಕೊಂಡಿತ್ತು.

ಆಧಾರ್ ಸೀಡಿಂಗ್: ₹4.5 ಕೋಟಿ ಪ್ರೋತ್ಸಾಹ ಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಧಾರ್ ಸೀಡಿಂಗ್ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಗ್ರಾಮ ಸಹಾಯಕರು ಮತ್ತು ಗ್ರಾಮ ಲೆಕ್ಕಿಗರಿಗೆ ಒಟ್ಟು ₹4.5 ಕೋಟಿ ಮೊತ್ತದ ಪ್ರೋತ್ಸಾಹ ಧನ ನೀಡಲು ನಿರ್ಧರಿಸಲಾಗಿದೆ ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಸೋಮವಾರ ನಡೆಸಿದ ಜಿಲ್ಲಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ರಾಜ್ಯದಲ್ಲಿ 2.12 ಕೋಟಿ ಜಮೀನುಗಳ ಪಹಣಿಗಳಿಗೆ ಆಧಾರ್ ಜೋಡಿಸಲಾಗಿದೆ. ಗ್ರಾಮ ಸಹಾಯಕರು ಮತ್ತು ಗ್ರಾಮ ಲೆಕ್ಕಿಗರು ಈ ಕೆಲಸ ಮಾಡಿದ್ದಾರೆ. ಇವರು ಈ ಕೆಲಸ ಮಾಡದೇ ಇದ್ದಿದ್ದರೆ ಆಧಾರ್ ಸೀಡಿಂಗ್ ಸಾಧ್ಯವೇ ಆಗುತ್ತಿರಲಿಲ್ಲ. ಹಲವರು ತಮ್ಮ ಕೈಯಿಂದ ಖರ್ಚು ಮಾಡಿ ಆಧಾರ್ ಸೀಡಿಂಗ್ ಮಾಡಿದ್ದಾರೆ. ಹೀಗಾಗಿ ಗ್ರಾಮ ಸಹಾಯಕರು ಹಾಗೂ ಗ್ರಾಮ ಲೆಕ್ಕಿಗರಿಗೆ ಪ್ರೋತ್ಸಾಹ ಧನ ನೀಡಬೇಕು ಎಂದು ತೀರ್ಮಾನಿಸಲಾಗಿದೆ ಎಂದರು.

ದರ್ಖಾಸ್ತು ಪೋಡಿ ಅಭಿಯಾನಕ್ಕೆ ಚಾಲನೆ: ಡಿಸೆಂಬರ್ ಮೊದಲ ವಾರದಿಂದಲೇ ದರ್ಖಾಸ್ತು ಪೋಡಿ ಅಭಿಯಾನ ಶುರುವಾಗಿದ್ದು, 26 ಸಾವಿರ ಮಂದಿಯ ಜಮೀನುಗಳ ಸರ್ವೆಗೆ ಒಪ್ಪಿಗೆ ನೀಡಲಾಗಿದೆ. ಈ ಪೈಕಿ 5,000 ಜನರ ದರ್ಖಾಸ್ತು ಸರ್ವೆ ಪೂರ್ಣಗೊಳಿಸಲಾಗಿದೆ. ಇವರೆಲ್ಲರಿಗೂ ಹೊಸ ಪಹಣಿ ಮತ್ತು ನಕ್ಷೆ ನೀಡಲಾಗುವುದು. ಇದು ಜಮೀನಿನ ಮಾಲೀಕತ್ವದ ಖಾತರಿ ಆಗಿದ್ದು, ಈ ಅಭಿಯಾನಕ್ಕೆ ‘ನನ್ನ ಭೂಮಿ’ ಎಂದು ಹೆಸರಿಡಲಾಗಿದೆ ಎಂದು ಕೃಷ್ಣಬೈರೇಗೌಡ ವಿವರಿಸಿದರು.

ಬಡ್ಡಿಗೆ ಗರಿಷ್ಠ ಮಿತಿಯೇ ಇಲ್ಲ; ಮೈಕ್ರೊ ಫೈನಾನ್ಸ್‌ಗಳ ವೈಖರಿ ಬಿಚ್ಚಿಟ್ಟ ಒಕ್ಕೂಟದ ಉಪಾಧ್ಯಕ್ಷ

‘₹36 ಸಾವಿರ ಕೋಟಿ ವಹಿವಾಟು’

ಪ್ರಜಾವಾಣಿ ವಾರ್ತೆ



ಹಾವೇರಿಯಲ್ಲಿ ಸೋಮವಾರ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮೈಕ್ರೊ ಫೈನಾನ್ಸ್ ಇಂಡಸ್ಟ್ರಿ ನೆಟ್‌ವರ್ಕ್ (ಎಂಎಫ್‌ಐಎನ್) ಒಕ್ಕೂಟದ ದಕ್ಷಿಣ ವಲಯದ ಉಪಾಧ್ಯಕ್ಷ ಎಂ.ಎಸ್ ಮಂಜುನಾಥ್ ಅವರು ಮಾಹಿತಿ ನೀಡಿದರು

ಹಾವೇರಿ: ‘ರಾಜ್ಯದಲ್ಲಿ 46 ಮೈಕ್ರೊ ಫೈನಾನ್ಸ್ ಕಂಪನಿಗಳಿದ್ದು (ಎಂಎಫ್‌ಐ), ₹36 ಸಾವಿರ ಕೋಟಿ ವಹಿವಾಟು ನಡೆಸುತ್ತಿವೆ. 63 ಲಕ್ಷ ಗ್ರಾಹಕರಿಗೆ ಕಿರು ಸಾಲ ನೀಡಿವೆ’ ಎಂದು ಮೈಕ್ರೊ ಫೈನಾನ್ಸ್ ಇಂಡಸ್ಟ್ರಿ ನೆಟ್‌ವರ್ಕ್ (ಎಂಎಫ್‌ಐಎನ್) ಒಕ್ಕೂಟದ ದಕ್ಷಿಣ ವಲಯದ ಉಪಾಧ್ಯಕ್ಷ ಎಂ.ಎಸ್. ಮಂಜುನಾಥ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡಿದ್ದ ಅವರು, ಮೈಕ್ರೊ ಫೈನಾನ್ಸ್‌ಗಳ ಕಾರ್ಯವೈಖರಿ ಬಗ್ಗೆ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರಿಗೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಿವಾನಂದ ಪಾಟೀಲ, ‘ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಯಮ ಪ್ರಕಾರ ಕಂಪನಿಗಳು ಕೆಲಸ ಮಾಡುತ್ತಿಲ್ಲ. ಜನರಿಗೆ ಕಿರುಕುಳ ನೀಡುತ್ತಿದ್ದಾರೆ. ಸರ್ಕಾರಕ್ಕೂ ಕೆಟ್ಟ ಹೆಸರು ಬರುತ್ತಿದೆ. ಫೈನಾನ್ಸ್ ಕಂಪನಿಯವರು ಅಕ್ರಮವಾಗಿ ಹಣ ವರ್ಗಾವಣೆಯಲ್ಲಿ ತೊಡಗಿದ್ದಾರೆ. ಹೀಗಾಗಿ, ಪಿಎಂಎಲ್‌ಎ (ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ) ಕಾಯ್ದೆಯಡಿ ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳಿ. ಅದಕ್ಕೂ ಮುನ್ನ ಫೈನಾನ್ಸ್‌ಗಳ ವರ್ಷವಾರು ಲೆಕ್ಕ ಹಾಗೂ ಹಣದ ವಹಿವಾಟಿನ ಬಗ್ಗೆ ಸಮಗ್ರ ವರದಿ ಸಲ್ಲಿಸಿ’ ಎಂದು ಜಿಲ್ಲಾಧಿಕಾರಿಗೆ ಸೂಚಿಸಿದರು.

ಶೇ 12ರಿಂದ ಶೇ 24ರಷ್ಟು ಬಡ್ಡಿ: ‘ಫೈನಾನ್ಸ್ ಕಂಪನಿಗಳ ಬಡ್ಡಿ ನಿರ್ಧರಿಸಲು ಸ್ಪಷ್ಟ ನಿಯಮಗಳಿಲ್ಲ. ಆದರೆ, ಶೇ 12ರಿಂದ 24ರಷ್ಟು ಬಡ್ಡಿ ವಿಧಿಸುತ್ತಿವೆ. ಕನಿಷ್ಠ ಮತ್ತು ಗರಿಷ್ಠ ಬಡ್ಡಿ ಮಿತಿ ಇಲ್ಲ. ಬಡ್ಡಿಯ ವಿವರ ಕಾಲ ಕಾಲಕ್ಕೆ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ. ಇದಕ್ಕೆ ಗ್ರಾಹಕರು ಗಮನಿಸಬೇಕು’ ಎಂದು ಎಂ.ಎಸ್. ಮಂಜುನಾಥ್ ಹೇಳಿದರು.

‘₹3 ಲಕ್ಷಕ್ಕಿಂತ ಕಡಿಮೆ ಆದಾಯ ಇರುವ ಕುಟುಂಬಗಳ ಸದಸ್ಯರಿಗೆ ಸಾಲ ನೀಡಲು ಕಂಪನಿಗಳಿವೆ. ಹಾವೇರಿ ಜಿಲ್ಲೆಯಲ್ಲಿ 26 ಕಂಪನಿಗಳ ಕಚೇರಿಗಳಿದ್ದು, ₹1,200 ಕೋಟಿ ವಹಿವಾಟಿದೆ. 1.97 ಲಕ್ಷ ಗ್ರಾಹಕರು ಜಿಲ್ಲೆಯಲ್ಲಿದ್ದಾರೆ’ ಎಂದರು.

‘ಕಂಪನಿಗಳ ಉಸ್ತುವಾರಿ ಜವಾಬ್ದಾರಿಯನ್ನು ಆರ್‌ಬಿಐ ವತಿಯಿಂದ ನಮ್ಮ ಒಕ್ಕೂಟಕ್ಕೆ ವಹಿಸಲಾಗಿದೆ. ಕರ್ನಾಟಕ ಮತ್ತು ಕೇರಳ ರಾಜ್ಯದ ಉಸ್ತುವಾರಿ ನಾನು ವಹಿಸಿಕೊಂಡಿದ್ದೇನೆ. ಎರಡೂ ರಾಜ್ಯದಲ್ಲಿರುವ ಮೈಕ್ರೊ ಫೈನಾನ್ಸ್‌ಗಳ ಹಣಕಾಸು ವಹಿವಾಟು ಹಾಗೂ ಅವುಗಳಿಗೆ ಸಂಬಂಧಪಟ್ಟ ದೂರುಗಳು ಬಂದರೆ ಎಲ್ಲವನ್ನೂ ವಿಚಾರಣೆ ನಡೆಸಿ ಪ್ರತಿ ಮೂರು ತಿಂಗಳಿಗೊಮ್ಮೆ ಆರ್‌ಬಿಐಗೆ ವರದಿ ಸಲ್ಲಿಸುತ್ತೇವೆ’ ಎಂದು ತಿಳಿಸಿದರು.

‘ಯಾವುದೇ ಪುರಾವೆ ಇಲ್ಲದೇ ಕಂಪನಿಗಳು ಸಾಲ ನೀಡುತ್ತಿವೆ. ಗುಂಪಿನ ಸಭೆಗಳ ಮೂಲಕವಷ್ಟೇ ಸಾಲ ವಸೂಲು ಮಾಡುವ ನಿಯಮವಿದೆ. ಆದರೆ, ಒಬ್ಬರೇ ಗ್ರಾಹಕರಿಗೆ ಹಲವು ಕಂಪನಿಗಳು ಸಾಲ ನೀಡುತ್ತವೆ. ಪ್ರತಿನಿಧಿಗಳು ಕಿರುಕುಳ ನೀಡುತ್ತಾರೆ. ವಸೂಲಿ ನೆಪದಲ್ಲಿ ದೌರ್ಜನ್ಯ ನಡೆಯುತ್ತಿದೆ. ದುಪ್ಪಟ್ಟು ಬಡ್ಡಿ ವಸೂಲಿ ಮಾಡುವುದು ಸೇರಿದಂತೆ ಹಲವು ದೂರುಗಳು ಇತ್ತೀಚಿನ ದಿನಗಳಲ್ಲಿ ಕೇಳಿಬಂದಿವೆ. ಈ ಎಲ್ಲ ದೂರುಗಳ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ. ಆರ್‌ಬಿಐಗೂ ವರದಿ ಸಲ್ಲಿಸಲಾಗುವುದು’ ಎಂದು ಅವರು ಹೇಳಿದರು.

‘ಕೋವಿಡ್ ಲಾಕ್‌ಡೌನ್ ನಂತರ, ಒಬ್ಬ ವ್ಯಕ್ತಿಗೆ ನಾಲ್ಕು ಕಂಪನಿಗಳು ಸಾಲ ನೀಡಬೇಕೆಂಬ ನಿಯಮವಿತ್ತು. ಇದರಲ್ಲಿ ಸಾಕಷ್ಟು ನ್ಯೂನತೆ ಇದ್ದವು. ಹೀಗಾಗಿ, 2024ರ ಜುಲೈ ನಂತರ ಒಬ್ಬರಿಗೆ ಮೂರು ಕಂಪನಿಗಳು ಗರಿಷ್ಠ ₹2 ಲಕ್ಷ ಮಾತ್ರ ಸಾಲ ನೀಡಬೇಕೆಂಬ ನಿಯಮ ರೂಪಿಸಲಾಗಿದೆ’ ಎಂದರು.

ಆರ್‌ಬಿಐ ನಿಯಮ ಪಾಲಿಸದೆ ಯಾರೊಬ್ಬರೂ ಸಾಲ ವಾಪಸು ತುಂಬುವುದಿಲ್ಲ. ಇದೊಂದು ಬಗೆಹರಿಯದ ಸಮಸ್ಯೆ. ಫೈನಾನ್ಸ್ ಕಂಪನಿಗಳನ್ನೇ ಬಂದ್ ಮಾಡಿ
ಶ್ರೀನಿವಾಸ್ ಮಾನೆ
ಹಾನಗಲ್ ಶಾಸಕ

ಗರಿಷ್ಠ ಶೇ 14ರಷ್ಟು ಬಡ್ಡಿ ವಿಧಿಸಬೇಕೆಂಬ ನಿಯಮವಿದೆ. ಆದರೆ, ಫೈನಾನ್ಸ್ ಕಂಪನಿಯವರು ತಮ್ಮಿಷ್ಟದಂತೆ ಬಡ್ಡಿ ವಿಧಿಸಿ ಜನರ ಸುಲಿಗೆ ಮಾಡುತ್ತಿದ್ದಾರೆ
ಯಾಸೀರ ಅಹಮದ್ ಖಾನ್ ಪಠಾಣ
ಶಿಗ್ಗಾವಿ ಶಾಸಕ

ಕಂಪನಿಗಳು ನಿಯಮ ಮೀರಿದರೆ, ಎಂಎಫ್‌ಐಎನ್ ಪ್ರತಿನಿಧಿಗಳೇ ಠಾಣೆಗೆ ದೂರು ನೀಡಬೇಕು. ಆದರೆ, ಇವರು ಕೊಡುತ್ತಿಲ್ಲ. ಕರ್ತವ್ಯದಿಂದ ನುಣುಚಿಕೊಳ್ಳುತ್ತಿದ್ದಾರೆ
ಅಂಶುಕುಮಾರ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಕಂಪನಿಗಳಿಗೆ ಹೆದರಿ ಜನರು ಊರು ಬಿಡುತ್ತಿದ್ದಾರೆ. ಇದಕ್ಕೆ ಯಾರು ಹೊಣೆ? ಕಂಪನಿ ವಿರುದ್ಧ ಕ್ರಮ ಕೈಗೊಂಡು, ಊರು ಬಿಟ್ಟವರನ್ನು ವಾಪಸು ಕರೆತರಬೇಕು
ಬಸವರಾಜ ಶಿವಣ್ಣನವರ
ಬ್ಯಾಡಗಿ ಶಾಸಕ

‘ಕಿರುಕುಳದಿಂದ ಮೂವರ ಆತ್ಮಹತ್ಯೆ’

‘ಮೈಕ್ರೊ ಫೈನಾನ್ಸ್ ಕಿರುಕುಳದಿಂದ 12 ಮಂದಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ವರದಿಗಳು ಬಂದಿದ್ದವು. ಪರಿಶೀಲನೆ ನಡೆಸಿದಾಗ, ಮೂರು ಪ್ರಕರಣಗಳು (ಮೈಸೂರು, ಚಾಮರಾಜನಗರ, ರಾಮನಗರ) ನಿಜವಾಗಿವೆ. ಈ ಬಗ್ಗೆ ಆರ್‌ಬಿಐಗೆ ವರದಿ ನೀಡಲಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಮವಾಗುತ್ತದೆ’ ಎಂದು ಎಂ.ಎಸ್. ಮಂಜುನಾಥ್ ತಿಳಿಸಿದರು.

‘ನಿಯಮ ಉಲ್ಲಂಘನೆ ಮಾಡಿದ್ದ ಅಶೀರ್ವಾದ ಸೇರಿ ಎರಡೂ ಕಂಪನಿಗಳಿಗೆ ಸಾಲ ನೀಡುವುದನ್ನು ನಿರ್ಬಂಧಿಸಲಾಗಿದೆ. ಸಾಲ ವಸೂಲಾತಿ ವಿಚಾರವಾಗಿ ಆಗಾಗ ಗೊಂದಲ ಉಂಟಾಗುತ್ತಿದ್ದು, ಈ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜೊತೆ ಚರ್ಚಿಸಲಾಗುತ್ತಿದೆ’ ಎಂದರು.

ವಸೂಲಿಗೆ ಕಿರುಕುಳ: ಕ್ರಿಮಿನಲ್ ಪ್ರಕರಣ

ಮೈಕ್ರೊ ಫೈನಾನ್ಸ್ ಕಂಪನಿಗಳಿಗೆ ಎಚ್ಚರಿಕೆ ನೀಡಿದ ಸಚಿವ ಕೃಷ್ಣ ಬೈರೇಗೌಡ



ಜಿಲ್ಲಾಧಿಕಾರಿಗಳ ಸಭೆಯಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಕ್ರೊ ಫೈನಾನ್ಸ್ ಕಂಪನಿಗಳು ಸಾಲ ಮರುಪಾವತಿ ವಿಚಾರದಲ್ಲಿ ಜನರಿಗೆ ಕಿರುಕುಳ ನೀಡಿದರೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಎಂದು ಸಚಿವ ಕೃಷ್ಣಬೈರೇಗೌಡ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಸೋಮವಾರ ನಡೆಸಿದ ಜಿಲ್ಲಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ರಾಜ್ಯದಲ್ಲಿ ಮೈಕ್ರೊ ಫೈನಾನ್ಸ್ ಕಂಪನಿಗಳು ₹59,000 ಕೋಟಿ ಸಾಲ ನೀಡಿವೆ. ಅಲ್ಲದೇ, ತಮ್ಮ ಸಾಮರ್ಥ್ಯ ವಿಸ್ತರಿಸಿಕೊಳ್ಳುವ ಸಲುವಾಗಿ ಆರ್‌ಬಿಐ ಮಾರ್ಗಸೂಚಿಯನ್ನು ಉಲ್ಲಂಘಿಸಿ ಸಾಲ ನೀಡುತ್ತಿವೆ. ಸಾಲ ನೀಡುವಾಗ ಸಾಲ ಪಡೆದವರ ಆರ್ಥಿಕ ಸಾಮರ್ಥ್ಯವನ್ನು ಕಡೆಗಣಿಸುತ್ತಿರುವುದು ಅಹಿತಕರ ಪ್ರಸಂಗಗಳಿಗೆ ಕಾರಣವಾಗುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

‘ಒಬ್ಬ ವ್ಯಕ್ತಿಗೆ ₹2 ಲಕ್ಷಕ್ಕಿಂತ ಹೆಚ್ಚು ಸಾಲ ನೀಡಬಾರದು ಎಂದು ಆರ್‌ಬಿಐ ಮಾರ್ಗಸೂಚಿ ಇದೆ. ಆದರೆ, ಇದನ್ನು ಯಾರೂ ಅನುಸರಿಸುತ್ತಿಲ್ಲ. ₹5 ಲಕ್ಷದಿಂದ ₹6 ಲಕ್ಷದಷ್ಟು ಸಾಲ ನೀಡಲಾಗುತ್ತಿದೆ. ಈ ಮೂಲಕ ಬಡವರನ್ನು ಸಾಲದ ಸುಳಿಗೆ ಸಿಲುಕಿಸಲಾಗುತ್ತಿದೆ. ಆದ್ದರಿಂದ, ಜಿಲ್ಲಾಧಿಕಾರಿ, ಎಸ್‌ಪಿಗಳು ಈ ವಾರದೊಳಗೆ ಮೈಕ್ರೊ ಫೈನಾನ್ಸ್ ಕಂಪನಿಗಳ ಮುಖ್ಯಸ್ಥರ ಜತೆ ಸಭೆ ನಡೆಸಲು ಸೂಚಿಸಲಾಗಿದೆ’ ಎಂದರು.

‘ಇಂತಹ ಕಂಪನಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಕೇಂದ್ರ ಸರ್ಕಾರ ಯಾವುದೇ ವಿಶೇಷ ಅಧಿಕಾರ ನೀಡಿಲ್ಲ. ಆದರೆ, ರಾಜ್ಯ ಸರ್ಕಾರವೇ ತನ್ನ ಅಧಿಕಾರದ ಮಿತಿಯಲ್ಲಿ ಬೇರೆ ಬೇರೆ ಕಾನೂನುಗಳ ಮೂಲಕ ಅಕ್ರಮಗಳಿಗೆ ಕಡಿವಾಣ ಹಾಕಲಿದೆ’ ಎಂದು ಅವರು ತಿಳಿಸಿದರು.

‘ಸರ್ಕಾರದ ಪಾಪದಿಂದ ಆತ್ಮಹತ್ಯೆಗೆ ಶರಣು’

ಬೆಂಗಳೂರು: ‘ಕಾಂಗ್ರೆಸ್ ಸರ್ಕಾರ ನಿಗಮಗಳ ಮೂಲಕ ಸಾಲ ನೀಡದ ಕಾರಣ, ಜನರು ಅನಿವಾರ್ಯವಾಗಿ ಮೈಕ್ರೊ ಫೈನಾನ್ಸ್ ಕಂಪನಿಗಳ ಮೊರೆ ಹೋಗಿದ್ದಾರೆ. ಸರ್ಕಾರದ ಈ ಪಾಪದಿಂದ ಜನರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಸರ್ಕಾರ ಮಾಡಿದ ಪಾಪದಿಂದಾಗಿ ಜನರು ಮೈಕ್ರೊ ಫೈನಾನ್ಸ್‌ನಲ್ಲಿ ಸಾಲ ಪಡೆಯುತ್ತಿದ್ದಾರೆ’ ಎಂದರು.

ವಿವಿಧ ನಿಗಮಗಳಿಗೆ ಬಿಜೆಪಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ಮತ್ತು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಮಾಹಿತಿಯನ್ನು ತೆರೆದಿಟ್ಟ ಅಶೋಕ, ‘ಕಾಂಗ್ರೆಸ್ ಸರ್ಕಾರ ಎಲ್ಲ ನಿಗಮಗಳಿಗೆ ಒಟ್ಟು ₹1,055 ಕೋಟಿ ಕಡಿಮೆ ಅನುದಾನ ನೀಡಿದೆ. ಈ ಹಣದಲ್ಲಿ ಜನರಿಗೆ ಸಾಲ ನೀಡಬಹುದಿತ್ತು’ ಎಂದರು.

‘ಮೈಕ್ರೊ ಫೈನಾನ್ಸ್‌ನ ಬಡ್ಡಿ ದಂಧೆಯಲ್ಲಿ ರೌಡಿಗಳು ಅವರನ್ನ ಸುಮ್ಮನಿದ್ದಾರೆ. ಕಾಂಗ್ರೆಸ್ ಸರ್ಕಾರದಿಂದಾಗಿ ಈ ರೌಡಿಗಳಿಗೆ ಉದ್ಯೋಗ ಸಿಕ್ಕಿದೆ. ಬಡವರು ಸಾಲ ಮಾಡಿದರೆ ಮನೆ ಬಿಟ್ಟು ಹೊರಡಬೇಕಾಗಿದೆ. ಜನರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರ ಸಾಲ ನೀಡುತ್ತಿತ್ತು’ ಎಂದರು.

‘ಪೊಲೀಸರ ರಕ್ಷಣೆಯಲ್ಲೇ ತೊಂದರೆ’

ಮೈಸೂರು: ‘ಫೈನಾನ್ಸ್ ಕಂಪನಿಗಳು ಪೊಲೀಸರ ರಕ್ಷಣೆ ಪಡೆದೇ ಸಾಲಗಾರರಿಗೆ ತೊಂದರೆ ಕೊಡುತ್ತಿವೆ ಎಂಬ ಮಾಹಿತಿ ಇದೆ. ಆದರೆ, ನಾನು ಪೊಲೀಸರ ಮೇಲೆ ಆರೋಪ ಮಾಡುವುದಿಲ್ಲ. ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿರುವುದರಿಂದಲೇ ಇದೆಲ್ಲವೂ ಆಗುತ್ತಿದೆ. ಜನರಿಗೆ ಕಿರುಕುಳ ನೀಡುವ ಪ್ರಕರಣ ನಡೆಯುತ್ತಿವೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ದೂರಿದರು.

ಇಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿ, ‘ನೋಂದಾಯಿತ ಮೈಕ್ರೊ ಫೈನಾನ್ಸ್ ಕಂಪನಿಗಳು ಮಾತ್ರವೇ ಆರ್‌ಬಿಐ ಮಾರ್ಗಸೂಚಿಗೆ ಒಳಪಡುತ್ತವೆ ಎಂಬುದನ್ನು ಸರ್ಕಾರ ಗಮನಿಸಬೇಕು. ಸಾಲಕ್ಕೆ ಇಂತಿಷ್ಟೇ ಬಡ್ಡಿ ವಿಧಿಸಬೇಕು ಎಂಬುದು ಆರ್‌ಬಿಐ ಮಾರ್ಗಸೂಚಿಯಲ್ಲಿದೆ. ಆದರೆ, ನೋಂದಾಯಿಸದ ಕಂಪನಿಗಳು ಸಾಕಷ್ಟಿದ್ದು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು’ ಎಂದು ಹೇಳಿದರು.

ಕಾಣೆಯಾದ ಶಿಕ್ಷಕಿ: ಆತ್ಮಹತ್ಯೆ ಶಂಕೆ

ಪ್ರಜಾವಾಣಿ ವಾರ್ತೆ



ಪುಷ್ಪಲತಾ

ಹೊನ್ನಾಳಿ (ದಾವಣಗೆರೆ ಜಿಲ್ಲೆ): ಇಲ್ಲಿನ ದುರ್ಗಿಗುಡಿ ಪ್ರದೇಶದ ನಿವಾಸಿಯಾಗಿರುವ ಸರ್ಕಾರಿ ಶಾಲೆಯ ಶಿಕ್ಷಕಿಯೊಬ್ಬರು ಭಾನುವಾರ ಮಧ್ಯಾಹ್ನದಿಂದ ಕಾಣೆಯಾಗಿದ್ದು, ಫೈನಾನ್ಸ್ ಕಂಪನಿ ಸಾಲಗಾರರ ಕಿರುಕುಳದಿಂದ ಬೇಸತ್ತು ತುಂಗಭದ್ರಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಕುಟುಂಬದವರು ಶಂಕಿಸಿದ್ದಾರೆ.

ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲ್ಲೂಕಿನ ತುಮ್ಮಿನಕಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಪುಷ್ಪಲತಾ ಎಂ.ಟಿ. (46) ಕಾಣೆಯಾದವರು. ಇಲ್ಲಿನ ರಾಘವೇಂದ್ರ ಮಠದ ಬಳಿ ಸ್ಕೂಟಿ ಹಾಗೂ ಚಪ್ಪಲಿ ಬಿಟ್ಟು ಹೋಗಿದ್ದು, ಬಳಿಕ ನದಿಗೆ ಹಾರಿರಬಹುದು ಎಂದು ಸಿ.ಸಿ. ಟಿವಿ ಫೂಟೇಜ್‌ನಲ್ಲಿ ಪತ್ತೆಯಾಗಿದೆ.

‘ಮನೆ ಕಟ್ಟಿಸಲು ಫೈನಾನ್ಸ್ ಕಂಪನಿಯಿಂದ ₹40 ಲಕ್ಷ ಹಾಗೂ ₹20 ಲಕ್ಷಕ್ಕೂ ಸಾಲ ಮಾಡಿದ್ದೆವು. ಫೈನಾನ್ಸ್ ಕಂಪನಿಯವರು ಸಾಲ ಮರುಪಾವತಿಗೆ ಒತ್ತಾಯಿಸಿ ಮನೆ ಹಾಗೂ ಶಾಲೆಗೆ ಬಂದು ಕಿರುಕುಳ ನೀಡುತ್ತಿದ್ದರು. ಇದರಿಂದ ಬೇಸತ್ತು ಆತ್ಮಹತ್ಯೆಗೆ ಶರಣಾಗಿರಬಹುದು’ ಎಂದು ಪುಷ್ಪಲತಾ ಅವರ ಪತಿ ಹಾಲೇಶ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ಸಾಲ ಮರುಪಾವತಿಗೆ ಮನೆಗೆ ತೆರಳಿದ್ದಾಗ ಸಾಲ ಪಡೆದವರೇ ಹಲ್ಲೆ ನಡೆಸಿದ್ದಾರೆ’ ಎಂದು ಪುಷ್ಪಲತಾ ದಂಪತಿ ವಿರುದ್ಧ ಹೊನ್ನಾಳಿ ಪೊಲೀಸ್ ಠಾಣೆಗೆ ಫೈನಾನ್ಸ್ ಕಂಪನಿಯವರು 20 ದಿನದ ಹಿಂದೆ ದೂರು ನೀಡಿದ್ದರು. ಎರಡೂ ಕಡೆಯವರನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದ ಬಳಿಕ ಫೈನಾನ್ಸ್ ಕಂಪನಿಯವರು ದೂರು ವಾಪಸ್ ಪಡೆದಿದ್ದರು. ‘ಸಾಲದ ಶೂಲದಿಂದ ಹೊರಬರಲು ದಂಪತಿಯು ಮನೆ ಮಾರಾಟಕ್ಕೂ ಮುಂದಾಗಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಾಲೇಶ್ ಅವರು ನೀಡಿದ ದೂರು ಆಧರಿಸಿ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಶಿಕ್ಷಕಿ ಕಾಣೆಯಾದ ಬಗ್ಗೆ ಪ್ರಕರಣ ದಾಖಲಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ, ಮುಳುಗು ತಜ್ಞರು ಸೋಮವಾರ ಸಂಜೆವರೆಗೂ ನದಿಯಲ್ಲಿ ಶೋಧ ಕಾರ್ಯ ನಡೆಸಿದ್ದು, ಪುಷ್ಪಲತಾ ಅವರು ಪತ್ತೆಯಾಗಿಲ್ಲ.

ಸಾಲಕ್ಕೂ ಮುನ್ನ ₹ 4.70 ಲಕ್ಷ ಇಎಂಐ ದಂಪತಿ ಧರಣಿ

ಪ್ರಜಾವಾಣಿ ವಾರ್ತೆ

ಹಾವೇರಿ: ‘₹40 ಲಕ್ಷ ಸಾಲ ನೀಡುವುದಾಗಿ ಹೇಳಿದ್ದ ಹಿಂದೂಜಾ ಹೌಸಿಂಗ್ ಫೈನಾನ್ಸ್ ಕಂಪನಿಯವರು, ನಮ್ಮಿಂದ ಮುಂಗಡವಾಗಿ ಪ್ರತಿ ತಿಂಗಳು ₹47 ಸಾವಿರದಂತೆ 10 ತಿಂಗಳಿಗೆ ಕ್ರಮವಾಗಿ ₹4.70 ಲಕ್ಷ ಇಎಂಐ ಕಟ್ಟಿಸಿಕೊಂಡಿದ್ದಾರೆ. ಆದರೆ, ಸಾಲ ಮಾತ್ರ ಮಂಜೂರು ಮಾಡಿಲ್ಲ’ ಎಂದು ಆರೋಪಿಸಿ ಸಂತ್ರಸ್ತ ದಂಪತಿ, ಕಂಪನಿಯ ಕಚೇರಿಯಲ್ಲಿ ಶನಿವಾರ ಧರಣಿ ನಡೆಸಿದರು.

ನಗರದ ಹಳೇ ಪಿ.ಬಿ.ರಸ್ತೆಯಲ್ಲಿರುವ ಕಂಪನಿಯ ಕಚೇರಿಗೆ ಸೋಮವಾರ ಬಂದಿದ್ದ ಗ್ರಾಹಕ ಶರಣಯ್ಯ ಮಹಾಂತಿನ ಮಠ ದಂಪತಿ, ಬ್ಯಾಂಕ್ ಖಾತೆಗೆ ಸಾಲ ಜಮೆ ಮಾಡುವಂತೆ ಒತ್ತಾಯಿಸಿದರು. ಅದಕ್ಕೆ ಸಿಬ್ಬಂದಿ ಸ್ಪಂದಿಸದಿದ್ದಾಗ, ಕಚೇರಿ ಪ್ರವೇಶ ದ್ವಾರದ ಬಳಿಯೇ ಧರಣಿ ಆರಂಭಿಸಿದರು. ಹಣ ಜಮೆ ಆಗುವವರೆಗೆ ಸ್ಥಳ ಬಿಟ್ಟು ಕದಲಲ್ಲ ಎಂದು ಪಟ್ಟು ಹಿಡಿದರು.

7 ಸಂಘಗಳ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ನಂಜನಗೂಡಿನಲ್ಲಿ ಇಬ್ಬರ ಆತ್ಮಹತ್ಯೆ



ಜಯಶೀಲ



ಕೃಷ್ಣಮೂರ್ತಿ

ನಂಜನಗೂಡು (ಮೈಸೂರು ಜಿಲ್ಲೆ): ತಾಲ್ಲೂಕಿನ ಮಲ್ಲುಂಡಿ ಗ್ರಾಮದಲ್ಲಿ ಕೃಷ್ಣಮೂರ್ತಿ (32) ಹಾಗೂ ಅಂಬಳೆ ಗ್ರಾಮದಲ್ಲಿ ಜಯಶೀಲ (53) ಎಂಬುವವರು ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದು, ಒಟ್ಟು ಏಳು ಮೈಕ್ರೊ ಫೈನಾನ್ಸ್ ಕಂಪನಿಗಳ ವಿರುದ್ಧ ಹುಲ್ಲಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೃಷ್ಣಮೂರ್ತಿಗೆ ಸಾಲ ನೀಡಿದ್ದ ಶ್ರೀ ಧರ್ಮಸ್ಥಳ ಮಹಿಳಾ ಸ್ವಸಹಾಯ ಸಂಘ, ಬಿಎಸ್‌ಎಸ್ ಸಂಘ, ಗ್ರಾಮೀಣ ಒಕ್ಕೂಟ ಸಂಘ, ಐಡಿಎಫ್‌ಸಿ ಸಂಘ, ಉಜ್ಜೀವನ್ ಸಂಘದ ವಿರುದ್ಧ ಪ್ರಕರಣ ದಾಖಲಾಗಿದೆ. ಜಯಶೀಲ ಅವರಿಗೆ ಸಾಲ ನೀಡಿದ್ದ ಫ್ಯೂಷನ್ ಸ್ಟಾರ್ ಫೈನಾನ್ಸ್ ಹಾಗೂ ಐಐಎಫ್‌ಎಲ್ ಸಮಸ್ತ ಫೈನಾನ್ಸ್ ವಿರುದ್ಧ ಪ್ರಕರಣ ದಾಖಲಾಗಿದೆ.

‘ಪತಿಯು ಮೈಕ್ರೊ ಫೈನಾನ್ಸ್ ಕಂಪನಿಗಳಿಂದ ಪಡೆದ ಸಾಲ ತೀರಿಸಲು ಒಡವೆ, ಬೈಕ್ ಮಾರಿದ್ದರು. ಈ ಬಾರಿ ಪಾವತಿಸದಿದ್ದರೆ ಮನೆ ಜಪ್ತಿ ಮಾಡುವುದಾಗಿ ಫೈನಾನ್ಸ್ ಸಿಬ್ಬಂದಿ ಬೆದರಿಕೆ ಹಾಕಿದ್ದರು. ಸೋಮವಾರದ ಸಾಲ ಪಾವತಿಸಬೇಕಿದ್ದು, ಹಣ ಹೊಂದಿಸಲು ಸಾಧ್ಯವಾಗಿಲ್ಲವೆಂದು ಬೇಸರದಲ್ಲಿದ್ದರು’ ಎಂದು ಕೃಷ್ಣಮೂರ್ತಿ ಪತ್ನಿ ಲತಾ ದೂರಿನಲ್ಲಿ ಆರೋಪಿಸಿದ್ದಾರೆ.

‘ತಾಯಿ ಮನೆ ಕಟ್ಟಲು ಫ್ಯೂಷನ್ ಸ್ಟಾರ್ ಫೈನಾನ್ಸ್‌ನಿಂದ ₹3 ಲಕ್ಷ ಸಾಲ ಪಡೆದಿದ್ದರು. ಐಐಎಫ್‌ಎಲ್ ಸಮಸ್ತ ಫೈನಾನ್ಸ್‌ನಲ್ಲಿ ದಿನ ಖರೀದಿಗಾಗಿ ₹60 ಸಾವಿರ ಸಾಲ ಪಡೆದಿದ್ದರು. ಸಾಲ ತೀರಿಸುವುದು ಕಷ್ಟವಾದ ಎನ್ನುತ್ತಿದ್ದರು’ ಎಂದು ದೂರಿನಲ್ಲಿ ಅವರ ಮಗ ರಾಜೇಶ್ ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜಾಣರು ಗುದ್ದಾಡಿದರೆ ಚರ್ಚೆ ಆಗುತ್ತದೆ. ದಡ್ಡರು ಚರ್ಚೆ ಮಾಡಿದರೆ ಗುದ್ದಾಟ ಆಗುತ್ತದೆ.

-ಬೀಚಿ

ಧ್ವನಿವರ್ಧಕಗಳಿಂದ ಆಗುವ ಮಾಲಿನ್ಯ ಗೊಂದಲ ಪರಿಹರಿಸಿದ ಕೋರ್ಟ್ ಆದೇಶ

ಧ್ವನಿವರ್ಧಕಗಳ ಬಳಕೆಯು ಯಾವುದೇ ಧರ್ಮದ ಅತ್ಯಗತ್ಯ ಆಚರಣೆಗಳ ಭಾಗ ಅಲ್ಲ ಎಂದು ಬಾಂಬೆ ಹೈಕೋರ್ಟ್ ಆದೇಶಿಸಿದೆ. ಕಿವಿಗಡಚಿಕ್ಕುವ ಶಬ್ದದಿಂದ ಮುಕ್ತವಾಗಿ ಬದುಕುವ ಹಕ್ಕು ಜನಸಾಮಾನ್ಯರಿಗೆ ಇದೆ ಎಂಬುದನ್ನು ಕೋರ್ಟ್ ಈ ಆದೇಶದ ಮೂಲಕ ಸ್ಪಷ್ಟಪಡಿಸಿದೆ. ದಿನನಿತ್ಯದ ಬದುಕಿನಲ್ಲಿ ಗದ್ದಲ ಹೆಚ್ಚಾಗಿದೆ, ಗದ್ದಲವು ಧಾರ್ಮಿಕ ಸ್ಥಳಗಳಲ್ಲಿ ನಡೆಯುವ ಆಜಾನ್, ಭಜನೆಗೆ ಧ್ವನಿವರ್ಧಕ ಬಳಸುತ್ತಿರುವ ಕಾರಣದಿಂದಾಗಿಯೂ ಹೆಚ್ಚಾಗಿದೆ. ಇವೆಲ್ಲವನ್ನೂ ಧಾರ್ಮಿಕವಾಗಿ ಅಗತ್ಯವಾಗಿರುವ ಆಚರಣೆಗಳು ಎಂಬ ಹೆಸರಿನಲ್ಲಿ ಸಮರ್ಥಿಸಿಕೊಳ್ಳಲಾಗುತ್ತಿದೆ. ಆದರೆ, ಮುಂಬೈನ ನಿವಾಸಿಗಳು ಸಲ್ಲಿಸಿದ್ದ ಎರಡು ಅರ್ಜಿಗಳ ವಿಚಾರಣೆ ನಡೆಸಿದ ಹೈಕೋರ್ಟ್ ಈ ವಾದವನ್ನು ತಳ್ಳಿಹಾಕಿದೆ. ಸನಿಹದ ಮಸೀದಿಯ ಧ್ವನಿವರ್ಧಕದಿಂದ ಬರುವ ಆಜಾನ್ ಸದ್ದು ಶಬ್ದಮಾಲಿನ್ಯ (ನಿಯಂತ್ರಣ ಮತ್ತು ನಿಗ್ರಹ) ನಿಯಮಗಳನ್ನು ಉಲ್ಲಂಘಿಸುವಂತಿದೆ ಎಂದು ಅರ್ಜಿದಾರರು ದೂರಿದ್ದರು. ಅರ್ಜಿಗಳನ್ನು ಮಾನ್ಯ ಮಾಡಿರುವ ನ್ಯಾಯಾಲಯವು ನಿಯಮಗಳ ಉಲ್ಲಂಘನೆ ಆದಲ್ಲಿ ಕಾನೂನಿನ ಪ್ರಕಾರ ಕ್ರಮ ಜರುಗಿಸಬೇಕು ಎಂದು ಸೂಚನೆ ನೀಡಿದೆ. ಶಬ್ದಮಾಲಿನ್ಯವು ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತಿದೆ ಎಂದು ಹೇಳಿರುವ ನ್ಯಾಯಾಲಯವು ಧ್ವನಿವರ್ಧಕ ಬಳಕೆಗೆ ಅವಕಾಶ ನೀಡದೇ ಇರುವುದು ಧಾರ್ಮಿಕ ಹಕ್ಕುಗಳ ನಿರಾಕರಣೆ ಅಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಧ್ವನಿವರ್ಧಕಗಳ ಬಳಕೆಗೆ ನಿರ್ಬಂಧ ವಿಧಿಸುವುದು ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾಗಿದೆ, ಇಂತಹ ನಿರ್ಬಂಧವು ಸಂವಿಧಾನದ 19ನೇ ವಿಧಿ ಅಥವಾ 25ನೇ ವಿಧಿ ಅಡಿಯಲ್ಲಿನ ಹಕ್ಕುಗಳನ್ನು ಉಲ್ಲಂಘಿಸುವುದಿಲ್ಲ ಎಂದೂ ಹೇಳಿದೆ.



ತೀವ್ರ ಗತಿಯಲ್ಲಿ ನಗರೀಕರಣಕ್ಕೆ ತುತ್ತಾಗಿರುವ ಸಮಾಜದಲ್ಲಿ ಧ್ವನಿವರ್ಧಕಗಳ ಬಳಕೆ, ಶಬ್ದಮಾಲಿನ್ಯದಿಂದ ಆಗುವ ಸಮಸ್ಯೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಗುರುತಿಸುವ ಕೆಲಸ ಆಗಬೇಕು

ಶಬ್ದಮಾಲಿನ್ಯವು ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡಬಲ್ಲದು. ಈ ಮಾಲಿನ್ಯವು ದೇಶದಲ್ಲಿ ಹೆಚ್ಚಳವಾಗುತ್ತಿದೆ. ಪರಿಸರವಾದಿಗಳು ಹಾಗೂ ಸಾರ್ವಜನಿಕ ಆರೋಗ್ಯದ ಬಗ್ಗೆ ಕಾಳಜಿ ಹೊಂದಿರುವ ವ್ಯಕ್ತಿಗಳು ಈ ವಿಷಯವನ್ನು ಹಲವು ವರ್ಷಗಳಿಂದ ಹೇಳುತ್ತಿದ್ದಾರೆ. ಶಬ್ದಮಾಲಿನ್ಯವು ಹೆಚ್ಚಾದಾಗ ವಿದ್ಯಾರ್ಥಿಗಳಿಗೆ, ಹಿರಿಯ ನಾಗರಿಕರಿಗೆ ಮತ್ತು ಅನಾರೋಗ್ಯಕ್ಕೆ ತುತ್ತಾದವರಿಗೆ ತೊಂದರೆ ಆಗುತ್ತದೆ. ಆಜಾನ್, ಭಜನೆ, ಸಾರ್ವಜನಿಕ ವೇದಿಕೆಗಳಿಂದ ಮಾಡುವ ಭಾಷಣಗಳಲ್ಲಿ ಧ್ವನಿವರ್ಧಕ ಬಳಕೆ... ಇಂಥವೆಲ್ಲ ಶಬ್ದಮಾಲಿನ್ಯಕ್ಕೆ ಕಾರಣವಾಗುತ್ತಿವೆ. ಶಬ್ದಮಾಲಿನ್ಯವನ್ನು ತಡೆಯುವ ಉದ್ದೇಶದಿಂದ 2020ರಲ್ಲಿ ರೂಪಿಸಿದ ನಿಯಮಗಳನ್ನು ಮತ್ತೆ ಮತ್ತೆ ಉಲ್ಲಂಘಿಸಲಾಗಿದೆ. ಈ ಬಗೆಯ ಉಲ್ಲಂಘನೆಗಳಿಗೆ ಧಾರ್ಮಿಕ ಕಾರಣಗಳನ್ನು ಉಲ್ಲೇಖಿಸಲಾಗಿದೆ. ಆದರೆ ಈಗ ಕಾನೂನು ಏನು ಎಂಬುದನ್ನು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಧ್ವನಿವರ್ಧಕಗಳು ಆಧುನಿಕ ಜಗತ್ತಿನ ಅನ್ವೇಷಣೆ. ಅವುಗಳ ಬಳಕೆಯು ಧಾರ್ಮಿಕ ಸ್ಥಳಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ವ್ಯಾಪಕವಾಗಿರುವುದು ಕೆಲವು ದಶಕಗಳ ಈಚಿನ ಬೆಳವಣಿಗೆ. ಅವು ಶತಮಾನಗಳಷ್ಟು ಹಳೆಯದಾದ ಧರ್ಮಗಳ ಅಗತ್ಯ ಆಚರಣೆಯ ಭಾಗವಾಗಲು ಸಾಧ್ಯವಿಲ್ಲ. ಭಾಷಣಗಳ ಸಂದರ್ಭದಲ್ಲಿ ಹಾಗೂ ಕೆಲವು ಘೋಷಣೆಗಳನ್ನು ಕೂಗುವಾಗ ಧ್ವನಿವರ್ಧಕಗಳನ್ನು ಬಳಸುವುದನ್ನು ರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳು ಕಡಿಮೆ ಮಾಡಬೇಕು. ರಾಜಕಾರಣ ಮತ್ತು ಧರ್ಮಕ್ಕೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳನ್ನು ನಡೆಸುವುದು ಜನರನ್ನು ಮೆಚ್ಚಿಸುವ ಉದ್ದೇಶದಿಂದ. ಆದರೆ ಭಾರಿ ಸದ್ದು-ಗದ್ದಲದೊಂದಿಗೆ ಆ ಕೆಲಸ ಮಾಡುತ್ತಿರುವುದು ವಿಷಾದಕರ. ಕೆಲವು ಮೆರವಣಿಗೆಗಳ ಸಂದರ್ಭದಲ್ಲಿ ಬಳಕೆಯಾಗುವ ಧ್ವನಿವರ್ಧಕಗಳು ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಸೃಷ್ಟಿಸಿರುವುದೂ ಇದೆ. ತೀವ್ರ ಗತಿಯಲ್ಲಿ ನಗರೀಕರಣಕ್ಕೆ ತುತ್ತಾಗಿರುವ ಸಮಾಜದಲ್ಲಿ ಧ್ವನಿವರ್ಧಕಗಳ ಬಳಕೆ, ಶಬ್ದಮಾಲಿನ್ಯದಿಂದ ಆಗುವ ಸಮಸ್ಯೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಗುರುತಿಸುವ ಕೆಲಸ ಆಗಬೇಕು. ಗ್ರಾಮಗಳಲ್ಲಿಯೂ ಈ ಸಮಸ್ಯೆ ಇದೆ. ಧಾರ್ಮಿಕ ಸ್ಥಳಗಳನ್ನು ನಿರ್ವಹಿಸುವವರು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗದ್ದಲ ಸೃಷ್ಟಿಸುವವರು ಸಾರ್ವಜನಿಕರ ಮಾನಸಿಕ ಮತ್ತು ದೈಹಿಕ ಆರೋಗ್ಯದ ಬಗ್ಗೆ ಆಲೋಚಿಸಬೇಕು. ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಪೊಲೀಸರು ಕ್ರಮ ಜರುಗಿಸಬೇಕು.

ದಿನದ ಟ್ವೀಟ್

ಕನ್ನಡವು ಕಿವಿಗೆ ದೂರವಾಗುತ್ತಿದೆ



ಬೆಂಗಳೂರಿನಲ್ಲಿ ಕನ್ನಡವು ಕಿವಿಗೆ ದೂರವಾಗುತ್ತಿದೆ. ಅದಕ್ಕೆ ನೀವು ಕನ್ನಡಿಗರಿಗೆ ಪರಿಹಾರದ ರೂಪದಲ್ಲಿ ಶಾಲು, ಬಾವುಟ, ಪ್ರತಿಮೆ ಕೊಡುತ್ತಿದ್ದೀರ ಅಷ್ಟೇ. ಎಚ್ಚರಿಕೆ ಕನ್ನಡಿಗ, ಹಿಂದಿ ಹೈಕಮಾಂಡ್ ಪಕ್ಷಗಳ ಗುರಿ ಕರ್ನಾಟಕದಲ್ಲಿ ನಾಲ್ಕು ಕೋಟಿ ವಲಸಿಗರನ್ನು ತುಂಬಿಸುವುದು.

ಎಸ್.ಶ್ಯಾಮ್ ಪ್ರಸಾದ್, ಪತ್ರಕರ್ತ

ಕಿಡಿನುಡಿ



ರಾಜ್ಯದಲ್ಲಿ ಏನೇ ನಡೆದರೂ ಅದಕ್ಕೆಲ್ಲಾ ಬಿಜೆಪಿ ಹಾಗೂ ಕೇಂದ್ರ ಸರ್ಕಾರವೇ ಕಾರಣ ಎಂದು ಕಾಂಗ್ರೆಸ್‌ನವರು ದೂರುತ್ತಿದ್ದಾರೆ. ಮಳೆ ಹೆಚ್ಚಾದರೂ ಕಡಿಮೆಯಾದರೂ ಅದಕ್ಕೂ ಕೇಂದ್ರ ಸರ್ಕಾರ ಹಾಗೂ ರಾಜ್ಯ ಬಿಜೆಪಿಯೇ ಕಾರಣ ಎನ್ನುತ್ತಾರೆ. ಇಂತಹ ಬಾಲಿಶ ಹೇಳಿಕೆ ನೀಡುವುದನ್ನು ಬಿಡಬೇಕು. ಅವರಿಗೆ ಜನ ಅಧಿಕಾರ ಕೊಟ್ಟಿರುವುದು ಒಳ್ಳೆಯ ಕೆಲಸಗಳನ್ನು ಮಾಡಲಿ ಅಂತ. ಅದನ್ನು ಬಿಟ್ಟು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಕಾಂಗ್ರೆಸ್ ನಾಯಕರು ಕುರ್ಚಿ ಜಗಳದಲ್ಲಿ ನಿರತರಾಗಿದ್ದಾರೆ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 28-1-2000

- **ಸಂವಿಧಾನ ಪುನರ್ ವಿಮರ್ಶೆ ಯತ್ನ: ರಾಷ್ಟ್ರಪತಿ ವಿರೋಧ**

ನವದೆಹಲಿ, ಜ. 27– ಸರ್ಕಾರದ ಅಸ್ಥಿರತೆಯ ಕಾರಣವೊಂದನ್ನೇ ನೆಪ ಮಾಡಿಕೊಂಡು ಸಂಸದೀಯ ವ್ಯವಸ್ಥೆಯನ್ನು ತಿರಸ್ಕರಿಸಿ, ಅಧ್ಯಕ್ಷೀಯ ಸರ್ಕಾರ ಅಥವಾ ಬೇರೆ ವ್ಯವಸ್ಥೆಯನ್ನು ತರಬೇಕೆನ್ನುವುದಕ್ಕಾಗಿ ಸಂವಿಧಾನ ಪುನರ್ ವಿಮರ್ಶಿಸುವ ಅಥವಾ ಹೊಸ ಸಂವಿಧಾನವನ್ನೇ ಬರೆಯುವ ಬಗೆಗೆ ತೋರುತ್ತಿರುವ ಒಲವಿನ ವಿರುದ್ಧ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ತೀವ್ರ ವಿರೋಧ ವ್ಯಕ್ತಪಡಿಸಿದರು.

ಸಂವಿಧಾನವನ್ನು ಒಪ್ಪಿ ಐವತ್ತು ವರ್ಷಗಳಾದ ಸುವರ್ಣ ಮಹೋತ್ಸವದ ಅಂಗವಾಗಿ ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ನಡೆದ ವಿಶೇಷ ಸಮಾರಂಭದ ಅಧ್ಯಕ್ಷತೆ ವಹಿಸಿ ರಾಷ್ಟ್ರಪತಿ ನಾರಾಯಣನ್ ಅವರು ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿದರು.

ನಮ್ಮ ಸಂಸದೀಯ ವ್ಯವಸ್ಥೆಯು ಜವಾಬ್ದಾರಿ ಆಡಳಿತ ನಿರ್ವಹಣೆಗಾಗಿ ಸ್ಥಿರತೆ ಮತ್ತು ವಿಶ್ವಾಸಾರ್ಹತೆಯನ್ನು ಒದಗಿಸಿಕೊಟ್ಟಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸರ್ಕಾರದ ಅಸ್ಥಿರತೆ ಕಂಡು ಬರುತ್ತಿದೆ. ಇದಕ್ಕಾಗಿ ಸಂಸದೀಯ ವ್ಯವಸ್ಥೆಯನ್ನೇ ಬದಲಿಸಬೇಕೆನ್ನುವುದು ಸರಿಯಾದ ಆಲೋಚನೆಯಲ್ಲ ಎಂದರು.

- **ಮೂಲರೂಪಕ್ಕೆ ಭಂಗವಿಲ್ಲದೆ ಪರಾಮರ್ಶೆ: ಪ್ರಧಾನಿ**

ನವದೆಹಲಿ, ಜ. 27– ಸಂವಿಧಾನದ ಮೂಲರೂಪ ಮತ್ತು ಆದರ್ಶಗಳಿಗೆ ಭಂಗ ಬರದಂತೆ ಮರುಪರಿಶೀಲನೆ ನಡೆಸಲಾಗುವುದು ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಘೋಷಿಸಿದ್ದಾರೆ.

ಸುವರ್ಣ ಗಣರಾಜ್ಯೋತ್ಸವದ ಅಂಗವಾಗಿ ಸಂಸತ್ ಭವನದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸಂವಿಧಾನವನ್ನು ಅಂಗೀಕರಿಸಿ ಐದು ದಶಕಗಳಾಗಿದ್ದು, ಈಗ ಭಾರತ ಹೊಸ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸ್ಥಿರತೆಯ ಅವಶ್ಯಕತೆ ಕಾಣಿಸುತ್ತಿದೆ’ ಎಂದು ಹೇಳಿದರು.

50 ವರ್ಷಗಳ ಹಿಂದೆ

ಮಂಗಳವಾರ, 28-1-1975

- **ಕಾಂಗ್ರೆಸ್‌ನಿಂದ ಹಾವನೂರು ಆರು ವರ್ಷ ಉಚ್ಚಾಟನೆ**

ಬೆಂಗಳೂರು, ಜ. 27– ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ಎಚ್. ಪಾಟೀಲ್ ಅವರ ಮೇಲೆ ಆಧಾರರಹಿತವಾಗಿ ಹಾಗೂ ಕಾಂಗ್ರೆಸ್ ನಿಯಮಾವಳಿಗಳನ್ನು ಅತಿಕ್ರಮಿಸಿ ಆರೋಪ ಮಾಡಿದ ಬಗ್ಗೆ ಇಂದು ಪಿ.ಸಿ.ಸಿ ಕಾರ್ಯ ಸಮಿತಿಯು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಎಲ್.ಜಿ. ಹಾವನೂರು ಅವರನ್ನು ಆರು ವರ್ಷಗಳ ಕಾಲ ಪಕ್ಷದಿಂದ ಹೊರಹಾಕಿತು.

ಆಯೋಗದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಏಕೆ ನಿಧಾನವಾಗಿದೆ ಎಂದು ಆಯೋಗದಿಂದ ವಿವರಣೆ ಕೇಳುವುದಾಗಿ ಪಿ.ಸಿ.ಸಿ ಅಧ್ಯಕ್ಷರು ಹೇಳಿದರೆಂಬ ವರದಿಯೊಂದನ್ನು ಆಧಾರವಾಗಿಟ್ಟುಕೊಂಡು ಹಾವನೂರು ಅವರು ಕೆ.ಎಚ್.ಪಾಟೀಲರ ಮೇಲೆ ವೈಯಕ್ತಿಕ ಆರೋಪ ಮಾಡಿದ್ದರು.

- **ಅತಿರೇಕದ ವರ್ತನೆ: ಹಾವನೂರು**

ಬೆಂಗಳೂರು, ಜ. 27– ನಿಜವಾಗಲಿ ಅಥವಾ ಊಹಿಸಿಕೊಂಡಾಗಲಿ ತಮಗೆ ಯಾರ ಬಗ್ಗೆ ಭೀತಿ ಇದೆಯೋ ಅಂತಹವರ ಬಗ್ಗೆ ಸುಳ್ಳು ಸಾಕ್ಷ್ಯ ನಿರ್ಮಿಸುವ ಖ್ಯಾತಿಗೆ ಹೆಸರಾದ ಕೆ.ಎಚ್.ಪಾಟೀಲರ ಈ ವರ್ತನೆ ಅತಿರೇಕದಿಂದ ಕೂಡಿದೆ ಎಂದು ಎಲ್.ಜಿ. ಹಾವನೂರು ಅವರು ಕಾಂಗ್ರೆಸ್‌ನಿಂದ ತಮ್ಮನ್ನು ಉಚ್ಚಾಟಿಸಿದ ಬಗ್ಗೆ ಪ್ರತಿಕ್ರಿಯಿಸಿದ್ದಾರೆ.

ಆಮ್ ಆದ್ಮಿ ಪಕ್ಷ ಮತ್ತು ಬಿಜೆಪಿ ನಡುವೆ ತೀವ್ರ ಸ್ಪರ್ಧೆ ಏರ್ಪಟ್ಟಿದೆ

ದೆಹಲಿ ಮತದಾರರ ಚಿತ್ತ ಎತ್ತ?



ವಿಶ್ಲೇಷಣೆ

ಬಿ.ಎಸ್. ಅರುಣ್

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮುಂದಿನ ತಿಂಗಳ 5ರಂದು ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಶತಾಯಗತಾಯ ಜಯ ಗಳಿಸಬೇಕು ಎಂಬ ಗುರಿಯೊಂದಿಗೆ ಬಿಜೆಪಿ ಹಾಗೂ ಆಮ್ ಆದ್ಮಿ ಪಕ್ಷ (ಎಎಪಿ) ಭಾರಿ ಪ್ರಯತ್ನ ನಡೆಸಿವೆ. ಎಎಪಿ ಈ ಹಣಾಹಣಿಯನ್ನು ಒಂದು ರೀತಿಯ ‘ಮಾಡು ಇಲ್ಲವೆ ಮಡಿ’ ಕದನವಾಗಿ ಪರಿಗಣಿಸಿದಂತಿದೆ. ಎಲ್ಲ ಚುನಾವಣೆಗಳನ್ನೂ ಗಂಭೀರವಾಗಿ ತೆಗೆದುಕೊಳ್ಳುವ ಬಿಜೆಪಿ, 27 ವರ್ಷಗಳ ನಂತರ ಈ ಬಾರಿಯಾದರೂ ಇಲ್ಲಿ ಗೆಲ್ಲಲೇಬೇಕು ಎಂದು ಜಿದ್ದಿಗೆ ಬಿದ್ದಿದೆ.

ಅಂತೆಯೇ, ಈ ಚುನಾವಣೆಯು ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಎಎಪಿ ಸತತ ಮೂರನೇ ಬಾರಿಗೆ ಭಾರಿ ಬಹುಮತದಿಂದ ಗೆಲುವು ಸಾಧಿಸುವುದೇ? ಈ ಹಿಂದಿನ ಎರಡು ಸಲವೂ ಖಾತೆ ತೆರೆಯುವುದಕ್ಕೂ ಸಾಧ್ಯವಾಗದಿದ್ದ ಕಾಂಗ್ರೆಸ್‌ಗೆ ಈ ಬಾರಿ ಬೆರಳೆಣಿಕೆಯಷ್ಟಾದರೂ ಸ್ಥಾನ ಸಿಗಬಹುದೇ? ಕಾಂಗ್ರೆಸ್ ನಿರೀಕ್ಷೆಗಿಂತಲೂ ಹೆಚ್ಚು ಮತ ಗಳಿಸಿ, ಎಎಪಿಯ ಗೆಲುವಿನ ಸಾಧ್ಯತೆಗಳಿಗೆ ಆ ಮೂಲಕ ತೊಡರುಗಾಲಾಗಿ ಪರಿಣಮಿಸುವುದೇ? ಒಂದಾದರ ಮೇಲೊಂದರಂತೆ ಎಲ್ಲ ಪಕ್ಷಗಳೂ ನೀಡಿರುವ ಭರವಸೆಗಳ ಮಹಾಪೂರವನ್ನು ಮತದಾರ ನಂಬುತ್ತಾನೆಯೇ ಅಥವಾ ಉಚಿತ ವಿದ್ಯುತ್, ಮಹಿಳೆಯರಿಗೆ ಬಸ್ ಹಾಗೂ ಮೆಟ್ರೊದಲ್ಲಿ ಉಚಿತ ಪ್ರಯಾಣ, ಮೊಹಲ್ಲಾ ಕ್ಲಿನಿಕ್, ಗುಣಮಟ್ಟದ ಶಾಲೆಗಳನ್ನು ದೆಹಲಿ ನಿವಾಸಿಗಳಿಗೆ ಕೊಟ್ಟಿರುವ ಆಮ್ ಆದ್ಮಿ ಪಕ್ಷವನ್ನು ಪುನಃ ಜನ ಕೈಹಿಡಿಯುವರೇ?

ಈ ಹಿಂದಿನ ಕೆಲವು ಚುನಾವಣೆಗಳ ಅಂಕಿ-ಅಂಶಗಳನ್ನು ಗಮನಿಸಿದರೆ ದೆಹಲಿಯ ಮತದಾರ ಎಷ್ಟು ಪ್ರಬುದ್ಧ ಎಂದು ಗೊತ್ತಾಗುತ್ತದೆ. 2014, 2019 ಹಾಗೂ 2024ರ ಲೋಕಸಭೆ ಚುನಾವಣೆಗಳಲ್ಲಿ ದೆಹಲಿಯ ಎಲ್ಲಾ 7 ಸ್ಥಾನಗಳನ್ನು ಗೆದ್ದ ಬಿಜೆಪಿ, 2015 ಹಾಗೂ 2020ರಲ್ಲಿ ಕೇವಲ 7-8 ತಿಂಗಳ ಅಂತರದಲ್ಲಿ ನಡೆದ ವಿಧಾನಸಭೆ ಹಣಾಹಣಿಯಲ್ಲಿ ಹೀನಾಯ ಸೋಲು ಅನುಭವಿಸಿತು. ಭಾರಿ ಹುಮ್ಮಸ್ಸಿನಲ್ಲಿದ್ದ ಬಿಜೆಪಿಯನ್ನು ಮಣಿಸಿ ಎಎಪಿ 70 ಸ್ಥಾನಗಳ ಪೈಕಿ 67 ಹಾಗೂ 62 ಸ್ಥಾನ ಗಳಿಸಿತು.

2013ರಲ್ಲಿ ಬಿಜೆಪಿ 31 ಸ್ಥಾನ ಗಳಿಸಿತ್ತು, ‘ಇಂಡಿಯಾ ಎಗೆನ್ಸ್ಟ್ ಕರಪ್ಷನ್’ ಎನ್ನುವ ಭ್ರಷ್ಟಾಚಾರ ವಿರೋಧಿ ಆಂದೋಲನದಿಂದ ಹೊರಹೊಮ್ಮಿದ್ದ, ಆಗ ತಾನೇ ಮೇಲೇಳುತ್ತಿದ್ದ, 2012ರಲ್ಲಿ ಸ್ಥಾಪನೆಗೊಂಡ ಎಎಪಿಯು 38 ಸ್ಥಾನ ಗಳಿಸಿ, 8 ಕ್ಷೇತ್ರಗಳಲ್ಲಿ ಜಯಿಸಿದ್ದ ಕಾಂಗ್ರೆಸ್ ಜೊತೆಗೂಡಿ ಸರ್ಕಾರ ರಚಿಸಿತು. ಬಿಜೆಪಿ ಶೇಕಡ 33, ಎಎಪಿ ಶೇ 39.50 ಹಾಗೂ ಕಾಂಗ್ರೆಸ್ ಶೇ 24.50ರಷ್ಟು ಮತ ಗಳಿಸಿದ್ದವು. ನವದೆಹಲಿ ಕ್ಷೇತ್ರದಲ್ಲಿ ಆಗಿನ ಮುಖ್ಯಮಂತ್ರಿ ಕಾಂಗ್ರೆಸ್‌ನ ಶೀಲಾ ದೀಕ್ಷಿತ್ ಅವರನ್ನು ಸೋಲಿಸಿದ ಅರವಿಂದ ಕೇಜ್ರಿವಾಲ್ ಅಧಿಕಾರದ ಚುಕ್ಕಾಣಿ ಹಿಡಿದರೂ ಸರ್ಕಾರಕ್ಕೆ 14 ತಿಂಗಳು ತುಂಬುವಷ್ಟರಲ್ಲಿ ರಾಜೀನಾಮೆ ನೀಡಿದರು.

2015ರಲ್ಲಿ ಅಚ್ಚರಿಯ ಫಲಿತಾಂಶದಲ್ಲಿ ಎಎಪಿಯು 67 ಸ್ಥಾನ ಗಳಿಸಿತು. 3 ಸ್ಥಾನ ಗಳಿಸಿದ್ದ ಬಿಜೆಪಿಗೆ ಅತೀವ ಮುಖಭಂಗ. ಎಎಪಿಗೆ ಶೇ 54.30, ಬಿಜೆಪಿಗೆ ಶೇ 32 ಹಾಗೂ ಕಾಂಗ್ರೆಸ್‌ಗೆ ಶೇ 9.65ರಷ್ಟು ಮತಗಳು ಬಂದವು. 2020ರ ಚುನಾವಣೆಯಲ್ಲಿ ಭಾರಿ ಬದಲಾವಣೆಯೇನೂ ಆಗಲಿಲ್ಲ. ಎಎಪಿಗೆ 62 ಹಾಗೂ ಬಿಜೆಪಿಗೆ 8 ಸ್ಥಾನಗಳು ದಕ್ಕಿದವು. ಪೊರಕೆ ಚಿಹ್ನೆಯ ಪಕ್ಷಕ್ಕೆ ಶೇ 53.70, ಕಮಲಕ್ಕೆ ಶೇ 38.50 ಹಾಗೂ ಕೈಗೆ ಬರೀ ಶೇ 4.20ರಷ್ಟು ಮತಗಳು ದಕ್ಕಿದ್ದವು. ಅಂದರೆ, ಕಾಂಗ್ರೆಸ್ ಮತಗಳು ಭಾರಿ ಪ್ರಮಾಣದಲ್ಲಿ ಎಎಪಿಗೆ ಹರಿದು ಹೋಗಿದ್ದವು.

ದೆಹಲಿ ಒಂದು ಚಿಕ್ಕ ರಾಜ್ಯವಾದರೂ (ವಾಸ್ತವವಾಗಿ ದೆಹಲಿ ಪೂರ್ಣ ರಾಜ್ಯವೂ ಅಲ್ಲ, ಏಕೆಂದರೆ ಒಂದು ರಾಜ್ಯಕ್ಕಿರಬೇಕಾದ ಎಲ್ಲಾ ಅಧಿಕಾರಗಳು ಅದರ ಕೈಯಲ್ಲಿ ಇಲ್ಲ, ಕೆಲವು ಕೇಂದ್ರದ ಬಳಿ ಇವೆ) ಇಲ್ಲಿ ಆಡಳಿತ ನಡೆಸುವ 3 ಸ್ಥಳೀಯ ಸಂಸ್ಥೆಗಳಿವೆ. ದೆಹಲಿ ಮುನಿಸಿಪಲ್ ಕಾರ್ಪೊರೇಷನ್ (ಎಂಸಿಡಿ), ನ್ಯೂಡೆಲ್ಲಿ ಮುನಿಸಿಪಲ್ ಕಾರ್ಪೊರೇಷನ್ ಮತ್ತು ಮಿಲಿಟರಿ ಆಡಳಿತಕ್ಕೆ ಒಳಪಟ್ಟಿರುವ ದೆಹಲಿ ಕಂಟೋನ್ಮೆಂಟ್. 2022ರಲ್ಲಿ ನಡೆದ ಎಂಸಿಡಿ ಚುನಾವಣೆಯಲ್ಲಿ ಎಎಪಿ 134 (ಶೇ 42.05ರಷ್ಟು ಮತ), ಬಿಜೆಪಿ 104 (ಶೇ 39.09) ಹಾಗೂ ಕಾಂಗ್ರೆಸ್ 9 (ಶೇ 11.68) ಸ್ಥಾನ ಗಳಿಸಿದವು.

ಜನಸಾಮಾನ್ಯರ ಪಕ್ಷ ಎಂದು ಹೇಳಿಕೊಂಡು ಅಧಿಕಾರದ ಗದ್ದುಗೆ ಹಿಡಿದು, ಸ್ಥಾಪನೆಗೊಂಡ 12 ವರ್ಷಗಳಲ್ಲೇ ರಾಷ್ಟ್ರೀಯ ಪಕ್ಷವಾಗಿ ಹೊರಹೊಮ್ಮಿದ ಎಎಪಿ, ಕೆಲವು ವರ್ಷಗಳಿಂದ ಭಾರಿ ಏರುಪೇರುಗಳನ್ನು ಕಂಡಿದೆ. ಆ ಪಕ್ಷದ ಭ್ರಷ್ಟಾಚಾರವಿರೋಧಿ ಬ್ರ್ಯಾಂಡ್ ಇಮೇಜಿಗೆ ಮಸಿ ಅಂಟಿಕೊಂಡಿದೆ. ಅಬಕಾರಿ ಇಲಾಖೆಯಲ್ಲಿ ಆಗಿದೆ ಎನ್ನಲಾದ ಅಕ್ರಮಗಳಿಗಾಗಿ ಕೇಜ್ರಿವಾಲ್ ಸೇರಿದಂತೆ ಮೂವರು ಮಂತ್ರಿಗಳು ಹಾಗೂ ಒಬ್ಬ ಸಂಸದ ಸೆರೆವಾಸ ಅನುಭವಿಸಿದರು. ಒಬ್ಬ ಮಂತ್ರಿಯೂ ಸೇರಿದಂತೆ ನಾಲ್ವರು ಶಾಸಕರು ಪಕ್ಷ ಬಿಟ್ಟು ಬಿಜೆಪಿ ಸೇರಿದರು. ಇದರ ಜೊತೆಗೆ ಕೇಜ್ರಿವಾಲ್ ಅವರು ವಾಸಕ್ಕೆ ಸರ್ಕಾರದಿಂದ ಪಡೆದಿರುವ ಮನೆಯನ್ನು ಜನಸಾಮಾನ್ಯರ ಹಣದಲ್ಲಿ ಐಷಾರಾಮಿ ಬಂಗಲೆಯಾಗಿ ಪರಿವರ್ತಿಸಿದ್ದಾರೆಂದು ಬಿಜೆಪಿಯ ಹಲವು ನಾಯಕರು ಆರೋಪ ಮಾಡಿದ್ದಾರೆ.

ಐಐಟಿ ಪದವೀಧರ, ಮ್ಯಾಗ್ಸೆಸೆ ಪ್ರಶಸ್ತಿ ವಿಜೇತ, ಆದಾಯ ತೆರಿಗೆ ಅಧಿಕಾರಿಯಾಗಿದ್ದು ರಾಜೀನಾಮೆ ನೀಡಿ ಆರ್‌ಟಿಐ ಕಾರ್ಯಕರ್ತರಾದ, ಆಮ್ ಆದ್ಮಿ ಪಕ್ಷ ಕಟ್ಟಿದ ಕೇಜ್ರಿವಾಲ್ ಜೈಲು ಸೇರಿದ ನಂತರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲಿಲ್ಲ. ಜಾಮೀನಿನ ಮೇಲೆ ಹೊರಬಂದ ನಂತರ ಆತಿಶಿ ಅವರನ್ನು ಮುಖ್ಯಮಂತ್ರಿ ಮಾಡಿದರು. ಕೇಜ್ರಿವಾಲ್ ಅವರ ‘ಮಿಸ್ಟರ್ ಕ್ಲೀನ್’ ಇಮೇಜ್‌ಗೆ ಧಕ್ಕೆಯಾಗಿದ್ದರೂ ಅವರ ಜನಪ್ರಿಯತೆಯಲ್ಲಿ ಬಹಳ ವ್ಯತ್ಯಾಸವೇನೂ ಆಗಿಲ್ಲ.



ಈ ಚುನಾವಣೆ ಗೆಲ್ಲುವುದು ಎಎಪಿಗೆ ಬಹು ಮುಖ್ಯ. ಸೋತರೆ ಆ ಪಕ್ಷಕ್ಕೆ ಅಸ್ತಿತ್ವದ ಪ್ರಶ್ನೆ ಎದುರಾಗಬಹುದು. ಪಕ್ಷ ಒಡೆದು ಹೋಳಾಗಬಹುದು. ಅಲ್ಪಬಹುಮತದಿಂದ ಗೆದ್ದರೂ ಸಂಕಷ್ಟ ಎದುರಾಗಬಹುದು. ಚುನಾವಣಾ ನಿರ್ವಹಣೆಯಲ್ಲಿ ಬಿಜೆಪಿ ಸದಾ ಮುಂದಿರುತ್ತದೆ. ಆದರೂ ದೆಹಲಿ ವಿಧಾನಸಭೆ ಮಟ್ಟಿಗೆ ಅದಕ್ಕೆ ಒಬ್ಬ ಸಮರ್ಥ ನಾಯಕ ಇಲ್ಲದಿರುವುದು ದೊಡ್ಡ ಕೊರತೆ (ಕಾಂಗ್ರೆಸ್‌ಗೂ ಇದೇ ಸಮಸ್ಯೆ). ಈ ಹಿಂದೆ ಬಿಜೆಪಿಗೆ ಬೆನ್ನೆಲುಬಾಗಿದ್ದ ಮದನ್ ಲಾಲ್ ಖುರಾನ, ಸಾಹಿಬ್ ಸಿಂಗ್ ವರ್ಮಾ ಅವರಂಥ ನಾಯಕರು ಈಗ ಇಲ್ಲ. 1998ರಲ್ಲಿ ಸುಷ್ಮಾ ಸ್ವರಾಜ್ ಅವರನ್ನು ಹರಿಯಾಣದಿಂದ ಕರೆತಂದಂತೆ ಈ ಬಾರಿ ಸ್ಮೃತಿ ಇರಾನಿ ಅವರನ್ನು ಕರೆತರುವ ಯೋಚನೆ ಪಕ್ಷಕ್ಕೆ ಇತ್ತು. ಆದರೆ, ಸ್ಥಳೀಯ ನಾಯಕರ ವಿರೋಧದಿಂದ ಇದು ಸಾಧ್ಯವಾಗಲಿಲ್ಲ ಎಂಬ ಮಾತುಗಳಿವೆ.


ಎಎಪಿ ಒಳಗೊಂಡಂತೆ ಬಿಜೆಪಿಯೇತರ ಪಕ್ಷಗಳ ಉಚಿತ ಯೋಜನೆಗಳನ್ನು ಈ ಹಿಂದೆ ‘ರೇವ್ಡಿ’ ಎಂದು ಗೇಲಿ ಮಾಡಿದ್ದ ಬಿಜೆಪಿ, ಈಗ ತಾನು ಕೂಡ ಅದೇ ರೀತಿಯ ಯೋಜನೆಗಳ ಭರವಸೆ ಕೊಟ್ಟಿದೆ. ಬಿಜೆಪಿಯು ಕಾಂಗ್ರೆಸ್ ವಿರುದ್ಧ ಹಿಂದುತ್ವದ ವಿಷಯವನ್ನು ಮುನ್ನೆಲೆಗೆ ತಂದ ರೀತಿಯಲ್ಲಿ ಎಎಪಿ ಎದುರು ತರಲಾಗುವುದಿಲ್ಲ. ಏಕೆಂದರೆ, ಕೇಜ್ರಿವಾಲ್ ಹನುಮನ ಪರಮಭಕ್ತ. ಮುಸ್ಲಿಂ ಮತದಾರರು ಎತ್ತ ಕಡೆ ವಾಲುತ್ತಾರೋ ಎಂಬುದು ಈ ಕ್ಷಣಕ್ಕೆ ಕುತೂಹಲ ಕಾಯ್ದುಕೊಂಡಿರುವ ಪ್ರಶ್ನೆ.

ದೆಹಲಿಯ ಶೇ 25ರಷ್ಟು ಮತದಾರರು ಪೂರ್ವಾಂಚಲದಿಂದ (ಪೂರ್ವ ಉತ್ತರಪ್ರದೇಶ- ಪಶ್ಚಿಮ ಬಿಹಾರ) ಬಂದ ವಲಸಿಗರು ಎಂದು ಅಂದಾಜು ಮಾಡಲಾಗಿದೆ. ಹೆಚ್ಚಾಗಿ ಪೂರ್ವ ದೆಹಲಿಯಲ್ಲಿ ನೆಲಸಿರುವ ಇವರ ಮತ ಗಳಿಸಲು ಎಲ್ಲ ಪಕ್ಷಗಳೂ ಕಸರತ್ತು ನಡೆಸಿವೆ. ದೆಹಲಿಯ ಮೂರು ಕ್ಷೇತ್ರಗಳ ಫಲಿತಾಂಶವನ್ನು ಜನ ಕುತೂಹಲದಿಂದ ನೋಡುತ್ತಿದ್ದಾರೆ. ನವದೆಹಲಿಯಲ್ಲಿ ಕೇಜ್ರಿವಾಲ್ ಅವರು ಬಿಜೆಪಿಯ ಪರ್ವೇಶ್ ವರ್ಮಾ ಹಾಗೂ ಕಾಂಗ್ರೆಸ್‌ನ ಸಂದೀಪ್ ದೀಕ್ಷಿತ್ ಅವರನ್ನು ಎದುರಿಸುತ್ತಿದ್ದಾರೆ. ಉಪಮುಖ್ಯಮಂತ್ರಿಯಾಗಿದ್ದ ಮನೀಷ್ ಸಿಸೋಡಿಯಾ ಅವರು ಜಂಗ್‌ಪುರದಲ್ಲಿ ಹಾಗೂ ಕಲ್ಕಾಜಿಯಲ್ಲಿ ಆತಿಶಿ ಮತ್ತೆ ಜಯ ಗಳಿಸುವ ವಿಶ್ವಾಸದಲ್ಲಿದ್ದಾರೆ.

‘ಇಂಡಿಯಾ’ ಮೈತ್ರಿಕೂಟದ ಮುಖ್ಯ ಪಕ್ಷವಾದ ಕಾಂಗ್ರೆಸ್‌ಗೆ ಮಿತ್ರಪಕ್ಷಗಳಾದ ಎಸ್‌ಪಿ, ಟಿಎಂಸಿ ಮತ್ತು ಎನ್‌ಸಿಪಿ ಬೆಂಬಲ ನೀಡುತ್ತಿಲ್ಲ. ಬದಲಾಗಿ ಈ ಪಕ್ಷಗಳು ಎಎಪಿಗೆ ಬೆಂಬಲ ನೀಡುತ್ತಿವೆ. ದೆಹಲಿ ಚುನಾವಣೆ ಬೇರೆ ಬೇರೆ ಕಾರಣಗಳಿಗಾಗಿ ಕುತೂಹಲ ಮೂಡಿಸಿದೆ. ಇದು, ರಾಷ್ಟ್ರ ರಾಜಧಾನಿ ಆಗಿರುವುದು ಅದರಲ್ಲಿ ಮುಖ್ಯವಾದ ಅಂಶ. ಈ ಕಾರಣಕ್ಕಾಗಿ ಈ ಚುನಾವಣೆ ಮತ್ತು ಅದರ ಫಲಿತಾಂಶ ಮಹತ್ವ ಪಡೆದುಕೊಂಡಿವೆ.

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ



ಬೈ-ಬ್ಯಾಕ್ ಸ್ಕೀಂ

• ಡಿ.ಎಸ್.ಲಿಂಗರಾಜು

‘ನಿಮ್ಮ ಮನೇಲಿ ಹಳೇ ಪೇಪರ್ರು, ಹಳೆ ಕಬ್ಬಿಣ, ಹಳೆ ಪಾತ್ರೆ, ಸ್ಕ್ರ್ಯಾಪು ಇದ್ದರೆ ಬೈ-ಬ್ಯಾಕ್ ಸ್ಕೀಮಿನಲ್ಲಿ ಒಳ್ಳೆ ರೇಟಿದ್ದಾಗ ಮಾರಿಬುಡಿ ಸಾ’ ತುರೇಮಣೆಗೆ ಅಡ್ವೈಸು ಕೊಟ್ಟೆ.

‘ಬೊಡ್ಡಿಹೈದ್ನೆ ನೀನು ಹೇಳ್ತಿರದು ಮನೇಲಿರ ಹಳೆ ಸಾಮಾನು ಬಗ್ಗೆನೋ, ಇಲ್ಲ ರಾಜಕೀಯದ ಸ್ಕ್ರ್ಯಾಪುಗಳ ಬಗ್ಗೆನೋ?’ ನನಗೇ ವಾಪಸ್ ಪ್ರಶ್ನೆ ಹಾಕಿದರು. ನಾನು ಅರೀದ ಮುಕ್ಕನ ಥರ ಕೂಕಂದೆ.

‘ಬೈ-ಬ್ಯಾಕ್ ಅಂದ್ರೆ ಗೊತ್ತಾ ನಿನಗೆ? ತನ್ನ ರಾಜಕೀಯ ವಿರೋಧೀನ ಅವನ ಬೆನ್ನ ಹಿಂದೆ ಕಂಡಾಬಟ್ಟೆ ಬಯ್ಯೋದನ್ನ ಬೈ-ಬ್ಯಾಕ್ ಅಂತರೆ. ಕಾಂಗ್ರೆಸು, ಬೀಜೆಪೀಲಿ ಅಧಿಕಾರ ಇಲ್ಲದ ಸಂಕಟಕ್ಕೆ ಬೈ-ಬ್ಯಾಕ್ ಸ್ಕ್ಯಾಮು ನಡೀತಾ ಅದೆ ಕಪ್ಪಾ’ ಅಂತ ವಿವರಿಸಿದರು.

‘ಯತ್ನಾಳಣ್ಣ-ಇಜಿಯಣ್ಣ, ರಾಮುಲಣ್ಣ-ರೆಡ್ಡಿಯಣ್ಣನ ಬೈ-ಬ್ಯಾಕ್ ಬೋದಾಟ ಯಾವ ಪ್ರಕಾರದಲ್ಲಿ ಬತ್ತದೆ?’ ಅಂತಂದೆ.

‘ಅದು ಬೋಗುಳ ಕಾಂಡದಲ್ಲಿ ಬರೋ ಮುಸುಡಿಯುದ್ದದ ಜಗಳಗೀತೆ ಕಲಾ. ರಾಜಕಾರಣಿಗಳು ಆಗಾಗ ಇಂತೇ ಬೈ-ಬ್ಯಾಕ್ ಬೋಗುಳಗಳನ್ನ ಉದುರಿಸಿದ್ರೂ ‘ನಾನು ಹಂಗಂದೇ ಇಲ್ಲ ಕನ್ರಿ. ನನ್ನನ್ನ ಬೋದೋರಿಗೆ ಒಳ್ಳೇದಾಗಲಿ’ ಅಂತ ದಡ್ಡಸ್ತಿಕೆ ತೋರಿಸ್ತರೆ’ ಅಂದ್ರು.

‘ಸಾ... ರಾಜಕೀಯದ ಸ್ಕ್ರ್ಯಾಪು ಅಂತೇನೋ ಅಂದ್ರಿ’ ಅಂತ ವಿಷಯ ಬದಲಾಯಿಸಿದೆ.

‘ಯಾವುದೇ ಯವಸ್ಥೆಲಿ ಸ್ಕ್ರ್ಯಾಪುಗಳೇ ಜಾಸ್ತಿ ತುಂಬಿಕ್ಯಂದಾಗ ಅಭಿವೃದ್ಧಿಗೆ, ನ್ಯಾಯಕ್ಕೆ ತುಕ್ಕು ಹಿಡಿದು ಬ್ಯಾರೆ ಪಕ್ಸಕ್ಕೆ ಜಂಪುಗಾರಿಕೆ ಸುರುವಾತದೆ’ ಅಂತಂದ್ರು.

‘ಅದ್ಯಾಕೆ ಸಾ ಹಂಗೆ?’ ತುರೇಮಣೆಯನ್ನ ಕೇಳಿದೆ.

‘ಎಲ್ಲಾ ಪಕ್ಸಗಳ ರಾಜಕಾರಣಿಗಳಿಗೂ ಅಧಿಕಾರ ವ್ಯಾಧಿ ಅಮರಿಕ್ಯಂಡಿರತದೆ ಕನೋ. ಪಕ್ಸದಲ್ಲಿ ಅಧಿಕಾರ ಕೊಡದೇ ತಮ್ಮನ್ನ ತಾತ್ಸಾರ ಮಾಡ್ತಾವ್ರೆ ಅನ್ನಿಸಿದಾಗ ಬೈ-ಬ್ಯಾಕ್ ಜೊತೆಗೆ ಬಣರಾಜ್ಯೋತ್ಸವ ಸುರು ಮಾಡ್ತವೆ’ ಅಂತಂದ್ರು.

‘ಬಡಜನ ಮೈಕ್ರೊ ಫೈನಾನ್ಸ್ ಕಂಪನಿ ಬಡ್ಡಿ ಹೈಕ್ಳ ಕುಣಿಕೇಲಿ ಸಿಗಾಕ್ಯಂದು ಒಣರಾಜ್ಯೋತ್ಸವ ಆಯ್ತಿರೋ ಶಾಪಾರಾಧನೆ ಇವುರ ಕಣ್ಣಿಗೆ ಕಾಣಕ್ಕೇ ಇಲ್ಲವೇನೋ?’ ಅಂತ ಶರಾ ಬರೆದೆ.

ಸಂಗತ

ಪರೀಕ್ಷೆ ನಂತರ ಪುಸ್ತಕ ತಕ್ಕಡಿಗಲ್ಲ

ಪುಸ್ತಕಗಳನ್ನು ಓದುವುದು ಮತ್ತು ವಿನಿಮಯ ಮಾಡಿಕೊಳ್ಳುವುದು ನಮ್ಮ ಸಂಸ್ಕೃತಿಯ ಭಾಗವಾಗಬೇಕು

• ಯೋಗಾನಂದ

ಅದು ಕೆಲವು ದಶಕಗಳ ಹಿಂದಿನ ಮಾತು. ಪಬ್ಲಿಕ್ ಪರೀಕ್ಷೆ ಎದುರಿಸುವ ಮಕ್ಕಳು ಪೋಷಕರೊಂದಿಗೆ ಹಿರಿಯ ವಿದ್ಯಾರ್ಥಿಗಳ ಮನೆಗಳನ್ನು ಮುತ್ತುತ್ತಿದ್ದರು. ಅವರ ಬೇಡಿಕೆ- ಹಳೆಯ ಪ್ರಶ್ನೆಪತ್ರಿಕೆಗಳು. ಅವುಗಳ ಆಧಾರದಿಂದ ಇಂಥಿಂಥ ಪ್ರಶ್ನೆ ಈ ಬಾರಿ ಕೇಳಬಹುದು ಅಥವಾ ಕೇಳಲಾರರು ಎಂದು ಅವರು ನಿರ್ಧರಿಸುತ್ತಿದ್ದರು. ಹೀಗೆ ಅಂದಾಜಿಸುವುದು ತಪ್ಪು, ಎಲ್ಲ ಅಧ್ಯಾಯಗಳನ್ನೂ ಓದಬೇಕು ಎಂಬುದು ಸರಿ. ಆದರೆ ಪರೀಕ್ಷೆ ಕುರಿತು ಅವರಿಗಿದ್ದ ಆಸ್ಥೆ, ಭಯ ಮೆಚ್ಚುವಂಥದ್ದು.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಅಥವಾ ಯಾವುದೇ ಕಲಿಕೆಯ ಹಂತವಿರಲಿ ಪರೀಕ್ಷೆಗಳು ಮುಗಿಯುತ್ತಲೇ ಓದಿಕೊಂಡ ಪಠ್ಯಗಳು, ಬರೆದುಕೊಂಡ ತರಗತಿ ನೋಟ್ಸ್ ನಾಪತ್ತೆಯಾಗುವುದೇ ಹೆಚ್ಚು. ಯಾರಾದರೂ ಗೆಳೆಯರು, ಬಂಧುಮಿತ್ರರ ಮಕ್ಕಳಿಗೆ ಹಳೆಯ ಪಠ್ಯಪುಸ್ತಕಗಳು ಪ್ರಯೋಜನಕ್ಕೆ ಬರಬಹುದೆಂಬ ಆಲೋಚನೆ ಸಮಂಜಸವಾಗುತ್ತದೆ. ಮುಂದಿನ ಶೈಕ್ಷಣಿಕ ವರ್ಷಗಳಿಗೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅವರಿಗೇ ಅವು ಉಪಯುಕ್ತ ಆಗಬಹುದು.


ಸಾಮಾನ್ಯವಾಗಿ ತಮ್ಮ ಮಕ್ಕಳಿಗೆ ಪಠ್ಯಪುಸ್ತಕ, ನೋಟ್ ಬುಕ್ ಕೊಡಿಸುವುದೆಂದರೆ ಪೋಷಕರಿಗೆ ಇನ್ನಿಲ್ಲದ ಸಡಗರ. ಇವಲ್ಲದೆ ಅಗತ್ಯ ಪರಾಮರ್ಶನ ಗ್ರಂಥಗಳು, ನಿಘಂಟು ಸಹ ಮಕ್ಕಳ ಕೈಸೇರಿರುತ್ತವೆ. ಆದರೆ ಆಯಾ ಪರೀಕ್ಷೆ ನಂತರ, ಆ ತರಗತಿಯ ಪಠ್ಯ ಪುಸ್ತಕಗಳಿಂದ ಆಗಬೇಕಾದ್ದೇನು ಎನ್ನುವ ತಾತ್ಸಾರ ಆವರಿಸುತ್ತದೆ. ವಾಸ್ತವವಾಗಿ ಪುಸ್ತಕಗಳಲ್ಲಿ ಹಳತು, ಹೊಸತು ಎನ್ನುವುದಿಲ್ಲ. ಎಲ್ಲವೂ ಹೊಸವೇ. ಮಕ್ಕಳು ಗ್ರಂಥದಲ್ಲಿ ಏನನ್ನಾದರೂ ಬರೆದರೆ, ಗೀಚಿದರೆ ಅಥವಾ ಗುರುತು ಹಾಕಿದರೆ ಹಿರಿಯರು ಕಟ್ಟುನಿಟ್ಟಾಗಿ ಎಚ್ಚರಿಸುವ ಪರಂಪರೆ ನಮ್ಮದು.

ಗ್ರಂಥವು ‘ದೈವ’ಸ್ವರೂಪಿ ಎಂಬ ಭಾವ. ಓದು ಬಲ್ಲವರು ಮಾತ್ರವಲ್ಲ, ಓದಲು ಬಾರದವರು ಕೂಡ ಪುಸ್ತಕಗಳನ್ನು ಗೌರವಿಸುತ್ತಾರೆ. ಅಧ್ಯಯನದ ನಂತರ ಪುಸ್ತಕಗಳನ್ನು ತ್ಯಾಜ್ಯವೆಂದು ಪರಿಗಣಿಸುವುದಕ್ಕಿಂತ ಸಾಂಸ್ಕೃತಿಕ ಬರ ಮತ್ತೊಂದಿಲ್ಲ. ಎಲ್ಲ ಪುಸ್ತಕಗಳೂ ಬದುಕು ಸುಧಾರಿಸುವ ಅನನ್ಯ ಸಂಪನ್ಮೂಲಗಳು. ದೇಶ- ವಿದೇಶವೆನ್ನದೆ, ನೀವು ಓದಿದ ಪುಸ್ತಕದ ಅಗತ್ಯವಿರುವ ಯಾರಾದರೂ ಇದ್ದೇ ಇರುತ್ತಾರೆ. ಅವರಿಗೆ ಈ ಪುಸ್ತಕಗಳನ್ನು ರವಾನಿಸಬಹುದು. ತಂತ್ರಜ್ಞಾನ ಊಹಿಸಲಾಗದಷ್ಟು ಮುಂದುವರಿದಿದೆ. 300 ಪುಟಗಳ ಒಂದು ಪುಸ್ತಕವನ್ನು ಕೇವಲ 6 ನಿಮಿಷಗಳಲ್ಲಿ ಡಿಜಿಟಲೀಕರಿಸಿ ಇ-ಮೇಲ್ ಮೂಲಕ ಕ್ಷಣಾರ್ಧದಲ್ಲಿ ಜಗತ್ತಿನ ಯಾವುದೇ ಮೂಲೆಗೆ ತಲುಪಿಸಬಹುದು. ನಮ್ಮ ಸಂವೇದನೆಗಳ ಸಮೇತ ಆಪ್ತರಿಗೆ ತಲುಪಿಸಬಹುದಾದ ಒಂದು ವಿಶಿಷ್ಟ ಜಾದು ಎಂದರೆ ಅದು ಪುಸ್ತಕವೆ!

ಜೈಲಿನಲ್ಲಿರುವ ಕೈದಿಗಳಿಗೂ ಓದುವ ಹಂಬಲ ಇರುತ್ತದೆ. ಮನಃಪರಿವರ್ತನೆ ಹಾದಿಯಲ್ಲಿರುವ ಅವರಿಗೆ ಪುಸ್ತಕಗಳನ್ನು ತಲುಪಿಸುವುದು ಅತ್ಯಂತ ಘನ ಕಾರ್ಯ. ಶಿಕ್ಷಣವನ್ನು ಪ್ರಾಯೋಜಿಸುವ ಸಂಘ- ಸಂಸ್ಥೆಗಳಂತೂ ಪುಸ್ತಕಗಳ ಉಡುಗೊರೆಯಿಂದ ಬಹು ಉತ್ತೇಜಿಸಲ್ಪಡುತ್ತವೆ. ಇನ್ನೊಬ್ಬ ವಿದ್ಯಾರ್ಥಿಯ ಪುಸ್ತಕ ನಿಮಗೆ ಬೇಕಾಗಬಹುದು. ಸಾಮಾಜಿಕ ಜಾಲತಾಣದ ಮೂಲಕ ನೀವು ಸಂಗ್ರಹಿಸಿರುವ ಪುಸ್ತಕಗಳ ಬಗ್ಗೆ ಮಾಹಿತಿ ನೀಡಿ ಅಗತ್ಯವಿರುವವರಿಗೆ ಕಳುಹಿಸಬಹುದು. ನಿಮಗೆ ಬೇಕಾಗುವ ಗ್ರಂಥಗಳನ್ನು ಅವರಿಂದ ಪಡೆಯಬಹುದು. ಪುಸ್ತಕ ಮತ್ತೆ ಮತ್ತೆ ತೆರೆದು ನೋಡುವ ಕೊಡುಗೆ.

ತರಗತಿಯ ನೋಟ್ಸ್ ಎಂದರೆ ಯಥಾವತ್ತಾಗಿ ಗುರುಗಳು ಹೇಳಿದ್ದನ್ನು ಬರೆದುಕೊಂಡಿದ್ದು ಅಲ್ಲ. ಪಾಠ, ಪ್ರವಚನಗಳನ್ನು ಅರ್ಥೈಸಿಕೊಳ್ಳದೆ ದಾಖಲಿಸಿದ್ದು ನೋಟ್ಸ್ ಆಗಲಾರದು. ನೋಟ್ಸ್ ಸಮರ್ಥವಾಗಿ ಕಲಿತದ್ದರ ಫಲವಾಗಿರಬೇಕು. ಮೂಲತಃ ತರಗತಿಯ ಬೋಧನೆ ಏಕಮುಖವಲ್ಲ. ಸಂದೇಹಗಳು ಬಂದಾಗ ಗುರುಗಳಲ್ಲಿ ಹೇಳಿ ಅವನ್ನು ಪರಿಹರಿಸಿಕೊಂಡಿರಬೇಕು. ಹಾಗೆ ತಿದ್ದಿ ತೀಡಿ ಪರಿಷ್ಕರಿಸಿದ್ದು ಮಾತ್ರ ನೋಟ್ಸ್ ಎನ್ನಿಸಿಕೊಳ್ಳುವುದು.

ಹಾಲ್ ಮತ್ತು ನೈಟ್ ಅವರ ‘ಟ್ರಿಗೊನಾಮಿಟ್ರಿ’, ರೆನ್ ಮತ್ತು ಮಾರ್ಟಿನ್ ಅವರ ‘ಇಂಗ್ಲಿಷ್ ಗ್ರ್ಯಾಮರ್ ಆ್ಯಂಡ್ ಕಾಂಪೊಸಿಷನ್’ ವಿಶ್ವದಾದ್ಯಂತ ಶೈಕ್ಷಣಿಕ ವಲಯದಲ್ಲಿ ಇಂದಿಗೂ ಅನುರಣಿಸುವ ಗ್ರಂಥಗಳಿಗೆ ಉದಾಹರಣೆಗಳು. ಕನ್ನಡದ ಸಂದರ್ಭದಲ್ಲಿ ಸುಬ್ಬಣ್ಣಾಚಾರ್ ಅವರ ‘ಅಂಕಗಣಿತ’ದ ಹಿರಿಮೆಯನ್ನು ಇಂದಿಗೂ ಗುರುಹಿರಿಯರು ಕೊಂಡಾಡುತ್ತಾರೆ, ಮೆಲುಕು ಹಾಕುತ್ತಾರೆ.



ಪಠ್ಯಪುಸ್ತಕ, ನೋಟ್‌ಬುಕ್, ಹಾಳೆ, ಲೇಖನ ಸಾಮಗ್ರಿಗಳಿಗೆ ವೆಚ್ಚ ಭರಿಸಲಾಗದೆ ಶಾಲೆ ಅರ್ಧಕ್ಕೇ ಬಿಡುವ ಮಕ್ಕಳ ಸಂಖ್ಯೆ ದೊಡ್ಡದಿದೆ. ಹಣದ ಕೊರತೆಯಿಂದ ಗ್ರಂಥಾಲಯ ಬಡವಾಗಿರುವುದರ ಮಾತಿರಲಿ, ಗ್ರಂಥಾಲಯವೇ ಇರದ ಶಾಲೆಗಳು ಅವೆಷ್ಟೋ? ಹಾಗಾಗಿ ವಿದ್ಯಾಸಂಸ್ಥೆಗಳಿಗೆ ಗ್ರಂಥಗಳನ್ನು ಬಳುವಳಿಯಾಗಿ ನೀಡುವುದು ಉದಾತ್ತವಾದ ಜ್ಞಾನದಾಸೋಹ. ವಿದ್ಯಾಲಯ ಅಥವಾ ಆಸ್ಪತ್ರೆಗಳ ಆವರಣದಲ್ಲಿ, ಉದ್ಯಾನದಲ್ಲಿ ‘ಉಚಿತ ಪುಸ್ತಕ ಪೆಟ್ಟಿಗೆ’ ಇರಿಸಿ ಪುಸ್ತಕ ಕೊಡುವ- ಪಡೆವ ವ್ಯವಸ್ಥೆ ಏರ್ಪಡಿಸಬಹುದು.

ಅಮೆರಿಕ, ಬ್ರಿಟನ್, ಸಿಂಗಪುರದಲ್ಲಿ ತಮ್ಮ ತಮ್ಮ ಮನೆಯ ಮುಂದೆ ‘ಗ್ಯಾರೇಜ್ ಸೇಲ್’ ಏರ್ಪಡಿಸಿ ಕೈಗೆಟುಕುವ ಬೆಲೆಯಲ್ಲಿ ಪುಸ್ತಕಗಳನ್ನು ಮಾರುವುದಿದೆ. ಪುಸ್ತಕವು ಪುಟ ತೆರೆಯದಷ್ಟು ವಿಪರೀತ ಶಿಥಿಲವಾಗಿದ್ದರೂ ಅದನ್ನು ಎಚ್ಚರಿಕೆಯಿಂದ ಓದಿಕೊಳ್ಳಬಹುದು. ಈ ಉದ್ದೇಶಕ್ಕಾಗಿ ಕೆಲವು ಮನೆಗಳಲ್ಲಿ ‘ವ್ಯಾಸ ಪೀಠ’ (ಕೆಳಗೆ ಕೂತು ಪುಸ್ತಕವಿರಿಸಿ ಓದುವ ಕಿರುಮೇಜು) ಎಂಬ ಪರಿಕರ ಉಪಯೋಗಿಸುವುದುಂಟು. ರದ್ದಿಗೆ ಹಾಕದೆ ಅದರಿಂದ ಕಾರ್ಡ್ ಬೋರ್ಡ್, ಕಲಾಕೃತಿಗಳನ್ನು ತಯಾರಿಸಲೂ ಸಾಧ್ಯ.

ವಾಚಕರ ವಾಣಿ

ಹಾಪ್‌ಕಾಮ್ಸ್: ಸಮರ್ಥ ಅಧಿಕಾರಿಗಳು ಬೇಕು

‘ಹಾಪ್‌ಕಾಮ್ಸ್: 142 ಮಳಿಗೆ ಬಂದ್’ ಸುದ್ದಿ (ಪ್ರ.ವಾ., ಜ. 27) ಓದಿ ಬೇಸರವಾಯಿತು. ಎರಡು ದಶಕಗಳ ಹಿಂದೆ ಅದರ ಜಾಲ, ರಾಜ್ಯದ ಏಳು ಜಿಲ್ಲೆಗಳಲ್ಲಿ ಮಾತ್ರ ಇತ್ತು, ಚಿಲ್ಲರೆ ಮಾರಾಟ ಕೇಂದ್ರಗಳ ಸಂಖ್ಯೆ 405 ಇತ್ತು (2002ರ ಸ್ಥಿತಿ). ನಿರ್ವಹಣೆ ಬಗೆಗೆ ದೂರುಗಳಿದ್ದವು. ಈ 22 ವರ್ಷಗಳಲ್ಲಿ ಜಾಲ ವಿಸ್ತರಣೆಯೊಂದಿಗೆ ಆರ್ಥಿಕ ಸುಸ್ಥಿರತೆ ಸಾಧಿಸುವ ಕೆಲಸ ಆಗಬೇಕಾಗಿತ್ತು. ಬೆಂಗಳೂರು ಹಾಪ್‌ಕಾಮ್ಸ್ ಸತತ ನಷ್ಟದಲ್ಲಿರಲು ಸರಿಯಾದ ಕಾರಣಗಳಿವೆಯೇ? ರಾಜ್ಯ ಸರ್ಕಾರ ಈಗ ದುಡಿಯುವ ಬಂಡವಾಳಕ್ಕೆಂದು ಧನಸಹಾಯ ನೀಡಿದರೂ ಪಾವತಿ ವಿಳಂಬ, ಸಿಬ್ಬಂದಿ ಕೊರತೆಯಂತಹ ಸಮಸ್ಯೆಗಳನ್ನು ಆ ಸಂಸ್ಥೆ ಪರಿಹರಿಸಿಕೊಳ್ಳಬಹುದೇ?

ಕರ್ನಾಟಕದಲ್ಲಿನ ತೋಟಗಾರಿಕೆಯ ಸಾಧ್ಯತೆಗಳನ್ನು ಗಮನಿಸಿದರೆ ಈ ಸಂಸ್ಥೆಯು ಕೆಎಂಎಫ್‌ನಂತೆ ಯಶಸ್ಸು ಗಳಿಸಬೇಕಾಗಿತ್ತು. ಆಂತರಿಕ ಅಕ್ರಮಗಳ ಬಗ್ಗೆ ಸೂಕ್ತ ತನಿಖೆ, ವಿಚಾರಣೆ ಆಗುತ್ತಿಲ್ಲ ಎಂದು ಒಳಗಿನವರೇ ಹೇಳುತ್ತಾರೆ. ತಳ್ಳುಗಾಡಿಗಳಿಂದ ಹಿಡಿದು ಮೆಗಾ ಮಾಲ್‌ಗಳವರೆಗೆ ಸ್ಪರ್ಧೆ ಇರುವಾಗ ಸಮರ್ಥ ಸಿಬ್ಬಂದಿ ಹಾಗೂ ಉನ್ನತ ಅಧಿಕಾರಿಗಳು ಬಹಳ ಅವಶ್ಯ. ತೋಟಗಾರಿಕೆ ಸಚಿವರು ಹಾಗೂ ಮುಖ್ಯಮಂತ್ರಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ತುರ್ತು ಕ್ರಮ ಕೈಗೊಳ್ಳಲಿ. ಗ್ರಾಹಕರಿಗೆ ಹಾಪ್‌ಕಾಮ್ಸ್ ದರಗಳು ಹೆಚ್ಚು ಎಂದು ಅನಿಸಬಾರದು. ಬೆಳೆಗಾರರ ಜೊತೆ ನಡೆಯುವ ಖರೀದಿ ಪ್ರಕ್ರಿಯೆ ಸರಳವಾಗಿರಬೇಕು ಮತ್ತು ಪಡೆದ ಉತ್ಪನ್ನಕ್ಕೆ ಅವರಿಗೆ ಬೇಗ ಹಣ ಸಿಗಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಹಿಂದೂ ರಾಷ್ಟ್ರ: ಅರ್ಥವಿಲ್ಲದ ಪ್ರಲಾಪ

ಭಾರತದ ಈಗಿನ ಸಂವಿಧಾನವು ವಿಶ್ವಮಾನ್ಯ, ಧರ್ಮನಿರಪೇಕ್ಷ ಮತ್ತು ಸಾಮಾಜಿಕ ಕಳಕಳಿಯಿಂದ ಕೂಡಿದೆ. ಹಿಂದೂ ರಾಷ್ಟ್ರದ ಹೆಸರಿನಲ್ಲಿ ಈಗ ಹೊಸ ಸಂವಿಧಾನವನ್ನು ಜನರ ಮುಂದಿಡುವ ಹುನ್ನಾರ ನಡೆದಿದೆ. ಹಿಂದೂ ಎಂಬುದು ಧರ್ಮವೇ ಇಲ್ಲ, ಅದೊಂದು ಜೀವನಶೈಲಿ ಎಂದು ಸುಪ್ರೀಂ ಕೋರ್ಟ್ ಈ ಹಿಂದೆಯೇ ಅಭಿಪ್ರಾಯಪಟ್ಟಿದೆ. ಹೀಗಿರುವಾಗ ಹಿಂದೂ ರಾಷ್ಟ್ರ ಮತ್ತು ಹಿಂದೂ ರಾಷ್ಟ್ರಕ್ಕಾಗಿ ಒಂದು ಸಂವಿಧಾನ ಎಂಬ ಪ್ರಲಾಪಕ್ಕೆ ಅರ್ಥವೇ ಇಲ್ಲ.

ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ಮೂಲಭೂತವಾದಿಗಳು ಇದ್ದಾರೆ. ಅವರ ಬೇಡಿಕೆಗಳಿಗೆ ಅನುಗುಣವಾಗಿ ಸಂವಿಧಾನ ಬದಲಾವಣೆ ಮಾಡುತ್ತಾ ಹೋದರೆ, ಅದಕ್ಕೆ ಆದಿ-ಅಂತ್ಯ ಎಂಬುದೇ ಇರಲಾರದು. ವಿಶ್ವಮಾನವ ಕಲ್ಪನೆಗೆ ಅರ್ಥವೇ ಉಳಿಯುವದಿಲ್ಲ.

ಎಚ್.ಎಸ್. ಚಂದ್ರಶೇಖರ, ಬೆಂಗಳೂರು

‘ಗೃಹಲಕ್ಷ್ಮಿ’ ಇದ್ದರೂ ಈ ಸ್ಥಿತಿ ಏಕೆ?!

ಗೃಹಲಕ್ಷ್ಮಿ ಹಣದಲ್ಲಿ ಕೊಳವೆಬಾವಿ ತೋಡಿಸಿದ ಮಹಿಳೆ, ಗೃಹಲಕ್ಷ್ಮಿ ಹಣದಲ್ಲಿ ಮಗಳಿಗೆ ಕಂಪ್ಯೂಟರ್ ಕೊಡಿಸಿದ ಮಹಿಳೆ, ಗೃಹಲಕ್ಷ್ಮಿ ಹಣದಲ್ಲಿ ಶೌಚಾಲಯ ನಿರ್ಮಿಸಿದ ಮಹಿಳೆ... ಇಂತಹ ಸುದ್ದಿಗಳನ್ನು ಓದುವಾಗ ಖುಷಿಯಾಗುತ್ತದೆ. ಮೈಕ್ರೊ ಫೈನಾನ್ಸ್ ಕಂಪನಿಗಳ ಕಿರುಕುಳದಿಂದ ಆತ್ಮಹತ್ಯೆಗೆ ಶರಣಾದ ಮಹಿಳೆ, ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಕಿರುಕುಳಕ್ಕೆ ಊರು ತೊರೆದ ಮಹಿಳೆ... ಇಂತಹ ಸುದ್ದಿಗಳು ಬೇಸರ ತರಿಸುತ್ತವೆ. ಗೃಹಲಕ್ಷ್ಮಿಯಂತಹ ಯೋಜನೆಗಳಿದ್ದರೂ ರಾಜ್ಯದ ಮಹಿಳೆಯರು ಮೈಕ್ರೊ ಫೈನಾನ್ಸ್ ಕಂಪನಿಗಳ ಬಲೆಗೆ ಬೀಳುತ್ತಿರುವುದು ವಿಪರ್ಯಾಸ!

ಪಿ.ಜೆ. ರಾಘವೇಂದ್ರ, ಮೈಸೂರು

ಅಪಘಾತ ನಿಯಂತ್ರಣಕ್ಕೆ ಬೇಕಿದೆ ಸಾಮೂಹಿಕ ಪ್ರಯತ್ನ

‘ರಸ್ತೆ ಅಪಘಾತ: ಚಾಚೋಣ ಸಹಾಯಹಸ್ತ’ ಲೇಖನದಲ್ಲಿ (ಪ್ರ.ವಾ., ಜ. 25) ಎಂ.ಎ. ಸಲೀಂ ಅವರು ಮಂಡಿಸಿರುವ ವಿಚಾರಗಳು ಅರ್ಥಪೂರ್ಣವಾಗಿವೆ. ನಿರ್ಲಕ್ಷ್ಯದಿಂದ ಕೂಡಿದ ವಾಹನ ಚಾಲನೆ, ವಾಹನಗಳಲ್ಲಿನ ತಾಂತ್ರಿಕ ದೋಷ ಮತ್ತು ರಸ್ತೆಗಳ ದುಃಸ್ಥಿತಿಯಂತಹ ಕಾರಣಗಳು ಅಪಘಾತಗಳಿಗೆ ಎಡೆಮಾಡಿಕೊಡುತ್ತಿವೆ ಎಂಬ ಮಾತು ಅಕ್ಷರಶಃ ಸತ್ಯ. ವಾಹನ ಚಾಲನಾ ಪರವಾನಗಿ ಪಡೆಯಲು ಬೇಕಾದ ಕನಿಷ್ಠ ವಯೋಮಿತಿ ಹೊಂದಿರದ ಹುಡುಗ-ಹುಡುಗಿಯರೂ ರಸ್ತೆಗಳಲ್ಲಿ ವಾಹನ ಓಡಿಸುತ್ತಾರೆ. ಈ ಅಂಶವೂ ಅಪಘಾತಕ್ಕೆ ಕಾರಣವಾಗುತ್ತದೆ.

ನಗರಗಳಲ್ಲಿ ವಾಹನ ದಟ್ಟಣೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಸೂಕ್ತ ತರಬೇತಿ ಪಡೆಯದ ಹುಡುಗರು ಅಡ್ಡಾದಿಡ್ಡಿ ವಾಹನ ಓಡಿಸುತ್ತಾರೆ. ಅದರಿಂದಾಗಿ, ಇತರೆ ವಾಹನ ಚಾಲಕರಿಗೂ ಕಿರಿಕಿರಿ ಮತ್ತು ತೊಂದರೆ ಆಗುತ್ತದೆ. ಸಣ್ಣ ವಯಸ್ಸಿನಲ್ಲೇ ತಮ್ಮ ಮಕ್ಕಳು ವಾಹನ ಓಡಿಸುವುದು ಕೆಲವು ಪೋಷಕರಿಗೆ ಹೆಮ್ಮೆಯ ವಿಚಾರ. ಹೆಚ್ಚು-ಕಡಿಮೆ ಆದರೆ ಅದರ ಪರಿಣಾಮ ಗಂಭೀರವಾಗಿರುತ್ತದೆ. ಪೋಷಕರು ಮೊದಲು ಎಚ್ಚೆತ್ತುಕೊಂಡು ಈ ದಿಸೆಯಲ್ಲಿ ಯೋಚಿಸಬೇಕು. ಅಪಘಾತ ನಿಯಂತ್ರಣಕ್ಕೆ ಒಂದು ಅರ್ಥದಲ್ಲಿ ಸಾಮೂಹಿಕ ಪ್ರಯತ್ನ ಬೇಕಾಗಿದೆ.

ಆಶಾ ಅಪ್ರಮೇಯ, ದಾವಣಗೆರೆ

ಭಾಗವತ್ ಹಿತವಚನ ಫಲ ನೀಡುವುದೇ?

‘ಭಿನ್ನಾಭಿಪ್ರಾಯಗಳನ್ನು ಗೌರವಿಸುವ ಮೂಲಕ ಸಾಮರಸ್ಯದಿಂದ ಬದುಕಬೇಕು’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ ಭಾಗವತ್ ಅವರು ಹೇಳಿರುವುದು ಸರಿಯಾಗಿದೆ. ಆದರೆ ಆರ್‌ಎಸ್‌ಎಸ್ ಗರಡಿಯಲ್ಲೇ ಪಳಗಿದ ನಾಯಕರು ಮತ್ತು ಜನಪ್ರತಿನಿಧಿಗಳಲ್ಲಿ ಹಲವರು ಈ ಮಾತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವುದು ಇಂದಿನ ವಾಸ್ತವ.

ಮಾತಿಗಿಂತ ಕೃತಿ ಮೇಲು ಎಂಬ ಮಾತು ಸರ್ವಕಾಲಕ್ಕೂ ಸಲ್ಲುವಂತಹುದು. ಬಿಜೆಪಿಯ ಮಾತೃಸಂಸ್ಥೆ ಎಂದು ಭಾವಿಸಲಾಗಿರುವ ಆರ್‌ಎಸ್‌ಎಸ್‌ನ ಮುಖ್ಯಸ್ಥರ ಈ ಮಾತು ಆಡಳಿತಾರೂಢರ ನಡೆ-ನುಡಿಯಲ್ಲಿ ಪ್ರತಿಫಲನಗೊಂಡರೆ ಸಮಾಜಕ್ಕೆ ಅದಕ್ಕಿಂತ ಹಿತಕರವಾದುದು ಮತ್ತೊಂದಿಲ್ಲ. ಈಗಿನ ಕೆಟ್ಟ ಕಾಲಘಟ್ಟದಲ್ಲಿ ಅಂತಹ ಬದಲಾವಣೆಯನ್ನು ನಿರೀಕ್ಷಿಸಬಹುದೇ?

ಬಿ.ಶ್ರೀರಾಮ ರೆಡ್ಡಿ, ಬಾಗೇಪಲ್ಲಿ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಜಗತ್ತಿನಾದ್ಯಂತ ಖಾಸಗಿ ಏಕಸ್ವಾಮ್ಯ ಹೆಚ್ಚುತ್ತಿದೆ. ಕಾರ್ಪೊರೇಟ್ ಕಂಪನಿಗಳು ಮಾರುಕಟ್ಟೆಯನ್ನು ನಿಯಂತ್ರಿಸುತ್ತಿವೆ. ಸರ್ಕಾರಗಳೇ ಕಂಪನಿಗಳಿಗೆ ಏಕಸ್ವಾಮ್ಯ ದಯಪಾಲಿಸುತ್ತಿವೆ ಎಂದು ಆಕ್ಸ್‌ಫಾಮ್ ವರದಿ ಹೇಳಿದೆ. ಆರೋಗ್ಯ, ಶಿಕ್ಷಣದಂಥ ಕ್ಷೇತ್ರಗಳು ಖಾಸಗಿ ವಲಯದ ಮಟ್ಟಿಗೆ ಭಾರಿ ಸಂಪತ್ತಿನ ಸೃಷ್ಟಿಗೆ ಕಾರಣವಾಗಿವೆ. ಭಾರತದಲ್ಲಿ ನಾಲ್ವರು ಶತಕೋಟ್ಯಧಿಪತಿಗಳು ಆಸ್ಪತ್ರೆ ಮತ್ತು ಪ್ರಯೋಗಾಲಯಗಳಲ್ಲಿ ಅತಿ ಹೆಚ್ಚು ಬಂಡವಾಳ ಹೂಡಿಕೆ ಮಾಡಿದ್ದಾರೆ. ದೇಶದಲ್ಲಿ ಖಾಸಗಿ ಆಸ್ಪತ್ರೆಗಳು ರೋಗಿಗಳನ್ನು ಬಡತನಕ್ಕೆ ದೂಡಿವೆ ಎಂದೂ ವರದಿ ಕಳವಳ ವ್ಯಕ್ತಪಡಿಸಿದೆ



ಭಾರತದಲ್ಲಿ ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಖಾಸಗಿ ಹಿಡಿತ

ಕಾರ್ಪೊರೇಟ್ ಏಕಸ್ವಾಮ್ಯ ಹೆಚ್ಚಿದ ಬಡತನ





●●●●●● **1997** ರಲ್ಲಿ

ಜಾಗತಿಕ ಬಿತ್ತನೆ ಬೀಜಗಳ ಮಾರುಕಟ್ಟೆಯನ್ನು 10 ಕಂಪನಿಗಳು ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದವು

●● **2022**

ಈಗ ಎರಡೇ ಕಂಪನಿಗಳು ಇಡೀ ಮಾರುಕಟ್ಟೆಯ ನಿಯಂತ್ರಣ ಹೊಂದಿವೆ

ಪ್ರಜಾವಾಣಿ ವಾರ್ತೆ

ಜಗತ್ತಿನಲ್ಲಿ ಹಿಂದೆಂದೂ ಇಲ್ಲದ ರೀತಿಯಲ್ಲಿ ಆರ್ಥಿಕ ಅಸಮಾನತೆ ಹೆಚ್ಚಾಗಿದ್ದು, ಉಳ್ಳವರು ಮತ್ತು ಇಲ್ಲದವರ ನಡುವೆ ಬೃಹತ್ ಕಂದಕ ಸೃಷ್ಟಿಯಾಗಿದೆ; ಶತಕೋಟ್ಯಧಿಪತಿಗಳು ರಾಜಕೀಯ ಪ್ರಭಾವವನ್ನೂ ಬೆಳೆಸಿಕೊಂಡಿದ್ದಾರೆ ಎಂದು ಆಕ್ಸ್‌ಫಾಮ್ ಸಂಸ್ಥೆಯ ಅಸಮಾನತೆ ಕುರಿತ ವರದಿ ತಿಳಿಸಿದೆ.

ವರದಿ ಪ್ರಕಾರ, 2020ರಿಂದ ಈಚೆಗೆ ಜಗತ್ತಿನ 500 ಕೋಟಿ ಮಂದಿ ಮತ್ತಷ್ಟು ಬಡವರಾಗಿದ್ದಾರೆ. ಇದೇ ಹೊತ್ತಿಗೆ ವಿಶ್ವದ ಐವರು ಅತಿ ದೊಡ್ಡ ಶ್ರೀಮಂತರ ಸಂಪತ್ತು ದುಪ್ಪಟ್ಟಾಗಿದ್ದು, ಅವರ ಸಂಪತ್ತು ಇಂದು 80 ಸಾವಿರ ಕೋಟಿ ಡಾಲರ್‌ಗಿಂತಲೂ (ಸುಮಾರು ₹68 ಲಕ್ಷ ಕೋಟಿ) ಹೆಚ್ಚಿದೆ. ಜಗತ್ತಿನ ಲಕ್ಷಾಂತರ ಮಂದಿ ಕಡುಬಡತನದಲ್ಲಿ ಬದುಕುತ್ತಿದ್ದು, ಕುಡಿಯುವ ನೀರು, ಆರೋಗ್ಯ ಸೇವೆ, ವಸತಿ, ಮಕ್ಕಳಿಗೆ ಶಿಕ್ಷಣದಂಥ ಮೂಲಭೂತ ಅಗತ್ಯಗಳಿಂದ ವಂಚಿತರಾಗಿದ್ದರೆ, ಕಳೆದ ಮೂರು ವರ್ಷಗಳಲ್ಲಿ ಶತಕೋಟ್ಯಧಿಪತಿಗಳ ಸಂಪತ್ತು 3 ಲಕ್ಷ ಕೋಟಿ ಡಾಲರ್‌ನಷ್ಟು (ಸುಮಾರು ₹259 ಲಕ್ಷ ಕೋಟಿ) ಹೆಚ್ಚಾಗಿದೆ. ಜಗತ್ತಿನ ಶೇ 75ರಷ್ಟು ಆನ್‌ಲೈನ್ ಜಾಹೀರಾತುಗಳು ಮೆಟಾ, ಆಲ್ಫಬೆಟ್ ಮತ್ತು ಅಮೆಜಾನ್ ಪಾಲಾಗುತ್ತಿದ್ದು, ಈ ಮೂರೂ ತಂತ್ರಜ್ಞಾನ ಸಂಸ್ಥೆಗಳು ಮಾರುಕಟ್ಟೆಯಲ್ಲಿ ಹಿಡಿತ ಸಾಧಿಸಿವೆ.

ಎರಡು ದಶಕಗಳಲ್ಲಿ (1995–2015) 60 ಔಷಧ ಕಂಪನಿಗಳು 10 ಕಂಪನಿಗಳಲ್ಲಿ ವಿಲೀನವಾಗಿವೆ. ಭಾರತದಲ್ಲಿಯೂ ಐದು ಕಂಪನಿಗಳು ಉದ್ಯಮ ರಂಗದಲ್ಲಿ ಏಕಸ್ವಾಮ್ಯ ಸಾಧಿಸಿವೆ ಎಂದು ವರದಿ ತಿಳಿಸಿದೆ.

ಖಾಸಗೀಕರಣ: ಜಗತ್ತಿನಾದ್ಯಂತ ಶಿಕ್ಷಣ, ಆರೋಗ್ಯ ಸೇವೆ ಮತ್ತು ನೀರು ಪೂರೈಕೆಯಂಥ ಕ್ಷೇತ್ರಗಳಲ್ಲೂ ಖಾಸಗಿಯವರು ಅಡಿಯಿಟ್ಟಿದ್ದು, ಈ ಸೌಲಭ್ಯಗಳು ಜನಸಾಮಾನ್ಯರಿಗೆ ಲಭ್ಯವಾಗದಂತಾಗಿವೆ. ಜನರ ಮೂಲಭೂತ ಅಗತ್ಯಗಳನ್ನೂ ಖಾಸಗಿ ಕಂಪನಿಗಳು ವ್ಯಾಪಾರದ ಸರಕಾಗಿಸಿಕೊಂಡು, ದೊಡ್ಡ ಪ್ರಮಾಣದಲ್ಲಿ ಲಾಭ ಮಾಡುತ್ತಿವೆ. ವಿಶ್ವ ಬ್ಯಾಂಕ್‌ನಂಥ ಹಣಕಾಸು ಸಂಸ್ಥೆಗಳೂ ಈ ಪ್ರವೃತ್ತಿಯನ್ನು ಬೆಂಬಲಿಸುತ್ತಿವೆ. ಅಗತ್ಯ ಸೇವೆಗಳನ್ನು ಒದಗಿಸುವ ಕೆಲಸವನ್ನು ಖಾಸಗಿಯವರಿಗೆ ಬಿಟ್ಟುಕೊಡುತ್ತಿರುವುದು, ಸರ್ಕಾರಿ ಸ್ವಾಮ್ಯದ ಉದ್ದಿಮೆಗಳನ್ನು ಖಾಸಗಿಯವರಿಗೆ ಮಾರುತ್ತಿರುವುದು ಖಾಸಗಿ ಬಂಡವಾಳಗಾರರ ಬೆಳವಣಿಗೆಗೆ ಕಾರಣವಾಗುತ್ತಿದೆ ಎಂದು ವರದಿ ಹೇಳಿದೆ.

ಜಾಗತಿಕ ಆಸ್ಪತ್ರೆ ಸೇವೆಗಳ ವಲಯವು 2030ರ ಹೊತ್ತಿಗೆ 19 ಲಕ್ಷ ಕೋಟಿ ಡಾಲರ್ (ಸುಮಾರು ₹1,640 ಲಕ್ಷ ಕೋಟಿ) ಮೌಲ್ಯದ ಉದ್ದಿಮೆಯಾಗಲಿದೆ. ಹಣ ಖರ್ಚು ಮಾಡಬಲ್ಲವರಿಗೆ ಉತ್ತಮ ಆರೋಗ್ಯ ಮತ್ತು ಶಿಕ್ಷಣ ಸಿಗುತ್ತಿದೆ. ಹಣವಿಲ್ಲದಿರುವವರಿಗೆ ಇವೆರಡೂ ಎಟುಕದಂತಾಗಿವೆ. ಜಾತಿ, ಲಿಂಗ, ವರ್ಣದ ನೆಲೆಯಲ್ಲೂ ಅಸಮಾನತೆ ಉಂಟಾಗುತ್ತಿದೆ. ಉದಾಹರಣೆಗೆ, ಭಾರತದಲ್ಲಿ ಏರುತ್ತಿರುವ ಆರೋಗ್ಯ ಸೇವೆಗಳ ವೆಚ್ಚವನ್ನು ಭರಿಸಲಾಗದೇ ದಲಿತರು ಸಮಸ್ಯೆ ಅನುಭವಿಸುತ್ತಿದ್ದಾರೆ. ಇದೇ ಕಾರಣಕ್ಕೆ ಅವರು ಖಾಸಗಿ ಶಿಕ್ಷಣ ಸಂಸ್ಥೆಗಳಿಂದಲೂ ದೂರ ಉಳಿದಿದ್ದಾರೆ.

ಸಾರ್ವಜನಿಕರ ಬೃಹತ್ ಮೊತ್ತದ ಹಣಕ್ಕೆ ಅಪಾಯ ಎದುರಾಗಿದೆ. ನೀತಿ ನಿರೂಪಕರು ತಮ್ಮ ಉದ್ಯಮಿ ಸ್ನೇಹಿತರು ಮತ್ತು ಇತರರ ಪರವಾಗಿ ಕೆಲಸ ಮಾಡುತ್ತಿರುವುದರಿಂದ ಭ್ರಷ್ಟಾಚಾರ ಹೆಚ್ಚಾಗಿದ್ದು, ಸರ್ಕಾರಗಳ ಆಡಳಿತದಲ್ಲಿ ಉದ್ಯಮಿಗಳ ಪಾತ್ರವೂ ಹೆಚ್ಚಾಗುತ್ತಿದೆ. ಸರ್ಕಾರಗಳಿಗೆ ಸಾರ್ವಜನಿಕ ಹಿತಾಸಕ್ತಿಗಳಿಗಿಂತ ಕಾರ್ಪೊರೇಟ್ ಹಿತಾಸಕ್ತಿಗಳು ಪ್ರಮುಖ ಆದ್ಯತೆಯಾಗಿ ಪರಿಣಮಿಸಿವೆ. ಈ ರೀತಿಯಾಗಿ ಖಾಸಗೀಕರಣವು ಕ್ರೋನಿಯಿಸಂ (ತನ್ನ ಅಧಿಕಾರ ಸ್ಥಾನದ ಮೂಲಕ ಉದ್ಯಮರಂಗದ ಮಿತ್ರರಿಗೆ ನೆರವಾಗುವುದು) ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಉದ್ಯಮಿಗಳು ಸಾರ್ವಜನಿಕ ನೀತಿಗಳನ್ನು ಪ್ರಭಾವಿಸುವ ಪ್ರವೃತ್ತಿ ಹೆಚ್ಚಾಗಿದ್ದು, ಸಾರ್ವಜನಿಕರ ಹೆಸರಿನಲ್ಲಿ ಖಾಸಗಿ ಬಂಡವಾಳಗಾರರು ಹೆಚ್ಚು ಹೆಚ್ಚು ಸಂಪತ್ತು ಗಳಿಸುತ್ತಿದ್ದಾರೆ.

ಜಗತ್ತಿನ ದಕ್ಷಿಣದ ಬಡ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಅನೇಕರು ಖಾಸಗಿ ಆಸ್ಪತ್ರೆಗಳಿಂದ ದಿವಾಳಿಯಾಗಿದ್ದಾರೆ ಎಂದು 2023ರ ಆಕ್ಸ್‌ಫಾಮ್ ಸಂಶೋಧನಾ ವರದಿ ಹೇಳಿತ್ತು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತಿತರ ಶ್ರೀಮಂತ ರಾಷ್ಟ್ರಗಳು ಮತ್ತು ವಿಶ್ವಬ್ಯಾಂಕ್‌ನಿಂದ ನೆರವು ಪಡೆದಿರುವ ಇವುಗಳನ್ನು ಆರೋಗ್ಯ ಸೇವೆಗಳ ಲಭ್ಯತೆಯನ್ನು ಖಾತರಿಪಡಿಸುವ ಸಲುವಾಗಿ ಸ್ಥಾಪಿಸಲಾಗಿದೆ ಎಂದು ಹೇಳಲಾಗಿತ್ತು. ಆದರೆ, ಭಾರತವೂ ಸೇರಿದಂತೆ ಕೆನ್ಯಾ, ನೈಜೀರಿಯಾ, ಉಗಾಂಡ ಮುಂತಾದ ದೇಶಗಳಲ್ಲಿ ಖಾಸಗಿ ಆಸ್ಪತ್ರೆಗಳು ರೋಗಿಗಳನ್ನು ಬಡತನಕ್ಕೆ ದೂಡಿವೆ.

ದುಬಾರಿ ವೆಚ್ಚ ಪಾವತಿಸಲಾಗದ ರೋಗಿಗಳನ್ನು ಬಂಧನದಲ್ಲಿಡುವುದು, ಬೆದರಿಸುವುದು, ತುರ್ತು ಸಂದರ್ಭಗಳಲ್ಲೂ ಚಿಕಿತ್ಸೆ ನಿರಾಕರಿಸುವುದು, ಮಾನವ ಹಕ್ಕುಗಳ ಉಲ್ಲಂಘನೆ, ಅಂಗಾಂಗ ಕಳ್ಳಸಾಗಣೆ, ಅನಗತ್ಯವಾಗಿ ದುಬಾರಿ ಚಿಕಿತ್ಸಾ ವಿಧಾನಗಳ ಮೊರೆಹೋಗುವಂತೆ ಒತ್ತಾಯಿಸುವುದು ಸೇರಿದಂತೆ ಅನೇಕ ರೀತಿಯಲ್ಲಿ ರೋಗಿಗಳನ್ನು ಆಸ್ಪತ್ರೆಗಳು ಶೋಷಿಸುತ್ತಿವೆ ಎಂದು ವರದಿ ತಿಳಿಸಿದೆ.

ಭಾರತದಲ್ಲಿ ಸದ್ಯ ಆರೋಗ್ಯ ಸೇವೆಗಳ ಕ್ಷೇತ್ರವು 23,600 ಕೋಟಿ ಡಾಲರ್ ಮೌಲ್ಯದ (ಸುಮಾರು ₹20 ಲಕ್ಷ ಕೋಟಿ) ಉದ್ಯಮವಾಗಿದ್ದು, ತ್ವರಿತವಾಗಿ ಬೆಳೆಯುತ್ತಿದೆ. ವಿಶ್ವಬ್ಯಾಂಕ್‌ನ ಅಂಗಸಂಸ್ಥೆ ಅಂತರರಾಷ್ಟ್ರೀಯ ಹಣಕಾಸು ನಿಗಮ (ಐಎಫ್‌ಸಿ) ನೇರವಾಗಿ ದೇಶದ ಪ್ರಮುಖ ಕಾರ್ಪೊರೇಟ್ ಆಸ್ಪತ್ರೆಗಳ ಸಮೂಹದಲ್ಲಿ ಬಂಡವಾಳ ಹೂಡಿಕೆ ಮಾಡಿದೆ. ಆದರೂ, ಐಎಫ್‌ಸಿಯು 25 ವರ್ಷಗಳಿಂದ ತನ್ನ ಆರೋಗ್ಯ ಯೋಜನೆಗಳನ್ನು ಒಮ್ಮೆಯೂ ಪರಾಮರ್ಶೆ ಮಾಡಿಲ್ಲ. ಸೇವೆಗಳಿಗೆ ಅತಿಹೆಚ್ಚು ದರ ನಿಗದಿಪಡಿಸಿದ್ದು, ರೋಗಿಗಳಿಗೆ ದುಬಾರಿ ಶುಲ್ಕ ವಿಧಿಸಿದ್ದು, ಬಡ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲು ನಿರಾಕರಿಸಿದಂಥ ಆರೋಪಗಳು ಆರೋಗ್ಯ ಸೇವೆಗಳ ನಿಯಂತ್ರಣ ಸಂಸ್ಥೆಗಳಲ್ಲಿ ಹಲವು ಬಾರಿ ಸಾಬೀತಾಗಿವೆ. ಇವು ಆಸ್ಪತ್ರೆ ನಿರ್ಮಾಣಕ್ಕಾಗಿ ಸರ್ಕಾರದಿಂದ ಉಚಿತ ಭೂಮಿ ಪಡೆದಿವೆ. ಮುಖ್ಯ ವಿಚಾರವೇನೆಂದರೆ, ಐಎಫ್‌ಸಿ ಧನಸಹಾಯ ಪಡೆದಿರುವ 144 ಆಸ್ಪತ್ರೆಗಳ ಪೈಕಿ ಕೇವಲ ಒಂದು ಆಸ್ಪತ್ರೆ ಗ್ರಾಮೀಣ ಪ್ರದೇಶದಲ್ಲಿದೆ.

ಆಧಾರ: ಆಕ್ಸ್‌ಫಾಮ್‌ನ 'ಇನ್‌ಇಕ್ವಾಲಿಟಿ ಐಎನ್‌ಸಿ' ವರದಿ

ಅಸಮಾನತೆ ಪೋಷಿಸುತ್ತಿರುವ ಕಾರ್ಪೊರೇಟ್ ಶಕ್ತಿಗಳು



ಜಾಗತಿಕವಾಗಿ ಏಕಸ್ವಾಮ್ಯ ಹೊಂದಿರುವ ಕಾರ್ಪೊರೇಟ್ ಶಕ್ತಿಗಳು ಆರ್ಥಿಕ ಅಸಮಾನತೆಗೆ ನೀರುಣಿಸುತ್ತಿವೆ ಎಂದು ವರದಿ ಹೇಳಿದೆ. ಅದರ ಪ್ರಕಾರ, ಕಾರ್ಪೊರೇಟ್ ಕಂಪನಿಗಳು ನಾಲ್ಕು ರೀತಿಯಲ್ಲಿ ಅಸಮಾನತೆಯನ್ನು ಪೋಷಿಸುತ್ತಿವೆ...

1. ಕಾರ್ಮಿಕರಿಗಿಲ್ಲ ಪ್ರತಿಫಲ; ಶ್ರೀಮಂತರಿಗೇ ಎಲ್ಲ

ಕಾರ್ಪೊರೇಟ್ ಕಂಪನಿಗಳು ತಮ್ಮಲ್ಲಿ ಕೆಲಸ ಮಾಡುವ ಉದ್ಯೋಗಿಗಳು/ಕಾರ್ಮಿಕರಿಗೆ ನಿಯಮಾನುಸಾರ ವೇತನ ನೀಡುವುದಿಲ್ಲ. ಆದರೆ, ಕಂಪನಿಯ ಲಾಭಾಂಶವನ್ನು ಶ್ರೀಮಂತ ಷೇರುದಾರರಿಗೆ ನೀಡುತ್ತವೆ. ಜಾಗತಿಕವಾಗಿ 79.1 ಕೋಟಿ ಕಾರ್ಮಿಕರ ವೇತನವು ಹಣದುಬ್ಬರಕ್ಕೆ ಅನುಗುಣವಾಗಿ ಇಲ್ಲ. ಮಹಿಳೆಯರಿಗೆ ಅತಿ ಕಡಿಮೆ ವೇತನ ನೀಡಲಾಗುತ್ತಿದೆ ಮತ್ತು ಅವರಿಗೆ ಉದ್ಯೋಗ ಭದ್ರತೆಯೂ ಇಲ್ಲ. ಇದರ ಜೊತೆಗೆ, ಕಾರ್ಮಿಕರ ಪರವಾಗಿರುವ ಕಾರ್ಮಿಕ ಕಾನೂನು, ನೀತಿಗಳನ್ನು ವಿರೋಧಿಸಲು ಕಾರ್ಪೊರೇಟ್ ಕಂಪನಿಗಳು ತಮ್ಮ ಪ್ರಭಾವವನ್ನು ಬಳಸುತ್ತಿವೆ ಎಂದು ವರದಿ ಹೇಳಿದೆ.

2. ತೆರಿಗೆಯಿಂದ ತಪ್ಪಿಸಿಕೊಳ್ಳುವುದು

ಕಾರ್ಪೊರೇಟ್ ಸಂಸ್ಥೆಗಳು ಮತ್ತು ಅದರ ಸಿರಿವಂತ ಮಾಲೀಕರು ಆಯಾ ದೇಶದ ತೆರಿಗೆ ಪದ್ಧತಿಯ ವಿರುದ್ಧ ಅತ್ಯಂತ ಪರಿಣಾಮಕಾರಿಯಾದ ಹೋರಾಟವನ್ನೇ ನಡೆಸುತ್ತಾರೆ. ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆಯ (ಒಇಸಿಡಿ) ಸದಸ್ಯ ರಾಷ್ಟ್ರಗಳಲ್ಲಿ ಶಾಸನಬದ್ಧ ಕಾರ್ಪೊರೇಟ್ ತೆರಿಗೆ ದರವು 1980ರಿಂದ ಈಚೆಗೆ ಅರ್ಧಕ್ಕಿಂತಲೂ ಹೆಚ್ಚು ಕಡಿತವಾಗಿದೆ. ಕಾರ್ಪೊರೇಟ್ ಕಂಪನಿಗಳ ಮೇಲೆ ವಿಧಿಸಲಾಗುತ್ತಿರುವ ತೆರಿಗೆಯನ್ನು ಕಡಿಮೆ ಮಾಡುವುದರಿಂದಲೂ ಆರ್ಥಿಕ ಅಸಮಾನತೆ ಉಂಟಾಗುತ್ತದೆ. ಕಂಪನಿಗಳು ಮತ್ತು ಶ್ರೀಮಂತರು ಕಡಿಮೆ ತೆರಿಗೆ ಪಾವತಿಸುವುದರಿಂದ ಸರ್ಕಾರದ ಬೊಕ್ಕಸಕ್ಕೆ ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ತೆರಿಗೆ ಆದಾಯ ಸಂಗ್ರಹವಾಗುವುದಿಲ್ಲ ಎಂದು ವರದಿ ಹೇಳಿದೆ.

3. ಸರ್ಕಾರಿ ಸೇವೆ ಖಾಸಗೀಕರಣಗೊಳಿಸುವುದು

ಜಗತ್ತಿನಾದ್ಯಂತ ಬಹುತೇಕ ರಾಷ್ಟ್ರಗಳಲ್ಲಿ ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಪೂರೈಕೆ ಸೇರಿದಂತೆ ನಾಗರಿಕರಿಗೆ ಮೂಲಭೂತವಾಗಿ ಬೇಕಾದ ಹಲವು ಪ್ರಮುಖ ಸೇವೆಗಳನ್ನು ಸರ್ಕಾರಗಳೇ ಒದಗಿಸುತ್ತಿವೆ. ಕಾರ್ಪೊರೇಟ್ ಕಂಪನಿಗಳು ತಮ್ಮ ಪ್ರಭಾವ ಬಳಸಿ, ಈ ಸೇವೆಗಳನ್ನು ಖಾಸಗೀಕರಣಗೊಳಿಸಲು ನಿರಂತರವಾಗಿ ಯತ್ನಿಸುತ್ತಿವೆ. ಕೆಲವು ಕಂಪನಿಗಳು ಈಗಾಗಲೇ ಕೆಲವು ಸಾರ್ವಜನಿಕ ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವ ಮೂಲಕ ಭಾರಿ ಪ್ರಮಾಣದಲ್ಲಿ ಲಾಭಗಳಿಸುತ್ತಿವೆ. ಜನರಿಗೆ ಅತ್ಯಂತ ಗುಣಮಟ್ಟದ ಸೇವೆ ಒದಗಿಸಿ ಅಸಮಾನತೆಯನ್ನು ಕಡಿಮೆ ಮಾಡುವ ಸರ್ಕಾರದ ಪ್ರಯತ್ನಕ್ಕೆ ಇದು ಹಿನ್ನಡೆ ಉಂಟು ಮಾಡುತ್ತದೆ. ಸೇವೆಗಳು ಅಥವಾ ಸರ್ಕಾರಿ ಸಂಸ್ಥೆಗಳ ಖಾಸಗೀಕರಣವು ಸಾರ್ವಜನಿಕ ಸೇವೆಗಳಲ್ಲೂ ಅಸಮಾನತೆಯನ್ನು ಸೃಷ್ಟಿಸುತ್ತವೆ. ಶ್ರೀಮಂತರು ಮತ್ತು ಬಡವರ ನಡುವಿನ ಕಂದಕವನ್ನು ಇನ್ನಷ್ಟು ಹೆಚ್ಚಿಸುತ್ತವೆ. ಯಾರಿಗೆ ಹಣ ಪಾವತಿಸಲು ಸಾಧ್ಯವಿದೆಯೋ ಅವರಿಗೆ ಮಾತ್ರ ಅತ್ಯುತ್ತಮ ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ಪಡೆಯುವುದಕ್ಕೆ ಸಾಧ್ಯವಿರುತ್ತದೆ ಎಂದು ವರದಿ ವಿವರಿಸಿದೆ.

4. ಜಾಗತಿಕ ಹವಾಮಾನ ಬದಲಾವಣೆಗೆ ಕಾರಣ

ಕಾರ್ಪೊರೇಟ್ ಕಂಪನಿಗಳು ಜಾಗತಿಕ ಮಟ್ಟದಲ್ಲಿ ಹವಾಮಾನ ಬದಲಾವಣೆಗೂ ಕಾರಣವಾಗುತ್ತಿವೆ. ಇದು ಕೂಡ ಲಿಂಗ, ವರ್ಗ, ವರ್ಣದ ಅಸಮಾನತೆಗೆ ಕಾರಣವಾಗುತ್ತಿವೆ. ಜಗತ್ತಿನ ಹಲವು ಶತಕೋಟ್ಯಧಿಪತಿಗಳು ಹಸಿರು ಮನೆ ಅನಿಲಗಳನ್ನು ಹೊರಸೂಸುವ ಉದ್ದಿಮೆಗಳನ್ನು ಹೊಂದಿದ್ದಾರೆ. ಈ ಉದ್ಯಮಗಳಿಂದ ದೊಡ್ಡ ಪ್ರಮಾಣದಲ್ಲಿ ಲಾಭಗಳಿಸುವ ಅವರು, ಅದರಿಂದಾಗುವ ಹವಾಮಾನ ಬದಲಾವಣೆಯನ್ನು ನಿರಾಕರಿಸುತ್ತಾರೆ. ಅಲ್ಲದೇ, ಈ ಕೈಗಾರಿಕೆಗಳನ್ನು ವಿರೋಧಿಸುವವರನ್ನು ಬಗ್ಗುಬಡಿಯುತ್ತಾರೆ ಎಂದು ವರದಿ ತಿಳಿಸಿದೆ.

ಆರ್ಥಿಕ ಸಮಾನತೆ ತರಲು ಏನು ಮಾಡಬೇಕು?

ಆರ್ಥಿಕ ಅಸಮಾನತೆಗೆ ಕಡಿವಾಣ ಹಾಕುವುದಕ್ಕಾಗಿ ಕಾರ್ಪೊರೇಟ್ ಪ್ರಭಾವವನ್ನು ತಗ್ಗಿಸಬೇಕು. ಇದಕ್ಕಾಗಿ ಸರ್ಕಾರಗಳು ಹೆಚ್ಚು ಬಲಿಷ್ಠವಾಗಬೇಕು ಎಂಬುದೂ ಸೇರಿದಂತೆ ಹಲವು ಸಲಹೆಗಳನ್ನು ಆಕ್ಸ್‌ಫಾಮ್ ನೀಡಿದೆ.

- ಜನರ ಒಳಿತಿಗಾಗಿ ದೇಶದ ಅರ್ಥವ್ಯವಸ್ಥೆಗೆ ಹೊಸ ರೂಪ ನೀಡಲು ಸರ್ಕಾರಗಳು ಕ್ರಮ ವಹಿಸಬೇಕು
- ಆರೋಗ್ಯ, ಶಿಕ್ಷಣ, ಆಹಾರ ಭದ್ರತೆ ಸೇರಿದಂತೆ ಸಾರ್ವಜನಿಕ ಸೇವೆಗಳಿಗೆ ಹೆಚ್ಚು ಒತ್ತು ನೀಡಬೇಕು. ಸಾರ್ವಜನಿಕ ಸಾರಿಗೆ, ಇಂಧನ, ವಸತಿ ಸೇರಿದಂತೆ ಇತರ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಹೆಚ್ಚು ಬಂಡವಾಳ ಹೂಡಬೇಕು
- ಖಾಸಗಿ ಕಂಪನಿಗಳು ಜನರ ಹಿತಾಸಕ್ತಿಗೆ ಅನುಗುಣವಾಗಿ ಕೆಲಸ ಮಾಡುವುದಕ್ಕಾಗಿ ನಿಯಂತ್ರಣ ನಿಯಮಗಳನ್ನು ಜಾರಿಗೊಳಿಸಬೇಕು
- ಕಾರ್ಪೊರೇಟ್ ಸಂಸ್ಥೆಗಳು ಕಾರ್ಮಿಕರಿಗೆ ಸರಿಯಾಗಿ ವೇತನ ನೀಡುವಂತೆ, ಲಿಂಗ ತಾರತಮ್ಯ ಹೋಗಲಾಡಿಸುವಂತೆ ನೋಡಿಕೊಳ್ಳಬೇಕು. ಕಾರ್ಮಿಕ ಸಂಘಟನೆಗಳಿಗೆ ಪ್ರೋತ್ಸಾಹ ನೀಡಬೇಕು
- ಶ್ರೀಮಂತರ ಮತ್ತು ಕಾರ್ಪೊರೇಟ್ ತೆರಿಗೆಯನ್ನು ಹೆಚ್ಚಿಸಬೇಕು

ಸಿನಿ ಬಿಟ್ಸ್

ಕಿರುತೆರೆಯಿಂದ ಬೆಳ್ಳಿತೆರೆಗೆ ಶಮಂತ್



ಆನಂದ್ ರಾಜ್, ಶಮಂತ್

ವಿಜಯ ರಾಘವೇಂದ್ರ ನಟನೆಯ 'ರಾಘು', ಅನಿರುದ್ಧ ನಟನೆಯ 'ಶೆಫ್ ಚಿದಂಬರ' ಸಿನಿಮಾಗಳನ್ನು ನಿರ್ದೇಶಿಸಿದ ಎಂ.ಆನಂದ್ ರಾಜ್ ಹೊಸ ಪ್ರಾಜೆಕ್ಟ್ ಘೋಷಿಸಿದ್ದಾರೆ.

'ಬಿಗ್‌ಬಾಸ್' 8ನೇ ಆವೃತ್ತಿಯಲ್ಲಿ ಸ್ಪರ್ಧಿಸಿ ಬಳಿಕ 'ಲಕ್ಷ್ಮೀಬಾರಮ್ಮ' ಧಾರಾವಾಹಿ ಮೂಲಕ ಗಮನಸೆಳೆದಿರುವ ಬ್ರೋಗೌಡ ಶಮಂತ್ ಅವರನ್ನು ಈ ಸಿನಿಮಾದ ನಾಯಕನನ್ನಾಗಿ ಆನಂದ್ ರಾಜ್ ಪರಿಚಯಿಸಿದ್ದಾರೆ. ಈ ಮೂಲಕ ಕಿರುತೆರೆಯಿಂದ ಬೆಳ್ಳಿತೆರೆಗೆ ಮೊದಲ ಹೆಜ್ಜೆ ಇಡುತ್ತಿದ್ದಾರೆ ಶಮಂತ್. 'ಇದು ಕನ್ನಡದ ಮೊದಲ ಝೂಂಬಿ ಸಿನಿಮಾ. ಚಿತ್ರದಲ್ಲಿ ಹೆಚ್ಚಿನ ಸಾಹಸ ದೃಶ್ಯಗಳು ಇರಲಿವೆ. ಹಾಲಿವುಡ್ ಸಿನಿಮಾಗಳಲ್ಲಿ ಇರುವಂತಹ ಆ್ಯಕ್ಷನ್ ಅನ್ನು ಈ ಸಿನಿಮಾದಲ್ಲಿ ನೋಡಬಹುದು. ಹೀಗಾಗಿ ಇದನ್ನು 'ವೈಲೆಂಟ್ ಆ್ಯಕ್ಷನ್ ಡ್ರಾಮಾ' ಎನ್ನಬಹುದು' ಎಂದಿದ್ದಾರೆ ಆನಂದ್.

ಬ್ರೋ ಮೀಡಿಯಾ ಮತ್ತು ಸನ್‌ರೈಸ್ ಕ್ಯಾಮೆರಾಸ್ ಪ್ರೊಡಕ್ಷನ್‌ನಡಿ ಮೂಡಿಬರಲಿರುವ ಈ ಚಿತ್ರಕ್ಕೆ ಸದ್ಯ 'ಪ್ರೊಡಕ್ಷನ್-1' ಎಂಬ ಶೀರ್ಷಿಕೆ ಇಡಲಾಗಿದೆ. ಪ್ರಿಪ್ರೊಡಕ್ಷನ್ ಕೆಲಸ ಪೂರ್ಣಗೊಳಿಸಿರುವ ಚಿತ್ರತಂಡ ಏಪ್ರಿಲ್‌ನಲ್ಲಿ ಚಿತ್ರೀಕರಣಕ್ಕೆ ಇಳಿಯಲಿದೆ. ಕೊಡಗು ಸುತ್ತಮುತ್ತದ ಅರಣ್ಯಗಳಲ್ಲಿ ಹೆಚ್ಚು ಶೂಟಿಂಗ್ ಇರಲಿದೆ. ಚಿತ್ರಕ್ಕೆ ಉದಯ್ ಲೀಲಾ ಛಾಯಾಚಿತ್ರಗ್ರಹಣ, ವಿಜೇತ್ ಚಂದ್ರ ಸಂಕಲನವಿದೆ.

'ಸ್ವಪ್ನಮಂಟಪ' ಹಾಡುಗಳ ಬಿಡುಗಡೆ



'ಸ್ವಪ್ನ ಮಂಟಪ' ಚಿತ್ರದ ಹಾಡುಗಳನ್ನು ಸಚಿವ ಎಚ್.ಕೆ. ಪಾಟೀಲ್ ಹಾಗೂ ಸಂಗೀತ ನಿರ್ದೇಶಕ ಗುರುಕಿರಣ್ ಬಿಡುಗಡೆಗೊಳಿಸಿದರು.

ನಿರ್ದೇಶಕ ಬರಗೂರು ರಾಮಚಂದ್ರಪ್ಪ ತಮ್ಮದೇ ಕಾದಂಬರಿಯನ್ನು ಆಧರಿಸಿ ನಿರ್ದೇಶಿಸಿರುವ 'ಸ್ವಪ್ನಮಂಟಪ' ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು.

ಚಿತ್ರಕ್ಕೆ ಸೆನ್ಸಾರ್ ಮಂಡಳಿಯು ಈಗಾಗಲೇ 'ಯು' ಪ್ರಮಾಣಪತ್ರ ನೀಡಿದೆ. ಸಚಿವ ಎಚ್.ಕೆ.ಪಾಟೀಲ್ ಹಾಗೂ ಸಂಗೀತ ನಿರ್ದೇಶಕ ಗುರುಕಿರಣ್ ಚಿತ್ರದ ಹಾಡುಗಳನ್ನು ಬಿಡುಗಡೆಗೊಳಿಸಿದರು. ವಿಜಯ ರಾಘವೇಂದ್ರ ಹಾಗೂ ರಂಜಿನಿ ರಾಘವನ್ ಮುಖ್ಯಭೂಮಿಕೆಯಲ್ಲಿರುವ ಈ ಚಿತ್ರದ ಚಿತ್ರಕಥೆ, ಸಂಭಾಷಣೆ, ಗೀತರಚನೆಯನ್ನು ಬರಗೂರು ಅವರೇ ಮಾಡಿದ್ದಾರೆ. ಶಮಿತಾ ಮಲ್ನಾಡ್ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಬಾಬುನಾಯ್ಕ್ ತಮ್ಮ ಮಲೈಮಹದೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯಿಂದ 'ಸ್ವಪ್ನಮಂಟಪ' ಚಿತ್ರವನ್ನು ನಿರ್ಮಿಸಿದ್ದಾರೆ. ಬರಗೂರು ರಾಮಚಂದ್ರಪ್ಪ ಮಾತನಾಡಿ, '25 ವರ್ಷಗಳ ಹಿಂದೆ ವಾರಪತ್ರಿಕೆಯಲ್ಲಿ ಪ್ರಕಟವಾದ ಕಾದಂಬರಿ 'ಸ್ವಪ್ನಮಂಟಪ'. ಇದೀಗ ಅದನ್ನು ಚಿತ್ರ ರೂಪದಲ್ಲಿ ಕಟ್ಟಿಕೊಡಲಾಗಿದೆ. ಚಾರಿತ್ರಿಕ ಸ್ಮಾರಕಗಳನ್ನು ಸಂರಕ್ಷಣೆ ಮಾಡಿ ಪರಂಪರೆ ಉಳಿಸಬೇಕು ಎನ್ನುವ ಆಶಯವನ್ನು ಅಭಿವ್ಯಕ್ತಿಪಡಿಸುವ ಚಿತ್ರ ಇದು. ಇದು ನನ್ನ ನಿರ್ದೇಶನದ 24ನೇ ಚಿತ್ರ' ಎಂದರು. ಚಿತ್ರದಲ್ಲಿ ರಾಣಿಯಾಗಿ ಹಾಗೂ ಶಿಕ್ಷಕಿಯಾಗಿ ರಂಜನಿ ರಾಘವನ್ ಕಾಣಿಸಿಕೊಂಡಿದ್ದಾರೆ. ಸುಂದರ್‌ರಾಜ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ನಾಗರಾಜ ಆದವಾನಿ ಛಾಯಾಚಿತ್ರಗ್ರಹಣ, ಸುರೇಶ್ ಅರಸು ಸಂಕಲನವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಈ ಜಗತ್ತು ಕರ್ತಾರನ ಕಮ್ಮಟ



ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

119

ಯಾರ ದೇಹ, ಮನಸ್ಸು ಮತ್ತು ಹೃದಯ ಪವಿತ್ರವಾಗಿದೆಯೋ ಅವರನ್ನು ಸದ್ಗುರು ಎನ್ನಬಹುದು. ನಿರಾಭಾರಿ ಸದ್ಗುರು. ನಿರಾಭಾರಿ ಅಂದರೆ ಯಾವುದನ್ನೂ ಅಪೇಕ್ಷೆ ಪಡದವ. ಯಾರಿಂದಲೂ ಏನನ್ನೂ ನಿರೀಕ್ಷೆ ಮಾಡದವ. ಒಮ್ಮೆ ಹೊಗಳಬಹುದು, ಒಮ್ಮೆ ತೆಗಳಬಹುದು, ಒಮ್ಮೆ ಮೇಲೆ ಕೂಡಿಸಬಹುದು, ಒಮ್ಮೆ ಕೆಳಗೆ ಕೂಡಿಸಬಹುದು, ಇದನ್ನೆಲ್ಲಾ ತಲೆಗೆ ಹಚ್ಚಿಕೊಳ್ಳದೆ ಯಾರಿಂದಲೂ ಏನನ್ನೂ ನಿರೀಕ್ಷಿಸದೆ ಬದುಕುತ್ತಾನಲ್ಲ ಅವನು ನಿರಾಭಾರಿ ಸದ್ಗುರು. ಗುರುಗಳಿಗೆ ಅನಿಮಿತ್ತ ಬಂಧು ಎಂದು ಕರೀತಾರೆ. ತಾಳಿ ಕಟ್ಟಿದ್ದಕ್ಕೆ ಆಕೆ ಹೆಂಡತಿಯಾದಳು. ತಾಯಿ ತಂದೆ ಗರ್ಭದಲ್ಲಿ ಹುಟ್ಟಿದ್ದಕ್ಕೆ ಅವರು ಬಂಧುಗಳಾದರು. ಇದ್ಯಾವುದೂ ಇಲ್ಲದೆ ಹೃದಯದಲ್ಲಿ ಪ್ರೇಮ ಮಾತ್ರ ಇಟ್ಟುಕೊಂಡು ಬಂಧುವಾಗುವವನು ಗುರು. ತನ್ನ ಬಳಿಗೆ ಬಂದ ಶಿಷ್ಯನನ್ನು ಅಂತಃಕರಣದಿಂದ ಪ್ರೀತಿಸುವವನು ನಿಜವಾದ ಗುರುವಾಗುತ್ತಾನೆ. ಗುರುವಾದವನು ಮಣ್ಣಿನ ರಕ್ಷಣೆಯನ್ನೂ ಮಾಡಬೇಕು, ಮನಸ್ಸಿನ ರಕ್ಷಣೆಯನ್ನೂ ಮಾಡಬೇಕು. ಯಾಕೆಂದರೆ ಮಣ್ಣು ಕೆಟ್ಟರೆ ಮನಸ್ಸೂ ಕೆಡುತ್ತದೆ. ಈ ಜಗತ್ತಿನಲ್ಲಿ ಎಲ್ಲವೂ ಮಣ್ಣಿನಿಂದಲೇ ಆಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಸ್ವಾತಂತ್ರ್ಯ ಹೋರಾಟಗಾರರು 'ಕ್ವಿಟ್ ಇಂಡಿಯಾ' ಚಳವಳಿ ಮಾಡಿದರು. ಈಗ ನಮಗೆ ಕ್ವಿಟ್ ಇಂಡಿಯಾ ಚಳವಳಿ ಬೇಡ. ಈಗ ಬೇಕಾಗಿರುವುದು ಕ್ಲೀನ್ ಇಂಡಿಯಾ, ಗ್ರೀನ್ ಇಂಡಿಯಾ ಮತ್ತು ಗ್ರೇಟ್ ಇಂಡಿಯಾ. ನಮ್ಮ ದೇಹ ಮುಪ್ಪಾಗಬಾರದು, ಚರ್ಮ ಸುಕ್ಕುಗಟ್ಟಬಾರದು, ಕೂದಲು ಬೆಳ್ಳಗಾಗಬಾರದು ಎಂದು ಹೇಳಲಿಕ್ಕಾಗುವುದಿಲ್ಲ. ಅದನ್ನು ನಿಯಂತ್ರಿಸಲೂ ಸಾಧ್ಯವಿಲ್ಲ. ಭೂಮಿ ತಿರುಗುತ್ತದೆ. ಈ ಬ್ರಹ್ಮಾಂಡದಲ್ಲಿ ನೂರಾರು ಗ್ರಹಗಳು ತಿರುಗುತ್ತಿವೆ. ಅವು ತಿರುಗುವಂತೆ ಮಾಡಿದ ಶಕ್ತಿ ಯಾವುದು? ತೆಂಗಿನಲ್ಲಿ ಸಿಹಿ ನೀರು ತುಂಬಿದವರಾರು, ಹೂವಿನಲ್ಲಿ ಸುಗಂಧವನ್ನು ತುಂಬಿದವರಾರು, ಹಣ್ಣಿನಲ್ಲಿ ಮಾಧುರ್ಯವನ್ನು ತುಂಬಿದವರಾರು, ಬಾಳೆ, ಮೂಸಂಬಿ ಹಣ್ಣು ತಿನ್ನುತ್ತೇವೆ. ಯಾರಾದರೂ ಆ ಗಿಡಗಳಿಗೆ ಸಕ್ಕರೆಯನ್ನು ಇಂಜೆಕ್ಟ್ ಮಾಡಿರ್ತಾರೇನು? ಈ ಎಲ್ಲ ಶಕ್ತಿಗೆ ಈಶ ಎಂದು ಕರೆದರು. ಅದಕ್ಕೇ ಶರಣರು 'ಈ ಜಗತ್ತು ಕರ್ತಾರನ ಕಮ್ಮಟ' ಎಂದು ಕರೆದರು.

ಡಚ್ ಪೇಂಟರ್ ಒಬ್ಬ ವೆನಗಾಗ್ ಅಂತ ಇದ್ದ. ಅವನ ಕನಸು ಏನೆಂದರೆ ಸಮುದ್ರ ದಂಡೆಯಲ್ಲಿ ಸೂರ್ಯೋದಯದ ಚಿತ್ರ ಬಿಡಿಸಬೇಕು ಅಂತ. ಅವನು ಪ್ರತಿ ದಿನ ಸಮುದ್ರದ ದಂಡೆಗೆ ಹೋಗುತ್ತಿದ್ದ. ಸೂರ್ಯೋದಯ ಆಗುವಾಗ ಆ ಚಿತ್ರವನ್ನು ಬಿಡಿಸುವ ಪ್ರಯತ್ನ ಮಾಡುತ್ತಿದ್ದ. ಪ್ರತಿ ದಿನ ಬಿಡಿಸಿದ ಚಿತ್ರವನ್ನು ಹರಿದು ಹಾಕುತ್ತಿದ್ದ. ಹೀಗೆಯೇ ವರ್ಷಾನುಗಟ್ಟಲೆ ಮಾಡಿದ. ಜನ ಎಲ್ಲ ಅವನಿಗೆ ಹುಚ್ಚು ಹಿಡಿದಿದೆ ಎಂದುಕೊಂಡು ಜೈಲಿಗೆ ಹಾಕಿದರು. 6 ತಿಂಗಳ ನಂತರ ಬಿಡುಗಡೆಯಾದ. ಮತ್ತೆ ಅವ ಪೇಪರು, ಬಣ್ಣ ಎಲ್ಲ ತೆಗೆದುಕೊಂಡು ಸಮುದ್ರ ದಂಡೆಗೆ ಬಂದು ಚಿತ್ರ ಬಿಡಿಸಲು ಆರಂಭಿಸಿದ. ಅಂತೂ ಒಂದು ದಿನ ಒಳ್ಳೆಯ ಚಿತ್ರ ಬಿಡಿಸಿದ. ಅದನ್ನು ನೋಡಿದ ಅವನ ಸ್ನೇಹಿತ 'ಏನು ಅದ್ಭುತ ಚಿತ್ರ ಬಿಡಿಸಿದ್ದೀಯ' ಎಂದ. ಅದಕ್ಕೆ ವೆನಗಾಗ್ 'ನಾನು ಬಿಡಿಸಿದ್ದು ಬರೀ ಚಿತ್ರ. ಇಲ್ಲಿ ಹೂವಿದೆ. ಆದರೆ ಸುಗಂಧವಿಲ್ಲ. ಹಣ್ಣಿದೆ ಸಿಹಿ ಇಲ್ಲ. ಸಮುದ್ರ ಇದೆ. ಆದರೆ ತೆರೆಗಳಿಲ್ಲ. ನಾನು ಬಿಡಿಸಿದ ಚಿತ್ರಗಳಲ್ಲಿ ಇದು ಸುಮ್ಮನೆ ಕಾಣುತ್ತದೆ ಅಷ್ಟೆ. ನಿಸರ್ಗ ಬಿಡಿಸಿದ ಚಿತ್ರಗಳನ್ನು ನೋಡು ನೀನು. ಮೇಲೆ ಕುಂತ ಈಶ್ವರ ನಿಜವಾದ ಕಲೆಗಾರ. ನನ್ನ ಕಲೆಗೆ ಕ್ಯಾನ್ವಾಸ್ ಬೇಕು. ಅವನಿಗೆ ಈ ಜಗತ್ತೇ ಒಂದು ಕ್ಯಾನ್ವಾಸ್' ಎಂದ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜನವರಿ 28, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಚತುರ್ದಶಿ ಗಂ. 19-37 ನಕ್ಷತ್ರ: ಪೂರ್ವಾಷಾಢ ಗಂ. 08-59 ಯೋಗ: ವಜ್ರ ಗಂ. 23-51 ಕರಣ: ವಿಷ್ಟಿ ಗಂ. 08-10, ಮಕರ ಮಾಸದ 14 ನೇ ದಿನ, ಮಳೆನಕ್ಷತ್ರ: ಶ್ರವಣ 2.

ರಾಹುಕಾಲ: ಮಧ್ಯಾಹ್ನ 03-00 – 04-30, ಸೂರ್ಯೋದಯ : 07-01 ಸೂರ್ಯಾಸ್ತ : 06-26, ಮುಸ್ಲಿಂ ದಿನಾಂಕ : 27 ರಜಬ್ , ದಿನ ವಿಶೇಷ : ರಟಂತಿ ಕಾಳಿಕಾ ಪೂಜೆ, ಲಾಲಾ ಲಜಪತರಾಯ್ ಜನ್ಮದಿನ, ಸಬ್-ಎ-ಮಿರಾಜ್ (ಹಿಂದಿನ ದಿನ ರಾತ್ರಿ) (ಮುಸ್ಲಿಂ) ಅದೃಷ್ಟ ಸಂಖ್ಯೆ : 5, 2

ಮೇಷ: ವೃತ್ತಿಯಲ್ಲಿ ಮೇಲಧಿಕಾರಿಗಳಿಗೂ ಹೊಂದಾಣಿಕೆ ಮೂಡುವುದು ಕಷ್ಟವೆನಿಸಲಿದೆ. ಪರಿಸ್ಥಿತಿಯ ಲಾಭ ಪಡೆಯಲು ವಿಫಲರಾಗಬೇಡಿ. ವಿದ್ಯಾರ್ಥಿಗಳಿಗೆ ಇದು ಸಾಧನೆಗೆ ಪೂರಕವಾದ ದಿನವಾಗಿದೆ.

ವೃಷಭ: ತಪ್ಪುಗಳನ್ನು ತಿದ್ದಿಹೇಳುವಲ್ಲಿ ಹಿರಿಯ ಅಧಿಕಾರಿಗಳು ಈ ದಿನ ನಿಮ್ಮ ನೆರವಿಗೆ ನಿಲ್ಲುವರು. ಹೂವು –ಹಣ್ಣುಗಳ ರಫ್ತು ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭವಿದೆ. ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವ ಸಾಧ್ಯತೆ.

ಮಿಥುನ: ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ವ್ಯಕ್ತಿಗಳಿಗೆ ಅಧಿಕ ಕಮಿಷನ್ ದೊರೆಯಲಿದೆ. ಸಂದರ್ಭಗಳನ್ನು ಬಳಸಿಕೊಳ್ಳುವ ಜಾಣತನ ತೋರಿಸಿ. ವಕೀಲರು ಈ ದಿನ ಕೋರ್ಟು ಕೆಲಸಗಳಲ್ಲಿ ಅಧಿಕ ವರಮಾನ ಗಳಿಸುವರು.

ಕರ್ಕಾಟಕ: ವ್ಯವಹಾರದಲ್ಲಿನ ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಿಂದ ವಿಚಾರ ತಿಳಿದುಕೊಳ್ಳುವುದು ಉತ್ತಮ. ಕಬ್ಬಿಣ ಮುಂತಾದ ಕಟ್ಟಡ ನಿರ್ಮಾಣದ ಸಾಮಗ್ರಿಗಳಿಂದ ಲಾಭವಿದೆ.

ಸಿಂಹ: ಅನಿಸಿಕೆಗಳನ್ನು ಉತ್ತಮ ರೀತಿಯಲ್ಲಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗುವುದು ಕಷ್ಟ. ವೃತ್ತಿರಂಗದಲ್ಲಿ ಅದೃಷ್ಟದ ಬಾಗಿಲು ತೆರೆಯುವುದು. ಸರ್ಕಾರಿ ಕೆಲಸಗಳು ಸುಲಭವಾಗಿ ಆಗಲಿದೆ.

ಕನ್ಯಾ: ಮನೆಯಲ್ಲಿ ಮತ್ತು ಕುಟುಂಬ ಸದಸ್ಯರಲ್ಲಿ ಮಾತಿಗೆ ಮನ್ನಣೆ ದೊರೆಯಲಿದೆ. ಲೆಕ್ಕ ಪರಿಶೋಧಕರಿಗೆ ಮತ್ತು ನ್ಯಾಯವಾದಿಗಳಿಗೆ ತೃಪ್ತಿಕರ ದಿನಗಳು. ಪ್ರತಿಷ್ಠಿತ ಮತ್ತು ಪ್ರಭಾವಿ ವ್ಯಕ್ತಿಗಳ ಪರಿಚಯವಾಗಲಿದೆ.

ತುಲಾ: ಸಹಚರರಲ್ಲಿನ ವಾದ ವಿವಾದಗಳಲ್ಲಿ ಸೋಲನ್ನು ಎದುರು ನೋಡಿದರೂ, ಅದರಿಂದಾಗಿ ತಪ್ಪು ತಿಳಿವಳಿಕೆಗಳು ದೂರಾಗಲಿವೆ. ಆದಾಯ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಯೋಜನೆಗಳನ್ನು ರೂಢಿಸಿಕೊಳ್ಳಬಹುದು.

ವೃಶ್ಚಿಕ: ಬೇರೆಯವರ ಸಹಾಯ ಅಪೇಕ್ಷಿಸದೆ ವಿಶ್ವಾಸದಿಂದ ಕಾರ್ಯೋನ್ಮುಖರಾಗಿ. ಜಯ ನಿಮ್ಮ ಪಾಲಿಗೆ ಒದಗುತ್ತದೆ. ಪರಿಣತರ ಸಲಹೆ ಹಾಗೂ ಸೂಚನೆಗಳೊಂದಿಗೆ ಮುಂದುವರಿದರೆ ಪರಿಸ್ಥಿತಿ ತಿಳಿಯಾಗುತ್ತದೆ.

ಧನು: ಹೊಂದಾಣಿಕೆಯ ಮನೋಭಾವ ಕಡಿಮೆಯಾಗುವುದರಿಂದ ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗದಂತೆ ಜಾಗ್ರತೆ ವಹಿಸಿ. ಕೆಲಸ ನಿಧಾನವಾಗಿ ನಡೆದರೂ ಸಹಚರರು ಸಮರ್ಪಕವಾಗಿ ಪೂರೈಸಿ ಕೊಡುವರು.

ಮಕರ: ವ್ಯಾಪಾರಸ್ಥರು ವ್ಯಾಪಾರ ಸ್ಥಳದ ವಿನ್ಯಾಸ ಹೊಸದಾಗಿಡಲೂ ಪ್ರಯತ್ನಿಸಿ. ಮಹಿಳಾ ಉದ್ಯೋಗಿಗಳಿಗೆ ಜವಾಬ್ದಾರಿ ದೊರೆಯಲಿದೆ. ಹೊಸ ಉದ್ಯೋಗಕ್ಕೆ ಹೊಂದಿಕೊಳ್ಳಲು ಕಷ್ಟವಾಗಬಹುದು.

ಕುಂಭ: ರಾಸಾಯನಿಕ ವಸ್ತುಗಳ ರಫ್ತು ವ್ಯವಹಾರ ನಡೆಸುವವರು ನಿಯಮಕ್ಕೆ ಬದ್ಧರಾಗಿರುವುದು ಉತ್ತಮ. ವಿದೇಶದಲ್ಲಿ ಉದ್ಯೋಗದ ಸಂಪಾದನೆಗಾಗಿ ಪ್ರಯತ್ನ ಮಾಡಬಹುದು. ವಾಹನ ಖರೀದಿಯ ಬಗ್ಗೆ ಚಿಂತನೆ ಬರಲಿದೆ.

ಮೀನ: ಅವಕಾಶಗಳನ್ನು ಸದುಪಯೋಗಗೊಳಿಸಿಕೊಳ್ಳುವ ಕಾರ್ಯ ಸಂಪೂರ್ಣ ನಿಮಗೆ ಬಿಟ್ಟ ವಿಚಾರವಾಗಿದೆ. ಗೆಳೆಯನಿಂದ ಎರಡು ದಿನಗಳವರೆಗಿನ ಆರ್ಥಿಕ ಸಹಾಯ ನಿರೀಕ್ಷಿಸಬಹುದು. ಹಸಿರು ಬಣ್ಣ ಅದೃಷ್ಟ ತರುವುದು.

ಪದಬಂಧ 5936


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರೇಮಿಗಳ ಹುಸಿಜಗಳ (6)
5.ದ್ರವದಿಂದ ತುಂಬಿದುದು (4)
6.ಗಾಳಿಯಲ್ಲಿ ಹಾರಿಸುವ ಆಟದ ಪಟ (4)
8.ಅಗಲವಾದ ಹರಿವಾಣ (3)
11.ತಪರಾಕಿ ನೀಡಿದವನಿಗೆ ಈ ಹೊಗಳಿಕೆ (3)
13.ಈ ಪರಿ ಬಂದಿರುವ ಸೋಲು (4)
14.ಅದೇ ತಾನೆ ಮೂಡುತ್ತಿರುವ ಸೂರ್ಯ (4)
16.ಕಣ್ಣಿಗೆ ಕಾಣುವ ಸಾಕ್ಷಿ (6)

ಮೇಲಿಂದ ಕೆಳಕ್ಕೆ

1.ದೇಶದ ಪ್ರಗತಿಗೆ ವಿರುದ್ಧವಾದುದು (4)
2.ಪಟ ಹಿಡಿದು ಮಾಡಿದ ಮೋಸ (3)
3.ಹಮ್ಮೀರನಿಗೊಲಿದ ಶಿವ (2)
4.ಆಯಾಳು ಮಾಡಿದ ಕ್ಷೌರ (4)
7.ಮಾಡಿದ ತಪ್ಪು ಕೆಲಸಕ್ಕಾಗಿ ಮರುಗುವಿಕೆ (4)
8.ಸಂಗೀತದಲ್ಲಿ ಸ್ವರಗಳ ಸೂಕ್ಷ್ಮವಾದ ನುಡಿತ (3)
9.ತರಿಯನ್ನು ತರಲು ತೋರಿದ ಅರ್ಜೆಂಟು! (4)
10.ಹೂವಿನ ಶರವಿದು (4)
12.ಅವನ ಕೆಟ್ಟ ಸ್ವಭಾವ !(4)
13.ಕಣ್ಣಿಗೆ ಕಾಣದಿರುವುದು ಪಕ್ಷದಲ್ಲಿದೆ (3)
15.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)



5935ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ಥಾನಪಲ್ಲಟ 4.ನಪಾಸು
5.ರಗಡು 6.ಪಥಿಕ
7.ಕವಾಟ 9.ವರದಿ
10.ಪಿನಾಕ 13.ಸೆರಗು
15.ಪದಕ 16.ಜಠರ
17.ಆಳ್ವೇರಿ 18.ಮರಣಕಾಲ

ಮೇಲಿಂದ ಕೆಳಕ್ಕೆ:
1.ಸ್ಥಾನಭ್ರಷ್ಟ 2.ಪರೋಪಕಾರ
3.ಟರಕ 4.ನಡುಕ
8.ವಾಚಕ 9.ವಜೀರ
11.ನಾಮಕರಣ 12.ಆಡಂಬೊಲ
14.ಗುಜರಿ 15.ಪರಮ

ಸುಡೊಕು 6321

			4		2		7	
3		6				2		5
	2			5			8	
8		5						1
			5	9	3		2	
7		2		6		5		4
				2		8		7
2		7					6	
			7		9	4		2


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6320 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,092
ಇಂದಿನ ಅಂತ್ಯ	22,829
	263
ದಿನದ ಕನಿಷ್ಠ	22,786

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹525
12 ಕ್ಕೆ	₹70
ಮೈಸೂರು	
100ಕ್ಕೆ	₹525

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಕೆ.ಜಿ)	₹470-700
ದ್ವಿತಳಿ (ಕೆ.ಜಿ)	₹355-816

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1430 (1430)
ಸೋಯಾ (ರಿಫೈನ್ಡ್)	₹1270 (1285)
ಸೂರ್ಯಕಾಂತಿ (ರಿಫೈನ್ಡ್)	₹1360 (1360)
ಪಾಮೊಲೀನ್	₹1310 (1310)

ಸುದ್ದಿ 2 ನಿಮಿಷ

ಸೆಬಿ: ಅಧ್ಯಕ್ಷ ಹುದ್ದೆಗೆ ಅರ್ಜಿ ಆಹ್ವಾನ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷ ಹುದ್ದೆಗೆ ಕೇಂದ್ರ ಸರ್ಕಾರವು ಸೋಮವಾರ ಅರ್ಜಿ ಆಹ್ವಾನಿಸಿದೆ.

ಪ್ರಸ್ತುತ ಸೆಬಿ ಅಧ್ಯಕ್ಷೆಯಾಗಿ ಮಾಧವಿ ಪುರಿ ಬುಚ್ ಇದ್ದಾರೆ. 2022ರ ಮಾರ್ಚ್ 2ರಂದು ಮೂರು ವರ್ಷದ ಅವಧಿಗೆ ಸೆಬಿ ಅಧ್ಯಕ್ಷೆಯಾಗಿ ಮಾಧವಿ ನೇಮಕಗೊಂಡಿದ್ದರು. ಇವರ ಅಧಿಕಾರಾವಧಿ ಫೆಬ್ರುವರಿ 28ರಂದು ಪೂರ್ಣಗೊಳ್ಳಲಿದೆ. ಇವರು ಸೆಬಿ ಅಧ್ಯಕ್ಷ ಸ್ಥಾನಕ್ಕೆ ನೇಮಕ ಆಗಿರುವ ಮೊದಲ ಮಹಿಳೆಯಾಗಿದ್ದಾರೆ.



ಫೆಬ್ರುವರಿ 17 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಹೊಸದಾಗಿ ನೇಮಕವಾಗುವ ಅಧ್ಯಕ್ಷರ ಗರಿಷ್ಠ ಅಧಿಕಾರಾವಧಿ 5 ವರ್ಷ ಅಥವಾ ಅಭ್ಯರ್ಥಿಗೆ 65 ವರ್ಷ ತುಂಬುವ ವರೆಗೆ ಇರುತ್ತದೆ. ಅಧ್ಯಕ್ಷರಿಗೆ ಮಾಸಿಕ ವೇತನ ₹5.62 ಲಕ್ಷ (ಕಾರು, ಮನೆ ಹೊರತುಪಡಿಸಿ) ಇರುತ್ತದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆ ಪ್ರಕಟಣೆ ತಿಳಿಸಿದೆ.

ಅದಾನಿ ಸಮೂಹದ ಸಾಗರೋತ್ತರ ಹೂಡಿಕೆಯಲ್ಲಿ ಮಾಧವಿ ಪುರಿ ಬುಚ್ ಮತ್ತು ಅವರ ಪತಿ ಧವಲ್ ಬುಚ್ ಪಾಲುದಾರಿಕೆ ಹೊಂದಿದ್ದರು ಎಂದು ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡೆನ್‌ಬರ್ಗ್ ರಿಸರ್ಚ್ ಆರೋಪಿಸಿತ್ತು. ಹಿತಾಸಕ್ತಿ ಸಂಘರ್ಷ ಆರೋಪ ಸಹ ಕೇಳಿಬಂದಿತ್ತು. ಆದರೆ, ಬುಚ್ ದಂಪತಿ ಈ ಆರೋಪವನ್ನು ಅಲ್ಲಗಳೆದಿದ್ದರು.

ಕೆನರಾ ಬ್ಯಾಂಕ್‌ಗೆ ₹4,104 ಕೋಟಿ ಲಾಭ

ನವದೆಹಲಿ (ಪಿಟಿಐ): 2024-25ರ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ₹4,104 ಕೋಟಿ ನಿವ್ವಳ ಲಾಭ ಗಳಿಸಿದೆ.

2023-24ರ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹3,656 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 12ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ವರಮಾನದಲ್ಲಿ ಶೇ 11.7ರಷ್ಟು ಹೆಚ್ಚಳವಾಗಿದ್ದು, ₹36,114 ಕೋಟಿ ಸಂಗ್ರಹವಾಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 4.39 ರಿಂದ ಶೇ 3.34ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 1.32 ರಿಂದ ಶೇ 0.89ಕ್ಕೆ ಕಡಿಮೆ ಆಗಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ
27-01-2025

ಜಾವಾ 70/80(ಹೊಸ)	9900-10000
ಜಾವಾ 80/90(ಹೊಸ)	9400-9500
ದಪ್ಪ ಮಧ್ಯಪ್ರದೇಶ(ಹೊಸ)	7800-7900
ದಪ್ಪ ಗುಜರಾತ್(ಹೊಸ)	8100-8200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1440)
ಒಂದು ವಾರದ ಡೆಲಿವರಿ	1435 (1435)
ಪಾಮ್ ವಾರದ ಡೆಲಿವರಿ	1308 (1308)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1285)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹79,950 (80,000)
ಬೆಳ್ಳಿ ಕೆ.ಜಿ ₹90,200 (90,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಿನಿಮಯ ದರ

$ ಡಾಲರ್	86.31
£ ಪೌಂಡ್	107.80
€ ಯುರೊ	90.55
¥ ಯೆನ್ (100ಕ್ಕೆ)	55

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹23500
ಎಸಿ	₹13020
ಆರ್‌ಪಿ	₹20000
ಆರ್‌ಸಿ	₹12230

ಅಡಿಕೆ ಧಾರಣೆ (₹ಕ್ವಿಂಟಲ್)

ಬಂಟ್ವಾಳ		ಕೋಕ	7099-22099	ಹೊಸಚಾಲಿ	23709-30039
ಕೋಕ	20000-27500	ಕೆಂಪುಗೋಟು	10899-31509	ಕೆಂಪುಗೋಟು	20309-22119
ಹೊಸ	30000-36000	ರಾಶಿ	22170-52099	ರಾಶಿ	42419-49799
ಹಳತು	45500-49500	ಸಿಪ್ಪೆಗೋಟು	6099-17199	ತಟ್ಟಿಬೆಟ್ಟೆ	27609-34099
ಕುಮಟ		ಶಿವಮೊಗ್ಗ		ಯಲ್ಲಾಪುರ	
ಚಾಲಿ	33099-37099	ಬೆಟ್ಟೆ	41999-57021	ಅಪಿ	61169-68965
ಚಿಪ್ಪು	20169-25609	ಗೊರಬಲು	17619-30179	ಬಿಳಿಗೋಟು	12899-26201
ಕೋಕ	6099-19999	ರಾಶಿ	30669-51699	ಚಾಲಿ	28435-38860
ಫ್ಯಾಕ್ಟರಿ	3019-24700	ಸರಕು	58399-95012	ಕೋಕ	6899-16899
ಹಳೆಚಾಲಿ	36099-38099	ಸಿದ್ದಾಪುರ		ಕೆಂಪುಗೋಟು	16499-27299
ಹೊಸಚಾಲಿ	27069-31669	ಬಿಳಿಗೋಟು	23489-26889	ರಾಶಿ	39600-58369
ಸಾಗರ		ಚಾಲಿ	32839-38039	ತಟ್ಟಿಬೆಟ್ಟೆ	27970-39099
ಬಿಳಿಗೋಟು	8632-26499	ಕೋಕ	17189-22899		
ಚಾಲಿ	18099-34209				

ಸೆನ್ಸೆಕ್ಸ್ 824 ಅಂಶ ಕುಸಿತ



ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಹೊರಹರಿವು, ಐ.ಟಿ, ತೈಲ ಮತ್ತು ಅನಿಲ ಕಂಪನಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸೋಮವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಶೇ 1ಕ್ಕೂ ಹೆಚ್ಚು ಕುಸಿತ ಕಂಡಿವೆ.

ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹9 ಲಕ್ಷ ಕೋಟಿ ಕರಗಿದೆ. ಬಿಎಸ್‌ಇ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ ₹410 ಲಕ್ಷ ಕೋಟಿಗೆ ಇಳಿದಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 824 ಅಂಶ (ಶೇ 1.08) ಇಳಿಕೆಯಾಗಿ, 75,336ಕ್ಕೆ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 263 ಅಂಶ (ಶೇ 1.14) ಕಡಿಮೆಯಾಗಿ, 22,829ಕ್ಕೆ ಕೊನೆಗೊಂಡಿತು. ಇದು ಏಳು ತಿಂಗಳ ಕನಿಷ್ಠ ಮಟ್ಟವಾಗಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವ್ಯಾಪಾರ ನೀತಿಗಳಿಂದಾಗಿ ಮಾರುಕಟ್ಟೆಯಲ್ಲಿ ಅನಿಶ್ಚಿತತೆ ತಲೆದೋರಿದೆ. ಇದು ಸಹ ಷೇರು ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಎಚ್‌ಸಿಎಲ್ ಟೆಕ್, ಜೊಮಾಟೊ, ಟೆಕ್ ಮಹೀಂದ್ರ, ಪವರ್ ಗ್ರಿಡ್, ಟಾಟಾ ಮೋಟರ್ಸ್, ಇನ್ಫೊಸಿಸ್, ಟಾಟಾ ಸ್ಟೀಲ್, ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಭಾರ್ತಿ ಏರ್‌ಟೆಲ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಐಸಿಐಸಿಐ ಬ್ಯಾಂಕ್, ಹಿಂದುಸ್ತಾನ್ ಯೂನಿಲಿವರ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಸ್‌ಬಿಐ ಮತ್ತು ಎಲ್ ಆ್ಯಂಡ್ ಟಿ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಏಷ್ಯನ್ ಮಾರುಕಟ್ಟೆಯಲ್ಲಿ ಶಾಂಘೈ ಮತ್ತು ಟೋಕಿಯೊ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಸೋಮವಾರದ ವಹಿವಾಟಿನಲ್ಲಿ ₹5,015 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 9 ಪೈಸೆ ಇಳಿಕೆ ಆಗಿದೆ. ಪ್ರತೀ ಡಾಲರ್ ಮೌಲ್ಯ ₹86.31 ಆಗಿದೆ.

ಕ್ವಿಂಟಲ್‌ಗೆ ಕೇವಲ ₹2 ಸಾವಿರ ದರ– ರೈತರು ಕಂಗಾಲು

ಶುಂಠಿ ಧಾರಣೆ ಕುಸಿತ

• ರಾಜೇಂದ್ರ ಹೆಗಡೆ

ಶಿರಸಿ: ಅತಿವೃಷ್ಟಿ, ರೋಗಬಾಧೆ ತಾಳಿಕೊಂಡು ಬೆಳೆದ ಉತ್ತಮ ಗುಣಮಟ್ಟದ ಶುಂಠಿಗೆ ಮಾರುಕಟ್ಟೆಯಲ್ಲಿ ಸಾಧಾರಣ ಧಾರಣೆಯೂ ಸಿಗುತ್ತಿಲ್ಲ. ಇದರಿಂದ ಬೆಳೆಗಾರರು ಹತಾಶರಾಗಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಮುಂಡಗೋಡ ಭಾಗದ 250 ಹೆಕ್ಟೇರ್‌ಗಿಂತ ಹೆಚ್ಚಿನ ಪ್ರದೇಶದಲ್ಲಿ ಶುಂಠಿ ಬೆಳೆಯಲಾಗುತ್ತಿದೆ. ಇದರಲ್ಲಿ ಅತಿವೃಷ್ಟಿ ಮತ್ತು ಕೊಳೆ ರೋಗದ ಕಾರಣಕ್ಕೆ ಶೇ 50ರಷ್ಟು ಬೆಳೆ ಬೆಳೆಗಾರರ ಕೈತಪ್ಪಿತ್ತು. ಹೆಚ್ಚುವರಿ ಶಿಲೀಂಧ್ರನಾಶಕ, ರಸಗೊಬ್ಬರ ನೀಡಿ ಉಳಿಸಿಕೊಂಡಿದ್ದ ಬೆಳೆ ಈಗ ಕಟಾವಿನ ಹಂತದಲ್ಲಿದ್ದು, ದರ ಕುಸಿದಿದೆ.

'ಕಳೆದ ವರ್ಷ ಶುಂಠಿ ದರ ಕ್ವಿಂಟಲ್‌ಗೆ ₹9 ಸಾವಿರ ಇತ್ತು. ಪ್ರಸಕ್ತ ವರ್ಷ ಶುಂಠಿ ದರ ಕ್ವಿಂಟಲ್‌ಗೆ ₹2 ಸಾವಿರಕ್ಕೆ ಕುಸಿದಿದೆ. ಇದು ಶುಂಠಿಗೆ ಹಾಕಿದ ಗೊಬ್ಬರದ ಹಣಕ್ಕೂ ಸಮವಿಲ್ಲ' ಎಂದು ಬೆಳೆಗಾರರು ತಿಳಿಸಿದರು.

'ನಾಟಿ ಮಾಡುವ ಶುಂಠಿಯ ಬೆಲೆ 60 ಕೆ.ಜಿ ಚೀಲಕ್ಕೆ ಸರಾಸರಿ ₹3 ಸಾವಿರ ಇದೆ. ಎಕರೆಗೆ ಕನಿಷ್ಠ 25 ಚೀಲ ಶುಂಠಿ ಬೇಕು. ಬಿತ್ತನೆ ಶುಂಠಿಗೆ ಎಕರೆಗೆ ₹75 ಸಾವಿರ ಖರ್ಚು ಮಾಡಬೇಕು. ಹೊಲಕ್ಕೆ ತುಂತುರು ನೀರಾವರಿ ಸೆಟ್ ಅಳವಡಿಸಬೇಕು. ತಿಂಗಳಿಗೆ ಒಮ್ಮೆ ಕೀಟನಾಶಕ ಸಿಂಪಡಿಸಲು ₹5 ಸಾವಿರ, ಕಳೆ ತೆಗೆಸಲು 25 ರಿಂದ 30 ಕೂಲಿ ಆಳುಗಳು ಬೇಕು. ಒಂದು ಆಳಿಗೆ ₹350 ರಂತೆ ಒಮ್ಮೆ ಕಳೆ ತೆಗೆಸಲು ₹10 ಸಾವಿರ ಖರ್ಚಾಗುತ್ತದೆ. ಬರುವ ಉತ್ಪನ್ನ ಅರ್ಧದಷ್ಟಿದೆ. ಇಂಥ ಸನ್ನಿವೇಶದಲ್ಲಿ ಇಷ್ಟು ಕಡಿಮೆ ದರ ಸಿಕ್ಕಿದರೆ ಹಾಕಿದ ಬಂಡವಾಳವೂ ಕೈಸೇರುವುದಿಲ್ಲ' ಎಂಬುದು ಬಹುತೇಕ ಬೆಳೆಗಾರರ ಚಿಂತೆ.



ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ಮಾರಾಟದ ಉದ್ದೇಶಕ್ಕೆ ಶುಂಠಿ ಕೊಯ್ಲು ನಡೆಯಿತು

ಮುಂಬೈ, ದೆಹಲಿ ಮಾರುಕಟ್ಟೆಯಲ್ಲಿ ನಮ್ಮ ಭಾಗದ ಶುಂಠಿಗೆ ಬೇಡಿಕೆ ಇದೆ. ಆದರೆ, ಮಧ್ಯವರ್ತಿಗಳು ಒಡಿಶಾದ ಶುಂಠಿ ಮುನ್ನೆಲೆಗೆ ತಂದು ಉಳಿದ ಕಡೆಯ ಶುಂಠಿಯ ದರ ಇಳಿಸುತ್ತಿದ್ದಾರೆ

ಸಂತೋಷ ನಾಯ್ಕ, ಶುಂಠಿ ಬೆಳೆಗಾರ

'ಒಡಿಶಾ ಭಾಗದಲ್ಲಿ ವ್ಯಾಪಕವಾಗಿ ಶುಂಠಿ ಬೆಳೆಯಲಾಗಿದೆ. 2ನೇ ಹಾಗೂ 3ನೇ ದರ್ಜೆಯ ಶುಂಠಿ ಕ್ವಿಂಟಲ್ ಒಂದಕ್ಕೆ ₹1,800ರಿಂದ ₹2,300 ದರಕ್ಕೆ ರಾಜ್ಯ ಮತ್ತು ಉತ್ತರ ಭಾರತದ ಮಾರುಕಟ್ಟೆಗೆ ಬರುತ್ತಿದೆ. ಹೀಗಾಗಿ ಈ ಭಾಗದ ಗುಣಮಟ್ಟದ ಶುಂಠಿಯ ದರವನ್ನು ಇಳಿಸಿ ವ್ಯಾಪಾರಿಗಳು ಖರೀದಿಸುತ್ತಾರೆ. ಇದರಿಂದ ಬೆಳೆಗಾರರಿಗೆ ಆರ್ಥಿಕ ನಷ್ಟವಾಗುತ್ತಿದೆ' ಎಂದು ವ್ಯಾಪಾರಿ ಬಸವರಾಜ ಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

'ಕಳೆದ ವರ್ಷದ ದರ ಸಿಗದು'

ಭತ್ತದ ಬೆಳೆಗಾರರಿಂದ ಭೂಮಿ ಬಾಡಿಗೆ ಪಡೆದು ಶುಂಠಿ ಕೃಷಿ ಮಾಡಿದ್ದ ಹಲವು ಬೆಳೆಗಾರರು ದರ ಕುಸಿತದಿಂದ ಕಂಗೆಟ್ಟಿದ್ದಾರೆ. ಭೂಮಾಲೀಕರಿಗೆ ಇಂತಿಷ್ಟು ಹಣ ನೀಡುವ ಜತೆ ಶುಂಠಿ ಬೆಳೆಗೆ ಹಾಕಿದ ಹಣದ ಕಾಲು ಪಾಲು ಈ ಬೆಳೆಗಾರರಿಗೆ ಸಿಕ್ಕಿಲ್ಲ. 'ದರ ಅಲ್ಪಸ್ವಲ್ಪ ಏರಿಕೆಯಾದರೂ ಕಳೆದ ವರ್ಷದಷ್ಟು ಬರಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯ ಮಾರುಕಟ್ಟೆ ತಜ್ಞರದ್ದು.

'ಜಿಲ್ಲೆಯಲ್ಲಿ ಈ ಹಿಂದೆ ಶುಂಠಿ ಕ್ಷೇತ್ರ ಕಡಿಮೆಯಿತ್ತು. ಎರಡು ವರ್ಷಗಳಲ್ಲಿ ದ್ವಿಗುಣವಾಗಿದ್ದು, ಉತ್ಪಾದನೆ ಹೆಚ್ಚಿರುವ ಕಾರಣಕ್ಕೂ ದರ ಇಳಿದಿರುವ ಸಾಧ್ಯತೆಯಿದೆ' ಎಂದು ತೋಟಗಾರಿಕಾ ಇಲಾಖೆ ಅಧಿಕಾರಿಗಳು ತಿಳಿಸಿದರು.


ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹14100-14500
ತಿಪಟೂರು	₹13700-14550

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹2500-3200
ಮಧ್ಯಮ	₹1500-2500
ಸಣ್ಣ	₹800-1500

ಪುಣ್ಯಸ್ಮರಣೆ



ಶ್ರೀಮತಿ ಉಮಾ ವಿಶ್ವನಾಥ್

ಜನನ: 18.06.1958 – ಮರಣ: 28.01.2022

ಶ್ರೀಮತಿ ಉಮಾ ವಿಶ್ವನಾಥ್ ಒಬ್ಬ ಉದ್ಯಮಿ, ಪತ್ನಿ, ಅಜ್ಜಿ ಮತ್ತು ಆರ್. ವಿಶ್ವನಾಥ್‌ರವರ ಧರ್ಮಪತ್ನಿಯಾದ ನೀವು ಎಂದೆಂದಿಗೂ ನಮ್ಮ ಹೃದಯದಲ್ಲಿ

ನಿಮ್ಮ ನಿರ್ಭಯ ನಡೆ, ನುಡಿ ಮತ್ತು ನಿಮ್ಮ ಸದ್ಗುಣಗಳಿಂದ ಎಲ್ಲರನ್ನು ಸೆಳೆಯುತ್ತಿದ್ದ ರೀತಿ, ಶಕ್ತಿ, ನಮ್ಮೆಲ್ಲರ ಬಾಳಿಗೆ ದಾರಿದೀಪವಾಗಿದೆ.

ದುಃಖತಪ್ತರು:
ಆರ್. ವಿಶ್ವನಾಥ್, ಮಕ್ಕಳು, ಮೊಮ್ಮಕ್ಕಳು ಮತ್ತು ನಂದಾವನಮ್ ಕುಟುಂಬ.

ಸಂಕ್ಷಿಪ್ತ ಸುದ್ದಿ

ಬೆಳ್ಳಿ ದರ ಕೆ.ಜಿಗೆ ₹2 ಸಾವಿರ ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆ ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹2,000 ಕಡಿಮೆಯಾಗಿ, ₹92 ಸಾವಿರ ಆಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹100 ಇಳಿಕೆಯಾಗಿ, ₹83 ಸಾವಿರದಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ ₹82,600ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅದಾನಿ ವಿಲ್ಮರ್‌ಗೆ ₹411 ಕೋಟಿ ಲಾಭ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಅದಾನಿ ಸಮೂಹದ ಅದಾನಿ ವಿಲ್ಮರ್ ಲಿಮಿಟೆಡ್ ₹411 ಕೋಟಿ ನಿವ್ವಳ ಲಾಭ ಗಳಿಸಿದೆ.

2023-24ರ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹200 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ದುಪ್ಪಟ್ಟು ಹೆಚ್ಚಳವಾಗಿದೆ. ಅಡುಗೆ ಎಣ್ಣೆ ಮಾರಾಟದಲ್ಲಿನ ಹೆಚ್ಚಳದಿಂದ ಲಾಭದ ಪ್ರಮಾಣ ಏರಿಕೆ ಆಗಿದೆ ಎಂದು ಕಂಪನಿ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಒಟ್ಟು ವರಮಾನವು ₹16,926 ಕೋಟಿ ಸಂಗ್ರಹವಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹12,887 ಕೋಟಿಯಿತ್ತು. ವೆಚ್ಚದಲ್ಲಿ ಏರಿಕೆಯಾಗಿದ್ದು, ₹16,379 ಕೋಟಿಯಾಗಿದೆ ಎಂದು ತಿಳಿಸಿದೆ.

ಬಾಂಗ್ಲಾ: ಪತ್ತೆಯಾಗದ 700 ಕೈದಿಗಳು

ಢಾಕಾ(ಪಿಟಿಐ): ಬಾಂಗ್ಲಾದೇಶದಲ್ಲಿ ಕಳೆದ ಜುಲೈನಿಂದ ಆಗಸ್ಟ್‌ವರೆಗೆ ನಡೆದ ರಾಜಕೀಯ ದಂಗೆಯ ಸಂದರ್ಭದಲ್ಲಿ ಜೈಲಿನಿಂದ ತಪ್ಪಿಸಿಕೊಂಡು ಹೋಗಿರುವ ಸುಮಾರು 700 ಕೈದಿಗಳು ಇನ್ನೂ ತಲೆಮರೆಸಿಕೊಂಡಿದ್ದಾರೆ ಎಂದು ಮಧ್ಯಂತರ ಸರ್ಕಾರ ಹೇಳಿದೆ.

ಜೈಲಿನಿಂದ ತಪ್ಪಿಸಿಕೊಂಡು ಹೋಗಿದ್ದ ಅನೇಕ ಕೈದಿಗಳನ್ನು ಮತ್ತೆ ಬಂಧಿಸಲಾಗಿದೆ. ಉಳಿದ 700 ಕೈದಿಗಳನ್ನು ಸೆರೆ ಹಿಡಿಯುವ ಪ್ರಯತ್ನಗಳು ನಡೆಯುತ್ತಿವೆ ಎಂದು ಗೃಹ ಸಚಿವಾಲಯದ ಸಲಹೆಗಾರ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಜಹಾಂಗೀರ್ ಆಲಂ ಚೌಧರಿ ಅವರು ಹೇಳಿದರು.

'ತಪ್ಪಿಸಿಕೊಂಡಿರುವ ಎಲ್ಲಾ ಕೈದಿಗಳ ಕುರಿತು ಸಮಗ್ರ ತನಿಖೆ ನಡೆಯುತ್ತಿದೆ. ಆ.5ರ ನಂತರ ಸಾಮಾನ್ಯ ಕ್ಷಮಾದಾನದ ಅಡಿಯಲ್ಲಿ ಯಾವುದೇ ಅಪರಾಧಿಯನ್ನು ಜೈಲಿನಿಂದ ಬಿಡುಗಡೆ ಮಾಡಿಲ್ಲ. ಜಾಮೀನು ಪಡೆದವರು ಮಾತ್ರವೇ ಜೈಲಿನಿಂದ ಹೊರಗೆ ಹೋಗಿದ್ದಾರೆ' ಎಂದರು. ದೇಶದಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗಲು ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವುದೇ ಕಾರಣ ಎಂಬ ಆರೋಪಗಳ ಕುರಿತು ಪ್ರತಿಕ್ರಿಯಿಸಿದ ಅವರು 'ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

ರಿಲಯನ್ಸ್‌ನಿಂದ ಜಿಯೊಸೌಂಡ್‌ಪೇ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಯೊಭಾರತ್ ಫೋನ್‌ಗಳಲ್ಲಿ ಹೊಸ ವೈಶಿಷ್ಟ್ಯವಾದ ಜಿಯೊಸೌಂಡ್‌ಪೇ ಅನ್ನು ರಿಲಯನ್ಸ್ ಜಿಯೊ ಕಂಪನಿ ಪರಿಚಯಿಸಿದೆ.

ದೇಶದಾದ್ಯಂತ 5 ಕೋಟಿ ಸಣ್ಣ ವ್ಯಾಪಾರಿಗಳಿಗೆ ಇದರಿಂದ ಅನುಕೂಲವಾಗಲಿದೆ. ಜಿಯೊಸೌಂಡ್‌ಪೇ ಮೂಲಕ ಪ್ರತಿ ಯುಪಿಐ ಪಾವತಿಗೆ ತ್ವರಿತ ಹಾಗೂ ಬಹುಭಾಷಾ ಧ್ವನಿಯ ದೃಢೀಕರಣ ಒದಗಿಸಲಿದೆ ಎಂದು ಜಿಯೊ ಕಂಪನಿ ತಿಳಿಸಿದೆ.

ಸಣ್ಣ ಕಿರಾಣಿ ಅಂಗಡಿಗಳು, ತರಕಾರಿ ಮಾರಾಟಗಾರರು ಮತ್ತು ರಸ್ತೆಬದಿಯಲ್ಲಿ ತಿನಿಸು ಮಾರಾಟದಲ್ಲಿ ಅಡೆತಡೆ ಇಲ್ಲದೆ ಮತ್ತು ಪರಿಣಾಮಕಾರಿಯಾಗಿ ವ್ಯಾಪಾರ ಚಟುವಟಿಕೆ ನಡೆಸಲು ಸಹಕಾರಿಯಾಗಲಿದೆ ಎಂದು ಕಂಪನಿ ತಿಳಿಸಿದೆ.



ಈಗಾಗಲೇ ಇರುವ ಅತಿಸಣ್ಣ ಮತ್ತು ಸಣ್ಣ ವ್ಯಾಪಾರಿಗಳು ಈ ಸೌಂಡ್ ಬಾಕ್ಸ್‌ಗಾಗಿ ತಿಂಗಳಿಗೆ ಸುಮಾರು ₹125 ಪಾವತಿಸುತ್ತಾರೆ. ಈಗ ಜಿಯೊಸೌಂಡ್‌ಪೇ ಅನ್ನು ಉಚಿತವಾಗಿ ನೀಡುವುದರಿಂದ ಜಿಯೊಭಾರತ್ ಬಳಕೆದಾರರಿಗೆ ವಾರ್ಷಿಕವಾಗಿ ₹1,500 ಉಳಿತಾಯವಾಗಲಿದೆ.

'ಒಂದು ವರ್ಷದ ಹಿಂದೆ ಬಿಡುಗಡೆಯಾದ ಜಿಯೊಭಾರತ್ ಫೋನ್ ಕೇವಲ ₹699ಕ್ಕೆ ಲಭ್ಯವಿರುವ ವಿಶ್ವದ ಅತ್ಯಂತ ಕೈಗೆಟುಕುವ 4ಜಿ ಫೋನ್ ಆಗಿದೆ. ಆ ಮೂಲಕ ಹೊಸ ಜಿಯೊಭಾರತ್ ಫೋನ್ ಖರೀದಿಸುವ ಯಾವುದೇ ವ್ಯಾಪಾರಿ ಕೇವಲ 6 ತಿಂಗಳಲ್ಲಿ ಫೋನ್‌ನ ಸಂಪೂರ್ಣ ಬೆಲೆಯನ್ನು ಮರುಪಡೆದಂತೆ ಆಗುತ್ತದೆ. ಜಿಯೊಸೌಂಡ್‌ಪೇನಲ್ಲಿ ವಂದೇ ಮಾತರಂ ಅನ್ನು ಪ್ರಸ್ತುತಪಡಿಸಲಾಗುತ್ತಿದೆ' ಎಂದು ಜಿಯೊ ಅಧ್ಯಕ್ಷ ಸುನೀಲ್ ದತ್ ಹೇಳಿದ್ದಾರೆ.

ಅಕ್ರಮ ಸೈಬರ್ ಕೇಂದ್ರ: 67 ಭಾರತೀಯರ ರಕ್ಷಣೆ

ವೆಂಟಿಯಾನ್ (ಲಾವೋಸ್) (ಪಿಟಿಐ): ಲಾವೋಸ್‌ನಲ್ಲಿ ಸೈಬರ್ ಅಪರಾಧಗಳನ್ನು ಎಸಗುತ್ತಿದ್ದ ಕೇಂದ್ರವೊಂದರಲ್ಲಿ ಉದ್ಯೋಗ ಮಾಡುತ್ತಿದ್ದ 67 ಭಾರತೀಯರನ್ನು ಸೋಮವಾರ ಭಾರತದ ರಾಯಭಾರ ಕಚೇರಿ ರಕ್ಷಿಸಿದೆ. ಮಾನವ ಕಳ್ಳಸಾಗಣೆ ಮೂಲಕ ಇವರಲ್ಲಿ ಕೆಲವರನ್ನು ಒತ್ತಾಯದಿಂದ ಇಲ್ಲಿ ಕೆಲಸಕ್ಕೆ ಇರಿಸಿಕೊಳ್ಳಲಾಗಿತ್ತು.

ಲಾವೋಸ್‌ನ ಬೊಕೆಯೊ ಪ್ರದೇಶದಲ್ಲಿರುವ ಗೋಲ್ಡನ್ ಟ್ರಯಾಂಗಲ್ ಸ್ಪೆಶಲ್ ಇಕನಾಮಿಕ್ ಜೋನ್ (ಜಿಟಿಎಸ್‌ಇಜೆಡ್) ಪ್ರದೇಶದಲ್ಲಿ ಈ ಕೇಂದ್ರ ಇತ್ತು. ಅಪರಾಧಿಗಳ ದೊಡ್ಡ ಸಿಂಡಿಕೇಟ್‌ವೊಂದು ಈ ಕೇಂದ್ರವನ್ನು ನಿಯಂತ್ರಿಸುತ್ತಿತ್ತು. ಈ ಕೇಂದ್ರದಲ್ಲಿ ಉದ್ಯೋಗದಲ್ಲಿದ್ದ ಭಾರತೀಯರು ಸಹಾಯಕ್ಕಾಗಿ ರಾಯಭಾರ ಕಚೇರಿಗೆ ಮೊರೆ ಇಟ್ಟಿದ್ದರು. ರಾಯಭಾರ ಕಚೇರಿಯು ಲಾವೋಸ್‌ನ ಅಧಿಕಾರಿಗಳೊಂದಿಗೆ ಸೇರಿ ರಕ್ಷಣಾ ಕಾರ್ಯಾಚರಣೆ ನಡೆಸಿತು.

ಥಾಯ್ಲೆಂಡ್‌ನಲ್ಲಿ ಉದ್ಯೋಗ ಆಮಿಷ: ಎಚ್ಚರಿಕೆ

ವಿದೇಶಗಳಲ್ಲಿ ಉದ್ಯೋಗ ಮಾಡಲು ಬಯಸುವ ಭಾರತದ ಯುವಕರಿಗೆ ಲಾವೋಸ್‌ನಲ್ಲಿರುವ ಭಾರತ ರಾಯಭಾರ ಕಚೇರಿಯು ಎಚ್ಚರದಿಂದ ಇರುವಂತೆ ಸೂಚಿಸಿದೆ.

'ಥಾಯ್ಲೆಂಡ್‌ನಲ್ಲಿ ಉದ್ಯೋಗ ಕೊಡಿಸುವುದಾಗಿ ನಂಬಿಸಲಾಗುತ್ತದೆ. ಅಲ್ಲಿಗೆ ಹೋದ ಮೇಲೆ ಥಾಯ್ಲೆಂಡ್ ಮತ್ತು ಲಾವೋಸ್ ದೇಶಗಳ ಗಡಿ ಭಾಗದ ಒಂದು ಜಾಗಕ್ಕೆ ರಸ್ತೆ ಮೂಲಕ ಬರುವಂತೆ ಹೇಳುತ್ತಾರೆ. ಹೀಗಾದರೆ, ನಿಮ್ಮನ್ನು ಗೋಲ್ಡನ್ ಟ್ರಯಾಂಗಲ್ ಸ್ಪೆಶಲ್ ಇಕನಾಮಿಕ್ ಜೋನ್‌ಗೆ (ಜಿಟಿಎಸ್‌ಇಜೆಡ್) ಕಳ್ಳಸಾಗಣೆ ಮಾಡುತ್ತಿದ್ದಾರೆ ಎಂದರ್ಥ' ಎಂದು ರಾಯಭಾರ ಕಚೇರಿ ಹೇಳಿದೆ.

ಪ್ಯಾಲೆಸ್ಟೀನ್ ಜನ ಗಾಜಾದತ್ತ

ಡೇರ್ ಅಲ್ ಬಾಲಾ (ಎಪಿ/ಎಎಫ್‌ಪಿ) : ಊರು ಸೇರುವ ತವಕ, ಮುಖದಲ್ಲಿ ಅತೀವ ಸಂತಸ, ತಮ್ಮ ಬಳಿ ಅಳಿದುಳಿದ ವಸ್ತುಗಳನ್ನು ಸುತ್ತಿಕೊಂಡು, ಕುಟುಂಬದವರೊಂದಿಗೆ ಕಾಲ್ನಡಿಗೆಯಲ್ಲಿ ಪ್ಯಾಲೆಸ್ಟೀನ್‌ನ ಸಾವಿರಾರು ಜನರು ನೆಟ್‌ಜರಿಮ್ ಕಾರಿಡಾರ್ ಮೂಲಕ ಉತ್ತರ ಗಾಜಾವನ್ನು ತಲುಪುತ್ತಿದ್ದಾರೆ.


ದಕ್ಷಿಣ ಗಾಜಾದ ಭಾಗಗಳಲ್ಲಿ ವಿವಿಧ ನಿರಾಶ್ರಿತರ ಶಿಬಿರಗಳಲ್ಲಿ ಉಳಿದುಕೊಂಡಿದ್ದ ಜನರು ಭಾನುವಾರದ ಹೊತ್ತಿಗೆ ನೆಟ್‌ಜರಿಮ್ ಕಾರಿಡಾರ್ ಬಳಿ ಜಮಾಯಿಸಲು ಶುರುವಿಟ್ಟಿದ್ದರು. ಆದರೆ, ಗಾಜಾ ಗಡಿಯನ್ನು ಇಸ್ರೇಲ್ ತೆರೆದಿರಲಿಲ್ಲ. ರಾತ್ರಿ ಇಡೀ ಕೊರೆಯುವ ಚಳಿಯಲ್ಲಿಯೇ ಗಾಜಾ ಜನರು ಕಾದು ಕುಳಿತಿದ್ದರು.

ಹಮಾಸ್ ಬಂಡುಕೋರ ಸಂಘಟನೆಯು ಒಪ್ಪಂದದಂತೆ ಒತ್ತೆಯಾಳುಗಳನ್ನು ಬಿಡುಗಡೆ ಮಾಡುತ್ತಿಲ್ಲ ಎಂದು ಇಸ್ರೇಲ್ ಆರೋಪಿಸಿತ್ತು. ಒಂದೇ ರಾತ್ರಿಯಲ್ಲಿ ಈ ಸಮಸ್ಯೆಯನ್ನು ಮಧ್ಯವರ್ತಿಗಳು ನಿವಾರಿಸಿದ್ದಾರೆ. ಈ ಕಾರಣದಿಂದ ಸೋಮವಾರ ಬೆಳಿಗ್ಗೆ 7ರ ಸುಮಾರಿಗೆ ಯಾವುದೇ ಪರಿಶೀಲನೆ ಇಲ್ಲದೆ ಗಾಜಾ ಜನರು ತಮ್ಮ ಊರು ಸೇರುತ್ತಿದ್ದಾರೆ.

15 ತಿಂಗಳ ಸುದೀರ್ಘ ಯುದ್ಧವು ಉತ್ತರ ಗಾಜಾವನ್ನು ಸಂಪೂರ್ಣವಾಗಿ ನಾಶ ಮಾಡಿದೆ. ತಮ್ಮ ಮನೆ ಅಥವಾ ಮನೆಯ ಕುರುಹು ಕೂಡ ಇಲ್ಲ ಎನ್ನುವ ಸತ್ಯ ತಿಳಿದಿದ್ದರೂ ಜನರು ಅತೀವ ಉತ್ಸಾಹದಲ್ಲಿ ಮರಳುತ್ತಿದ್ದಾರೆ.

ಅಮೆರಿಕ: ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಿದ ಟ್ರಂಪ್

ವಿದೇಶಗಳಿಗೆ ನೆರವು ಸ್ಥಗಿತ



ವಾಷಿಂಗ್ಟನ್ (ಪಿಟಿಐ): ವಿದೇಶಗಳಿಗೆ ನೀಡುತ್ತಿದ್ದ ಎಲ್ಲ ರೀತಿಯ ನೆರವನ್ನು ಸ್ಥಗಿತಗೊಳಿಸುವುದಾಗಿ ಅಮೆರಿಕ ಘೋಷಿಸಿದೆ. ಇತರ ದೇಶಗಳಿಗೆ ಹಣಕಾಸಿನ ನೆರವು ನೀಡುವ ತನ್ನ ನೀತಿಯನ್ನು ಪರಿಶೀಲಿಸುವುದಾಗಿಯೂ ಭಾನುವಾರ ಹೇಳಿದೆ.

ವಿದೇಶಗಳಿಗೆ ಹಣಕಾಸಿನ ನೆರವು ಸ್ಥಗಿತಗೊಳಿಸುವುದಕ್ಕೆ ಸಂಬಂಧಿಸಿದ ಕಾರ್ಯಕಾರಿ ಆದೇಶಕ್ಕೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದರು. ಅದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ವಿದೇಶಾಂಗ ಸಚಿವಾಲಯದ ವಕ್ತಾರೆ ಟಾಮಿ ಬ್ರೂಸ್, 'ಇನ್ನು ಮುಂದೆ ಕುರುಡಾಗಿ ವಿದೇಶಗಳಿಗೆ ಹಣಕಾಸಿನ ನೆರವು ನೀಡುವುದಿಲ್ಲ ಎಂದು ಅಧ್ಯಕ್ಷ ಟ್ರಂಪ್ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಏಕೆಂದರೆ, ಆ ಹಣ ಅಮೆರಿಕದ ಜನರಿಗೆ ವಾಪಸಾಗುವುದಿಲ್ಲ. ಕಷ್ಟಪಟ್ಟು ದುಡಿದು ತೆರಿಗೆ ಪಾವತಿಸುವ ನಮ್ಮ ಜನರ ಹಣವನ್ನು ವಿದೇಶಗಳಿಗೆ ನೀಡುವ ನೀತಿಯನ್ನು ಪರಿಶೀಲಿಸುವುದು ಸರಿಯಾದ ನಿರ್ಧಾರ ಮಾತ್ರವಲ್ಲದೆ, ನೈತಿಕವಾಗಿ ಅನಿವಾರ್ಯವಾಗಿರುವ ಕ್ರಮವೂ ಆಗಿದೆ' ಎಂದು ಹೇಳಿದ್ದಾರೆ.

ಯುಎಸ್ ಏಜೆನ್ಸಿ ಫಾರ್ ಇಂಟರ್ ನ್ಯಾಷನಲ್ ಡೆವಲಪ್‌ಮೆಂಟ್‌ನಿಂದ (ಯುಎಸ್‌ಎಐಡಿ) ಅಥವಾ ಅದರ ಮುಖಾಂತರ ನೀಡಲಾಗುತ್ತಿದ್ದ ಎಲ್ಲ ವಿದೇಶಿ ನೆರವನ್ನು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಪರಿಶೀಲನೆಗಾಗಿ ಸ್ಥಗಿತಗೊಳಿಸಿದ್ದಾರೆ ಎಂದರು.

ಕೊಲಂಬಿಯಾ ವಿರುದ್ಧ ಸೇಡಿನ ಕ್ರಮ

ಕೊಲಂಬಿಯಾ ವಿರುದ್ಧ ಸುಂಕ ವಿಧಿಸುವುದು, ವೀಸಾ ನಿರ್ಬಂಧ ಒಳಗೊಂಡಂತೆ ಇತರ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ವಲಸಿಗರನ್ನು ಹೊತ್ತಿದ್ದ ಅಮೆರಿಕದ ಎರಡು ವಿಮಾನಗಳಿಗೆ ತನ್ನ ದೇಶದಲ್ಲಿ ಇಳಿಯಲು ಕೊಲಂಬಿಯಾ ಅವಕಾಶ ನೀಡಿರಲಿಲ್ಲ. ಇದಕ್ಕೆ ಅಮೆರಿಕ ಪ್ರತೀಕಾರದ ಕ್ರಮ ತೆಗೆದುಕೊಂಡಿದೆ.

ಕೊಲಂಬಿಯಾದ ಅಧ್ಯಕ್ಷ ಗುಸ್ತಾವೊ ಪೆಟ್ರೊ ಅವರ ನಿರ್ಧಾರವು ಅಮೆರಿಕದ ರಾಷ್ಟ್ರೀಯ ಭದ್ರತೆಯನ್ನು 'ಅಪಾಯಕ್ಕೆ ತಳ್ಳಿದ' ಕಾರಣ ಈ ಕ್ರಮಗಳು ಅಗತ್ಯವೆಂದು ಟ್ರಂಪ್ ಹೇಳಿದ್ದಾರೆ.

ಭಾರತಕ್ಕೆ ₹1,500 ಕೋಟಿ ನೆರವು

ಯುಎಸ್ ಏಡ್ 2023ರಲ್ಲಿ 158 ದೇಶಗಳಿಗೆ ಸುಮಾರು ₹3.88 ಲಕ್ಷ ಕೋಟಿ ಮೊತ್ತದ ನೆರವು ನೀಡಿದೆ. ಭಾರತಕ್ಕೆ ಸುಮಾರು ₹1,500 ಕೋಟಿ ನೆರವು ಲಭಿಸಿದೆ. ಅಫ್ಗಾನಿಸ್ತಾನಕ್ಕೆ ₹8,600 ಕೋಟಿ, ಬಾಂಗ್ಲಾದೇಶಕ್ಕೆ ₹3,450 ಕೋಟಿ ಮತ್ತು ಪಾಕಿಸ್ತಾನಕ್ಕೆ ಸುಮಾರು ₹2,000 ಕೋಟಿ ನೆರವು ದೊರೆತಿದೆ.

ಮೋದಿ–ಟ್ರಂಪ್ ಮಾತುಕತೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ದೂರವಾಣಿ ಮೂಲಕ ಸೋಮವಾರ ಮಾತುಕತೆ ನಡೆಸಿದರು. ಉತ್ತಮ ಸ್ಥಿತಿಯಲ್ಲಿರುವ ಭಾರತ–ಅಮೆರಿಕ ಸಂಬಂಧವನ್ನು ಮುಂದುವರಿಸಿಕೊಂಡು ಹೋಗುವ ಬಗ್ಗೆ ಚರ್ಚೆ ನಡೆಯಿತು ಎಂದು ಪ್ರಧಾನಿ ಮೋದಿ ಅವರು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

'ನಮ್ಮ ನೆಚ್ಚಿನ ಸ್ನೇಹಿತ ಟ್ರಂಪ್ ಅವರೊಂದಿಗೆ ಮಾತನಾಡಿದ್ದು ಸಂತಸ ತಂದಿದೆ. ಟ್ರಂಪ್ ಅವರ ಎರಡನೇ ಅವಧಿಯ ಕಾರ್ಯಕ್ಕೆ ಶುಭಾಶಯ ಕೋರಿದೆ' ಎಂದು ಪೋಸ್ಟ್ ಮಾಡಿದ್ದಾರೆ.

ಸಾಲಗಾರರಿಗೆ ಕಿರುಕುಳ 3 ವರ್ಷ ಜೈಲು

ಒಂದನೇ ಪುಟದಿಂದ...

ಮಸೂದೆಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ತಕ್ಷಣದಿಂದಲೇ ಜಾರಿಗೆ ತರಲು ಸುಗ್ರೀವಾಜ್ಞೆ ಹೊರಡಿಸಲು ಸರ್ಕಾರ ಮುಂದಾಗಿದೆ.

ರಾಜ್ಯದೊಳಗೆ ಸಾಲದ ವಹಿವಾಟು ನಡೆಸುವ ಎಲ್ಲ ಕಂಪನಿಗಳೂ ರಾಜ್ಯ ಸರ್ಕಾರದ 'ನೋಂದಣಿ ಪ್ರಾಧಿಕಾರ'ದಲ್ಲಿ ನೋಂದಣಿ ಮಾಡುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವವೂ ಮಸೂದೆಯಲ್ಲಿದೆ. ನೋಂದಣಿ ಮಾಡದೇ ವಹಿವಾಟು ನಡೆಸುವ ಸಾಲದಾತರಿಗೆ ಮೂರು ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಮತ್ತು ₹1 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ ವಿಧಿಸುವುದಕ್ಕೂ ಮಸೂದೆ ಅವಕಾಶ ಕಲ್ಪಿಸಿದೆ.

ಮೈಕ್ರೊ ಫೈನಾನ್ಸ್ ಕಂಪನಿಗಳು ಅಥವಾ ಲೇವಾದೇವಿದಾರರ ಪ್ರತಿನಿಧಿಗಳು ಸಾಲಗಾರರ ಮೇಲೆ ನಡೆಸುತ್ತಿರುವ ದೌರ್ಜನ್ಯ ಪ್ರಕರಣಗಳು ರಾಜ್ಯದಾದ್ಯಂತ ವರದಿಯಾಗುತ್ತಿದ್ದಂತೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜ. 25ರಂದು ಉನ್ನತಮಟ್ಟದ ಸಭೆ ನಡೆಸಿದ್ದರು. ಅಲ್ಲದೆ, ಸಾಲ ಪಡೆಯುವವರ ಹಿತ ಕಾಪಾಡಲು ಸುಗ್ರೀವಾಜ್ಞೆ ಮೂಲಕ ತಕ್ಷಣವೇ ಕಾನೂನು ಜಾರಿಗೆ ತರಲಾಗುವುದು ಎಂದು ಪ್ರಕಟಿಸಿದ್ದರು.

ಈ ಕಾನೂನು ಜಾರಿಗೆ ಬಂದ 30 ದಿನಗಳ ಒಳಗೆ ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಎಲ್ಲ ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿಗಾರರು 'ನೋಂದಣಿ ಪ್ರಾಧಿಕಾರ'ದಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಹೀಗೆ ನೋಂದಾಯಿಸುವ ಸಂದರ್ಭದಲ್ಲಿ ಸಾಲಕ್ಕೆ ವಿಧಿಸುವ ಬಡ್ಡಿ, ಸಾಲ ವಸೂಲು ಮಾಡುವ ಪದ್ಧತಿ ಸೇರಿದಂತೆ ಎಲ್ಲ ವಿವರಗಳನ್ನು ಕಡ್ಡಾಯವಾಗಿ ನೀಡಬೇಕು.

ನೋಂದಣಿವೇಳೆ ನೀಡಿದ ಮಾಹಿತಿಗಳನ್ನು ಪರಿಶೀಲಿಸಿದ ಬಳಿಕ, ಸರ್ಕಾರ ರೂಪಿಸಿದ ಕಾನೂನಿಗೆ ಬದ್ಧವಾಗಿರುವುದಾಗಿ ಲಿಖಿತವಾಗಿ ಮುಚ್ಚಳಿಕೆ ಬರೆಯಿಸಿಕೊಂಡು ಎರಡು ವರ್ಷ ಕಾರ್ಯನಿರ್ವಹಿಸಲು ನೋಂದಣಿ ಪ್ರಾಧಿಕಾರವು ಅನುಮತಿ ನೀಡಲಿದೆ. ಎರಡು ವರ್ಷಗಳ ಅವಧಿ ಮುಗಿಯುವ 60 ದಿನಗಳ ಮೊದಲು ನೋಂದಣಿ ಮರು ನವೀಕರಣಕ್ಕೆ ಅರ್ಜಿ ಸಲ್ಲಿಸಬೇಕು. ಅರ್ಜಿಯನ್ನು ಪರಿಶೀಲಿಸಿ ನೋಂದಣಿ ನವೀಕರಿಸಬೇಕೇ, ಬೇಡವೇ ಎಂದು ಎರಡು ವರ್ಷ ಮುಗಿಯುವುದಕ್ಕೆ15 ದಿನಗಳ ಮೊದಲು ಪ್ರಾಧಿಕಾರವು ನಿರ್ಧರಿಸಲಿದೆ ಎಂದೂ ಮಸೂದೆ ಹೇಳಿದೆ.

ಸಾಲ ಪಡೆದವರಿಂದ ಬಂದ ದೂರುಗಳ ಆಧಾರದಲ್ಲಿ ಅಥವಾ ಸ್ವಯಂಪ್ರೇರಿತವಾಗಿ ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿಗಾರರ ನೋಂದಣಿಯನ್ನು ಯಾವುದೇ ನೋಟಿಸ್ ನೀಡದೆ ರದ್ದುಪಡಿಸಲು ಕೂಡಾ ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಸಾಲ ವಸೂಲಿ ಸಂದರ್ಭದಲ್ಲಿ ಆರ್‌ಬಿಐ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಒಬ್ಬ ಸಾಲಗಾರ ಎರಡು ಸಂಸ್ಥೆಗಳಿಂದ ಮಾತ್ರ ಸಾಲ ಪಡೆಯಬಹುದು. ಸಾಲದ ಒಟ್ಟು ಮೊತ್ತ ₹2 ಲಕ್ಷ ಮೀರುವಂತಿಲ್ಲ.

ಪ್ರತಿಯೊಂದು ಮೈಕ್ರೊ ಫೈನಾನ್ಸ್ ಕಂಪನಿಯು, ಲೇವಾದೇವಿಗಾರರು ಪ್ರತಿ ತಿಂಗಳ ವ್ಯವಹಾರದ ಸಂಪೂರ್ಣ ಮಾಹಿತಿಯನ್ನು ಪ್ರತಿ ತಿಂಗಳ 10ನೇ ತಾರೀಕಿನಂದು ನೋಂದಣಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಜೊತೆಗೆ ಸಾಲ ಪಡೆದವರ ವಿವರ ಮತ್ತು ಬಡ್ಡಿ ದರವನ್ನೂ ತಿಳಿಸಬೇಕು. ಕಾನೂನು ಪ್ರಕಾರವೇ ಸಾಲ ನೀಡುವ ವ್ಯವಹಾರ ನಡೆಯುತ್ತಿದೆಯೇ ಎಂಬುದನ್ನು ಪ್ರಾಧಿಕಾರ ಪರಿಶೀಲಿಸಲಿದೆ. ಮಾಹಿತಿ ನೀಡದ ಸಂಸ್ಥೆಗಳ ದಾಖಲೆಗಳನ್ನು ಜಪ್ತಿ ಮಾಡುವ ಅಧಿಕಾರವೂ ಪ್ರಾಧಿಕಾರಕ್ಕೆ ಇರಲಿದೆ ಎಂಬ ಉಲ್ಲೇಖ ಮಸೂದೆಯಲ್ಲಿದೆ.

ಸಾಲ ಪಡೆಯಲು ಕಾರ್ಮಿಕರಿಗೆ ಮಿತಿ ನಿಗದಿ; ಬಲವಂತದ ವಸೂಲಿಗೆ ನೋಂದಣಿ ರದ್ದು

ಕಾಫಿ ಎಸ್ಟೇಟ್, ಎಣ್ಣೆ ಗಿರಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸಾಲ ಪಡೆಯುವ ಮಿತಿ ನಿಗದಿಪಡಿಸಲಾಗಿದ್ದು, ಅವರ ಆದಾಯದ ಮೂಲ ಒಂದೇ ಇದ್ದರೆ ಒಟ್ಟು ₹30 ಸಾವಿರ, ಒಂದಕ್ಕಿಂತ ಹೆಚ್ಚು ಆದಾಯದ ಮೂಲ ಇದ್ದರೆ ಅಂಥವರಿಗೆ ₹50 ಸಾವಿರ ಸಾಲ ಪಡೆಯುವ ಮಿತಿ ನಿಗದಿಪಡಿಸಲಾಗಿದೆ.

ವಿಳಂಬ ಪಾವತಿಗೆ ದಂಡ ವಿಧಿಸುವಂತಿಲ್ಲ. ಸಾಲ ಒಪ್ಪಂದ ಮಾಡಿಕೊಂಡಿರಬೇಕು, ವಿಧಿಸುವ ಬಡ್ಡಿ ದರದ ಮಾಹಿತಿಯನ್ನು ಒಳಗೊಂಡ ಸಾಲ ಮಂಜೂರಾತಿ ಕಾರ್ಡ್ ಅನ್ನು ನೀಡಬೇಕು. ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿಗಾರರು ಸಾಲ ವಸೂಲಿಗೆ ಏಜೆಂಟರನ್ನು ನಿಯೋಜಿಸುವಂತಿಲ್ಲ. ವಸೂಲಿಗೆ ಮನೆಗೆ ಹೋಗಬಾರದು, ಅಲ್ಲದೆ, ಯಾವುದೇ ಬಲವಂತದ ಕ್ರಮ ಅನುಸರಿಸಬಾರದು. ಸಾಲಗಾರರನ್ನು ಅಥವಾ ಅವರ ಕುಟುಂಬದ ಸದಸ್ಯರನ್ನು ಅವಮಾನ ಮಾಡಬಾರದು. ಈ ರೀತಿಯ ವರ್ತನೆ ತೋರಿಸಿದ ಸಾಲದಾತರ ನೋಂದಣಿಯನ್ನು ರದ್ದುಪಡಿಸಲಾಗುವುದು ಎಂದೂ ಈ ಮಸೂದೆಯಲ್ಲಿದೆ.

ತ್ವರಿತ ನ್ಯಾಯಾಲಯ ಸ್ಥಾಪನೆ ಪ್ರಸ್ತಾವ

ಸಾಲಗಾರರು ಮತ್ತು ಸಾಲದಾತರ ನಡುವಿನ ವ್ಯಾಜ್ಯವನ್ನು ಇತ್ಯರ್ಥಪಡಿಸಲು, ಹೈಕೋರ್ಟ್ ಜೊತೆ ಸಮಾಲೋಚನೆ ನಡೆಸಿ ರಾಜ್ಯ ಸರ್ಕಾರದಿಂದ ಪ್ರತಿ ಜಿಲ್ಲೆಯಲ್ಲಿ ತ್ವರಿತ ನ್ಯಾಯಾಲಯ ಸ್ಥಾಪನೆಗೂ ಈ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ತ್ವರಿತ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ–1908ರ ಅಡಿಯಲ್ಲಿ ಆರು ತಿಂಗಳ ಒಳಗೆ ಇತ್ಯರ್ಥಪಡಿಸಲು ಯತ್ನಿಸಬೇಕು ಎಂದೂ ಮಸೂದೆಯಲ್ಲಿ ತಿಳಿಸಲಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ • 'ಸನಾತನ ವಿರೋಧಿ'– ಬಿಜೆಪಿ ತಿರುಗೇಟು

'ಗಂಗಾ ಸ್ನಾನ ಬಡತನ ನೀಗಿಸುವುದೇ?'

ಮಹೂ (ಮಧ್ಯಪ್ರದೇಶ) (ಪಿಟಿಐ): ಗಂಗಾ ನದಿಯಲ್ಲಿ ಪವಿತ್ರ ಸ್ನಾನ ಮಾಡುವುದರಿಂದ ಬಡತನ ದೂರವಾಗಲಿದೆಯೇ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ. ಈ ಹೇಳಿಕೆ 'ಸನಾತನ ವಿರೋಧಿ' ಎಂದು ಬಿಜೆಪಿ ಟೀಕಿಸಿದ್ದು, ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರು ಕ್ಷಮೆಯಾಚಿಸುವಂತೆ ಆಗ್ರಹಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಹಾಕುಂಭ ಮೇಳದ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ ದಿನದಂದೇ ಖರ್ಗೆ ಅವರು ಈ ಹೇಳಿಕೆ ನೀಡಿದ್ದಾರೆ.

ಪಕ್ಷದ ವತಿಯಿಂದ ಸೋಮವಾರ ಇಲ್ಲಿ ಆಯೋಜಿಸಿದ್ದ 'ಜೈ ಬಾಪು, ಜೈ ಭೀಮ್,ಜೈ ಸಂವಿಧಾನ್' ರ‍್ಯಾಲಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ನಾನು ಇಲ್ಲಿ ಯಾರ ನಂಬಿಕೆಯನ್ನೂ ಪ್ರಶ್ನಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದರು. 'ನರೇಂದ್ರ ಮೋದಿ ಅವರ ಸುಳ್ಳು ಭರವಸೆಗಳ ಬಲೆಯಲ್ಲಿ ಸಿಲುಕಬೇಡಿ. ಗಂಗಾ ಸ್ನಾನದಿಂದ ಬಡತನವು ಕೊನೆಗೊಳ್ಳುತ್ತದೆಯೇ? ಅದರಿಂದ ನಿಮ್ಮ ಹೊಟ್ಟೆ ತುಂಬುವುದೇ? ನಾನು ಇಲ್ಲಿ ಯಾವುದೇ ವ್ಯಕ್ತಿಯ ನಂಬಿಕೆಯನ್ನು ಪ್ರಶ್ನಿಸಲು ಬಯಸುವುದಿಲ್ಲ. ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ, ಕ್ಷಮೆಯಾಚಿಸುತ್ತೇನೆ' ಎಂದು ಹೇಳಿದರು.

'ಆದರೆ, ಒಂದು ಮಗು ಹಸಿವಿನಿಂದ ಸಾಯುತ್ತಿರುವಾಗ, ಶಿಕ್ಷಣದಿಂದ ವಂಚಿತವಾಗಿರುವಾಗ, ಕೂಲಿ ಕಾರ್ಮಿಕರಿಗೆ ಅವರ ಬಾಕಿ ಸಿಗದೇ ಇರುವಂತಹ ಸಮಯದಲ್ಲಿ, ಈ ಜನರು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಗಂಗಾ ನದಿಯಲ್ಲಿ ಸ್ನಾನ ಮಾಡಲು ಸ್ಪರ್ಧೆಗೆ ಬಿದ್ದಿದ್ದಾರೆ' ಎಂದು ಟೀಕಿಸಿದರು.

'ಅಂತಹ ಜನರಿಂದ ದೇಶಕ್ಕೆ ಪ್ರಯೋಜನ ಉಂಟಾಗದು. ನಾವು ದೇವರನ್ನು ನಂಬುತ್ತೇವೆ. ಜನರು ಮನೆಯಲ್ಲಿ ಪ್ರತಿದಿನವೂ ಪೂಜೆ ಮಾಡುವರು. ಎಲ್ಲಾ ಮಹಿಳೆಯರು ಪೂಜೆ ಮಾಡಿದ ನಂತರವೇ ಮನೆಯಿಂದ ಹೊರಗೆ ಹೋಗುತ್ತಾರೆ. ಅದರಿಂದ ಯಾವುದೇ ಸಮಸ್ಯೆ ಇಲ್ಲ. ಆದರೆ, ಧರ್ಮದ ಹೆಸರಿನಲ್ಲಿ ಬಡವರನ್ನು ಶೋಷಣೆ ಮಾಡುತ್ತಿರುವುದಕ್ಕೆ ನಮ್ಮ ವಿರೋಧವಿದೆ' ಎಂದರು.

ಅಮಿತ್ ಶಾ ಅವರು ಅಂಬೇಡ್ಕರ್ ಬಗ್ಗೆ ನೀಡಿದ್ದ ಹೇಳಿಕೆಯನ್ನು ಉಲ್ಲೇಖಿಸಿದ ಖರ್ಗೆ, 'ಪ್ರಧಾನಿ ನರೇಂದ್ರ ಮೋದಿ ಮತ್ತು ಶಾ ಅವರು ನೂರು ಜನ್ಮಗಳಲ್ಲೂ ಸ್ವರ್ಗಕ್ಕೆ ಹೋಗಲು ಸಾಧ್ಯವಾಗದಷ್ಟು ಪಾಪಗಳನ್ನು ಮಾಡಿದ್ದಾರೆ' ಎಂದು ಹೇಳಿದರು.

ರಾಹುಲ್, ಸೋನಿಯಾ ಕ್ಷಮೆಯಾಚಿಸಲಿ: ಬಿಜೆಪಿ

ನವದೆಹಲಿ: ಖರ್ಗೆ ಅವರು ಸಾವಿರಾರು ವರ್ಷಗಳಿಂದ ಸನಾತನ ನಂಬಿಕೆಯ ಸಂಕೇತವಾಗಿರುವ ಮಹಾಕುಂಭದ ಬಗ್ಗೆ ಜನರಿಗೆ ಇರುವ ಗೌರವವನ್ನು 'ಅಪಹಾಸ್ಯ' ಮಾಡಿದ್ದಾರೆ ಎಂದು ಬಿಜೆಪಿ ಸಂಸದ ಮತ್ತು ಪಕ್ಷದ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ ವಾಗ್ದಾಳಿ ನಡೆಸಿದ್ದಾರೆ.

ಪಕ್ಷವು ಇಂತಹ ಸನಾತನ ವಿರೋಧಿ ಚಿಂತನೆಯನ್ನು ಹೇಗೆ ಹೊಂದಿದೆ ಎಂಬುದಕ್ಕೆ ಕಾಂಗ್ರೆಸ್ ಮತ್ತು ಅದರ ನಾಯಕ ರಾಹುಲ್ ಗಾಂಧಿ ವಿವರಣೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

'ಇಂತಹ ಹೇಳಿಕೆಗಾಗಿ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಇಡೀ ದೇಶ ಮತ್ತು ಸನಾತನ ಧರ್ಮವನ್ನು ನಂಬುವ ಪ್ರತಿಯೊಬ್ಬ ವ್ಯಕ್ತಿಯ ಕ್ಷಮೆಯಾಚಿಸಬೇಕು' ಎಂದೂ ಒತ್ತಾಯಿಸಿದ್ದಾರೆ.

'ಇಫ್ತಾರ್ ಕೂಟದಲ್ಲಿ ಭಾಗವಹಿಸುವುದರಿಂದ ಬಡತನ ನಿರ್ಮೂಲನೆಯಾಗುತ್ತದೆಯೇ ಎಂದು ಕೇಳುವಷ್ಟು ಧೈರ್ಯ ರಾಹುಲ್ ಮತ್ತು ಸೋನಿಯಾ ಅವರಿಗೆ ಇದೆಯೇ' ಎಂದು ಪ್ರಶ್ನಿಸಿದ್ದಾರೆ.



ಬಿಜೆಪಿಯ ನಾಯಕರು ಕ್ಯಾಮೆರಾಗಳಿಗೆ ಪೋಸ್ ನೀಡುವ ಉದ್ದೇಶದಿಂದ ಗಂಗಾ ನದಿಯಲ್ಲಿ ಸ್ನಾನ ಮಾಡಲು ಪರಸ್ಪರ ಪೈಪೋಟಿ ನಡೆಸುತ್ತಿದ್ದಾರೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ




ಖರ್ಗೆ ಅವರ ಹೇಳಿಕೆಯಿಂದ ಕೋಟ್ಯಂತರ ಜನರ ಭಾವನೆಗಳಿಗೆ ಧಕ್ಕೆಯಾಗಿದೆ. ಸನಾತನ ಧರ್ಮದ ವಿರುದ್ಧದ ಇಂತಹ ಹೇಳಿಕೆ ನಾಚಿಕೆಗೇಡಿನದ್ದು

ಸಂಬಿತ್ ಪಾತ್ರ, ಬಿಜೆಪಿ ರಾಷ್ಟ್ರೀಯ ವಕ್ತಾರ

'ಹಿಂದೂ ಧಾರ್ಮಿಕ ಶ್ರದ್ಧೆಗೆ ಖರ್ಗೆ ಅಪಮಾನ'

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಕುಂಭಮೇಳದ ತೀರ್ಥ ಸ್ನಾನದ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ವ್ಯಂಗ್ಯದ ಮಾತುಗಳನ್ನು ಆಡುವ ಮೂಲಕ ಹಿಂದೂ ಧಾರ್ಮಿಕ ಶ್ರದ್ಧೆಯನ್ನು ಅಪಮಾನಿಸಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.



ರಾಹುಲ್‌ಗಾಂಧಿ, ಸೋನಿಯಾಗಾಂಧಿ ಅವರನ್ನು ಓಲೈಸಲು ಹಿಂದೂ ಧಾರ್ಮಿಕ ನಂಬಿಕೆ, ಆಚಾರ-ವಿಚಾರಗಳನ್ನು ಉಲ್ಲೇಖಿಸಿ ಮೋದಿ ಮತ್ತು ಶಾ ಅವರನ್ನು ಟೀಕಿಸುತ್ತಿರುವುದು ತುಕ್ಕು ಹಿಡಿದ ಅವರ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತಿದೆ ಎಂದು ಅವರು ಟೀಕಿಸಿದ್ದಾರೆ.

'ಸ್ವಾತಂತ್ರ್ಯ ನಂತರದ ದಿನಗಳಿಂದಲೂ ನೆಹರೂ ಕುಟುಂಬದ ಭಟ್ಟಂಗಿಗಳಾಗಿ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯಗಳನ್ನು ಕಸದ ಬುಟ್ಟಿಗೆ ಎಸೆದು ಬಡವರು, ಶೋಷಿತರು, ರೈತರು ಹಾಗೂ ಕೂಲಿ ಕಾರ್ಮಿಕರ ಬದುಕನ್ನು ನರಕಕ್ಕೆ ತಳ್ಳಿದ ಕುಖ್ಯಾತಿ ಕಾಂಗ್ರೆಸ್ಸಿಗರದು. ಈ ಕಾರಣಕ್ಕಾಗಿಯೇ ಭಾರತದ ರಾಜಕೀಯ ಭೂಪಟದಲ್ಲಿ ಪ್ರಾದೇಶಿಕ ಪಕ್ಷಗಳನ್ನೂ ಎದುರಿಸಲಾಗದ ಸ್ಥಿತಿಯನ್ನು ತಲುಪಿ ಕಾಂಗ್ರೆಸ್ ಅವನತಿ ಹಾದಿ ಹಿಡಿದಿದೆ' ಎಂದಿದ್ದಾರೆ.

ಪವಿತ್ರ ಸ್ನಾನ ಮಾಡಿದ ಅಮಿತ್ ಶಾ

ಪ್ರಜಾವಾಣಿ ವಾರ್ತೆ/ ಪಿಟಿಐ



ಮಹಾಕುಂಭಮೇಳದ ಪ್ರಯುಕ್ತ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಸೋಮವಾರ ಪವಿತ್ರ ಸ್ನಾನ ಮಾಡಿದ ಸಚಿವ ಅಮಿತ್ ಶಾ –ಪಿಟಿಐ ಚಿತ್ರ

ಲಖನೌ: ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಪವಿತ್ರ ಸ್ನಾನ ಮಾಡಿ, ಸೂರ್ಯನಿಗೆ ಪವಿತ್ರ ಜಲ ಸಮರ್ಪಿಸಿದರು.

ಗಂಗಾ, ಯಮುನಾ, ಸರಸ್ವತಿಯ ತ್ರಿವೇಣಿ ಸಂಗಮದಲ್ಲಿ ಮಿಂದೆದ್ದ ಶಾ 'ಅಕ್ಷಯ' ಮರಕ್ಕೆ ಪೂಜೆ ಸಲ್ಲಿಸಿದರು. ಈ ವೃಕ್ಷದಡಿಯೇ ಋಷಿ ಸುಖದೇವರು ಅರ್ಜುನನ ಮೊಮ್ಮಗನಾದ ಪರೀಕ್ಷಿತ್‌ಗೆ ಶ್ರೀಮದ್ ಭಗವದ್ ಪುರಾಣ ಬೋಧಿಸಿದರು ಎಂಬ ಐತಿಹ್ಯವಿದೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಯೋಗಗುರು ಬಾಬಾ ರಾಮದೇವ್ ಸೇರಿದಂತೆ ಹಲವು ಸಂತರು ಅಮಿತ್ ಶಾ ಜತೆಗೆ ಇದ್ದರು.

ಐಸಿಸಿ ಅಧ್ಯಕ್ಷರೂ ಆಗಿರುವ ಜಯಂತ್ ಶಾ ಸೇರಿದಂತೆ ಶಾ ಕುಟುಂಬದ ಸದಸ್ಯರು ಸಹ ಸಂಗಮದಲ್ಲಿ ಆರತಿ ಮಾಡುವುದು ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು.

'ಮಹಾಕುಂಭವು ಸನಾತನ ಸಂಸ್ಕೃತಿಯ ನಿರಂತರ ಹರಿವಿನ ವಿಶಿಷ್ಟ ಸಂಕೇತವಾಗಿದೆ. ಇಲ್ಲಿ ಸಾಮರಸ್ಯವೂ ಬೇರೂರಿದೆ. ಕುಂಭದಲ್ಲಿ ಪವಿತ್ರ ಸ್ನಾನ ಮಾಡಿ, ಸಂತರ ಆಶೀರ್ವಾದ ಪಡೆಯಲು ಉತ್ಸುಕನಾಗಿರುವೆ' ಎಂದು ಅಮಿತ್ ಶಾ ಸಂಗಮದಲ್ಲಿ ಮಿಂದೇಳುವುದಕ್ಕೂ ಮುನ್ನ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.

'ಅಮಿತ್ ಶಾ ಸನಾತನ ಧರ್ಮದ ಹೆಮ್ಮೆ' ಎಂದು ಬಾಬಾ ರಾಮದೇವ್ ಹೇಳಿದ್ದಾರೆ.

ಇದುವರೆಗೂ 13.21 ಕೋಟಿ ಭಕ್ತರು ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. ಜ. 29ರಂದು ಮೌನಿ ಅಮಾವಾಸ್ಯೆ ಇದ್ದು, ಅಂದು ಲಕ್ಷಾಂತರ ಭಕ್ತಾದಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಬಿಎಸ್ ರೋಗ: ಮಹಾರಾಷ್ಟ್ರದಲ್ಲಿ ವ್ಯಕ್ತಿ ಸಾವು

ಪುಣೆ (ಪಿಟಿಐ): ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ 40 ವರ್ಷದ ವ್ಯಕ್ತಿಯೊಬ್ಬರು ಗೀಲನ್ ಬಾರೆ ಕಾಯಿಲೆಯಿಂದ (ಜಿಬಿಎಸ್) ಸೋಮವಾರ ಮೃತಪಟ್ಟಿದ್ದಾರೆ.

'ಉಸಿರಾಟದಲ್ಲಿ ತೊಂದರೆ, ಕಾಲುಗಳಲ್ಲಿ ಶಕ್ತಿ ಇಲ್ಲದಿರುವುದು ಮತ್ತು ಭೇದಿಯಿಂದ ಈ ವ್ಯಕ್ತಿ ಬಳಲುತ್ತಿದ್ದರು. ಈ ರೋಗಲಕ್ಷಣಗಳ ಕಾರಣ ಜ.18ರಂದು ಅವರು ಖಾಸಗಿ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದರು. ಕೃತಕ ಉಸಿರಾಟ ವ್ಯವಸ್ಥೆಯಲ್ಲಿದ್ದ ಅವರು ಭಾನುವಾರ ಮೃತಪಟ್ಟಿದ್ದಾರೆ' ಎಂದು ಸೊಲ್ಲಾಪುರದ ಸರ್ಕಾರಿ ವೈದ್ಯಕೀಯ ಕಾಲೇಜಿನ ಡೀನ್ ಡಾ.ಸಂಜೀವ್ ಠಾಕೂರ್ ಮಾಹಿತಿ ನೀಡಿದರು.

'ವ್ಯಕ್ತಿಯ ಸಾವಿಗೆ ಕಾರಣ ಏನು ಎಂಬುದನ್ನು ಪರೀಕ್ಷಿಸಲು ಶವಪರೀಕ್ಷೆ ಮಾಡಲಾಗಿದೆ. ನಮ್ಮ ಪ್ರಾಥಮಿಕ ತನಿಖೆ ಪ್ರಕಾರ ಅವರಿಗೆ ಜಿಬಿಎಸ್ ರೋಗವಿತ್ತು. ಇನ್ನೂ ಹೆಚ್ಚಿನ ತನಿಖೆಗಾಗಿ ಮೃತ ವ್ಯಕ್ತಿಯ ರಕ್ತದ ಮಾದರಿಯನ್ನು ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಗೆ (ಎನ್‌ಐವಿ) ಕಳುಹಿಸಲಾಗಿದೆ' ಎಂದರು.



ಪುಣೆ ಜಿಲ್ಲೆಯೊಂದರಲ್ಲಿಯೇ ಜಿಬಿಎಸ್‌ನ 101 ಪ್ರಕರಣ ಪತ್ತೆಯಾಗಿವೆ.

ದೆಹಲಿ ಚುನಾವಣೆ: ಪ್ರಣಾಳಿಕೆ ಬಿಡುಗಡೆ ಮಾಡಿದ ಕೇಜ್ರಿವಾಲ್

ಎಎಪಿ 15 'ಗ್ಯಾರಂಟಿ' ಘೋಷಣೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಎಲ್ಲ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಿಕೊಡುವುದು ಮತ್ತು ಯಮುನಾ ನದಿಯನ್ನು ಸ್ವಚ್ಛಗೊಳಿಸುವುದೂ ಸೇರಿದಂತೆ 15 ಭರವಸೆಗಳನ್ನು ಒಳಗೊಂಡ 'ಕೇಜ್ರಿವಾಲ್ ಕಿ ಗ್ಯಾರಂಟಿ'ಯನ್ನು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಸೋಮವಾರ ಬಿಡುಗಡೆಗೊಳಿಸಿದರು.



ದೆಹಲಿ ಮುಖ್ಯಮಂತ್ರಿ ಆತಿಶಿ (ಎಡದಿಂದ), ಅರವಿಂದ ಕೇಜ್ರಿವಾಲ್ ಮತ್ತು ಎಎಪಿ ಮುಖಂಡ ಮನೀಷ್ ಸಿಸೋಡಿಯಾ ಅವರು ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ


ದೆಹಲಿ ವಿಧಾನಸಭಾ ಚುನಾವಣೆಗೆ ಎಎಪಿ ಬಿಡುಗಡೆಗೊಳಿಸಿದ ಪ್ರಣಾಳಿಕೆಯಲ್ಲಿನ ಬಹುತೇಕ ಭರವಸೆಗಳನ್ನು ಕಳೆದ ಒಂದು ತಿಂಗಳ ಅವಧಿಯಲ್ಲಿ ವಿವಿಧ ಸಂದರ್ಭಗಳಲ್ಲಿ ಘೋಷಿಸಲಾಗಿದೆ.

'ಬಿಜೆಪಿ ಅಧಿಕಾರಕ್ಕೆ ಬಂದರೆ ಎಎಪಿ ಸರ್ಕಾರದ ಎಲ್ಲ ಜನಪರ ಯೋಜನೆಗಳನ್ನು ನಿಲ್ಲಿಸುವುದಾಗಿ ಈಗಾಗಲೇ ಘೋಷಿಸಿದೆ. ಹಾಗಾದಲ್ಲಿ, ದೆಹಲಿಯ ಜನರಿಗೆ ಪ್ರತಿ ತಿಂಗಳು ₹25 ಸಾವಿರದಷ್ಟು ಹೆಚ್ಚುವರಿ ಹೊರೆ ಬೀಳಲಿದೆ. ಬಿಜೆಪಿಯು ಈ ಯೋಜನೆಗಳನ್ನು ನಿಲ್ಲಿಸಿದರೆ, ಆ ವೆಚ್ಚವನ್ನು ಭರಿಸಲು ನೀವು ಸಿದ್ಧರಿದ್ದೀರಾ ಎಂದು ದೆಹಲಿಯ ಜನರನ್ನು ಕೇಳಲು ಬಯಸುತ್ತೇನೆ' ಎಂದು ಕೇಜ್ರಿವಾಲ್ ಹೇಳಿದರು.

'ಬಿಜೆಪಿ, ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಚುನಾವಣೆಯ ಸಮಯದಲ್ಲಿ ನೀಡುವ ಭರವಸೆಗಳು ವಿಭಿನ್ನ ಹೆಸರುಗಳಲ್ಲಿರುವ ಪೊಳ್ಳು ಘೋಷಣೆಗಳಾಗಿವೆ. 'ಗ್ಯಾರಂಟಿ' ಪದವನ್ನು ಮೊದಲು ಬಳಸಿದ್ದು ನಾವು. ಅದನ್ನು ನೋಡಿ ಇತರ ಪಕ್ಷಗಳೂ ಬಳಸಲು ಆರಂಭಿಸಿದವು. ಆದರೆ ಅವರು 'ಗ್ಯಾರಂಟಿ' ಪದವನ್ನು ಅಪಮೌಲ್ಯಗೊಳಿಸಿದ್ದಾರೆ. ಆದರೆ, ಇದು ಕೇಜ್ರಿವಾಲ್ ಗ್ಯಾರಂಟಿಯಾಗಿದ್ದು, ಮೋದಿ ಅವರ ಗ್ಯಾರಂಟಿಯಂತೆ ಪೊಳ್ಳು ಅಲ್ಲ' ಎಂದರು.

'ದೆಹಲಿಯ ಎಲ್ಲ ಮನೆಗಳಿಗೂ ದಿನದ 24 ಗಂಟೆ ಶುದ್ಧ ಕುಡಿಯುವ ನೀರು ಪೂರೈಕೆ, ಯಮುನಾ ನದಿ ಸ್ವಚ್ಛತೆ ಮತ್ತು ನಗರದ ಎಲ್ಲ ರಸ್ತೆಗಳನ್ನೂ ವಿಶ್ವದರ್ಜೆಗೆ ಏರಿಸುವ ಭರವಸೆಯನ್ನು ನೀಡಲಾಗಿದೆ. ಈ ಮೂರು ಭರವಸೆಗಳನ್ನು 2020ಲ್ಲೂ ನೀಡಲಾಗಿತ್ತು. ಆದರೆ ಅದನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗದ್ದರಿಂದ, ಈ ಬಾರಿಯ ಪಟ್ಟಿಯಲ್ಲೂ ಸೇರಿಸಲಾಗಿದೆ' ಎಂದರು.

ಪ್ರಮುಖ ಭರವಸೆಗಳು...



- 'ಮಹಿಳಾ ಸಮ್ಮಾನ್ ಯೋಜನೆ'ಯಡಿ ಮಹಿಳೆಯರಿಗೆ ಮಾಸಿಕ ₹2,100 ನೆರವು
- ಹಿರಿಯ ನಾಗರಿಕರಿಗೆ ಉಚಿತ ಚಿಕಿತ್ಸೆ ದೊರಕಿಸಿಕೊಡಲು 'ಸಂಜೀವಿನಿ' ಯೋಜನೆ ಜಾರಿ
- ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿ ವೇತನ
- ವಿದ್ಯಾರ್ಥಿಗಳಿಗೆ ಬಸ್‌ನಲ್ಲಿ ಉಚಿತ ಪ್ರಯಾಣ, ಮೆಟ್ರೊ ಪ್ರಯಾಣ ದರದಲ್ಲಿ ಶೇ 50ರಷ್ಟು ರಿಯಾಯಿತಿ



ಮೀಸಲಾತಿ ತಲೆನೋವಾಗಿದೆ: ಗುಜರಾತ್ ಬಿಜೆಪಿ ನಾಯಕಿ

ಅಹಮದಾಬಾದ್: 'ವೋಟ್ ಬ್ಯಾಂಕ್ ರಾಜಕಾರಣದಿಂದ ಈಗಲೂ ನಾವು ಮೀಸಲಾತಿಯನ್ನು ರದ್ದು ಪಡಿಸಲು ಸಾಧ್ಯವಾಗಿಲ್ಲ. ಮೀಸಲಾತಿ ಎಂಬುದು ತಲೆನೋವಾಗಿದೆ' ಎಂದು ಗುಜರಾತ್‌ನ ಬಿಜೆಪಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ನೌಕಾಬೆನ್ ಪ್ರಜಾಪತಿ ಹೇಳಿಕೆ ನೀಡಿದ್ದಾರೆ.

ಭಾನುವಾರ ಗಣರಾಜ್ಯೋತ್ಸವದ ಅಂಗವಾಗಿ ಬನಾಸ್ಕಾಂತಾ ಜಿಲ್ಲೆಯ ಬಾಬರ್ ಪಾಲಿಕೆ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ ಈ ರೀತಿ ಹೇಳಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಅವರ ಹೇಳಿಕೆ ಹರಿದಾಡಿದ್ದು, ತೀವ್ರ ಟೀಕೆ ವ್ಯಕ್ತವಾಗಿದೆ. ವಿರೋಧ ಪಕ್ಷಗಳಾದ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷದ ನಾಯಕರು 'ಬಿಜೆಪಿ ಮೀಸಲಾತಿ ವಿರೋಧಿ' ಎಂದು ಟೀಕಿಸಿವೆ.

'ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮೀಸಲಾತಿ ತೆಗೆದು ಹಾಕಲು ಮೊದಲಿನಿಂದಲೂ ಪ್ರಯತ್ನಿಸುತ್ತಿವೆ. ಸಂವಿಧಾನದ ಮೂಲಕ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮೀಸಲಾತಿ ನೀಡಿರುವುದು ಬಿಜೆಪಿ ಪಾಲಿಗೆ ತಲೆನೋವಾಗಿದೆ' ಎಂದು ಕಾಂಗ್ರೆಸ್ ವಕ್ತಾರ ಹಿರೇನ್ ಬಂಕಾರ್ ತಿಳಿಸಿದ್ದಾರೆ.

ಉದಯನಿಧಿ ವಿರುದ್ಧದ ಅರ್ಜಿ ವಿಚಾರಣೆಗೆ ನಕಾರ

ನವದೆಹಲಿ: 'ಸನಾತನ ಧರ್ಮವನ್ನು ನಿರ್ಮೂಲಗೊಳಿಸಬೇಕು' ಎಂದು ಹೇಳಿದ್ದ ತಮಿಳುನಾಡಿನ ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸಬೇಕು ಎಂದು ಕೋರಿದ್ದ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.




ಸನಾತನ ಸುರಕ್ಷಾ ಪರಿಷತ್ ಹೆಸರಿನ ಸ್ವಯಂಸೇವಾ ಸಂಘಟನೆ, ವಕೀಲರಾದ ಬಿ. ಜಗನ್ನಾಥ ಮತ್ತು ವಿನೀತ್ ಜಿಂದಾಲ್ ಈ ಅರ್ಜಿಗಳನ್ನು ಸಲ್ಲಿಸಿದ್ದರು. ಇವು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪ್ರಸನ್ನ ಬಿ. ವರಾಳೆ ಅವರು ಇದ್ದ ವಿಭಾಗೀಯ ಪೀಠದ ಮುಂದೆ ಬಂದಿದ್ದವು.

ತಾವು ಆಡಿದ ಮಾತುಗಳಿಗೆ ಬೇರೆ ಬೇರೆ ಕಡೆ ದಾಖಲಾಗಿರುವ ಎಫ್‌ಐಆರ್‌ಗಳನ್ನು ಒಗ್ಗೂಡಿಸಬೇಕು ಎಂದು ಉದಯನಿಧಿ ಕೋರಿರುವ ಅರ್ಜಿಯು ಸುಪ್ರೀಂ ಕೋರ್ಟ್‌ನಲ್ಲಿ ಈಗಾಗಲೇ ವಿಚಾರಣೆಯ ಹಂತದಲ್ಲಿದೆ.

ಸಂಕ್ಷಿಪ್ತ ಸುದ್ದಿ

ಕೈಲಾಸ ಮಾನಸ ಸರೋವರ ಯಾತ್ರೆ ಪುನರಾರಂಭಕ್ಕೆ ನಿರ್ಧಾರ

ನವದೆಹಲಿ (ಪಿಟಿಐ/ಎಎಫ್‌ಪಿ): ದ್ವಿಪಕ್ಷೀಯ ಸಂಬಂಧವನ್ನು 'ಸ್ಥಿರಗೊಳಿಸಲು ಮತ್ತು ಮರುನಿರ್ಮಾಣ' ಮಾಡಲು ಕೆಲವು ಜನ-ಕೇಂದ್ರಿತ ಕ್ರಮಗಳನ್ನು ತೆಗೆದುಕೊಳ್ಳಲು ಭಾರತ ಹಾಗೂ ಚೀನಾ ಸೋಮವಾರ ಒಪ್ಪಿದ್ದು, ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಪುನರಾರಂಭಿಸಲು ನಿರ್ಧರಿಸಿವೆ.



ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಬೀಜಿಂಗ್‌ನಲ್ಲಿ ಚೀನಾದ ವಿದೇಶಾಂಗ ಕಾರ್ಯದರ್ಶಿ ಸುನ್ ವೀಡಾಂಗ್ ಅವರೊಂದಿಗೆ ನಡೆಸಿದ ಮಾತುಕತೆಯ ವೇಳೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. 2025ರ ಬೇಸಿಗೆಯಲ್ಲಿ ಯಾತ್ರೆ ಪುನರಾರಂಭವಾಗಲಿದೆ.

ನೇರ ವಿಮಾನ ಸಂಚಾರ: 'ಉಭಯ ದೇಶಗಳ ನಡುವೆ ನೇರ ವಿಮಾನ ಸಂಚಾರವನ್ನು ಪುನರಾರಂಭಿಸಲು ಎರಡೂ ಕಡೆಯವರು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಇದಕ್ಕೆ ಸಂಬಂಧಿಸಿದ ಪ್ರಕ್ರಿಯೆ ಆರಂಭಿಸಲು ಸಂಬಂಧಪಟ್ಟ ತಾಂತ್ರಿಕ ಅಧಿಕಾರಿಗಳು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ' ಎಂದು ಹೇಳಿದೆ.

ಕೋವಿಡ್ ಹಾಗೂ ಆ ಬಳಿಕ ದ್ವಿಪಕ್ಷೀಯ ಸಂಬಂಧದಲ್ಲಿ ಬಿಕ್ಕಟ್ಟು ತಲೆದೋರಿದ ಕಾರಣ ಐದು ವರ್ಷಗಳ ಹಿಂದೆ ಉಭಯ ದೇಶಗಳ ನಡುವಿನ ನೇರ ವಿಮಾನ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು.

ಕ್ರೈಸ್ತರಿಗೆ ನಿಗದಿಯಾದ ಸ್ಥಳದಲ್ಲಿ ಪಾದ್ರಿಯ ಅಂತ್ಯ ಸಂಸ್ಕಾರ

ನವದೆಹಲಿ (ಪಿಟಿಐ): ಕ್ರೈಸ್ತ ಪಾದ್ರಿಯೊಬ್ಬರ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರ ಎಲ್ಲಿ ನಡೆಯಬೇಕು ಎಂಬ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಸೋಮವಾರ ಭಿನ್ನಮತದ ತೀರ್ಪು ನೀಡಿದೆ. ಆದರೆ, ಅಂತ್ಯಸಂಸ್ಕಾರವು ಕ್ರೈಸ್ತರಿಗೆ ಮೀಸಲಾಗಿರುವ ಸ್ಥಳದಲ್ಲಿ ನಡೆಯಬೇಕು ಎಂದು ಹೇಳಿದೆ.

ಕ್ರೈಸ್ತ ಪಾದ್ರಿಯ ಅಂತಿಮ ಸಂಸ್ಕಾರವು ಅವರ ಕುಟುಂಬಕ್ಕೆ ಸೇರಿದ ಖಾಸಗಿ ಸ್ಥಳದಲ್ಲಿ ನಡೆಯಬೇಕು ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಹೇಳಿದ್ದಾರೆ. ಅಂತಿಮ ಸಂಸ್ಕಾರವು ಕ್ರೈಸ್ತರಿಗೆ ಮೀಸಲಾಗಿರುವ ಸ್ಥಳದಲ್ಲಿಯೇ ನಡೆಯಬೇಕು ಎಂದು ನ್ಯಾಯಮೂರ್ತಿ ಎಸ್‌.ಸಿ. ಶರ್ಮ ಹೇಳಿದ್ದಾರೆ.

ಅಂತ್ಯ ಸಂಸ್ಕಾರವನ್ನು ಎಲ್ಲಿ ನಡೆಸಬೇಕು ಎಂಬುದು ವಿವಾದಕ್ಕೆ ತುತ್ತಾಗಿರುವುದರಿಂದ ಪಾದ್ರಿಯ ಮೃತದೇಹವು ಜನವರಿ 7ರಿಂದಲೂ ಶವಾಗಾರದಲ್ಲಿ ಇದೆ ಎಂಬುದನ್ನು ಪರಿಗಣಿಸಿರುವ ವಿಭಾಗೀಯ ಪೀಠವು, ಈ ವಿಷಯವನ್ನು ವಿಸ್ತೃತ ಪೀಠಕ್ಕೆ ವರ್ಗಾವಣೆ ಮಾಡುವುದಿಲ್ಲ ಎಂದು ಹೇಳಿದೆ. ಮೃತ ದೇಹದ ಅಂತ್ಯ ಸಂಸ್ಕಾರವವನ್ನು ಪಾದ್ರಿಯ ಊರಾಗಿರುವ ಛಿಂದವಾಡದಿಂದ 20 ಕಿ.ಮೀ. ದೂರದಲ್ಲಿರುವ, ಕ್ರೈಸ್ತರ ಅಂತ್ಯಸಂಸ್ಕಾರಕ್ಕೆ ಮೀಸಲಾಗಿರುವ ಸ್ಥಳದಲ್ಲಿ ನಡೆಸಬೇಕು ಎಂದು ಸೂಚಿಸಿದೆ.

ಅಂತ್ಯ ಸಂಸ್ಕಾರದ ಸಂದರ್ಭದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ಛತ್ತೀಸಗಢ ರಾಜ್ಯ ಸರ್ಕಾರವು ಅಗತ್ಯ ಭದ್ರತೆ ಕಲ್ಪಿಸಬೇಕು ಎಂದು ಹೇಳಿದೆ.

ಗ್ರಾಮದ ಸ್ಮಶಾನದಲ್ಲಿ ಕ್ರೈಸ್ತರಿಗೆ ನಿಗದಿ ಮಾಡಿರುವ ಸ್ಥಳದಲ್ಲಿ ಅಂತ್ಯ ಸಂಸ್ಕಾರ ನಡೆಸಲು ಅವಕಾಶ ಕೊಡಬೇಕು ಎಂದು ಕೋರಿ ಪಾದ್ರಿಯ ಪುತ್ರ ರಮೇಶ್ ಬಘೇಲ್ ಸಲ್ಲಿಸಿದ್ದ ಅರ್ಜಿಯನ್ನು ಛತ್ತೀಸಗಢ ಹೈಕೋರ್ಟ್ ಇತ್ಯರ್ಥಪಡಿಸಿತ್ತು. ಈ ಕ್ರಮ ತೃಪ್ತಿ ತಂದಿಲ್ಲ ಎಂದು ಬಘೇಲ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.



ಸ್ಮಶಾನದಲ್ಲಿ ಕ್ರೈಸ್ತರಿಗೆ ನಿಗದಿ ಮಾಡಿರುವ ಸ್ಥಳದಲ್ಲಿ ಅಂತ್ಯ ಸಂಸ್ಕಾರ ನಡೆಸಲು ಗ್ರಾಮದ ಕೆಲವರು ಬಿಡುತ್ತಿಲ್ಲ, ತಮ್ಮ ಕುಟುಂಬಕ್ಕೆ ಸೇರಿದ ಖಾಸಗಿ ಜಮೀನಿನಲ್ಲಿ ಅಂತ್ಯ ಸಂಸ್ಕಾರ ನಡೆಸುವುದಕ್ಕೂ ಅವಕಾಶ ಕೊಡುತ್ತಿಲ್ಲ ಎಂದು ಬಘೇಲ್ ದೂರಿದ್ದರು.

ಧರ್ಮ ಸಂಸತ್ ಬಹಿಷ್ಕರಿಸಿದ ಅಖಾಡಗಳು

ಲಖನೌ: ವಕ್ಫ್ ಮಂಡಳಿಯ ಮಾದರಿಯಲ್ಲೇ 'ಸನಾತನ ಮಂಡಳಿ' ರಚಿಸಬೇಕು ಎಂದು ಮಹಾ ಕುಂಭಮೇಳದಲ್ಲಿ ನಡೆಯುತ್ತಿರುವ ಧರ್ಮ ಸಂಸತ್ತಿನಲ್ಲಿ ಮಂಡನೆಯಾಗಿರುವ ಪ್ರಸ್ತಾವಕ್ಕೆ ವಿಘ್ನ ಎದುರಾಗಿದೆ.

ಸೋಮವಾರ ಆರಂಭವಾದ ಧರ್ಮ ಸಂಸತ್ತನ್ನು 13 ಅಖಾಡಗಳ ಪೈಕಿ ಹೆಚ್ಚಿನವು ಬಹಿಷ್ಕರಿಸಿವೆ.

ಧರ್ಮ ಬೋಧಕ ದೇವಕಿ ನಂದನ್ ಠಾಕೂರ್ ಅವರು ಧರ್ಮ ಸಂಸತ್ ಆಯೋಜಿಸಿದ್ದಾರೆ. ಹಲವಾರು ಸ್ವಾಮೀಜಿಗಳು ಹಾಗೂ ಭಕ್ತರು ಧರ್ಮ ಸಂಸತ್ತಿನಲ್ಲಿ ಪಾಲ್ಗೊಂಡಿದ್ದಾರೆ. ಇದರಲ್ಲಿ ಪಾಲ್ಗೊಳ್ಳಲು ಹಾಗೂ ಸನಾತನ ಮಂಡಳಿಯನ್ನು ರಚಿಸುವ ಪ್ರಸ್ತಾವಕ್ಕೆ ಅಖಾಡಗಳು ಒಪ್ಪಿದ್ದವು.

ಆದರೆ, ಮಹಾಕುಂಭದಲ್ಲಿ ಜನದಟ್ಟಣೆ ಹೆಚ್ಚಿರುವ ಕಾರಣಕ್ಕೆ ಅಖಾಡಗಳು ಧರ್ಮ ಸಂಸತ್ತಿನಿಂದ ದೂರ ಇರಲಿವೆ ಎಂದು ಅಖಿಲ ಭಾರತ ಅಖಾಡ ಪರಿಷತ್ತಿನ ಅಧ್ಯಕ್ಷ ಮಹಂತ ರವೀಂದ್ರ ಪುರಿ ಅವರು ಹೇಳಿದ್ದಾರೆ.

ಸನಾತನ ಮಂಡಳಿಯ ನೇತೃತ್ವ ವಹಿಸಿಕೊಳ್ಳುವ ಬಯಕೆ ಠಾಕೂರ್ ಅವರಿಗೆ ಇದೆ, ಅವರು ಅಖಾಡಗಳನ್ನು ಮಂಡಳಿಯಿಂದ ಹೊರಗಿರಿಸಲು ಬಯಸಿದ್ದಾರೆ ಎಂಬ ಆತಂಕದಿಂದಾಗಿ ಅಖಾಡ ಪರಿಷತ್ತು ಧರ್ಮ ಸಂಸತ್ತನ್ನು ಬಹಿಷ್ಕರಿಸಿದೆ ಎಂದು ಮೂಲಗಳು ಹೇಳಿವೆ.

ಮಹಿಳೆಯನ್ನು ಕೊಂದಿದ್ದ ಹುಲಿ ಕಳೇಬರ ಪತ್ತೆ

ತಿರುವನಂತಪುರ: ಇತ್ತೀಚೆಗೆ ವಯನಾಡ್‌ನಲ್ಲಿನ ಕಾಫಿ ತೋಟವೊಂದರ ಕಾರ್ಮಿಕ ಮಹಿಳೆ ರಾಧಾ ಅವರನ್ನು ಬಲಿ ತೆಗೆದುಕೊಂಡಿದ್ದ ಹುಲಿಯ ಕಳೇಬರ ಸೋಮವಾರ ಬೆಳಗಿನ ಜಾವ ವಯನಾಡ್‌ನ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿದೆ.

'ರಾತ್ರಿ 12.30ರ ಸುಮಾರಿಗೆ ಹುಲಿಯು ಈ ಭಾಗದಲ್ಲಿ ಇರುವ ಬಗ್ಗೆ ತಿಳಿದುಬಂದಿತ್ತು. 2.30ರ ಸುಮಾರಿಗೆ ಹುಲಿ ಕಾಣಿಸಿಕೊಂಡಿತು. ಹುಲಿಯನ್ನು ಶಾಂತಗೊಳಿಸುವ ನಮ್ಮ ಯತ್ನ ಫಲ ನೀಡಲಿಲ್ಲ. ಬಳಿಕ ಬೆಳಗಿನ ಜಾವ ಹುಲಿಯ ಕಳೇಬರ ಪತ್ತೆಯಾಯಿತು. ಕಳೇಬರದಲ್ಲಿ ಗಾಯಗಳು ಕಂಡುಬಂದಿವೆ' ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎಸ್. ದೀಪಾ ಮಾಹಿತಿ ನೀಡಿದರು.

'ಕಳೇಬರದ ಪರೀಕ್ಷೆಯ ವೇಳೆ ಹುಲಿಯ ಹೊಟ್ಟೆಯಲ್ಲಿ ರಾಧಾ ಅವರ ಕೂದಲು, ಬಟ್ಟೆಯ ತುಂಡು ಹಾಗೂ ಕಿವಿ ಓಲೆಗಳು ಕಂಡುಬಂದವು. ಮತ್ತೊಂದು ಹುಲಿಯೊಂದಿಗೆ ಗಲಾಟೆಯಾಗಿರುವುದೇ ಈ ಹುಲಿಯ ಸಾವಿಗೆ ಕಾರಣ ಇರಬಹುದು' ಎಂದು ಅಧಿಕಾರಿಗಳು ಹೇಳಿದರು. ಮೃತ ಹುಲಿಯ ಮಾಹಿತಿಯು ಕೇರಳ ಅರಣ್ಯ ಅಧಿಕಾರಿಗಳ ಬಳಿ ಇರಲಿಲ್ಲ. ಆದ್ದರಿಂದ, ಇದು ಕೇರಳ ಭಾಗದ ಹುಲಿಯಾಗಿರಲಿಲ್ಲ. ಕರ್ನಾಟಕ ಅರಣ್ಯ ಪ್ರದೇಶಗಳಿಂದ ಇಲ್ಲಿಗೆ ಬಂದಿರಬಹುದು ಎಂದು ಅಂದಾಜಿಸಲಾಗಿದೆ.



ತಕರಾರು ಇಲ್ಲದ ವಕ್ಫ್ ಆಸ್ತಿಗೆ ಭಂಗವಿಲ್ಲ

ಒಂದನೇ ಪುಟದಿಂದ...

ವಿಧವೆಯರು ಹಾಗೂ ಅನಾಥ ಮಕ್ಕಳ ಅಭಿವೃದ್ಧಿಗೆ ಕೈಗೊಳ್ಳಬೇಕಿರುವ ಕ್ರಮಗಳು ಯಾವುವು ಎಂಬುದನ್ನು ಕಾನೂನಿನ ಮೂಲಕ ಹೇಳುವ ಬದಲು, ಅವುಗಳನ್ನು ವಕ್ಫ್ ಮಂಡಳಿಗಳ ವಿವೇಚನೆಗೆ ಬಿಡುವ ತಿದ್ದುಪಡಿಯನ್ನು ಸಮಿತಿಯು ಒಪ್ಪಿದೆ.

ಮಸೂದೆಯ ಅಷ್ಟೂ (ಅಂದರೆ 44) ಕಲಮುಗಳಲ್ಲಿ ತಿದ್ದುಪಡಿ ಆಗಬೇಕು, ಈಗಿರುವ ಕಾನೂನಿನ ಅಂಶಗಳನ್ನು ಹೊಸ ಮಸೂದೆಯಲ್ಲಿ ಉಳಿಸಿಕೊಳ್ಳಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಹೇಳಿದರು. ಸಮಿತಿಯು ತನ್ನ ವರದಿಯಲ್ಲಿ ಹೇಳುವ ಸ್ವರೂಪದ ಮಸೂದೆಯಲ್ಲಿ ಕರಾಳ ಅಂಶಗಳೆಲ್ಲವೂ ಉಳಿದುಕೊಳ್ಳುತ್ತವೆ ಎಂದು ವಾದಿಸಿದ್ದಾಗಿ ಮೂಲಗಳು ತಿಳಿಸಿವೆ.

ಬಿಜೆಪಿ ಸಂಸದ ಜಗದಾಂಬಿಕಾ ಪಾಲ್ ನೇತೃತ್ವದಲ್ಲಿ ನಡೆದ ಸಮಿತಿಯ ಸಭೆಯು ಸೋಮವಾರವೂ ಗದ್ದಲಮಯವಾಗಿತ್ತು. ಪಾಲ್ ಅವರು ಪ್ರಜಾತಾಂತ್ರಿಕ ಪ್ರಕ್ರಿಯೆಗಳನ್ನು ಬುಡಮೇಲು ಮಾಡಿದ್ದಾರೆ ಎಂದು ವಿರೋಧ ಪಕ್ಷಗಳ ಸದಸ್ಯರು ದೂರಿದರು.

ಸಮಿತಿಯು ತನ್ನ ವರದಿಯನ್ನು ಬುಧವಾರ ಅಂಗೀಕರಿಸಲಿದೆ. ವಿರೋಧ ಪಕ್ಷಗಳಾದ ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಎಐಎಂಐಎಂ ಸದಸ್ಯರು ತಮ್ಮ ವಿರೋಧವನ್ನು ದಾಖಲಿಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಸಂಸತ್ತಿನ ಬಜೆಟ್ ಅಧಿವೇಶನವು ಜನವರಿ 31ರಿಂದ ಶುರುವಾಗಲಿದೆ. ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟಕ್ಕೆ ಬಹುಮತ ಇರುವ ಕಾರಣಕ್ಕೆ ಅಧಿವೇಶನದ ಪ್ರಥಮಾರ್ಧದಲ್ಲಿ ಮಸೂದೆಗೆ ಸಂಸತ್ತಿನ ಅಂಗೀಕಾರ ಪಡೆದುಕೊಳ್ಳಲು ಅವಕಾಶ ಇದೆ ಎಂದು ಮೂಲಗಳು ವಿವರಿಸಿವೆ.

ಎಲ್ಲ ತಿದ್ದುಪಡಿ ಪ್ರಸ್ತಾವಗಳನ್ನು ಸಮಿತಿಯು ಬಹಳ ಪ್ರಜಾಸತ್ತಾತ್ಮಕವಾಗಿ ಪರಿಶೀಲಿಸಿದೆ ಎಂದು ಪಾಲ್ ಅವರು ಹೇಳಿದ್ದಾರೆ. ಆದರೆ ಬಹುಮತದ ಅಭಿಪ್ರಾಯಕ್ಕೆ ಬೆಲೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸಮಿತಿಯು ವರದಿಯನ್ನು ಈಗಾಗಲೇ ಸಿದ್ಧಪಡಿಸಿ ಆಗಿರಬಹುದು. ಮಸೂದೆಗೆ ಸಂಸತ್ತಿನ ಅಂಗೀಕಾರ ದೊರೆತರೆ, ನಾವು ಕೋರ್ಟ್ ಮೆಟ್ಟಿಲೇರುತ್ತೇವೆ

ಎ. ರಾಜಾ, ಡಿಎಂಕೆ ಸದಸ್ಯ

ಎಲ್ಲವೂ ಮೊದಲೇ ನಿರ್ಧಾರವಾಗಿತ್ತು. ನಮಗೆ ಮಾತನಾಡಲು ಅವಕಾಶವನ್ನು ಕೊಡಲಿಲ್ಲ. ಯಾವ ನಿಯಮವನ್ನೂ ಪಾಲಿಸಲಿಲ್ಲ

ಕಲ್ಯಾಣ್ ಬ್ಯಾನರ್ಜಿ, ಟಿಎಂಸಿ ಸದಸ್ಯ

ಎನ್‌ಡಿಎ ತಿದ್ದುಪಡಿಗೆ ಒಪ್ಪಿಗೆ

ಎನ್‌ಡಿಎ ಸದಸ್ಯರು ಹೇಳಿದ ತಿದ್ದುಪಡಿಗಳನ್ನು ಸಮಿತಿಯು ಒಪ್ಪಿಕೊಂಡಿದೆ. ಆದರೆ, ವಿರೋಧ ಪಕ್ಷಗಳ ಸದಸ್ಯರು ಹೇಳಿದ ತಿದ್ದುಪಡಿಗಳನ್ನು ತಿರಸ್ಕರಿಸಲಾಗಿದೆ. ಈಗ ಜಾರಿಯಲ್ಲಿರುವ ವಕ್ಫ್ ಕಾಯ್ದೆಯಲ್ಲಿನ ಅಂಶಗಳನ್ನು ಹೊಸ ಮಸೂದೆಯಲ್ಲಿ ಉಳಿಸಿಕೊಳ್ಳುವ ಉದ್ದೇಶದ ತಿದ್ದುಪಡಿಗಳನ್ನು ವಿರೋಧ ಪಕ್ಷಗಳ ಸದಸ್ಯರು ಸೂಚಿಸಿದ್ದರು.

ಈ ಪ್ರಸ್ತಾವಗಳಿಗೆ ಒಪ್ಪಿಗೆ

- ಸರ್ಕಾರಿ ಆಸ್ತಿ ಕುರಿತ ವ್ಯಾಜ್ಯದ ಬಗ್ಗೆ ಪರಿಶೀಲನೆ ನಡೆಸುವ ಅಧಿಕಾರವನ್ನು ಜಿಲ್ಲಾಧಿಕಾರಿಗೆ ನೀಡುವ ಬದಲು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಹೇಳುವ, ಜಿಲ್ಲಾಧಿಕಾರಿಗಿಂತ ಮೇಲಿನ ಹುದ್ದೆಯ ಅಧಿಕಾರಿಗೆ ಆ ಅಧಿಕಾರ ನೀಡಬೇಕು ಎಂಬ ತಿದ್ದುಪಡಿಯನ್ನು ಒಪ್ಪಲಾಗಿದೆ ಎಂದು ಗೊತ್ತಾಗಿದೆ.
- ವಕ್ಫ್ ಮಂಡಳಿಯಲ್ಲಿ ನಾಲ್ಕು ಮಂದಿ ಮುಸ್ಲಿಮೇತರರಿಗೆ ಸ್ಥಾನ ಕಲ್ಪಿಸುವ ತಿದ್ದುಪಡಿಯನ್ನು ಒಪ್ಪಲಾಗಿದೆ.

ನಂದಿಬೇವೂರು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಗೋಳು

ಬಿಸಿಯೂಟ: ನಿತ್ಯ 1 ಕಿ.ಮೀ. ನಡಿಗೆ

• ವಿಶ್ವನಾಥ ಡಿ.

ಹರಪನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ನಂದಿಬೇವೂರಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 175 ವಿದ್ಯಾರ್ಥಿಗಳು ಬಿಸಿಯೂಟಕ್ಕೆ ತಟ್ಟೆ ಮತ್ತು ನೀರಿನ ಬಾಟ್ಲಿ ಹಿಡಿದು ನಿತ್ಯ 1 ಕಿ.ಮೀ ನಡೆಯಬೇಕು.

ಬಿಸಿಯೂಟಕ್ಕಾಗಿ ಅರ್ಧ ಕಿ.ಮೀ. ದೂರದಲ್ಲಿರುವ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆ ಕಟ್ಟಡಕ್ಕೆ ಹೋಗಿ, ಊಟದ ಬಳಿಕ ಮತ್ತೆ ಅರ್ಧ ಕಿ.ಮೀ. ಸಾಗಿ ಶಾಲೆಗೆ ವಾಪಸ್ ಆಗಬೇಕು. 11 ವರ್ಷಗಳಿಂದ ಈ ಸ್ಥಿತಿ ಇದೆ.

ಶಾಲೆಯ ಹಳೆಯ ಕಟ್ಟಡದಲ್ಲಿ 1ರಿಂದ 3ನೇ ತರಗತಿಯಲ್ಲಿ 55 ವಿದ್ಯಾರ್ಥಿಗಳಿದ್ದರೆ, ಹೊಸ ಕಟ್ಟಡದಲ್ಲಿ 4ರಿಂದ 7ನೇ ತರಗತಿವರೆಗೆ ಓದುವ 175 ವಿದ್ಯಾರ್ಥಿಗಳಿದ್ದಾರೆ. ನಿತ್ಯ ಮಧ್ಯಾಹ್ನ 1.30ಕ್ಕೆ ಶಿವಮೊಗ್ಗ-ಹೊಸಪೇಟೆ ರಾಜ್ಯ ಹೆದ್ದಾರಿ–25 ಬದಿಯಲ್ಲಿ ನಡೆಯುತ್ತ ಹಳೆಯ ಕಟ್ಟಡದ ಶಾಲೆಗೆ ಬರಬೇಕು. ಎಲ್ಲ ಮಕ್ಕಳನ್ನು ಒಂದೇ ಕಟ್ಟಡಕ್ಕೆ ಸ್ಥಳಾಂತರಿಸಿದರೆ, ಕೋಣೆಗಳ ಕೊರತೆ ಆಗುತ್ತವೆ ಎಂಬ ಕಾರಣಕ್ಕೆ ವ್ಯವಸ್ಥೆ ಮಾಡಲಾಗಿದೆ.

'ಹೊಸ ಕಟ್ಟಡದಲ್ಲಿ 9 ಕೊಠಡಿಗಳಿದ್ದು, ಕೆಲವು ಶಿಥಿಲಗೊಂಡಿವೆ. ಹಳೆಯ ಕಟ್ಟಡದಲ್ಲಿನ 5 ಕೊಠಡಿಗಳನ್ನು ದಾಸ್ತಾನು ಕೊಠಡಿ, ನಲಿಕಲಿ, ಅಡುಗೆ ಕೋಣೆ, ಮುಖ್ಯ ಶಿಕ್ಷಕರ ಕೊಠಡಿಯಾಗಿ ಪರಿವರ್ತಿಸಲಾಗಿದೆ. ಇದರಲ್ಲಿ ಎರಡು ಹೆಂಚಿನ ಕೊಠಡಿಗಳು ಶಿಥಿಲಗೊಂಡಿವೆ. ಶಾಲೆಯಲ್ಲಿ 10 ಶಿಕ್ಷಕರಿದ್ದಾರೆ. ಒಂದು ಕಡೆ ಮೂವರು ಶಿಕ್ಷಕರು, ಇನ್ನೊಂದು ಕಡೆ 7 ಶಿಕ್ಷಕರು ಕಾರ್ಯನಿರ್ವಹಿಸುತ್ತಾರೆ' ಎಂದು ಶಾಲೆಯ ಮೂಲಗಳು ತಿಳಿಸಿವೆ. 'ರಾಜ್ಯ ಹೆದ್ದಾರಿ -25ರಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ಓಡಾಡುವಾಗ ವಿದ್ಯಾರ್ಥಿಗಳಿಗೆ ಅಪಾಯವಾಗುವ ಸಾಧ್ಯತೆ ಇದೆ. ಬಿಸಿಯೂಟಕ್ಕಾಗಿ ಅವರ ಅಲೆದಾಟ ತಪ್ಪಿಸಬೇಕು. ಎಲ್ಲರಿಗೂ ಒಂದೇ ಕಡೆ ಊಟ ನೀಡುವ ವ್ಯವಸ್ಥೆ ಆಗಬೇಕು' ಎಂದು ಗ್ರಾಮಸ್ಥರು ಕೋರಿದ್ದಾರೆ.



ಹರಪನಹಳ್ಳಿ ತಾಲ್ಲೂಕಿನ ನಂದಿಬೇವೂರಿನಲ್ಲಿ ಮಧ್ಯಾಹ್ನದ ಬಿಸಿಯೂಟಕ್ಕಾಗಿ ರಾಜ್ಯ ಹೆದ್ದಾರಿ ಬದಿಯಲ್ಲಿ ಸಾಗುತ್ತಿರುವ ವಿದ್ಯಾರ್ಥಿಗಳು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- 175 ವಿದ್ಯಾರ್ಥಿಗಳಿಗೆ ತಪ್ಪದ ಸಂಕಷ್ಟ
- ಎಲ್ಲರಿಗೂ ಒಂದೇ ಕಡೆ ಊಟ ನೀಡಲು ಮನವಿ

ವಿದ್ಯಾರ್ಥಿಗಳ ಸಮಸ್ಯೆ ಗಮನದಲ್ಲಿದೆ. ಪರಿಹಾರಕ್ಕೆ ಪ್ರಯತ್ನಿಸುತ್ತೇವೆ. ಆಯಾ ಶಾಲೆಗಳಲ್ಲೇ ಊಟ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಲೇಪಾಕ್ಷ, ಕ್ಷೇತ್ರ ಶಿಕ್ಷಣಾಧಿಕಾರಿ, ಹರಪನಹಳ್ಳಿ

'ಇ.ಡಿ ನೋಟಿಸ್‌ಗೆ ಸಿ.ಎಂ ತಕ್ಕ ಉತ್ತರ ಕೊಡುತ್ತಾರೆ'

ಪ್ರಜಾವಾಣಿ ವಾರ್ತೆ

ಯಾದಗಿರಿ: 'ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ, ಸಚಿವ ಬೈರತಿ ಸುರೇಶ್ ಅವರಿಗೆ ಇ.ಡಿ ನೋಟಿಸ್ ಕೊಟ್ಟಿದ್ದು, ಅದಕ್ಕೆ ತಕ್ಕ ಉತ್ತರ ಕೊಡುತ್ತಾರೆ' ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ತಿಳಿಸಿದರು.

ಸೋಮವಾರ ನಗರದಲ್ಲಿ ಯಾದಗಿರಿ ನಗರ ಪೊಲೀಸ್ ಠಾಣೆ ಉದ್ಘಾಟಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇ.ಡಿಯವರು ಏನು ಅಪೇಕ್ಷೆ ಪಡುತ್ತಾರೆ ಅದಕ್ಕೆ ತಕ್ಕ ಉತ್ತರ ಕೊಡುತ್ತಾರೆ. ಕಾನೂನಿನ ಬಗ್ಗೆ ಮಾತಾಡಲು ನಮಗೆ ಅರ್ಹತೆಯಿಲ್ಲ. ಇ.ಡಿ ಸೇರಿದಂತೆ ಬೇರೆ ಬೇರೆ ಸಂಸ್ಥೆಗಳಿಂದ ತನಿಖೆ ನಡೆಯುತ್ತಿದೆ. ಇದರ ಬಗ್ಗೆ ಏನೂ ಮಾತನಾಡಲು ಆಗಲ್ಲ. ಇದು ರಾಜಕೀಯ ಪ್ರೇರಿತ ಎಂದು ಹಿಂದೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ' ಎಂದರು.

'ಆ ನಿವೇಶನಗಳ ಮೌಲ್ಯ ₹ 300 ಕೋಟಿಯಷ್ಟು ಆಗಬಹುದು ಅಂತ ಹೇಳಲಾಗಿದೆ. 70–80 ಜನರ ಪಟ್ಟಿ ಮಾಡಿದ್ದಾರೆ. ಅದರಲ್ಲಿ ಮುಖ್ಯಮಂತ್ರಿಯವರ ಹೆಸರಿದೆಯಾ? ಅವರ ಪತ್ನಿ ಹೆಸರಿದೆಯಾ ಏನೂ ಮಾಹಿತಿ ಇಲ್ಲ' ಎಂದು ಹೇಳಿದರು.

ಭಾರತಕ್ಕೆ ಸರಣಿ ಗೆಲುವಿನ ತವಕ


ಇಂಗ್ಲೆಂಡ್ ವಿರುದ್ಧ ಮೂರನೇ ಟಿ20 ಪಂದ್ಯ ಇಂದು • ಲಯಕ್ಕೆ ಮರಳುವರೇ ನಾಯಕ ಸೂರ್ಯ?

ರಾಜಕೋಟ್ (ಪಿಟಿಐ): ಮಿಂಚಿನ ಆಟಕ್ಕೆ ಹೆಸರಾಗಿದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ದೀರ್ಘ ಕಾಲದಿಂದ ಅಂಥ ಆಟವಾಡಿಲ್ಲ. ಇಂಗ್ಲೆಂಡ್ ವಿರುದ್ಧ ಮಂಗಳವಾರ ನಿರಂಜನ್ ಶಾ ಕ್ರೀಡಾಂಗಣದಲ್ಲಿ ನಡೆಯುವ ಮೂರನೇ ಟಿ20 ಪಂದ್ಯದಲ್ಲಿ ಅವರು ಮಾಮೂಲಿ ಆಕ್ರಮಣಕಾರಿ ಆಟಕ್ಕೆ ಮರಳಬಹುದೆಂಬ ನಿರೀಕ್ಷೆಯಲ್ಲಿ ತಂಡ ಇದೆ.

ಭಾರತ ಐದು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಪಡೆದಿದ್ದು, ಸರಣಿ ಗೆಲುವಿನ ವಿಶ್ವಾಸದಿಂದ ಇದೆ. ತಂಡದ ಇತರ ಆಟಗಾರರು ಬಿರುಸಿನ ಆಟವಾಡಿದ್ದರೂ ಸೂರ್ಯ ಅವರು ಆಕ್ರಮಣಕಾರಿ ಇನಿಂಗ್ಸ್ ಆಡದೇ ಹಲವು ಪಂದ್ಯಗಳು ಕಳೆದಿವೆ. ವಿಶ್ವದ ಶ್ರೇಷ್ಠ ಟಿ20 ಬ್ಯಾಟರ್ ಎನಿಸಿರುವ ಸೂರ್ಯ ಹೋದ ವರ್ಷ 17 ಪಂದ್ಯಗಳಿಂದ 26.81 ಸರಾಸರಿಯಲ್ಲಿ 429 ರನ್‌ಗಳನ್ನಷ್ಟೇ ಗಳಿಸಿದ್ದಾರೆ.

2021ರಲ್ಲಿ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟ ವರ್ಷ 35ರ ಸರಾಸರಿಯಲ್ಲಿ ರನ್ ಗಳಿಸಿದ್ದರು. ನಂತರದ ಎರಡು ವರ್ಷ ಅದು 45ರ ಸರಾಸರಿಗೆ ಏರಿತು. ತಂಡ ಉತ್ತಮ ಪ್ರದರ್ಶನ ನೀಡಿದ್ದರೂ ಮುಂಬೈನ 34 ವರ್ಷ ವಯಸ್ಸಿನ ಆಟಗಾರ ಮೊದಲೆರಡು ಪಂದ್ಯಗಳಲ್ಲಿ ಸಪ್ಪೆಯಾಗಿದ್ದಾರೆ.

ತಿಲಕ್ ವರ್ಮಾ ಅವರ ಹೊಣೆಯರಿತ ಇನಿಂಗ್ಸ್‌ನಿಂದಾಗಿ ಭಾರತವು ಚೆನ್ನೈನ ಪಂದ್ಯ ಜಯಿಸಿತ್ತು. ಸಂಜು ಸ್ಯಾಮ್ಸನ್ ಅವರು ಶಾರ್ಟ್ ಬಾಲ್‌ಗಳಿಗೆ ವಿಕೆಟ್ ಕಳೆದುಕೊಳ್ಳುತ್ತಿದ್ದಾರೆ. ವೇಗದ ಬೌಲರ್ ಜೋಫ್ರಾ ಆರ್ಚರ್ ಎರಡು ಬಾರಿ ಸಂಜು ಅವರ ವಿಕೆಟ್ ಪಡೆದಿದ್ದಾರೆ.



ರಾಜಕೋಟ್ ಪಿಚ್ ಸಾಮಾನ್ಯವಾಗಿ ಬ್ಯಾಟರ್‌ಗಳ ಪಾಲಿಗೆ ಸ್ನೇಹಿ. ಆರ್ಚರ್ ಮತ್ತು ಮಾರ್ಕ್ ವುಡ್ ಆತಿಥೇಯ ತಂಡದ ಬ್ಯಾಟರ್‌ಗಳಿಗೆ ಸವಾಲೊಡ್ಡಿದರೂ, ತಿಲಕ್ ವರ್ಮಾ ಮಾತ್ರ ಇವರಿಬ್ಬರನ್ನು ವಿಶ್ವಾಸದಿಂದ ಎದುರಿಸಿದರು.

ರಿಂಕು ಸಿಂಗ್ ಮತ್ತು ನಿತೀಶ್ ರೆಡ್ಡಿ ಗಾಯಾಳಾಗಿರುವ ಕಾರಣ ಶಿವಂ ದುಬೆ ಅಥವಾ ರಮಣದೀಪ್ ಸಿಂಗ್ ಅವರಲ್ಲೊಬ್ಬರು ಸ್ಥಾನ ಪಡೆಯಬಹುದು. ಟಿ20 ಪಂದ್ಯಗಳಲ್ಲಿ ಸ್ಪಿನ್ನರ್‌ಗಳನ್ನು ದಂಡಿಸುವುದಕ್ಕೆ ಹೆಸರು ಪಡೆದಿರುವ ದುಬೆ, ಲೆಗ್ ಸ್ಪಿನ್ನರ್ ಅದಿಲ್ ರಶೀದ್ ವಿರುದ್ಧ ಪರಿಣಾಮಕಾರಿ ಅಸ್ತ್ರವಾಗಬಹುದು.

ಅರ್ಷದೀಪ್ ಸಿಂಗ್ ತಂಡದಲ್ಲಿರುವ ಏಕೈಕ ಪರಿಣತ ವೇಗಿ ಎನಿಸಿದ್ದು, ಹಾರ್ದಿಕ್ ಪಾಂಡ್ಯ ಅವರಿಗೆ ಬೆಂಬಲ ನೀಡಿದ್ದಾರೆ. ತಂಡ ಇದೇ ಸಂಯೋಜನೆ ಉಳಿಸಿಕೊಳ್ಳುವ ನಿರೀಕ್ಷೆಯಿದೆ. ಸ್ಪಿನ್ನರ್‌ಗಳಾದ ವರುಣ್ ಚಕ್ರವರ್ತಿ ಮತ್ತು ರವಿ ಬಿಷ್ಣೋಯಿ ಮಧ್ಯದ ಓವರುಗಳಲ್ಲಿ ಪರಿಣಾಮಕಾರಿ ಎನಿಸಿದ್ದಾರೆ.

ಗೆಲುವು ಅನಿವಾರ್ಯ: ಸರಣಿ ಜೀವಂತವಾಗಿರಿಸಲು ಇಂಗ್ಲೆಂಡ್‌ಗೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯ. ಬ್ಯಾಟ್‌ನಿಂದ ಪ್ರವಾಸಿ ತಂಡ ಸುಧಾರಿತ ಪ್ರದರ್ಶನದ ವಿಶ್ವಾಸದಲ್ಲಿದೆ. ಗುಣಮಟ್ಟದ ಸ್ಪಿನ್ ದಾಳಿಯೆದುರು ಇತರ ಬ್ಯಾಟರ್‌ಗಳು ಪರದಾಡುತ್ತಿರುವಾಗ ನಾಯಕ ಜೋಸ್ ಬಟ್ಲರ್ ಭರವಸೆಯ ಆಟವಾಡಿದ್ದಾರೆ.


ಜೋಸ್ ಬಟ್ಲರ್

ಜೇಮಿ ಸ್ಮಿತ್ ಮತ್ತು ಬ್ರೈಡನ್ ಕರ್ಸ್ ಅವರು ಉಪಯುಕ್ತ ಕೊಡುಗೆ ನೀಡುವ ಸಾಮರ್ಥ್ಯ ಹೊಂದಿದ್ದಾರೆ. ಬೌಲರ್‌ಗಳ ಪೈಕಿ ಆರ್ಚರ್ ವಿಕೆಟ್ ಪಡೆದಿದ್ದರೂ ಭಾರತದ ರನ್ ವೇಗಕ್ಕೆ ಕಡಿವಾಣ ಹಾಕಲು ವಿಫಲರಾಗಿದ್ದಾರೆ. ಚೆನ್ನೈನಲ್ಲಿ ಅವರ 4 ಓವರುಗಳಲ್ಲಿ 60 ರನ್‌ಗಳು ಸೂರೆಯಾಗಿದ್ದವು. ಆದರೆ ಅದಿಲ್ ರಶೀದ್ ಮಿತವ್ಯಯಿ ಎನಿಸಿದ್ದಾರೆ.

ಪಂದ್ಯ
ಆರಂಭ: ರಾತ್ರಿ 7.00
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಶಮಿ ಸಂಪೂರ್ಣ ಫಿಟ್: ಸಿತಾಂಶು



ರಾಜ್‌ಕೋಟ್ (ಪಿಟಿಐ): ಅನುಭವಿ ವೇಗಿ ಮೊಹಮ್ಮದ್ ಶಮಿ ಅವರು ಫಿಟ್‌ನೆಸ್ ಸಮಸ್ಯೆ ಎದುರಿಸುತ್ತಿಲ್ಲ. ಆದರೆ, ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯ ಉಳಿದ ಪಂದ್ಯಗಳಿಗೆ ಆಡುವ ಕುರಿತು ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ನಿರ್ಧಾರ ಕೈಗೊಳ್ಳುತ್ತಾರೆ ಎಂದು ನೂತನ ಬ್ಯಾಟಿಂಗ್ ಕೋಚ್ ಸಿತಾಂಶು ಕೋಟಕ್ ಸೋಮವಾರ ಹೇಳಿದರು.

2023ರ ಏಕದಿನ ವಿಶ್ವಕಪ್ ಟೂರ್ನಿಯ ಬಳಿಕ 34 ವರ್ಷ ವಯಸ್ಸಿನ ಶಮಿ ಅವರು ಭಾರತ ತಂಡಕ್ಕೆ ಪುನರಾಗಮನ ಮಾಡಿದ್ದಾರೆ. ಇಂಗ್ಲೆಂಡ್ ವಿರುದ್ಧದ ಟಿ20, ಏಕದಿನ ಸರಣಿ ಹಾಗೂ ಚಾಂಪಿಯನ್ಸ್ ಟ್ರೋಫಿ ತಂಡದಲ್ಲಿ ಅವರು ಸ್ಥಾನ ಪಡೆದಿದ್ದಾರೆ.

ಮೊದಲೆರಡು ಟಿ20 ಪಂದ್ಯಗಳಲ್ಲಿ ಶಮಿಗೆ ಆಡಲು ಅವಕಾಶ ಸಿಗದಿರುವುದಕ್ಕೆ ಅವರ ಫಿಟ್‌ನೆಸ್ ಬಗ್ಗೆ ಸಂಶಯ ಮೂಡಿಸಿತ್ತು. ಈ ಬಗ್ಗೆ ಸಿತಾಂಶು ಸ್ಪಷ್ಟನೆ ನೀಡಿದ್ದಾರೆ.

'ಹೌದು, ಶಮಿ ಸಂಪೂರ್ಣ ಫಿಟ್ ಆಗಿದ್ದಾರೆ. ಆದರೆ, ಮೂರನೇ ಟಿ20 ಪಂದ್ಯದಲ್ಲಿ ಅವರು ಆಡುವ ಅಥವಾ ಆಡದಿರುವ ಬಗ್ಗೆ ಸಂಬಂಧಪಟ್ಟವರು ತೀರ್ಮಾನಿಸುತ್ತಾರೆ. ಆದರೆ, ಮುಂಬರುವ ಪಂದ್ಯಗಳಲ್ಲಿ ಖಂಡಿತವಾಗಿಯೂ ತಂಡವನ್ನು ಸೇರಿಕೊಳ್ಳುವರು' ಎಂದು ಸಿತಾಂಶು ತಿಳಿಸಿದರು.

ಶಮಿ ಅವರು ಕಳೆದ ವರ್ಷ ಫೆಬ್ರುವರಿಯಲ್ಲಿ ಪಾದದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

10 ಸಾವಿರಕ್ಕೂ ಅಧಿಕ ಅಥ್ಲೀಟ್‌ಗಳು ಕಣಕ್ಕೆ

ರಾಷ್ಟ್ರೀಯ ಕ್ರೀಡಾಕೂಟ ಇಂದಿನಿಂದ

ಡೆಹ್ರಾಡೂನ್ (ಪಿಟಿಐ): ಬಹುನಿರೀಕ್ಷಿತ 38ನೇ ರಾಷ್ಟ್ರೀಯ ಕ್ರೀಡಾಕೂಟ ಮಂಗಳವಾರ ಆರಂಭವಾಗಲಿದೆ. 32 ಕ್ರೀಡೆಗಳಲ್ಲಿ ಸ್ಪರ್ಧಾಕಣಕ್ಕೆ ಇಳಿಯಲು ಸಾವಿರಾರು ಕ್ರೀಡಾಪಟುಗಳು ಸಜ್ಜಾಗಿದ್ದಾರೆ.

18 ದಿನಗಳ ಕಾಲ ನಡೆಯುವ ಕ್ರೀಡಾಕೂಟಕ್ಕೆ ಇಲ್ಲಿನ ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡುವರು. ಕೂಟದಲ್ಲಿ 38 ತಂಡಗಳ 10 ಸಾವಿರಕ್ಕೂ ಅಧಿಕ ಅಥ್ಲೀಟ್‌ಗಳು ಭಾಗವಹಿಸಲಿದ್ದಾರೆ. ಆದರೆ, ಹಲವು ಖ್ಯಾತನಾಮ ಅಥ್ಲೀಟ್‌ಗಳು ಭಾಗವಹಿಸುತ್ತಿಲ್ಲ.

ಉತ್ತರಾಖಂಡದ ಏಳು ನಗರಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಅದರಲ್ಲಿ ಡೆಹ್ರಾಡೂನ್ ಮುಖ್ಯ ಸ್ಥಳವಾಗಿದೆ. ಉಳಿದಂತೆ ಹರಿದ್ವಾರ, ನೈನಿತಾಲ್, ಹಲ್‌ದ್ವಾನಿ, ರುದ್ರಪುರ, ಶಿವಪುರಿ ಮತ್ತು ನ್ಯೂ ತೆಹ್ರಿಯಲ್ಲಿ ಫೆಬ್ರುವರಿ 14ರವರೆಗೆ ಕ್ರೀಡಾಕೂಟ ನಡೆಯಲಿವೆ. ಕೊನೆಯ ಆವೃತ್ತಿಯಲ್ಲಿ (2023) ಗೋವಾದ ಐದು ನಗರಗಳಲ್ಲಿ ಸ್ಪರ್ಧೆಗಳು ನಡೆದಿದ್ದವು.

ಉತ್ತರಾಖಂಡ ರಾಜ್ಯವು ರಚನೆಯಾಗಿ 25 ವರ್ಷ ಪೂರೈಸಿದ ಸಂದರ್ಭದಲ್ಲೇ ರಾಷ್ಟ್ರೀಯ ಕ್ರೀಡಾಕೂಟವನ್ನು ಅಲ್ಲಿ ಆಯೋಜಿಸಿರುವುದು ಮಹತ್ವ ಪಡೆದಿದೆ.

ಕೂಟದಲ್ಲಿ ಅಥ್ಲೆಟಿಕ್ಸ್, ಈಜು, ಶೂಟಿಂಗ್, ಕುಸ್ತಿ, ಬ್ಯಾಡ್ಮಿಂಟನ್, ಹಾಕಿ, ಬಾಕ್ಸಿಂಗ್, ವೇಟ್‌ಲಿಫ್ಟಿಂಗ್, ಫುಟ್‌ಬಾಲ್, ಟೆನಿಸ್ ಮತ್ತು ಟೇಬಲ್ ಟೆನಿಸ್‌ನಂತಹ ಒಲಿಂಪಿಕ್ ಕ್ರೀಡೆಗಳು ಒಳಗೊಂಡಿವೆ. ಇದರೊಂದಿಗೆ ಕಬಡ್ಡಿ ಮತ್ತು ಕೊಕ್ಕೊದಂತಹ ಕೆಲವು ಸಾಂಪ್ರದಾಯಿಕ ಆಟಗಳು ಇವೆ. ಅಲ್ಲದೆ, ಕಲರಿಪಯಟ್ಟು, ಯೋಗಾಸನ, ಮಲ್ಲಕಂಬ ಮತ್ತು ರಾಫ್ಟಿಂಗ್ ಮುಂತಾದ ಪ್ರದರ್ಶನ ಕ್ರೀಡೆಗಳಿವೆ.


ಶೂಟರ್ ಸ್ವಪ್ನಿಲ್ ಕುಸಾಳೆ

ಶೂಟಿಂಗ್ ಹೊರತುಪಡಿಸಿ ಇತರ ಕ್ರೀಡೆಗಳ ಪ್ರಮುಖ ತಾರೆಯರು ವಿವಿಧ ಕಾರಣಗಳಿಂದ ಕೂಟದಿಂದ ದೂರ ಉಳಿದಿದ್ದಾರೆ. ಎರಡು ಪದಕ ವಿಜೇತ ಮನು ಭಾಕರ್ ಮತ್ತು ಇಶಾ ಸಿಂಗ್ ಅವರನ್ನು ಹೊರತುಪಡಿಸಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಶೂಟರ್‌ಗಳು ಇಲ್ಲಿ ಕಣಕ್ಕೆ ಇಳಿಯಲಿದ್ದಾರೆ.

ಒಲಿಂಪಿಕ್ ಪದಕ ವಿಜೇತರಾದ ಸ್ವಪ್ನಿಲ್ ಕುಸಾಳೆ, ಸರಬ್ಜೋತ್ ಸಿಂಗ್ ಮತ್ತು ವಿಜಯ್‌ಕುಮಾರ್ ಅವರೊಂದಿಗೆ ಏರ್ ರೈಫಲ್ ಮಾಜಿ ವಿಶ್ವ ಚಾಂಪಿಯನ್ ರುದ್ರಾಂಕ್ಷಾ ಬಾಳಾಸಾಹೇಬ್ ಪಾಟೀಲ ಅವರು ಮಹಾರಾಷ್ಟ್ರ ತಂಡವನ್ನು ಪ್ರತಿನಿಧಿಸಲಿದ್ದಾರೆ. 29 ತಂಡಗಳಿಂದ 364 ಶೂಟರ್‌ಗಳು ಗುರಿಯಿಡಲಿದ್ದಾರೆ.

ವಿಶ್ವ ಚಾಂಪಿಯನ್ ಮತ್ತು ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಮತ್ತು 100 ಮೀಟರ್ ಹರ್ಡಲ್ಸ್ ಜ್ಯೋತಿ ಯರಾಜಿ ಅವರು ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಇತರ ತಾರಾ ಆಟಗಾರರು.

ಗೋವಾದಲ್ಲಿ ನಡೆದ ಕೊನೆಯ ಆವೃತ್ತಿಯಲ್ಲಿ 230 ಪದಕದೊಂದಿಗೆ (82 ಚಿನ್ನ, 68 ಬೆಳ್ಳಿ ಮತ್ತು 80 ಕಂಚು) ಮಹಾರಾಷ್ಟ್ರವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿತ್ತು. ಈ ಬಾರಿಯೂ ಅಗ್ರಸ್ಥಾನವನ್ನು ಉಳಿಸಿಕೊಳ್ಳುವ ಭರವಸೆಯೊಂದಿಗೆ 600ಕ್ಕೂ ಹೆಚ್ಚು ಅಥ್ಲೀಟ್‌ಗಳ ತಂಡದೊಂದಿಗೆ ಬಂದಿದೆ. ಸರ್ವಿಸಸ್ ತಂಡವು 124 ಪದಕದೊಂದಿಗೆ ಎರಡನೇ ಸ್ಥಾನ ಪಡೆದಿತ್ತು.

ಪ್ರಜ್ಞಾನಂದ–ಗುಕೇಶ್ ಪಂದ್ಯ ಡ್ರಾ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಉತ್ತಮ ಲಯದಲ್ಲಿರುವ ಪ್ರಜ್ಞಾನಂದ, ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ ಎಂಟನೇ ಸುತ್ತಿನಲ್ಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಜೊತೆಗಿನ ಪಂದ್ಯವನ್ನು ಭಾನುವಾರ ಡ್ರಾ ಮಾಡಿಕೊಂಡರು.


ಪ್ರಜ್ಞಾನಂದ

ಬಿಳಿ ಕಾಯಿಗಳಲ್ಲಿ ಆಡಿದ ಪ್ರಜ್ಞಾನಂದ ಅವರಿಗೆ ಸ್ವಲ್ಪ ಅನುಕೂಲಕರ ಪರಿಸ್ಥಿತಿಯಿದ್ದಂತೆ ಕಂಡರೂ, ಗುಕೇಶ್ ಅಪಾಯಕ್ಕೆ ಎಡೆಮಾಡಿಕೊಡಲಿಲ್ಲ. 33 ನಡೆಗಳ ನಂತರ ಪಾಯಿಂಟ್ ಹಂಚಿಕೊಳ್ಳಲು ಇಬ್ಬರೂ ಒಪ್ಪಿಕೊಂಡರು. ಇವರಿಬ್ಬರು, ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಜೊತೆ (ಮೂವರೂ 5.5 ಅಂಕ) ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಟೂರ್ನಿಯು ಒಟ್ಟು 13 ಸುತ್ತುಗಳನ್ನು ಹೊಂದಿದೆ.

ಪಿ.ಹರಿಕೃಷ್ಣ (4) ಅವರು ನೆದರ್ಲೆಂಡ್ಸ್‌ನ ಅಗ್ರ ಆಟಗಾರ ಅನಿಶ್ ಗಿರಿ (3.5) ಜೊತೆ ಡ್ರಾ ಮಾಡಿಕೊಂಡರು. ಅನಿಶ್‌ಗೆ ಇದು ಸತತ ಏಳನೇ ಡ್ರಾ. ಅರ್ಜುನ್ ಇರಿಗೇಶಿ (2) ಮತ್ತು ಸರ್ಬಿಯಾದ ಅಲೆಕ್ಸಿ ಸರನ (4.5) ನಡುವಣ ಪಂದ್ಯವೂ ಡ್ರಾ ಆಯಿತು.

ಭಾರತದ ಲಿಯಾನ್ ಲ್ಯೂಕ್ ಮೆಂಡೋನ್ಸಾ (2.5) ಮತ್ತು ನೆದರ್ಲೆಂಡ್ಸ್‌ನ ಜೋರ್ಡನ್ ವಾನ್ ಫೊರೀಸ್ಟ್ (3) ನಡುವಣ ಪಂದ್ಯ ಸಹ ಡ್ರಾ ಆಯಿತು.

ಚಾಲೆಂಜರ್ಸ್ ವಿಭಾಗದಲ್ಲಿ, ಚೀನಾದ 14 ವರ್ಷದ ಮಿಯೊಯಿ ಲು (4.5), ಆರ್.ವೈಶಾಲಿ (4.5) ಜೊತೆ ಡ್ರಾ ಮಾಡಿಕೊಂಡರೆ, ದಿವ್ಯಾ ದೇಶಮುಖ್ (1.5), ಕಜಕಸ್ತಾನದ ನೊಗೆರ್ಬೆಕ್ ಕಾಝಿಬೆಕ್ (5) ಅವರಿಗೆ ಮಣಿದರು.

ಹಸ್ತಲಾಘವಕ್ಕೆ ನಕಾರ ಕ್ಷಮೆಯಾಚಿಸಿದ ಆಟಗಾರ

ಕಳೆದ ವಾರ ಚಾಲೆಂಜರ್ಸ್ ವಿಭಾಗದಲ್ಲಿ ನಾಲ್ಕನೇ ಸುತ್ತು ಆಡುವ ಮೊದಲು ಭಾರತದ ಆರ್. ವೈಶಾಲಿ ಹಸ್ತಲಾಘವಕ್ಕೆ ಕೈ ಮುಂದೆ ಚಾಚಿದಾಗ ಉಜ್ಬೇಕ್ ಆಟಗಾರ ನದಿರ್ಬೆಕ್ ಯಾಕುಬೊಯೆವ್ ಅವರು ನಿರಾಕರಿಸಿದ್ದರು. 23 ವರ್ಷ ವಯಸ್ಸಿನ ಯಾಕುಬೊಯೆವ್ ತಮ್ಮ ಈ ವರ್ತನೆಗೆ ನಂತರ ಕ್ಷಮೆಯಾಚಿಸಿದ್ದಾರೆ.

'ತಮ್ಮ ಈ ಕ್ರಮ ಅಗೌರವ ತೋರಿಸುವುದಾಗಿರಲಿಲ್ಲ. ಈ ರೀತಿ ಮಾಡಿದ್ದು ಧಾರ್ಮಿಕ ಕಾರಣಗಳಿಂದಾಗಿ' ಎಂದು ಅವರು ಹೇಳಿದ್ದಾರೆ. ಚೆಸ್‌ಬೇಸ್ ಇಂಡಿಯಾ ಶೇರ್ ಮಾಡಿದ್ದ ವಿಡಿಯೊದಲ್ಲಿ ನಾಲ್ಕನೇ ಸುತ್ತಿನ ಆಟಕ್ಕೆ ಮೊದಲು ಬೋರ್ಡ್ ಎದುರು ಕುಳಿತಿದ್ದ ವೈಶಾಲಿ, ಆಡಲು ಬಂದ ನದಿರ್ಬೆಕ್ ಅವರತ್ತ ಹಸ್ತಲಾಘವಕ್ಕೆ ಕೈಚಾಚಿದ್ದರು. ಆದರೆ ಎದುರಾಳಿ ಅದಕ್ಕೆ ಸ್ಪಂದಿಸದ ಕಾರಣ ವೈಶಾಲಿಗೆ ಮುಜುಗರ ಆಗಿರುವುದು ಇದರಲ್ಲಿ ಕಂಡಿತ್ತು.

ವೈಶಾಲಿ ಆ ಪಂದ್ಯದಲ್ಲಿ ಜಯಗಳಿಸಿದ್ದರು. ಧಾರ್ಮಿಕ ಕಾರಣಗಳಿಗಾಗಿ ಇತರ ಮಹಿಳೆಯರನ್ನು ತಾವು ಸ್ಪರ್ಶಿಸುವುದಿಲ್ಲ ಎಂದು ನದಿರ್ಬೆಕ್ ಹೇಳಿದ್ದಾರೆ.

ವಿಶ್ವದ ಅಗ್ರಮಾನ್ಯ ವೇಗದ ಬೌಲರ್‌ಗೆ ಐಸಿಸಿ ಗೌರವ

ಬೂಮ್ರಾ 'ವರ್ಷದ ಟೆಸ್ಟ್ ಕ್ರಿಕೆಟರ್'

ದುಬೈ (ಪಿಟಿಐ): ವಿಶ್ವದ ಅಗ್ರಮಾನ್ಯ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರನ್ನು ಪುರುಷರ 'ವರ್ಷದ ಟೆಸ್ಟ್ ಕ್ರಿಕೆಟರ್' ಗೌರವಕ್ಕೆ ಸೋಮವಾರ ಆಯ್ಕೆ ಮಾಡಲಾಗಿದೆ.


ಜಸ್‌ಪ್ರೀತ್ ಬೂಮ್ರಾ

'ವರ್ಷದ ಆಟಗಾರ' ಮತ್ತು 'ವರ್ಷದ ಆಟಗಾರ್ತಿ' ಪುರಸ್ಕಾರಕ್ಕೆ ಆಯ್ಕೆಯಾಗುವ ಹೆಸರನ್ನು ಐಸಿಸಿ ಮಂಗಳವಾರ ಪ್ರಕಟಿಸಲಿದೆ. ಬೂಮ್ರಾ 'ವರ್ಷದ ಆಟಗಾರ' ಗೌರವಕ್ಕೂ ಪಾತ್ರರಾಗಿ 'ಡಬಲ್' ಸಾಧನೆಗೆ ಪಾತ್ರರಾಗುವ ಹಾದಿಯಲ್ಲಿದ್ದಾರೆ.

ಐಸಿಸಿ ವರ್ಷದ ಟೆಸ್ಟ್ ತಂಡದಲ್ಲಿ ಬೂಮ್ರಾ ಸ್ಥಾನ ಪಡೆದಿದ್ದರು. ಕಳೆದ 12 ತಿಂಗಳ ಅವಧಿಯಲ್ಲಿ ಬೂಮ್ರಾ ಟೆಸ್ಟ್ ರಂಗದಲ್ಲಿ ಪ್ರಾಬಲ್ಯ ಮೆರೆದಿದ್ದರು. ಕೇವಲ 13 ಪಂದ್ಯಗಳಿಂದ 14.92ರ ಸರಾಸರಿಯಲ್ಲಿ 71 ವಿಕೆಟ್‌ಗಳನ್ನು ಬಾಚಿಕೊಂಡಿದ್ದರು. 357 ಓವರುಗಳನ್ನು ಮಾಡಿದ್ದರು.

'ಐಸಿಸಿ ವರ್ಷದ ಟೆಸ್ಟ್ ಕ್ರಿಕೆಟಿಗ ಪ್ರಶಸ್ತಿಗೆ ಆಯ್ಕೆ ಯಾಗುತ್ತಿರುವುದು ಸಂತಸ ಮೂಡಿಸಿದೆ. ಇದು ನನ್ನ ಹೃದಯಕ್ಕೆ ತುಂಬಾ ಆಪ್ತವಾದ ಮಾದರಿ. ಕಳೆದ ವರ್ಷ ನನ್ನ ಪಾಲಿಗೆ ವಿಶೇಷವಾದುದು' ಎಂದು ಬೂಮ್ರಾ ಪ್ರತಿಕ್ರಿಯಿಸಿದ್ದಾರೆ.

'ಈ ವರ್ಷ ತುಂಬಾ ಆಡುವ ಅವಕಾಶ ದೊರೆಯಿತು. ಪಡೆದ ಹಲವು ವಿಕೆಟ್‌ಗಳೂ ವಿಶೇಷವಾದುವು. ವಿಶಾಖಪಟ್ಟಣದಲ್ಲಿ ಓಲಿ ಪೋಪ್ ಅವರ ವಿಕೆಟ್‌ಗೆ ತುಂಬಾ ವಿಶೇಷ. ಆ ವಿಕೆಟ್ ಪಂದ್ಯ ನಮ್ಮ ಕಡೆ ವಾಲುವಂತೆ ಮಾಡಿತು' ಎಂದು ಬೂಮ್ರಾ ಹೇಳಿಕೆಯನ್ನು ಐಸಿಸಿ ಬಿಡುಗಡೆ ಮಾಡಿದೆ.

31 ವರ್ಷ ವಯಸ್ಸಿನ ಬೂಮ್ರಾ, ಇತ್ತೀಚಿನ ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಯಲ್ಲಿ 32 ವಿಕೆಟ್ ಪಡೆದಿದ್ದರು. 2018ರಲ್ಲಿ ವಿರಾಟ್ ಕೊಹ್ಲಿ ನಂತರ ಈ ಗೌರವಕ್ಕೆ ಪಾತ್ರರಾದ ಭಾರತದ ಮೊದಲ ಪುರುಷ ಕ್ರಿಕೆಟಿಗ ಎನಿಸಿದ್ದಾರೆ ಬೂಮ್ರಾ.

ಒಮರ್‌ಝೈಗೆ ಗೌರವ: ಪುರುಷರ ವಿಭಾಗದಲ್ಲಿ ಅಫ್ಗಾನಿಸ್ತಾನದ ಆಲ್‌ರೌಂಡರ್ ಅಜ್ಮತ್‌ವುಲ್ಲಾ ಒಮರ್‌ಝೈ ಅವರು ಚುರುಕಿನ ವೇಗದ ದಾಳಿ ಮತ್ತು ಬಿರುಸಿನ ಬ್ಯಾಟಿಂಗ್‌ನಿಂದಾಗಿ ಸೋಮವಾರ ಐಸಿಸಿ ಪುರುಷರ ಏಕದಿನ ಕ್ರಿಕೆಟರ್ 2024 ಗೌರವಕ್ಕೆ ಭಾಜನರಾಗಿದ್ದಾರೆ.

ಅವರು ತಮ್ಮ ತಂಡದ ಪರ ರಹಮಾನುಲ್ಲಾ ಗುರ್ಬಾಝ್ ನಂತರ ಎರಡನೇ ಅತಿ ಹೆಚ್ಚಿನ ರನ್ ಗಳಿಸಿದ್ದರು. ಸ್ಪಿನ್ನರ್ ಎ.ಎಂ. ಘಝನ್‌ಫರ್ ನಂತರ ಎರಡನೇ ಅತಿ ಯಶಸ್ವಿ ಬೌಲರ್ ಎನಿಸಿದ್ದರು. ಅವರು ಕಳೆದ ವರ್ಷ 417 ರನ್ ಕಲೆಹಾಕಿದ್ದರೆ, 14 ಪಂದ್ಯಗಳಿಂದ 17 ವಿಕೆಟ್ ಕಬಳಿಸಿದ್ದರು.

ಮಂದಾನ ವರ್ಷದ ಆಟಗಾರ್ತಿ



ದುಬೈ (ಪಿಟಿಐ): ಕಳೆದ ವರ್ಷ ತೋರಿದ ಸ್ಫೂರ್ತಿಯುತ ಆಟದಿಂದಾಗಿ ಭಾರತ ತಂಡದ ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಅವರು ಸೋಮವಾರ ಐಸಿಸಿ ಮಹಿಳಾ ಏಕದಿನ ವರ್ಷದ ಕ್ರಿಕೆಟಿಗರಾಗಿ ಆಯ್ಕೆಯಾಗಿದ್ದಾರೆ. 2024ರಲ್ಲಿ ಈ ಎಡಗೈ ಆಟಗಾರ್ತಿ ರನ್‌ಹೊಳೆ ಹರಿಸಿದ್ದರು.

2018ರಲ್ಲಿ ಮತ್ತು 2022ರಲ್ಲಿ ಮಂದಾನ ಅವರು ಐಸಿಸಿ ಮಹಿಳಾ ವರ್ಷದ ಕ್ರಿಕೆಟ್ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿದ್ದರು.

28 ವರ್ಷ ವಯಸ್ಸಿನ ಮಂದಾನ ಕಳೆದ ವರ್ಷ 13 ಇನಿಂಗ್ಸ್‌ಗಳಿಂದ 747 ರನ್ ಗಳಿಸಿದ್ದರು. ಮಂದಾನ ಅವರ ಆಟದ ಮುಂದೆ ಇತರ ಬ್ಯಾಟಿಂಗ್ ದಿಗ್ಗಜರಾದ ಲಾಲಾ ವೋಲ್ವಾರ್ಟ್ (697), ಇಂಗ್ಲೆಂಡ್‌ನ ಟಾಮಿ ಬ್ಯೂಮಾಂಟ್ (554) ಮತ್ತು ವೆಸ್ಟ್ ಇಂಡೀಸ್‌ನ ಹೇಯ್ಲಿ ಮ್ಯಾಥ್ಯೂಸ್ (449) ಮಸುಕುಗೊಂಡಿದ್ದರು. ಅವರು 57.86 ಸರಾಸರಿಯಲ್ಲಿ 95.15 ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದರು. ಜೂನ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 3–0 ಸರಣಿ ಗೆಲುವಿನಲ್ಲಿ ಅವರ ಪಾತ್ರ ಪ್ರಮುಖವಾಗಿತ್ತು.

ಕರ್ನಾಟಕ ತಂಡದಲ್ಲಿ ರಾಹುಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಇದೇ 30 ರಿಂದ ನಡೆಯಲಿರುವ ರಣಜಿ ಟ್ರೋಫಿ ಅಂತಿಮ ಲೀಗ್ ಪಂದ್ಯದಲ್ಲಿ ಹರಿಯಾಣವನ್ನು ಎದುರಿಸಲಿರುವ ಕರ್ನಾಟಕ ತಂಡದಲ್ಲಿ ಭಾರತ ತಂಡದ ಬ್ಯಾಟರ್ ಕೆ.ಎಲ್. ರಾಹುಲ್ ಆಡಲಿದ್ದಾರೆ.

ಹರಿಯಾಣ ತಂಡ 'ಸಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದಿದ್ದು ನಾಕೌಟ್ ಸ್ಥಾನ ಬಹುತೇಕ ಖಚಿತಪಡಿಸಿಕೊಂಡಿದೆ. ಆಸ್ಟ್ರೇಲಿಯಾ ಪ್ರವಾಸದ ವೇಳೆ ಎಲ್ಲಾ ಐದು ಟೆಸ್ಟ್ ಪಂದ್ಯಗಳನ್ನಾಡಿದ್ದ ರಾಹುಲ್ ಮೊಣಕೈ ನೋವಿನಿಂದಾಗಿ ಪುನಶ್ಚೇತನ ಶಿಬಿರದಲ್ಲಿದ್ದಾರೆ. ಅವರು 2020ರಲ್ಲಿ ಬಂಗಾಳ ವಿರುದ್ಧ ಕೊನೆಯ ಬಾರಿ ರಣಜಿ ಪಂದ್ಯ ಆಡಿದ್ದರು.

ಅವರು ಮಂಗಳವಾರದಿಂದ ಅಭ್ಯಾಸದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.


ಕೆ.ಎಲ್.ರಾಹುಲ್

ಗಾಯಾಳಾಗಿ ಬಹುತೇಕ ಪಂದ್ಯಗಳನ್ನು ಕಳೆದುಕೊಂಡಿದ್ದ ವೇಗದ ಬೌಲರ್ ವಿದ್ವತ್ ಕಾವೇರಪ್ಪ ತಂಡಕ್ಕೆ ಮರಳಿದ್ದು, ಬೌಲಿಂಗ್ ವಿಭಾಗಕ್ಕೆ ಹೆಚ್ಚಿನ ಬಲ ಸಿಗಲಿದೆ.

ತಂಡ ಹೀಗಿದೆ: ಮಯಂಕ್ ಅಗರ್‌ವಾಲ್ (ನಾಯಕ), ಕೆ.ಎಲ್.ರಾಹುಲ್, ಶ್ರೇಯಸ್ ಗೋಪಾಲ್ (ಉಪನಾಯಕ), ದೇವದತ್ತ ಪಡಿಕ್ಕಲ್, ಕೆ.ವಿ.ಅನೀಶ್, ಆರ್.ಸ್ಮರಣ್, ಕೆ.ಎಲ್.ಶ್ರೀಜಿತ್ (ವಿಕೆಟ್ ಕೀಪರ್), ಅಭಿನವ್ ಮನೋಹರ್, ಹಾರ್ದಿಕ್ ರಾಜ್, ಪ್ರಸಿದ್ಧ ಕೃಷ್ಣ, ವಿದ್ವತ್ ಕಾವೇರಪ್ಪ, ವಾಸುಕಿ ಕೌಶಿಕ್, ಅಭಿಲಾಷ್ ಶೆಟ್ಟಿ, ಯಶೋವರ್ಧನ್ ಪರಂತಾಪ್, ನಿಕಿನ್ ಜೋಸ್, ಸುಜಯ್ ಸತೇರಿ (ವಿಕೆಟ್ ಕೀಪರ್) ಮತ್ತು ಮೊಹಸಿನ್ ಖಾನ್.

ಮೇಘಾಲಯ ವಿರುದ್ಧ ಪಂದ್ಯಕ್ಕೆ ರೋಹಿತ್, ಜೈಸ್ವಾಲ್ ಅಲಭ್ಯ

ಮುಂಬೈ (ಪಿಟಿಐ): ಮೇಘಾಲಯ ವಿರುದ್ಧದ ರಣಜಿ ಟ್ರೋಫಿಯ ಪಂದ್ಯದಲ್ಲಿ ಮುಂಬೈ ತಂಡಕ್ಕೆ ರಾಷ್ಟ್ರೀಯ ತಂಡದ ನಾಯಕ ರೋಹಿತ್ ಶರ್ಮಾ, ಸಹ ಆಟಗಾರರಾದ ಯಶಸ್ವಿ ಜೈಸ್ವಾಲ್ ಮತ್ತು ಶ್ರೇಯಸ್ ಅಯ್ಯರ್ ಅಲಭ್ಯರಾಗಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ವಿರುದ್ಧದ ಪಂದ್ಯದಲ್ಲಿ ಈ ಮೂರು ಆಟಗಾರರು ಹಾಲಿ ಚಾಂಪಿಯನ್ ಮುಂಬೈ ತಂಡವನ್ನು ಪ್ರತಿನಿಧಿಸಿದ್ದರೂ ನಿರೀಕ್ಷಿತ ಆಟ ಪ್ರದರ್ಶಿಸಲಿಲ್ಲ. ಆ ಪಂದ್ಯವನ್ನು ಜಮ್ಮು ಮತ್ತು ಕಾಶ್ಮೀರ ತಂಡವು ಐದು ವಿಕೆಟ್‌ಗಳಿಂದ ಗೆದ್ದಿತ್ತು.

ಗುಂಪು ಹಂತದ ಕೊನೆಯ ಪಂದ್ಯವು ಗುರುವಾರ ಆರಂಭವಾಗಲಿದೆ. ಹಿಂದಿನ ಪಂದ್ಯದ ಸೋಲು ಅಜಿಂಕ್ಯ ರಹಾನೆ ನೇತೃತ್ವದ ಮುಂಬೈ ತಂಡದ ಕ್ವಾರ್ಟರ್ ಫೈನಲ್ ಪ್ರವೇಶದ ಭರವಸೆಯನ್ನು ಕಠಿಣವಾಗಿಸಿದೆ. ಮೇಘಾಲಯ ವಿರುದ್ಧ ದೊಡ್ಡ ಅಂತರದಿಂದ ಗೆದ್ದರಷ್ಟೇ ನಾಕೌಟ್ ಕನಸು ಜೀವಂತವಾಗಿ ಉಳಿಯಲಿದೆ.

ರೋಹಿತ್, ಜೈಸ್ವಾಲ್ ಮತ್ತು ಅಯ್ಯರ್ ಅವರು ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಗೆ ಭಾರತ ತಂಡದಲ್ಲಿದ್ದಾರೆ. ಫೆ.6, 9 ಮತ್ತು 12ರಂದು ಪಂದ್ಯ ನಿಗದಿಪಡಿಸಲಾಗಿದೆ. ನಂತರ ಚಾಂಪಿಯನ್ಸ್ ಟ್ರೋಫಿ ಟೂರ್ನಿ ನಡೆಯಲಿದೆ.

ಕೊಹ್ಲಿ ಇಂದು ಅಭ್ಯಾಸ: 2012ರ ಬಳಿಕ ಮೊದಲ ಬಾರಿ ರಣಜಿ ಟ್ರೋಫಿ ಕ್ರಿಕೆಟ್ ಆಡಲಿರುವ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಮಂಗಳವಾರ ದೆಹಲಿ ತಂಡದೊಂದಿಗೆ ಅಭ್ಯಾಸದಲ್ಲಿ ಕಾಣಿಸಿಕೊಳ್ಳುವ ನಿರೀಕ್ಷೆಯಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾಗುವ ರೈಲ್ವೇಸ್ ವಿರುದ್ಧದ ಪಂದ್ಯಕ್ಕೆ ದೆಹಲಿ ತಂಡವನ್ನು ಸೋಮವಾರ ಪ್ರಕಟಿಸಲಾಗಿದ್ದು, ಅದರಲ್ಲಿ ಕೊಹ್ಲಿಯ ಹೆಸರಿದೆ. ಆಯುಷ್ ಬಡೋನಿ ತಂಡವನ್ನು ಮುನ್ನಡೆಸಲಿದ್ದಾರೆ.

ಎಟಿಪಿ ಅಗ್ರ 100ರ ಪಟ್ಟಿಯಿಂದ ಹೊರಬಿದ್ದ ನಗಾಲ್



ನವದೆಹಲಿ (ಪಿಟಿಐ): ಎಟಿಪಿ, ಚಾಲೆಂಜರ್ ಟೂರ್ನಿಗಳಲ್ಲಿ ಸತತವಾಗಿ ಹಿನ್ನಡೆ ಕಂಡ ಪರಿಣಾಮ, ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು 10 ತಿಂಗಳ ನಂತರ ಅಗ್ರ 100 ಸಿಂಗಲ್ಸ್ ಆಟಗಾರರ ಪಟ್ಟಿಯಿಂದ ಹೊರಬಿದ್ದಿದ್ದಾರೆ. ರೋಹನ್ ಬೋಪಣ್ಣ ಅವರು ವಿಶ್ವದ ಅಗ್ರ 20 ಡಬಲ್ಸ್ ಆಟಗಾರರ ಪಟ್ಟಿಯಿಂದ ಸ್ಥಾನ ಕಳೆದುಕೊಂಡಿದ್ದಾರೆ.

ನಗಾಲ್ ಬಿಟ್ಟರೆ, ಶಶಿಕುಮಾರ್ ಮುಕುಂದ್ 365ನೇ (+2), ರಾಮಕುಮಾರ್ ರಾಮನಾಥನ್ 406ನೇ (–1) ಮತ್ತು ಕರಣ್ ಸಿಂಗ್ 496ನೇ (–20) ಸ್ಥಾನದಲ್ಲಿದ್ದಾರೆ.

44 ವರ್ಷ ವಯಸ್ಸಿನಲ್ಲೂ ಸಕ್ರಿಯರಾಗಿರುವ ಬೋಪಣ್ಣ ಅವರು ಡಬಲ್ಸ್‌ನಲ್ಲಿ ಐದು ಸ್ಥಾನ ಹಿಂಬಡ್ತಿ ಪಡೆದು 21ನೇ ಸ್ಥಾನಕ್ಕೆ ಸರಿದಿದ್ದಾರೆ. ಅವರು ಆಸ್ಟ್ರೇಲಿಯನ್ ಓಪನ್‌ನಲ್ಲಿ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದರು. 2022ರ ಅಕ್ಟೋಬರ್ 3 ರಿಂದ ಬೋಪಣ್ಣ ಅಗ್ರ 20ರಲ್ಲೇ ಉಳಿದಿದ್ದರು.

ವಿಶ್ವಕಪ್: ಸೆಮಿಫೈನಲ್‌ಗೆ ಸ್ಥಾನ ಖಚಿತಪಡಿಸಿದ ಇಂಗ್ಲೆಂಡ್ ತಂಡ

ಕುಚಿಂಗ್, ಮಲೇಷ್ಯಾ (ಪಿಟಿಐ): ಟಿಲ್ಲಿ ಕಾರ್ಟೀನ್ ಕೋಲ್ಮನ್ (8ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಇಂಗ್ಲೆಂಡ್ ತಂಡವು 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಸಿಕ್ಸ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿ, ಸೆಮಿ ಫೈನಲ್‌ಗೆ ಸ್ಥಾನ ಖಚಿತಪಡಿಸಿಕೊಂಡಿತು.

ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕಿವೀಸ್ ತಂಡಕ್ಕೆ ಕೇಟ್ ಇರ್ವಿನ್ (35) ಮತ್ತು ಎಮ್ಮಾ ಮೆಕ್ಲಿಯೋಡ್ (18) ಉತ್ತಮ ಆರಂಭ ಒದಗಿಸಿದ್ದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 49 ರನ್ ಸೇರಿಸಿದ್ದರು. ನಂತರ ಕೋಲ್ಮನ್ ಮತ್ತು ಪ್ರಿಶಾ ಥಾನವಾಲಾ (19ಕ್ಕೆ 3) ಅವರ ದಾಳಿಗೆ ತತ್ತರಿಸಿದ ನ್ಯೂಜಿಲೆಂಡ್, ನಾಟಕೀಯ ಕುಸಿತ ಕಂಡಿತು. ಹೀಗಾಗಿ ತಂಡವು 20 ಓವರ್‌ಗಳಲ್ಲಿ 89 ರನ್ ಗಳಿಸಷ್ಟೇ ಶಕ್ತವಾಯಿತು.

ಇಂಗ್ಲೆಂಡ್ ತಂಡವು 11.4 ಓವರ್‌ಗಳಲ್ಲಿ 4 ವಿಕೆಟ್‌ಗೆ 90 ರನ್ ಗಳಿಸಿ ಜಯಭೇರಿ ಬಾರಿಸಿತು. ಆರಂಭಿಕ ಆಟಗಾರ್ತಿಯರಾದ ಜೆಮಿಮಾ ಸ್ಪೆನ್ಸ್ ಮತ್ತು ಡೇವಿನಾ ಪೆರಿನ್ ಕ್ರಮವಾಗಿ 29 ಮತ್ತು 21 ರನ್ ಗಳಿಸಿದರು.

ಹಾಲಿ ಚಾಂಪಿಯನ್ ಭಾರತ ತಂಡವೂ ಸೆಮಿಫೈನಲ್‌ಗೆ ಸ್ಥಾನವನ್ನು ಖಚಿತಪಡಿಸಿಕೊಂಡಿದ್ದು, ಮಂಗಳವಾರ ನಡೆಯುವ ಸೂಪರ್ ಸಿಕ್ಸ್ ಹಂತದ ಕೊನೆಯ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 89 (ಕೇಟ್ ಇರ್ವಿನ್ 35, ಎಮ್ಮಾ ಮೆಕ್ಲಿಯೋಡ್ 18; ಟಿಲ್ಲಿ ಕಾರ್ಟೀನ್ ಕೋಲ್ಮನ್ 8ಕ್ಕೆ 4, ಪ್ರಿಶಾ ಥಾನವಾಲಾ 19ಕ್ಕೆ 3). ಇಂಗ್ಲೆಂಡ್: 11.4 ಓವರ್‌ಗಳಲ್ಲಿ 4 ವಿಕೆಟ್‌ಗೆ 90 (ಜೆಮಿಮಾ ಸ್ಪೆನ್ಸ್ 29, ಡೇವಿನಾ ಪೆರಿನ್ 21, ರಿಷಿಕಾ ಜೈಸ್ವಾಲ್ 22ಕ್ಕೆ 2). **ಪಂದ್ಯದ ಆಟಗಾರ್ತಿ:** ಟಿಲ್ಲಿ ಕಾರ್ಟೀನ್ ಕೋಲ್ಮನ್

35 ವರ್ಷಗಳ ನಂತರ ಪಾಕ್ ನೆಲದಲ್ಲಿ ಗೆದ್ದ ವಿಂಡೀಸ್

ಮುಲ್ತಾನ್ (ಎಎಫ್‌ಪಿ): ಸ್ಪಿನ್ನರ್ ಜೊಮೆಲ್ ವಾರಿಕನ್ (27ಕ್ಕೆ5) ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ವೆಸ್ಟ್ ಇಂಡೀಸ್ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಸೋಮವಾರ ಪಾಕಿಸ್ತಾನ ತಂಡವನ್ನು 120 ರನ್‌ಗಳಿಂದ ಸೋಲಿಸಿತು. ಇದರಿಂದ ಎರಡು ಟೆಸ್ಟ್‌ಗಳ ಸರಣಿ 1–1 ಸಮಬಲಗೊಂಡಿತು.

ಇದು ಪಾಕ್ ನೆಲದಲ್ಲಿ ವೆಸ್ಟ್ ಇಂಡೀಸ್‌ಗೆ ಸುಮಾರು 35 ವರ್ಷಗಳಲ್ಲಿ ಒಲಿದ ಮೊದಲ ಜಯ. 1990ರಲ್ಲಿ ಕೊನೆಯ ಬಾರಿ ಜಯಗಳಿಸಿತ್ತು.

ಸ್ಕೋರುಗಳು: ವೆಸ್ಟ್ ಇಂಡೀಸ್: 163 ಮತ್ತು 244; ಪಾಕಿಸ್ತಾನ: 154 ಮತ್ತು 41.1 ಓವರುಗಳಲ್ಲಿ 133 (ಬಾಬರ್ ಆಜಂ 31, ಮೊಹಮ್ಮದ್ ರಿಜ್ವಾನ್ 25; ಗುಡಕೇಶ್ ಮೋತಿ 35ಕ್ಕೆ2, ಕೆವಿನ್ ಸಿಂಕ್ಲೇರ್ 61ಕ್ಕೆ3, ಜೋಮೆಲ್ ವಾರಿಕನ್ 27ಕ್ಕೆ5).

ಬಾಗನ್‌ಗೆ ಮಣಿದ ಬೆಂಗಳೂರು ಎಫ್‌ಸಿ

ಬೆಂಗಳೂರು: ಲಿಸ್ಟನ್ ಕೊಲಾಕೊ ಗಳಿಸಿದ ಗೋಲಿನಿಂದ ಮೋಹನ್ ಬಾಗನ್ ತಂಡ, ಸೋಮವಾರ ನಡೆದ ಐಎಸ್‌ಎಲ್‌ನ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡ ವನ್ನು ತಂಡವನ್ನು 1–0 ಗೋಲಿನಿಂದ ಸೋಲಿಸಿತು. ಕಳೆದ ಕೆಲವು ಪಂದ್ಯಗಳಿಂದ ಬಿಎಫ್‌ಸಿ ಹಿನ್ನಡೆ ಮುಂದುವರಿಯಿತು.

ಲೀಗ್‌ನಲ್ಲಿ 12ನೇ ಗೆಲುವು ದಾಖಲಿಸುವ ಮೂಲಕ ಕೋಲ್ಕತ್ತದ ದೈತ್ಯ ತಂಡ 18 ಪಂದ್ಯಗಳಿಂದ 40 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನವನ್ನು ಇನ್ನಷ್ಟು ಬಲಗೊಳಿಸಿತು. ಇನ್ನೊಂದು ಕಡೆ ಬೆಂಗಳೂರಿನ ತಂಡಕ್ಕೆ ಕಳೆದ ಐದು ಪಂದ್ಯಗಳಲ್ಲಿ ಇದು ನಾಲ್ಕನೇ ಸೋಲು. ಇನ್ನೊಂದು ಪಂದ್ಯ ಡ್ರಾ ಆಗಿತ್ತು. ಬೆಂಗಳೂರು ತಂಡ 18 ಪಂದ್ಯಗಳಿಂದ 28 ಪಾಯಿಂಟ್ಸ್ ಸಂಗ್ರಹಿಸಿ ಮೂರನೇ ಸ್ಥಾನದಲ್ಲೇ ನೆಲೆಯಾಗಿದೆ. ಬೆಂಗಳೂರಿನ ತಂಡಕ್ಕೆ ಈ ಬಾರಿಯ ಲೀಗ್‌ನಲ್ಲಿ ಇದು ಒಟ್ಟಾರೆ ಆರನೇ ಸೋಲು.

74ನೇ ನಿಮಿಷ ಸ್ಟಿವರ್ಟ್ ಅವರ ಕ್ರಾಸ್‌ನಲ್ಲಿ ಬೆಂಗಳೂರು ಗೋಲಿನತ್ತ ಬರುತ್ತಿದ್ದ ಚೆಂಡನ್ನು ರಕ್ಷಣೆ ಆಟಗಾರರೊಬ್ಬರು ಹೆಡ್ ಮಾಡಿ ದೂರಕ್ಕೆ ಹಾಕಲೆತ್ನಿಸಿದರು. ಆದರೆ ಚೆಂಡು ಬಾಕ್ಸ್‌ನೊಳಗೆ ಇದ್ದ ಲಿಸ್ಟನ್ ಕೊಲಾಕೊ ಅವರ ಮುಂದೆ ಬಿತ್ತು. ಅವರು ಒದ್ದ ಚೆಂಡು ಗೋಲಿನೊಳಕ್ಕೆ ಹೋಯಿತು. ಶರ್ಟು ಬಿಚ್ಚಿ ಸಂಭ್ರಮ ಆಚರಿಸಿದ ಕೊಲಾಕೊ ಅವರಿಗೆ ಹಳದಿ ಕಾರ್ಡ್ ದರ್ಶನವಾಯಿತು.

ಮುದ್ದೇನಹಳ್ಳಿ ಕ್ರೀಡಾಂಗಣದಲ್ಲಿ ಫೆ.8ರಂದು ಟಿ20 ಕ್ರಿಕೆಟ್ ಪಂದ್ಯ

'ವನ್ ವರ್ಲ್ಡ್ ವನ್ ಫ್ಯಾಮಿಲಿ' ಕಪ್ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೆಬ್ರುವರಿ 8ರಂದು ಭಾರತ ಮತ್ತು ಶ್ರೀಲಂಕಾ ತಂಡಗಳ ನಿವೃತ್ತ ಆಟಗಾರರ ನಡುವಣ ಪ್ರದರ್ಶನ ಟಿ20 ಪಂದ್ಯಕ್ಕೆ ಪೂರ್ವಭಾವಿಯಾಗಿ ಮಾಜಿ ಕ್ರಿಕೆಟ್ ತಾರೆ ಜಿ.ಆರ್.ವಿಶ್ವನಾಥ್ ಮತ್ತು ಅಧ್ಯಾತ್ಮ ನಾಯಕ ಮಧುಸೂದನ ಸಾಯಿ ಅವರು ಸೋಮವಾರ 'ವನ್ ವರ್ಲ್ಡ್ ವನ್ ಫ್ಯಾಮಿಲಿ' ಕಪ್ ಅನಾವರಣಗೊಳಿಸಿದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯ ಸಾಯಿಕೃಷ್ಣನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಎರಡನೇ ವರ್ಷದ ಈ ಪಂದ್ಯ ನಡೆಯಲಿದೆ. ಆಶಯಕ್ಕೆ ತಕ್ಕಂತೆ ಟ್ರೋಫಿಯ ಮೇಲೆ 'ವಸುಧೈವ ಕುಟುಂಬಕಮ್' ಎಂಬ ಸಂದೇಶ ಕೆತ್ತಲಾಗಿದೆ.

'ನಾವು ಗಳಿಸುವ ರನ್‌ಗಳು ಮುಖ್ಯವಲ್ಲ, ಆಟದ ಮೂಲಕ ಎಷ್ಟು ಮಂದಿಯನ್ನು ಗೆದ್ದಿದ್ದೇವೆ ಎಂಬುದು ಮುಖ್ಯ ಎಂಬ ಪಾಠವನ್ನು ಕ್ರಿಕೆಟ್ ನನಗೆ ಕಲಿಸಿಕೊಟ್ಟಿದೆ. ನಾವು ಅಂದು ದೇಶಕ್ಕಾಗಿ ಆಡುತ್ತಿದ್ದೆವು. ಈಗ ಮಾನವೀಯ ಉದ್ದೇಶಕ್ಕಾಗಿ ಕೈಜೋಡಿಸಿದ್ದೇವೆ' ಎಂದು ವಿಶ್ವನಾಥ್ ಅವರು ಈ ಸಂದರ್ಭದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮುದ್ದೇನಹಳ್ಳಿಯ ಸತ್ಯಸಾಯಿ ಆಶ್ರಮದ ಸದ್ಗುರು ಮಧುಸೂದನ ಸಾಯಿ ಅವರು 'ಮಧುಸೂದನ ಸಾಯಿ ಗ್ಲೋಬಲ್ ಹ್ಯುಮಾನಿಟೇರಿಯನ್ ಟ್ರಸ್ಟ್' ಮೂಲಕ ದೇಶ ಮತ್ತು ವಿದೇಶಗಳಲ್ಲಿ ನಡೆಸುತ್ತಿರುವ ಆಸ್ಪತ್ರೆ, ಸೇವಾ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.


ಮಾಜಿ ಕ್ರಿಕೆಟ್ ತಾರೆ ಜಿ.ಆರ್‌. ವಿಶ್ವನಾಥ್ ಮತ್ತು ಸದ್ಗುರು ಮಧುಸೂದನ ಸಾಯಿ ಬೆಂಗಳೂರಿನಲ್ಲಿ ಸೋಮವಾರ 'ವನ್ ವರ್ಲ್ಡ್ ವನ್ ಫ್ಯಾಮಿಲಿ ಕಪ್' ಅನಾವರಣಗೊಳಿಸಿದರು –ಪ್ರಜಾವಾಣಿ ಚಿತ್ರ

ಶ್ರೀಲಂಕಾದ ಪೂರ್ವ ಬಟ್ಟಿಕಲೋವಾದಲ್ಲಿ ಟ್ರಸ್ಟ್ ನಡೆಸುತ್ತಿರುವ ಮಕ್ಕಳ ಆಸ್ಪತ್ರೆಯಲ್ಲಿ ಎರಡು ಸಾವಿರಕ್ಕೂ ಹೆಚ್ಚು ಮಂದಿಯ ಪ್ರಾಣ ಉಳಿಸಲಾಗಿದೆ. ಮಾನವೀಯತೆಯ ನಮ್ಮ ಆಶಯಕ್ಕೆ ಲಂಕಾ ಕ್ರಿಕೆಟ್ ತಾರೆ ಅರವಿಂದ ಡಿ'ಸಿಲ್ವ ಕೈಜೋಡಿಸಿದ್ದಾರೆ. ಅಭಿಯಾನವು 12 ವರ್ಷಗಳಲ್ಲಿ ಹಲವು ರಾಷ್ಟ್ರಗಳಿಗೆ ಪಸರಿಸಿದೆ ಎಂದರು.

ವನ್ ವರ್ಲ್ಡ್ ಹೆಸರಿನ ಭಾರತ ತಂಡದಲ್ಲಿ ಇರ್ಫಾನ್ ಪಠಾಣ್, ಯೂಸುಫ್ ಪಠಾಣ್, ನಮನ್ ಓಝಾ, ಎಸ್.ಬದರೀನಾಥ್, ಅಭಿಮನ್ಯು ಮಿಥುನ್, ವೆಂಕಟೇಶ ಪ್ರಸಾದ್, ಸುನೀಲ್ ಜೋಶಿ, ಪಾರ್ಥಿವ್ ಪಟೇಲ್, ಸುಜಿತ್ ಸೋಮಸುಂದರ್, ಮನೋಜ್ ತಿವಾರಿ ಮತ್ತಿತರರು ಆಡಲಿದ್ದಾರೆ.

ವನ್ ಫ್ಯಾಮಿಲಿ ಹೆಸರಿನ ಶ್ರೀಲಂಕಾ ತಂಡದಲ್ಲಿ ಅರವಿಂದಡಿ'ಸಿಲ್ವ, ಅರ್ಜುನ ರಣತುಂಗ, ತಿಲಕರತ್ನೆ ದಿಲ್ಶನ್, ಚಮಿಂದ ವಾಸ್, ಉಪುಲ್ ತರಂಗ, ತಿಸ್ಸಾರ ಪೆರೇರ, ನುವಾನ್ ಜೊಯ್ಸ, ಮುತ್ತಯ್ಯ ಮುರಳೀಧರನ್, ರವೀಂದ್ರ ಪುಷ್ಪಕುಮಾರ, ಅಜಂತ ಮೆಂಡಿಸ್ ಮತ್ತು ರೊಮೇಶ್ ಕಲುವಿತರಣ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಆಯೋಜಕರು ಮಾಹಿತಿ ನೀಡಿದರು.

ಮುದ್ದೇನಹಳ್ಳಿಯಲ್ಲಿ ಕ್ರಿಕೆಟ್ ಅಕಾಡೆಮಿ

ಮುದ್ದೇನಹಳ್ಳಿಯಲ್ಲಿ ಬಾಲಕರಿಗಾಗಿ ವಸತಿಯುತ ಕ್ರಿಕೆಟ್ ಅಕಾಡೆಮಿಯನ್ನು ಆರಂಭಿಸಲು ಯೋಜಿಸಲಾಗಿದೆ. ಜೂನಿಯರ್ ಹಂತದಲ್ಲಿ ಅಕಾಡೆಮಿಗೆ ಸೇರ್ಪಡೆ ಮಾಡಿಕೊಳ್ಳಲಾಗುವುದು. ಗ್ರಾಮೀಣ ಪ್ರದೇಶದ ಅರ್ಹ ಪ್ರತಿಭಾನ್ವಿತ ಆಟಗಾರರಿಗೆ ವರ್ಷದುದ್ದಕ್ಕೂ ಉಚಿತ ವಾಸ್ತವ್ಯ, ತರಬೇತಿ ನೀಡಲಾಗುವುದು ಎಂದು ಮಧುಸೂದನ ಸಾಯಿ ಹೇಳಿದರು.

ಸುನಿಲ್ ಗಾವಸ್ಕರ್ ಮತ್ತು ವಿಶ್ವನಾಥ್ ಈ ಯೋಜನೆಗೆ ಮಾರ್ಗದರ್ಶನ ನೀಡುವರು ಎಂದರು.

'ರಾಜ್ಯದಲ್ಲಿ ಗ್ರಾಮೀಣ ಪ್ರತಿಭೆಗಳಿಗೆ ಕೊರತೆಯೇನಿಲ್ಲ. ಈ ಪ್ರತಿಭಾವಂತ ಆಟಗಾರರಿಗೆ ತರಬೇತಿ, ಮಾರ್ಗದರ್ಶನದ ಅಗತ್ಯವಿದೆ' ಎಂದು ಜಿ.ಆರ್. ವಿಶ್ವನಾಥ್ ಹೇಳಿದರು.

ಗೆಲುವಿನ ಹೊಸ್ತಿಲಲ್ಲಿ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾಕ್ನಿಲ್ ನೊರೊನಾ (312; 336ಎ, 4x28, 6x15) ಅವರ ತ್ರಿಶತಕದ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನವರ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ನಾಲ್ಕನೇ ಜಯದ ಹೊಸ್ತಿಲಲ್ಲಿದೆ.

ಆಲೂರಿನ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಉತ್ತರಾಖಂಡ ವಿರುದ್ಧದ ಪಂದ್ಯದಲ್ಲಿ ಕರ್ನಾಟಕ ತಂಡವು ಹಿಡಿತ ಸಾಧಿಸಿದೆ. ಮ್ಯಾಕ್ನಿಲ್ ಮತ್ತು ಮೋನಿಷ್ ರೆಡ್ಡಿ ವೈ.ಆರ್. (121;118ಎ, 4x14, 6x2) ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ 105.3 ಓವರ್‌ಗಳಲ್ಲಿ 6 ವಿಕೆಟ್‌ಗೆ 591 ರನ್‌ಗೆ ಡಿಕ್ಲೇರ್ ಮಾಡಿಕೊಂಡಿದೆ.

ಮೊದಲ ಇನಿಂಗ್ಸ್‌ನಲ್ಲಿ 202 ರನ್ ಗಳಿಸಿ, 389 ರನ್‌ಗಳ ಹಿನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿರುವ ಉತ್ತರಾಖಂಡ ತಂಡವು ಸೋಮವಾರ ದಿನದಾಟದ ಅಂತ್ಯಕ್ಕೆ 5 ವಿಕೆಟ್‌ಗೆ 319 ರನ್ ಗಳಿಸಿ ಕೊಂಚ ಪ್ರತಿರೋಧ ತೋರಿದೆ.

ನಾಯಕ ಲಿಂಕನ್ (50), ಇಶಾಗ್ರಾ ಜಗೂರಿ (55), ಆರಾವ್ ಮಹಾಜನ್ (79) ಮತ್ತು ಪಿ. ಡ್ಯೂಲಿ (ಔಟಾಗದೇ 65) ಅವರು ತಂಡಕ್ಕೆ ಆಸರೆಯಾದರು. ಇನ್ನಿಂಗ್ಸ್ ಸೋಲನ್ನು ತಪ್ಪಿಸಲು ನಾಲ್ಕನೇ ದಿನವಾದ ಮಂಗಳವಾರ ಇನ್ನೂ 70 ರನ್ ಸೇರಿಸಬೇಕಿದೆ.

5 ಪಂದ್ಯಗಳಿಂದ 58 ಅಂಕ ಗಳಿಸಿರುವ ಕರ್ನಾಟಕ ತಂಡವು ಎಲೀಟ್ 'ಎ' ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿದೆ. ಮಹಾರಾಷ್ಟ್ರ (61) ಮತ್ತು ತಮಿಳುನಾಡು (61) ತಂಡಗಳು ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ.


ತ್ರಿಶತಕ ದಾಖಲಿಸಿದ ಮ್ಯಾಕ್ನಿಲ್ ನೊರೊನಾ

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಉತ್ತರಾಖಂಡ: 71.2 ಓವರ್‌ಗಳಲ್ಲಿ 202. ಕರ್ನಾಟಕ:105 ಓವರ್‌ಗಳಲ್ಲಿ 6ಕ್ಕೆ 591 ಡಿಕ್ಲೇರ್ಡ್ (ಮ್ಯಾಕ್ನಿಲ್ ನೊರೊನಾ 312, ಪ್ರಖರ್ ಚತುರ್ವೇದಿ 29, ಮೋನಿಶ್ ರೆಡ್ಡಿ ವೈ.ಆರ್. 121, ಹರ್ಷಿಲ್ ಧರ್ಮಾನಿ 69, ಅನೀಶ್ವರ್ ಗೌತಮ್ 44; ಸತ್ಯಂ ಬಲಿಯಾನ್ 86ಕ್ಕೆ 4). ಎರಡನೇ ಇನಿಂಗ್ಸ್: 85 ಓವರ್‌ಗಳಲ್ಲಿ 5 ವಿಕೆಟ್‌ಗೆ 319 (ಲಿಂಕನ್ 50, ಆದಿತ್ಯಾ ಸಿಂಗ್ 33, ಇಶಾಗ್ರಾ ಜಗೂರಿ 55, ಆರವ್ ಮಹಾಜನ್ 79, ಪಿ.ಡ್ಯೂಲಿ ಔಟಾಗದೇ 65; ಪಾರಸ್ ಗುರುಭಕ್ಷ ಆರ್ಯ 82ಕ್ಕೆ 2)